ಜನಪ್ರಿಯ ಪುಸ್ತಕ ಮಾಲೆ

ಅರುಣೋದಯ ನವೋದಯ ನಂತರ

● ಪ್ರೊ. ಹು. ಕಾ. ಜಯದೇವ್



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮.

ಜನಪ್ರಿಯ ಪುಸ್ತಕ ಮಾಲೆ

ಅರುಣೋದಯ
ನವೋದಯ ನಂತರ

ಪ್ರೊ॥ ಹು.ಕಾ. ಜಯದೇವ್

ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

ARUNODAYA NAVODAYA NANTARA - A collection of articles by Prof. H.K. Jayadev, Professor of Kannada, Centre of Kannada Studies, Jnanabharathi, Bangalore University, Bangalore-560 056 and Published by V. Sreenivasa, Administrator, Kannada Book Authority, (Kannada Pustaka Pradhikara), Pampa Mahakavi Road, Chamarajapet, Bangalore-560 018 Pages : VIII+193

ಮೊದಲನೆ ಮುದ್ರಣ : ೧೯೯೯

ಬೆಲೆ : ರೂ. ೫೦/-

ಮುದ್ರಣ :
ಸ್ನೇಹಾ ಪ್ರಿಂಟರ್ಸ್
೨೨, ೨ನೇ ಮೈನ್, ಅತ್ತಿಗುಪ್ಪೆ
ವಿಜಯನಗರ ೨ನೇ ಹಂತ, ಬೆಂಗಳೂರು-೪೦ ✆ : 3302417

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮ ಅಕ್ಷರ. ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಅತ್ಯಾಕರ್ಷವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನ ಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹುಬೇಡಿಕೆಯ ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ

ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ 'ಜನಪ್ರಿಯ ಪುಸ್ತಕ ಮಾಲೆ'ಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಇದೀಗ ಪ್ರೊ. ಹು.ಕಾ. ಜಯದೇವ್ ಅವರ 'ಅರುಣೋದಯ ನವೋದಯ ನಂತರ' ಎಂಬ ಕೃತಿ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಪ್ರೊ. ಜಯದೇವ್ ಅವರು ಕನ್ನಡ ಸಾಹಿತ್ಯದ ಅಧ್ಯಯನ ಮತ್ತು ಸಂಶೋಧನೆಯನ್ನು ಗಂಭೀರವಾಗಿ ಸ್ವೀಕರಿಸಿರುವ ಪ್ರಾಧ್ಯಾಪಕರು. ಇವರ ಬರವಣಿಗೆ ಬಾಹುಳ್ಯದಲ್ಲಿ ಕಡಿಮೆಯಾದರೂ, ಅವರು ಬರೆದಿರುವ ಕೆಲವು ಲೇಖನಗಳು ಮತ್ತು ಕೃತಿಗಳು ಅವರ ವಿದ್ವತ್ ಮತ್ತು ವಿಚಾರಶಕ್ತಿಗೆ ತೋರ್ಬೆರಳಾಗಿವೆ. ಅವರು ಆಗಾಗ ಬರೆದು ಪ್ರಕಟಿಸಿದ ಹಲವು ಲೇಖನಗಳ ಗುಚ್ಛ ಈ ಸಂಕಲನ. ಪ್ರಾಚೀನ ಕೃತಿಯಾದ ರಾಮಾಯಣವನ್ನು ಕುರಿತ ವಿಮರ್ಶೆಯಂತೆಯೇ ಆಧುನಿಕ ಸಾಹಿತ್ಯಕ್ಕೆ ಅಸ್ತಿವಾರ ಹಾಕಿದವರಲ್ಲಿ ಒಬ್ಬರಾದ ಶ್ರೀ ಬಿ. ವೆಂಕಟಾಚಾರ್ ಅವರ ಕೃತಿಗಳ ವಿಶ್ಲೇಷಣೆಯೂ ಇಲ್ಲಿದೆ. ಕುವೆಂಪು ಅವರ ಕಥೆಗಳು, ಕಥನಕವನಗಳು, ಹಲವು ಪ್ರಾತಿನಿಧಿಕ ಕಥಾ ಸಂಕಲನಗಳ ಸೂಕ್ಷ್ಮ ಪರಿಚಯ ಕುರಿತ ಲೇಖನಗಳು ಸಹ ಇಲ್ಲಿವೆ. ಹಾಗೆಯೇ ಮ್ಯಾಥ್ಯೂ ಆರ್ನಾಲ್ಡ್ ಕವಿಯ ಸೊಹ್ರಾಬ್ ಕೃತಿಯನ್ನು ಕುರಿತ ಕಿರುವಿಮರ್ಶೆಯೂ ಇಲ್ಲಿದೆ. ಹೀಗಾಗಿ ಇಲ್ಲಿನ ಲೇಖನಗಳು ವಸ್ತು ವೈವಿಧ್ಯದಿಂದ ಕೂಡಿರುವುದು ಮಾತ್ರವಲ್ಲದೆ, ಲೇಖಕರು ವಿವಿಧ ಸಾಹಿತ್ಯ ಪ್ರಕಾರಗಳ ಬಗ್ಗೆ ಇರಿಸಿಕೊಂಡಿರುವ ಸಮಾನವಾದ ಒಲವನ್ನು ಇವು ದ್ಯೋತಿಸುತ್ತವೆ. ವಿಷಯ ಪ್ರವೇಶ, ಸೂಕ್ಷ್ಮವಾದ ಒಳನೋಟಗಳು, ವಿಶಿಷ್ಟ ವಿಶ್ಲೇಷಣಾ ಶಕ್ತಿಯನ್ನು ಮುಕ್ಕುಳಿಸುವ ನಿರೂಪಣೆ, ಸರಳವೂ ಪಾರದರ್ಶಕವೂ ಆದ ಭಾಷೆ - ಇವುಗಳಿಂದ ಈ ಲೇಖನಗಳು ಓದುಗರ ಗಮನ ಸೆಳೆಯುತ್ತವೆ. ಇಂತಹ ಕೃತಿಯೊಂದನ್ನು ಪ್ರಕಟಿಸಲು ಅನುಮತಿಯಿತ್ತ ಪ್ರೊ. ಜಯದೇವ್ ಅವರಿಗೆ ಮತ್ತು ಸುಂದರವಾಗಿ ಮುದ್ರಿಸಿದ ಸ್ನೇಹಾ ಪ್ರಿಂಟರ್ಸ್ ಅವರಿಗೆ ಪ್ರಾಧಿಕಾರದ ಪರವಾಗಿ ಕೃತಜ್ಞತೆಯ ನಮನಗಳು. ಈ ಪುಸ್ತಕವನ್ನು ಪ್ರಾಧಿಕಾರದಿಂದ ಪ್ರಕಟಿಸಲು ಸಮ್ಮತಿಸಿದ ಪ್ರಾಧಿಕಾರದ ಸದಸ್ಯ ಮಿತ್ರರಿಗೆ ನನ್ನ ನೆನಕೆಗಳು.

೨೫.೫.೧೯೯೯ — **ಡಾ. ಎಚ್.ಜೆ. ಲಕ್ಕಪ್ಪಗೌಡ**

ಬೆಂಗಳೂರು — ಅಧ್ಯಕ್ಷರು

ಲೇಖಕರ ಮಾತು

ನಾನೊಬ್ಬ ಬರಹಗಾರನೆಂಬ ಭ್ರಮೆ ನನಗಿಲ್ಲ. ಆದರೆ ನಾನೊಬ್ಬ ಅಧ್ಯಾಪಕನಾಗಿರುವುದರಿಂದ ವೃತ್ತಿ ಧರ್ಮವನ್ನು ಕಾಯ್ದುಕೊಳ್ಳಲೊ, ಇತರರ ಒತ್ತಾಯಕ್ಕೊ ಅಥವಾ ಅಪರೂಪಕ್ಕೊಮ್ಮೆ ಸ್ವಇಚ್ಛೆಯಿಂದಲೊ ಕೆಲವು ಲೇಖನಗಳನ್ನು ಬರೆದದ್ದು ಉಂಟು. ಅಂತಹ ಕೆಲವು ಲೇಖನಗಳಲ್ಲಿ ಕೆಲವನ್ನು ಆರಿಸಿ ಸಂಕಲನದ ರೂಪದಲ್ಲಿ ನಿಮ್ಮ ಮುಂದೆ ಇಡುತ್ತಿದ್ದೇನೆ.

ನನ್ನ ಲೇಖನಗಳು ಯಾವುದೇ ಸಂಗ್ರಹ ರೂಪದಲ್ಲಿ ಬಾರದೇ ಇರುವುದನ್ನು ಗಮನಿಸಿದ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ, ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರೂ ಆಗಿದ್ದ ಮಿತ್ರ ಡಾ. ಬೀಚನಹಳ್ಳಿ ಕರೀಗೌಡರು ನನ್ನ ಲೇಖನಗಳ ಸಂಕಲನವೊಂದನ್ನು ಪ್ರಕಟಿಸುವ ಸಲಹೆಯನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಮುಂದಿಟ್ಟು ಅದರ ಒಪ್ಪಿಗೆಯನ್ನು ದೊರಕಿಸಿಕೊಟ್ಟಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಹಿಂದಿನ ಅಧ್ಯಕ್ಷರಾದ ಶ್ರೀ ನೆಲಮನೆ ದೇವೇಗೌಡರು ಮತ್ತು ಈಗಿನ ಅಧ್ಯಕ್ಷರಾದ ಡಾ. ಎಚ್.ಜೆ. ಲಕ್ಕಪ್ಪಗೌಡರು ನಾನು ಸಂಗ್ರಹವನ್ನು ಸಿದ್ಧಪಡಿಸಿಕೊಡುವಲ್ಲಿ ಅತಿಯಾದ ವಿಳಂಬವನ್ನು ಮಾಡಿದರೂ ಉದಾರಮನಸ್ಸಿನಿಂದ ಕೊಟ್ಟ ಒಪ್ಪಿಗೆಯನ್ನು ಹಿಂತೆಗೆದುಕೊಂಡಿಲ್ಲ. ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳೂ ಮಿತ್ರರೂ ಆದ ಶ್ರೀ ವೆಂ. ಶ್ರೀನಿವಾಸ ಅವರು ಮತ್ತು ಸಹ ಆಡಳಿತಗಾರರಾಗಿದ್ದ ಡಾ.ಟಿ. ಗೋವಿಂದರಾಜು ಅವರುಗಳು ಸಂಗ್ರಹವನ್ನು ಆದಷ್ಟು ಬೇಗ ಸಿದ್ಧಪಡಿಸಿಕೊಡಲು ಸ್ನೇಹಪೂರ್ವಕವಾದ ಒತ್ತಡವನ್ನು ತಂದಿದ್ದಾರೆ. ಆತ್ಮೀಯ ಮಿತ್ರರಾದ ಡಾ.ಎಸ್. ವಿದ್ಯಾಶಂಕರ ಅವರು ಕನ್ನಡ ನುಡಿ ಮತ್ತು ಸಮಗ್ರ ಸಾಹಿತ್ಯ ಚರಿತ್ರೆಯ ಒಂದು ಸಂಪುಟದಲ್ಲಿದ್ದ ಲೇಖನಗಳನ್ನು ಅವರೇ ಸಂಗ್ರಹಿಸುವಷ್ಟು ಆಸಕ್ತಿಯನ್ನು ತೋರಿದ್ದಾರೆ. ಈ ಎಲ್ಲ ಮಹನೀಯರಿಗೆ, ಆತ್ಮೀಯರಿಗೆ, ಮಿತ್ರರಿಗೆ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು. ಅತಿ ಶೀಘ್ರವಾಗಿ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಸ್ನೇಹಾ ಪ್ರಿಂಟರ್ಸ್‌ನ ಮಾಲೀಕರು ಮತ್ತು ಕೆಲಸಗಾರರು ಮತ್ತು ಈ ಪುಸ್ತಕಕ್ಕೊಂದು ಸೂಕ್ತವೂ ಸುಂದರವೂ ಆದ ಮುಖಪುಟವನ್ನು ಬರೆದುಕೊಟ್ಟ ಕಲಾವಿದ ಶ್ರೀ ಮೋನಪ್ಪ ಅವರಿಗೆ ನನ್ನ ಪ್ರೀತಿಪೂರ್ವಕವಾದ ವಂದನೆಗಳು.

ಇಲ್ಲಿನ ಲೇಖನಗಳಲ್ಲಿ ಕುವೆಂಪು ಅವರನ್ನು ಕುರಿತಾದ ಲೇಖನಗಳನ್ನು ಹೊರತುಪಡಿಸಿ ಉಳಿದೆಲ್ಲ ಲೇಖನಗಳ ರಚನೆಗೆ ನನ್ನ ವಿದ್ಯಾಗುರುಗಳಾದ ಡಾ.ಜಿ.ಎಸ್. ಶಿವರುದ್ರಪ್ಪನವರ ಪ್ರೀತಿಪೂರ್ವಕವಾದ ಮತ್ತು ಆಗ್ರಹಪೂರ್ವಕವಾದ ಒತ್ತಾಸೆಯೇ ಕಾರಣ. ಆ ಲೇಖನಗಳಿಗೆ ಕಾರಣೀಭೂತರಾದ ಪ್ರೀತಿಯ ಗುರುಗಳಿಗೆ ಭಕ್ತಿಪೂರ್ವಕವಾದ ನಮನಗಳು. 'ಕುವೆಂಪು ಅವರ ಕಥೆಗಳು ಮತ್ತು ಮಲೆನಾಡಿನ ಚಿತ್ರಗಳು' ಮತ್ತು 'ಕುವೆಂಪು ಅವರ ಜನಪ್ರಿಯ ವಾಲ್ಮೀಕಿ ರಾಮಾಯಣ' ಲೇಖನಗಳನ್ನು ಬೆಂಗಳೂರು ಮತ್ತು ಹಾಸನಗಳಲ್ಲಿ ನಡೆದ ಕುವೆಂಪು ವಿಚಾರ ಸಂಕಿರಣಗಳಲ್ಲಿ ಮಂಡಿಸಲು ಅವಕಾಶಮಾಡಿಕೊಟ್ಟ ಗೆಳೆಯರಾದ ಹ.ಕ. ರಾಜೇಗೌಡರಿಗೆ ಮತ್ತು 'ಕುವೆಂಪು ಅವರ ಕಥೆಗಳು' ಮತ್ತು 'ಕುವೆಂಪು ಅವರ ಕಥನ ಕವನಗಳು' ಲೇಖನಗಳನ್ನು ಕನ್ನಡ ನುಡಿಯಲ್ಲಿ ಪ್ರಕಟಿಸಿದ ಅಂದಿನ ಸಂಪಾದಕರಾಗಿದ್ದ ಗೆಳೆಯರಾದ ಪ್ರೊ.ಆರ್. ರಾಚಪ್ಪನವರಿಗೆ ಸ್ನೇಹಪೂರ್ವಕ ವಂದನೆಗಳು.

ನನ್ನ ಛಾನಸ ಪ್ರವೃತ್ತಿಯನ್ನು ಸಹಿಸಿಕೊಂಡು 'ಅರುಣೋದಯ ನವೋದಯ ನಂತರ' ಸಂಕಲನವನ್ನು ಹೊರತರುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಎಚ್.ಜೆ. ಲಕ್ಕಪ್ಪಗೌಡರಿಗೆ ನಾನು ಋಣಿ ಎಂಬುದನ್ನು ಹೇಳಿದರೆ ತಪ್ಪಾಗಲಾರದು.

ಕನ್ನಡ ಸಾರಸ್ವತ ಲೋಕ ಈ ಕೃತಿಯನ್ನು ಆದರದಿಂದ ಸ್ವೀಕರಿಸುತ್ತದೆ ಎಂಬ ಭರವಸೆಯಿಟ್ಟುಕೊಂಡಿದ್ದೇನೆ.

೨೪.೫.೧೯೯೯ **ಹು.ಕಾ. ಜಯದೇವ್**

ಬೆಂಗಳೂರು

ಪರಿವಿಡಿ

ಬಿ. ವೆಂಕಟಾಚಾರ್

ಹತ್ತೊಂಬತ್ತನೆಯ ಶತಮಾನದ ವೇಳೆಗೆ ಕನ್ನಡ ಸಾಹಿತ್ಯ ಹೊಸತನವಿಲ್ಲದೆ ನಿಂತ ನೀರಾಗಿತ್ತು. ಅದು ಹೊಸತನಕ್ಕಾಗಿ ಹಾತೊರೆಯುತ್ತಿತ್ತು. ಆಗ ಕೆಂಪುನಾರಾಯಣ ಪಂಡಿತ ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕವನ್ನು 'ಮುದ್ರಾಮಂಜೂಷವೆಂದು ಹೆಸರಿಟ್ಟು ಕಾದಂಬರಿ ರೂಪದಲ್ಲಿ ಬರೆದ. ಇದು ಅರುಣೋದಯವನ್ನು ಸೂಚಿಸುವ ಮುಂಗೋಳಿಯ ಕೂಗಿನಂತಿತ್ತು. ಇದೇ ಕಾಲದಲ್ಲಿ 'ಫಿಲಿಗ್ರಿಮ್ಸ್ ಪ್ರೋಗ್ರೆಸ್' ಕಾದಂಬರಿ ಕನ್ನಡದಲ್ಲಿ ಯಾತ್ರಿಕನ ಸಂಚಾರ' ಆಗಿ ೧೮೪೭ರಲ್ಲಿ ಬಂದಿತು. ಮಾನವೀರಪ್ಪನವರ ನಲವತ್ತು ಕಥೆಗಳ 'ಕಥಾಸಾಗರ' ೧೮೫೧ರಲ್ಲಿ ಬಂದಿತು. ಎಂ.ಎಸ್. ಪುಟ್ಟಣ್ಣನವರು 'ಮಾಡಿದ್ದುಣ್ಣೋ ಮಹರಾಯ', ಕೆರೂರು ವಾಸುದೇವಾಚಾರ್ಯರು 'ಇಂದಿರಾ' ಎಂಬ ಸ್ವತಂತ್ರ ಕಾದಂಬರಿಗಳನ್ನು ಬರೆದರು. ದಕ್ಷಿಣಕನ್ನಡ ಜಿಲ್ಲೆಯ ಗುಲವಾಡಿ ಅಣ್ಣಾರಾಯರು ೧೮೯೯ರಲ್ಲಿ ಒಂದು ಸಾಮಾಜಿಕ ಕಾದಂಬರಿಯನ್ನು ತಂದರು. ಬೋಳಾರ ಬಾಬುರಾಯರೇ ಮೊದಲಾದ ಇನ್ನೂ ಕೆಲವರು ಸ್ವತಂತ್ರ ಕಾದಂಬರಿಗಳನ್ನು ಬರೆದರು. ೧೯ನೆಯ ಶತಮಾನದ ಕೊನೆಯಲ್ಲಿ ನಂದಳಿಕೆ ಲಕ್ಷ್ಮೀನಾರಾಣಪ್ಪ ಅಥವಾ ಮುದ್ದಣ್ಣನ 'ರಾಮಾಶ್ವಮೇಧ' ಮತ್ತಿತರ ಕೃತಿಗಳು ಪ್ರಕಟವಾದುವು. 'ಗೋದಾವರಿ' ಎಂಬ ಕಾದಂಬರಿಯನ್ನು ಬರೆಯಲು ಅವನೇ ಒಂದು ಯೋಜನೆಯನ್ನು ಹಾಕಿಕೊಂಡಿದ್ದನಂತೆ. ಆದರೆ ಇವು ಯಾವುವೂ ಬಿ. ವೆಂಕಟಾಚಾರ್ಯರ ಕಾದಂಬರಿಗಳು ಮಾಡಿದ ಪರಿಣಾಮವನ್ನು ಮಾಡಲಿಲ್ಲವೆಂದರೆ ಅತಿಶಯೋಕ್ತಿ-ಯಾಗಲಾರದು. ೧೮೭೬ರಲ್ಲಿ ತಮ್ಮ 'ಭ್ರಾಂತಿವಿಲಾಸ' ಎಂಬ ಅನುವಾದಿತ ಕಾದಂಬರಿಯನ್ನು ಕೊಟ್ಟು ಬಿ. ವೆಂಕಟಾಚಾರ್ಯರು ಸುಮಾರು ನಲವತ್ತು ವರ್ಷಗಳ ಅಖಂಡ ಸಾಹಿತ್ಯ ಸೇವೆಯ ಫಲವಾಗಿ ಎಪ್ಪತ್ತೈದಕ್ಕೂ ಹೆಚ್ಚಿನ ಕೃತಿಗಳನ್ನು ಹೊರತಂದರು. 'ಕರ್ನಾಟಕ ಕಾದಂಬರಿ ಪಿತಾಮಹ' ಎಂದು ಅವರನ್ನು ಎ.ಆರ್. ಕೃಷ್ಣಶಾಸ್ತ್ರಿಗಳು ಕರೆದಿರುವುದು ಉಚಿತವಾಗಿದೆ. ಹಳೆಯ ಮೈಸೂರು ಅಥವಾ ದಕ್ಷಿಣ ಕರ್ನಾಟಕದಲ್ಲಿ ಬಿ. ವೆಂಕಟಾಚಾರ್ಯರು ಬಂಗಾಳಿ ಸಾಹಿತ್ಯದಿಂದ ಕಾದಂಬರಿಗಳನ್ನು ಅನುವಾದಿಸುತ್ತಿದ್ದಂತೆ ಉತ್ತರ ಕರ್ನಾಟಕದಲ್ಲಿ ಗಳಗನಾಥರು ಮರಾಠಿಯಿಂದ ಕನ್ನಡಕ್ಕೆ

ಕಾದಂಬರಿಗಳನ್ನು ಅನುವಾದಿಸುತ್ತಿದ್ದರು. 'ಸಾಮಾಜಿಕ ಸುಧಾರಣೆಯ ಬಲವೂ ಸತ್ವಸಂಸ್ಕೃತಿಗಳ ಒಲವೂ ಬಲಗೊಂಡದ್ದು ಬಂಗಾಳದಲ್ಲಿ. ಭಾರತೀಯ ಭಾಷೆಯೊಂದರಲ್ಲಿ ಆಧುನಿಕ ಎನ್ನಬಹುದಾದ ಸಾಹಿತ್ಯ ಮೊದಲು ಸೃಷ್ಟಿಯಾದದ್ದು ಬಂಗಾಳಿ ಭಾಷೆಯಲ್ಲಿ'. ಬಿ. ವೆಂಕಟಾಚಾರ್ಯರಿಂದ ಬಂಗಾಳಿ ಸಾಹಿತ್ಯವೂ ಗಳಗನಾಥರಿಂದ ಮರಾಠಿ ಸಾಹಿತ್ಯವೂ ಕನ್ನಡಕ್ಕ ಹರಿದುಬಂದುವು. ಅವು ಕನ್ನಡಕ್ಕೆ ಹೊಸ ನೀರನ್ನು ತಂದುವು. ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಹೀಗೆ ಪರೋಕ್ಷವಾಗಿ ಬಂಗಾಳಿ ಮತ್ತು ಮರಾಠಿ ಕೃತಿಗಳ ಭಾಷಾಂತರದ ಮೂಲಕ ಕನ್ನಡಕ್ಕೆ ಮೊದಲು ದೊರೆಯಿತು. ಬಿ. ವೆಂಕಟಾಚಾರ್ಯರು ತಮ್ಮ ಕಾಲದಲ್ಲಿ ಪ್ರಸಿದ್ಧರಾಗಿದ್ದ ಎಲ್ಲ ಬಂಗಾಳಿ ಸಾಹಿತಿಗಳ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದರು. ಅವರಲ್ಲಿಯೂ ಇಂಡಿಯಾ ದೇಶದ 'ಸರ್ ವಾಲ್ಟರ್ ಸ್ಕಾಟ್' ಎಂದು ಪ್ರಸಿದ್ಧರಾಗಿದ್ದ ಬಂಕಿಮ ಚಂದ್ರ ಚಟ್ಟೋಪಾಧ್ಯಾಯರ ಬಹುತೇಕ ಕೃತಿಗಳನ್ನು ವೆಂಕಟಾಚಾರ್ಯರು ಭಾಷಾಂತರಿಸಿದರು. ಹೀಗೆ ಕನ್ನಡ ಸಾಹಿತ್ಯಕ್ಕೆ ಚಾರಿತ್ರಿಕ ಕಾದಂಬರಿಗಳ ರೂಪು ರೇಷೆ ಪರಿಚಯವಾದುವು. ಈಗಿನಂತೆ ದಿನಪತ್ರಿಕೆಗಳಿಲ್ಲದ ಆ ದಿನಗಳಲ್ಲಿ ವೆಂಕಟಾಚಾರ್ಯರು ಕಾದಂಬರಿಗಳ ಆಗಮನವನ್ನು ಜನ ಕಾತರದಿಂದ ಎದುರು ನೋಡುತ್ತಿದ್ದರು. ಅವು ಪ್ರಕಟವಾದ ಕೂಡಲೆ ಬಿಸಿ ದೋಸೆಗಳಂತೆ ಖರ್ಚಾಗುತ್ತಿದ್ದುವು. ಇದಕ್ಕೆ ಅವರ ಅನೇಕ ಕಾದಂಬರಿಗಳು ಹಲವಾರು ಬಾರಿ ಪುನರ್ಮುದ್ರಣಗೊಂಡಿರುವುದೇ ಸಾಕ್ಷಿ. 'ಈ ಕಾದಂಬರಿಗಳನ್ನೆಲ್ಲಾ ವೆಂಕಟಾಚಾರ್ಯರೆ ರಚಿಸಿದ್ದು ಎಂಬ ಭಾವನೆ ಕನ್ನಡ ಜನರ ಮನಸ್ಸಿನಲ್ಲಿ ಬೇರೂರಿತು. ಎಲ್ಲಿ ನೋಡಿದರೂ ವೆಂಕಟಾಚಾರ್ಯರ 'ನಾವೆಲ್' ಎಂದು ಓದುಗರು ಈ ಲೇಖಕರ ಹೆಸರನ್ನು ಮರೆಯಿಸಿದರು'.[೨] 'ಕಾದಂಬರಿಗಳೇ ಇಲ್ಲದಿದ್ದ ಕಾಲದಲ್ಲಿ ಅದರ ಕೊರತೆಯನ್ನು ನೀಗಿಸಿದುವು, ಅವರ ಅನುವಾದಿತ ಕಾದಂಬರಿಗಳು. ಅದರಿಂದ ಕಾದಂಬರಿ ಇತಿಹಾಸದಲ್ಲಿ ಅವರದು ಮರೆಯಲಾಗದ ಹೆಸರು'.[೩] 'ಯಾವ ಸಾಹಿತ್ಯ ಚರಿತ್ರಕಾರನೂ ಅವರನ್ನು ಸ್ಮರಿಸದೆ ಮುಂದೆ ಹೋಗುವಂತಿಲ್ಲ. ವೆಂಕಟಾಚಾರ್ಯ, ಗಳಗನಾಥ, ಎಂ.ಎಸ್. ಪುಟ್ಟಣ್ಣ - ಇವರಿಂದ ಪ್ರಾರಂಭದಲ್ಲಿಯೇ ಕನ್ನಡ ಕಾದಂಬರಿ ಮನರಂಜನೆಯ ಸಾಧನವಾಗದೆ ಗಂಭೀರವಾಗಿ ವೀಕ್ಷಿಸುವ ಕ್ರಿಯೆಯಾಯಿತು'.[೪]

ಬಿ. ವೆಂಕಟಾಚಾರ್ಯರ ಪೂರ್ವಿಕರು ಮೈಸೂರು ಜಿಲ್ಲೆಯ ಕೊಳ್ಳೇಗಾಲಕ್ಕೆ ಸೇರಿದ ವೈಷ್ಣವರು.[೫] ಇವರ ತಂದೆ ಗರುಡಾಚಾರ್ಯರು. ಅವರ ಆರು ಜನ ಗಂಡುಮಕ್ಕಳಲ್ಲಿ ಬಿ. ವೆಂಕಟಾಚಾರ್ಯರು ಎರಡನೆಯವರು. ವೆಂಕಟಾಚಾರ್ಯರ ಜನನವಾದದ್ದು ೧೮೪೫ರಲ್ಲಿ. ಕಾರಣಾಂತರಗಳಿಂದ ಗರುಡಾಚಾರ್ಯರು

ಕೊಳ್ಳೇಗಾಲವನ್ನು ಬಿಟ್ಟು ಚಿತ್ರದುರ್ಗವನ್ನು ಸೇರಿದರು. ವೆಂಕಟಾಚಾರ್ಯರ ಪ್ರಾರಂಭಿಕ ವಿದ್ಯಾಭ್ಯಾಸ ಮನೆಯಲ್ಲಿಯೇ ಆಯಿತು. ತಂದೆಯ ಜೊತೆ ಕೊಳ್ಳೇಗಾಲದಲ್ಲಿ ಕಾವೇರಿ ನದಿಗೆ ಸ್ನಾನಾಹ್ನಿಕಕ್ಕಾಗಿ ಹೋಗಿಬರುತ್ತಿದ್ದಾಗಲೆ ಅಮರಕೋಶ ಕಂಠಪಾಠವಾಗಿದ್ದಿತು. ಮಗನ ಚುರುಕುತನವನ್ನು ಕಂಡು ತಂದೆ ಗರುಡಾಚಾರ್ಯರು ವೆಂಕಟಾಚಾರ್ಯರ ವಿದ್ಯಾಭ್ಯಾಸದ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿದರು. ಪ್ರಾಥಮಿಕ ವಿದ್ಯಾಭ್ಯಾಸದ ಅನಂತರ ವೆಂಕಟಾಚಾರ್ಯರ ವಿದ್ಯಾಭ್ಯಾಸ ತುಮಕೂರಿನ ಇಂಗ್ಲಿಷ್ ಶಾಲೆಯಲ್ಲಿ ಮುಂದುವರೆಯಿತು. ನಾಲ್ಕಾರು ವರ್ಷಗಳಲ್ಲಿ ಜೂನಿಯರ್ ಸೀನಿಯರ್ ಪರೀಕ್ಷೆಗಳನ್ನು ಮಾಡಿಕೊಂಡು ೧೮೬೨ರಲ್ಲಿ, ಚಿಕ್ಕ ವಯಸ್ಸಿನಲ್ಲಿಯೆ ಗುಮಾಸ್ತೆ ಕೆಲಸಕ್ಕೆ ಸೇರಿದರು. ಆಗಿನ ಕಾಲದ ಪದ್ಧತಿಯಂತೆ ಚಿಕ್ಕ ವಯಸ್ಸಿನಲ್ಲಿಯೆ ಮದುವೆಯೂ ಆಯಿತು. ಎರಡು ಮೂರು ವರ್ಷಗಳಲ್ಲಿಯೆ ಚಿತ್ರದುರ್ಗಕ್ಕೆ ಅಕೌಂಟೆಂಟರಾಗಿ ಬಂದರು. ಅಲ್ಲಿಂದ ಶಿವಮೊಗ್ಗೆಗೆ ಡಿವಿಜನ್ ಕಛೇರಿಯ ಹೆಡ್‌ಮುನಷಿಯಾಗಿ ಹೋದ ಅವರು ಜಿಲ್ಲಾ ಕೋರ್ಟ್ ಶಿರಸ್ತೆದಾರ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ ಆದರು. ನರಸಿಂಹ -ರಾಜಪುರಕ್ಕೆ ಮುನ್ಸೀಫರಾಗಿ ಹೋಗಿ ಅಲ್ಲಿಂದ ನಂಜನಗೂಡು, ಚಿಕ್ಕಬಳ್ಳಾಪುರ, ಕೋಲಾರ ಮತ್ತು ಮೈಸೂರುಗಳಲ್ಲಿಯೂ ಸೇವೆ ಸಲ್ಲಿಸಿ ೧೯೦೨ರಲ್ಲಿ ಹಾಸನದಲ್ಲಿ ಪ್ರಥಮ ತರಗತಿ ಮುನ್ಸಿಫರಾಗಿ ನಿವೃತ್ತಿಯಾದರು.

ಬಿ. ವೆಂಕಟಾಚಾರ್ಯರ ತಂದೆ ತಾಯಿ ಕುಳಿತುಣ್ಣುವಷ್ಟು ಶ್ರೀಮಂತ -ರಲ್ಲದಿದ್ದುದರಿಂದ ವೆಂಕಟಾಚಾರ್ಯರು ಹೊಟ್ಟೆಪಾಡಿಗಾಗಿ ೧೬-೧೭ನೆಯ ವಯಸ್ಸಿನಲ್ಲಿಯೇ ಕೆಲಸಕ್ಕೆ ಸೇರಬೇಕಾಯಿತು. ಹಾಗೆ ಕೆಲಸಕ್ಕೆ ಸೇರಿದರೂ ಅವರ ಅಂತರಂಗ ಜ್ಞಾನಾರ್ಜನೆಗಾಗಿ ತಹತಹಿಸುತ್ತಿತ್ತು. ಅವರು ಶಿವಮೊಗ್ಗೆಯಲ್ಲಿ ಹೆಡ್‌ಮುನಷಿಯಾಗಿದ್ದಾಗ ಯೋಗಾಯೋಗದಿಂದ ಬಂಗಾಳಿ ಭಾಷೆಯನ್ನು ಕಲಿಯಬೇಕೆಂಬ ಆಸೆ ಅವರಲ್ಲಿ ಹುಟ್ಟಿಕೊಂಡಿತು. ಅವರು ಕಲ್ಕತ್ತೆಯಿಂದ ತರಿಸಿದ್ದ ಔಷಧಿಗೆ ಸುತ್ತಿದ್ದ ಬಂಗಾಳಿ ಪತ್ರಿಕೆಯ ಅವರ ಆ ಆಸೆಗೆ ಪ್ರಚೋದನೆ ನೀಡಿದ್ದು. ಅವರ ಬಂಧುವೂ, ಶಿವಮೊಗ್ಗೆಯ ಶಿರಸ್ತೆದಾರರೂ ಆಗಿದ್ದ ಬಿ. ನಾರಾಯಣ ಐಯಂಗಾರ್ ಕಲ್ಕತ್ತೆಯಿಂದ ಕೆಲವು ಬಂಗಾಳಿ ಪುಸ್ತಕಗಳನ್ನು ತಂದುಕೊಟ್ಟರು. ಅಷ್ಟೇ ಅಲ್ಲದೆ ವೆಂಕಟಾಚಾರ್ಯರು ಬಂಗಾಳದ ಪ್ರಸಿದ್ಧ ವಿದ್ವಾಂಸರಾದ ಈಶ್ವರಚಂದ್ರ ವಿದ್ಯಾಸಾಗರರೊಂದಿಗೆ ಪತ್ರ ವ್ಯವಹಾರ ನಡೆಸಲೂ ನೆರವಾದರು. ಈಶ್ವರಚಂದ್ರ ವಿದ್ಯಾಸಾಗರರಿಗೆ ಈ ಯುವಕನ ಆಸಕ್ತಿ ಉತ್ಸಾಹಗಳನ್ನು ಕಂಡು ಬಂಗಾಳಿ ಭಾಷೆಗೆ ಕಲಿಕೆಗೆ ಅವಶ್ಯಕವಾದ ಪುಸ್ತಕಗಳನ್ನು ಕಳುಹಿಸಿ ಕೊಟ್ಟುದಲ್ಲದೆ ಪತ್ರಮುಖೇನ ಶಿಕ್ಷಣವನ್ನೂ ಕೊಟ್ಟರು. ವಿದ್ಯಾರ್ಥಿಯಲ್ಲಿ ಕಲಿಯಲು ಶ್ರದ್ಧೆ ಗುರುವಿನ ಪೂರ್ಣ

ಅನುಗ್ರಹ ಇದ್ದರೆ ಸಿದ್ಧಿ ಎಷ್ಟರದು? ಅಭಿನವ ಏಕಲವ್ಯರಾದ ವೆಂಕಟಾಚಾರ್ಯರು ವಿದ್ಯಾರ್ಜನೆಯಲ್ಲಿ ಯಶಸ್ವಿಯಾದರು. ಕೇವಲ ಆರೇ ತಿಂಗಳಲ್ಲಿ ಬಂಗಾಳಿ ಭಾಷೆಯನ್ನು ವೆಂಕಟಾಚಾರ್ಯರು ಕರಗತ ಮಾಡಿಕೊಂಡರು. ಬಂಗಾಳಿ ಭಾಷೆಯನ್ನು ಕಲಿತಾಗ ವೆಂಕಟಾಚಾರ್ಯರು ಮುವ್ವತ್ತು ವರ್ಷಗಳ ತರುಣ (೧೮೭೪-೭೫). ಇದರಿಂದ ಸಂತೋಷಗೊಂಡ ಈಶ್ವರಚಂದ್ರ ವಿದ್ಯಾಸಾಗರರು ತಮ್ಮ 'ಭ್ರಾಂತಿ ವಿಲಾಸ'ವೆಂಬ ಕಾದಂಬರಿಯನ್ನು ಅನುವಾದಿಸಲು ವೆಂಕಟಾಚಾರ್ಯರಿಗೆ ಕಳುಹಿಸಿಕೊಟ್ಟರು. 'ಭ್ರಾಂತಿ ವಿಲಾಸ' ಷೇಕ್ಸ್‌ಪಿಯರ್‌ನ 'ಕಾಮಿಡಿ ಆಫ್ ಎರರ್ಸ್' ನಾಟಕದ ಕಾದಂಬರೀ ರೂಪ. ವೆಂಕಟಾಚಾರ್ಯರು ಅದನ್ನು ಅನುವಾದಿಸಿದರು. ಅದರ ಪ್ರಕಟಣೆಗೆ ಅವರ ಬಂಧು ವಿ.ಎನ್. ನರಸಿಂಹ ಐಯಂಗಾರ್ ಎನ್ನುವವರು ನೆರವಾದರು. ೧೮೭೬ರಲ್ಲಿ 'ಭ್ರಾಂತಿ ವಿಲಾಸ' ಪ್ರಕಟವಾಯಿತು. ಅದು ಕನ್ನಡಿಗರಿಗೆ ಪ್ರಿಯವೂ ಆಯಿತು. ಅಷ್ಟೇ ಅಲ್ಲದೆ ಅದನ್ನು ಮದ್ರಾಸ್ ವಿಶ್ವವಿದ್ಯಾಲಯದವರು ಪರೀಕ್ಷೆಗಳಿಗೆ ಕನ್ನಡ ಪಠ್ಯ ಗ್ರಂಥವಾಗಿ ಗೊತ್ತುಮಾಡಿದರು. ಇದರಿಂದ ವೆಂಕಟಾಚಾರ್ಯರಿಗೆ ಉತ್ತೇಜನ ಸಿಕ್ಕಿದಂತಾಯಿತು. ಈಶ್ವರಚಂದ್ರ ವಿದ್ಯಾಸಾಗರರಿಗೂ ಶಿಷ್ಯನ ಸಾಧನೆಯಿಂದ ಆನಂದ ಹೆಮ್ಮೆ -ಗಳುಂಟಾದುವು. ಅವರು ತಮ್ಮ ಎಲ್ಲ ಕೃತಿಗಳನ್ನೂ ಅನುವಾದಿಸಲು ವೆಂಕಟಾಚಾರ್ಯರಿಗೆ ಅನುಮತಿಯನ್ನು ಕೊಟ್ಟುಬಿಟ್ಟರು. ವೆಂಕಟಾಚಾರ್ಯರು ಈಶ್ವರಚಂದ್ರ ವಿದ್ಯಾಸಾಗರರ 'ಸೀತಾ ವನವಾಸ' ಮತ್ತು 'ಶಾಕುಂತಲ' ಗ್ರಂಥಗಳನ್ನು ಅನುವಾದಿಸಿದರು. ಅವೂ ಜನಪ್ರಿಯವಾದುವು. ಜನತೆಯು ಮತ್ತಷ್ಟು ಅಂತಹ ಕಾದಂಬರಿಗಳಿಗಾಗಿ ಹಾತೊರೆದರು. ವೆಂಕಟಾಚಾರ್ಯರ ಗಮನ ಆಗ ಇಂಡಿಯಾ ದೇಶದ 'ಸರ್ ವಾಲ್ಟರ್ ಸ್ಕಾಟ್' ಎಂದು ಪ್ರಸಿದ್ಧರಾಗಿದ್ದ ಬಂಕಿಮಚಂದ್ರ ಚಟ್ಟೋಪಾಧ್ಯಾಯರ ಕಾದಂಬರಿಗಳ ಕಡೆಗೆ ಹರಿಯಿತು. 'ಸರಿ ಬಂಕಿಮಚಂದ್ರರ ಬಂಗಾಳಿ ಕಾದಂಬರಿಗಳನ್ನು ಅಧ್ಯಯನ ಮಾಡತೊಡಗಿದರು. ಕಾದಂಬರಿಗಳಲ್ಲಿನ ಕತೆಯ ತಂತ್ರ, ಭಾಷೆಯ ಬನಿ, ಪಾತ್ರಗಳನ್ನು ಸಜೀವವಾಗಿ ಚಿತ್ರಿಸುವ ಜಾಣ್ಮೆ - ಈ ಗುಣಗಳಿಗೆ ಮಾರು ಹೋದ ವೆಂಕಟಾಚಾರ್ಯರು ಬಂಕಿಮಚಂದ್ರರ ಕಾದಂಬರಿಗಳನ್ನು ಕನ್ನಡಮ್ಮನ ಕಣಜಕ್ಕೆ ತರಬೇಕೆಂದು ಅನುವಾದ ಮಾಡತೊಡಗಿದರು'.[೬] 'ದುರ್ಗೇಶ ನಂದಿನಿ', 'ದೇವೀ ಚೌಧರಾಣಿ'ಯೇ ಮೊದಲಾದ ಬಂಕಿಮರ ಬಹುತೇಕ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ಈಶ್ವರಚಂದ್ರ ವಿದ್ಯಾಸಾಗರ, ಬಂಕಿಮ ಚಂದ ಚಟ್ಟೋಪಾಧ್ಯಾಯರೇ ಅಲ್ಲದೆ ಯೋಗೀಂದ್ರನಾಥ-ಚಟ್ಟೋಪಾಧ್ಯಾಯ, ನನಿಲಾಲವಂದ್ಯೋಪಾಧ್ಯಾಯ, ಯೋಗೀಂದ್ರನಾಥ ಬಸು, ದಾಮೋದರ ಮುಖ್ಯೋಪಾಧ್ಯಾಯ, ಸತೀಶಬಾಬು, ಪಾಂಚ ಕಡಿ ದೆ, ಹರಪ್ರಸಾದ ಶಾಸ್ತ್ರಿ, ರಮೇಶ ಚಂದ್ರ ದತ್ತ, ಬಾಬು ಸತ್ಯೇಂದ್ರನಾಥ, ಕುಮಾರ ಬಾಬು

ಮೊದಲಾದವರ ಕೃತಿಗಳನ್ನು ವೆಂಕಟಾಚಾರ್ಯರು ಅನುವಾದಿಸಿದ್ದಾರೆ. ಇವುಗಳಲ್ಲಿ ಕೆಲವು ಲೇಖನಗಳೂ ಮತ್ತು ಪ್ರಬಂಧಗಳೂ ಇವೆ. ಇವಲ್ಲದೆ ತಾವೇ ಸ್ವತಃ 'ವೆನಿಸು ನಗರದ ವಣಿಕ' (The Merchant of Venice), 'ಚಿತ್ರವಿಚಿತ್ರಾವಳಿ' ಅಥವಾ 'ಯವನ ಯಾಮಿನಿ ವಿನೋದಗಳು' ಭಾಗ ೧ ಮತ್ತು ಭಾಗ ೨ (ಅರೇಬಿಯನ್ ನೈಟ್ಸ್) ಇವುಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಇವಲ್ಲದೆ 'ಚರಿತ್ರೆ, ಸಮಾಜ ವಿಜ್ಞಾನ,ಸಮಾಜ ಸುಧಾರಣೆ ಇವುಗಳ ವಿಚಾರದಲ್ಲಿರುವ ಗ್ರಂಥಗಳು ಪ್ರಾಯಶಃ ಅವರ ಸ್ವಂತದ್ದಿರಬೇಕು'[೭] ಎಂಬ ಅಭಿಪ್ರಾಯವೂ ಇದೆ. ಅವರ ಬಹಳಷ್ಟು ಕೃತಿಗಳು ಈಗ ಅನುಪಲಬ್ಧವಾಗಿರುವುದರಿಂದ ಅವರ ಸಾಹಿತ್ಯ ಕೃಷಿಯಲ್ಲಿ ಅವರ ಸ್ವಂತದ್ದೆಷ್ಟು ಎಂದು ಹೇಳುವುದು ಕಷ್ಟ. ಅಲ್ಲದೆ ಅವರು ಅನುವಾದಿಸಿರುವ ಕೃತಿಗಳೂ ಯಾವ ಕ್ರಮದಲ್ಲಿ ಅನುವಾದಗೊಂಡವು ಎಂದು ಹೇಳುವುದು ದುಸ್ತರ. ಒಟ್ಟಿನಲ್ಲಿ ಅವರ ಅನುವಾದಿತ ಮತ್ತು ಸ್ವಂತ ಕೃತಿಗಳ ಒಟ್ಟು ಸಂಖ್ಯೆ ಎಪ್ಪತ್ತೆರಡರಷ್ಟಿವೆ. ಅವುಗಳಲ್ಲಿ ಸುಮಾರು ಅರವತ್ತು ಕಾದಂಬರಿಗಳೇ ಇವೆ. ಅವರು ಬರವಣಿಗೆಗೆ ತೊಡಗಿದ ೧೮೭೬ರಿಂದ ೧೯೧೪ರವರೆಗೆ ಎಂದರೆ ಸುಮಾರು ನಲವತ್ತು ವರ್ಷಗಳಲ್ಲಿ ಎಪ್ಪತ್ತೆರಡು ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯದ ಕಣಜವನ್ನು ಶ್ರೀಮಂತಗೊಳಿಸಿದರು. ಕಾದಂಬರಿಗಳೇ ಇಲ್ಲದಿದ್ದ ಕಾಲದಲ್ಲಿ ಅವು ಆ ಕೊರತೆಯನ್ನು ತುಂಬಿದುವು ಮತ್ತು ಜನರಲ್ಲಿ ಓದುವ ಹವ್ಯಾಸವನ್ನು ಬೆಳೆಸಿದುವು.

' ವೆಂಕಟಾಚಾರ್ಯರು ಸಾಮಾನ್ಯ ನಿಲುವಿನ ಎತ್ತರದ ವ್ಯಕ್ತಿ. ತಲೆಯ ಮೇಲೆ ಒಂದು ಬಿಳಿಯ ರುಮಾಲು, ಎದೆ ಮುಚ್ಚಿದ ಒಂದು ಕೋಟು, ಕಚ್ಚೆಪಂಚೆ ಅಷ್ಟೆ ಅವರ ಉಡುಪು; ಸರಳ ಮುಗ್ಧ ಕಣ್ಣುಗಳು. ಹಣೆಯ ಮೇಲೆ ಭ್ರೂ ಮಧ್ಯದಿಂದ ಎಳೆದ ಕೆಂಪು ನಾಮ ಸ್ವಚ್ಛವಾಗಿ ರಾರಾಜಿಸುತ್ತಿತ್ತು!'[೮] ಅವರು 'ಕಾಲಿಗೆ ಚಡಾವು ಧರಿಸಿ ತಮ್ಮ ದಪ್ಪ ದೊಣ್ಣೆಯನ್ನೂ ಹಿಡಿದುಕೊಂಡು ಸರಸರನೆ ವಾಕಿಂಗ್ ಹೊರಟುಬಿಟ್ಟರೆ ದೃಷ್ಟಿಯಾಗುವಂತಿತ್ತು!'[೯].

ಸದಾ ಹಸನ್ಮುಖಿ, ನಿಷ್ಕಪಟ ಸ್ವಭಾವ, ಮಕ್ಕಳೆಂದರೆ ಅಕ್ಕರೆ, ಬಡವರ ಬಗ್ಗೆ ಕನಿಕರ, ಕೈ ಕೆಳಗಿನವರ ವಿಚಾರದಲ್ಲಿ ಸಹಾನುಭೂತಿ, ಬಂಧು ಬಳಗ ಎಂದರೆ ಬಲು ಆದರ, ವಾದವಿವಾದಕ್ಕೆ ಬಲು ದೂರ, ದೇವರಲ್ಲಿ ಭಕ್ತಿ -ಇವು ಅವರ ಗುಣ.[೧೦] ಸರ್ಕಾರದ ಉನ್ನತ ಪದವಿಯಲ್ಲಿದ್ದರೂ, ಆಳುಕಾಳುಗಳಿದ್ದರೂ ಮನೆಗೆ ಬೇಕಾಗುವ ನೀರನ್ನು ಬಾವಿಯಿಂದ ಸೇದುವುದು, ಸಂಚಾರಕ್ಕೆ ಕುದುರೆಗಾಡಿಯಿದ್ದರೂ ನಡೆದೇ ಹೋಗುವುದು ಅವರಿಗೆ ಪ್ರಿಯವಾದುದು. ದಿನ ನಿತ್ಯ ಅರ್ಧಗಂಟೆ ಗದೆ ತಿರುಗಿಸಿ ವ್ಯಾಯಾಮ ಮಾಡುವುದು ಅವರ ಹವ್ಯಾಸ. ಟೆನ್ನಿಸ್ ಆಟದಲ್ಲಿ ಚತುರ,

ನಗರ ಡಿವಿಜನ್ನಿನ ಚಾಂಪಿಯನ್. ವೆಂಕಟಾಚಾರ್ಯರು ನಂಜನಗೂಡಿನಲ್ಲಿ ಮುನ್ಸೀಫರಾಗಿದ್ದಾಗ ಅನೇಕ ಬ್ರಿಟಿಷ್ ಅಧಿಕಾರಿಗಳೂ, ಚಾಮರಾಜೇಂದ್ರ ಒಡೆಯರ್ ಅವರೂ ನೀಲಗಿರಿಗೆ ಹೋಗುವ ಮಾರ್ಗದಲ್ಲಿ ಇಳಿದು ಇವರ ಜೊತೆ ಸ್ವಲ್ಪ ಹೊತ್ತು ಟೆನ್ನಿಸ್ ಆಡಿ ಹೋಗುತ್ತಿದ್ದರಂತೆ.

ಯಾವುದೇ ಕೆಲಸವನ್ನಾಗಲಿ ಪಟ್ಟು ಹಿಡಿದು ಮಾಡುವ ಸ್ವಭಾವ. ಈ ಗುಣ, ಶ್ರದ್ಧೆ ಮತ್ತು ದಕ್ಷತೆಗಳೇ ಅವರು ಅಧಿಕಾರದಲ್ಲಿ ಗುಮಾಸ್ತೆಗಿರಿಯಿಂದ ಪ್ರಥಮ ದರ್ಜೆ ಮುನ್ಸೀಫ್‌ಗಿರಿವರೆಗೆ ಏರಲು ನೆರವಾದುದು. ತಮ್ಮ ಕೆಲಸ ಕಾರ್ಯದ ನಡುವೆಯೂ ಸಾಹಿತ್ಯ ಸೇವೆಯ ಕೈಂಕರ್ಯವನ್ನು ಸ್ವೀಕರಿಸಿ ತಮ್ಮ ಬದುಕಿನ ಕೊನೆಯವರೆಗೂ ವ್ರತದಂತೆ ನಡೆಸಿಕೊಂಡು ಬಂದರು. ಸರಸ್ವತಿಯ ಈ ಸೇವೆಯಿಂದ ಅವರಿಗೆ ಲಕ್ಷ್ಮೀ ಕೃಪೆಯೂ ಆಯಿತು. ಅವರ ಅನೇಕ ಕೃತಿಗಳು ಪುನರ್ ಮುದ್ರಣಗೊಂಡುವಲ್ಲದೆ ಕೆಲವು ಕೃತಿಗಳು ಮದರಾಸು ವಿಶ್ವವಿದ್ಯಾಲಯದ ಮತ್ತು ಮೈಸೂರು ವಿದ್ಯಾ ಇಲಾಖೆಯ ಹಲವು ಪರೀಕ್ಷೆಗಳಿಗೆ ಹಲವಾರು ಬಾರಿ ಪಠ್ಯಗ್ರಂಥಗಳಾಗಿ ನಿಯಮಿಸಲ್ಪಟ್ಟುವು.

ಬಂಗಾಳೀ ಸಾಹಿತ್ಯಾಧ್ಯಯನದಿಂದ 'ವಂಗೀಯ ವಿಶ್ವಕೋಶ'ವೇ ಮೊದಲಾದ ಬೆಲೆ ಬಾಳುವ ನಿಘಂಟುಗಳೂ ಅಪೂರ್ವ ಕೃತಿಗಳೂ ಅವರ ಪುಸ್ತಕ ಭಂಡಾರದಲ್ಲಿದ್ದುವಂತೆ. ಅವರನ್ನು ನೋಡಲು ಬರುತ್ತಿದ್ದ ಬಂಗಾಳಿಗಳೇ ತಾವು ಕಂಡು ಕೇಳದ ಅಪೂರ್ವ ಬಂಗಾಳಿ ಪುಸ್ತಕಗಳನ್ನು ಕಂಡು ಆಶ್ಚರ್ಯಚಕಿತರಾಗುತ್ತಿದ್ದರಂತೆ. ವೆಂಕಟಾಚಾರ್ಯರ ಮನೆಗೆ ರವೀಂದ್ರನಾಥಠಾಕೂರರ ತಂದೆ ಮಹರ್ಷಿ ದೇವೇಂದ್ರನಾಥರು ಮತ್ತು ಸ್ವಾಮಿ ವಿವೇಕಾನಂದರು ಭೇಟಿ ಕೊಟ್ಟಿದ್ದರಂತೆ. 'ಸ್ವಾಮಿ ವಿವೇಕಾನಂದರು ದಕ್ಷಿಣ ಹಿಂದೂಸ್ಥಾನ ಸಂಚಾರದಲ್ಲಿದ್ದಾಗ ವೆಂಕಟಾಚಾರ್ಯರು ಪುದುಚೇರಿಯಲ್ಲಿ ಅವರನ್ನು ಸಂದರ್ಶಿಸಿರು. ಮದ್ರಾಸ್ ನಾಗರಿಕರಿಗೆ ವಿವೇಕಾನಂದರ ಪರಿಚಯವನ್ನು ಮಾಡಿಕೊಟ್ಟವರು ಆಚಾರ್ಯರೇ, ವಂಗಭಾಷೆ ಹಾಗೂ ಸಾಹಿತ್ಯದ ಮೇಲಿನ ಆಚಾರ್ಯರ ಪ್ರೀತಿಯನ್ನು ಪ್ರಭುತ್ವವನ್ನು ಕಂಡು ವಿವೇಕಾನಂದರಿಗೆ ಆಶ್ಚರ್ಯವೆನಿಸಿತು'.[೯] ಎಂದು ವೆಂಕಟೇಶ ಸಾಂಗಲಿ ಅವರು ಹೇಳುತ್ತಾರೆ. ಇವರಲ್ಲದೆ ಅನೇಕ ವಂಗ ಮಹನೀಯರೂ ರಾಮಕೃಷ್ಣಾಶ್ರಮದ ಸನ್ಯಾಸಿಗಳೂ ಅವರ ಮನೆಗೆ ನಿತ್ಯಯಾತ್ರಾರ್ಥಿಗಳಾಗಿದ್ದರಂತೆ. ಮೈಸೂರು ವಿಶ್ವವಿದ್ಯಾಲಯಕ್ಕೆ ಉಪಕುಲಪತಿಯಾಗಿ ಬಂದಿದ್ದ ಬ್ರಜೇಂದ್ರನಾಥ ಸೀಲ್ ಹಾಗೂ ಭಾರತದ ಖ್ಯಾತ ಇತಿಹಾಸ ತಜ್ಞರಾಗಿದ್ದ ರಾಧಾಕುಮುದ ಮುಖರ್ಜಿ ವೆಂಕಟಾಚಾರ್ಯರ ಮೇಲಿನ ಗೌರವದಿಂದ ಅವರ ಕುಟುಂಬದ ಸದಸ್ಯರ ಬಗ್ಗೆ ಆದರ ಭಾವನೆ ಹೊಂದಿದ್ದರಂತೆ.

ವೆಂಕಟಾಚಾರ್ಯರು ಅಕ್ಟೋಬರ್ ೧೯೦೨ರಲ್ಲಿ ಪ್ರಥಮ ತರಗತಿ ಮುನ್ಸೀಫ್ ಪದವಿಯಿಂದ ನಿವೃತ್ತರಾದರೂ, ಸಾಹಿತ್ಯೋಪಾಸನೆಯನ್ನು ನಿಲ್ಲಿಸದೆ ಮುಂದುವರೆಸಿ -ಕೊಂಡು ಹೋದರು. ೧೯೦೬-೭ರಲ್ಲಿ 'ಅವಕಾಶ ತೋಷಿಣೀ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿ ಅದರಲ್ಲಿ ಕಥೆ, ಲಘು ಲೇಖನಗಳನ್ನು ಬರೆಯುತ್ತಿದ್ದರು. ಅವರ ಒಂದೆರಡು ಕಾದಂಬರಿಗಳೂ ಅದರಲ್ಲಿ ಧಾರಾವಾಹಿಯಾಗಿ ಬಂದುವು. ಹೀಗೆ ಸಾಹಿತ್ಯ ಸೇವೆಯನ್ನು ನಿರಂತರವಾಗಿ ಮಾಡುತ್ತಲೇ ೧೯೧೪ರ ಜೂನ್ ೨೬ರಂದು ಬೆಂಗಳೂರಿನಲ್ಲಿ ಮೃತರಾದರು. ಅವರ ಭೌತಿಕ ದೇಹ ನಮ್ಮಿಂದ ದೂರವಾಗಿದೆಯೆ ಹೊರತು ಮತ್ತೇನಲ್ಲ. ಅವರ ಆತ್ಮ ಅವರ ಕೃತಿಗಳ ಮೂಲಕ ಕನ್ನಡಿಗರೆದುರಿನಲ್ಲಿ ಸದಾ ಕಂಗೊಳಿಸುತ್ತಿದೆ.

ಅವರ ಅಪಾರವಾದ ಸಾಹಿತ್ಯ ಸಂಪತ್ತಿನಲ್ಲಿ ಎಲ್ಲೋ ಕೆಲವು ಮಾತ್ರ ಈಗ ಲಭ್ಯವಾಗುತ್ತಿವೆ. ಹಾಗಾಗಿ ಅವರ ಎಲ್ಲ ಕೃತಿಗಳ ವಿಮರ್ಶೆ ಪ್ರಕೃತ ಸಾಧ್ಯವಿಲ್ಲ. ಅಗುಳಿನಿಂದಲೆ ಅನ್ನ ಬೆಂದಿದೆಯೆ ಇಲ್ಲವೆ ಎಂದು ನೋಡುವಂತೆ ದೊರಕುವ ಕೆಲವಾರು ಕೃತಿಗಳಿಂದಲೆ ಅವರ ಸಾಹಿತ್ಯ ಕೃತಿಗಳ ವಿಮರ್ಶೆಯನ್ನು ಅನಿವಾರ್ಯವಾಗಿ ಮಾಡಬೇಕಾಗಿದೆ.

ಬೇರೆ ಬೇರೆ ಲೇಖಕರು ವೆಂಕಟಾಚಾರ್ಯರನ್ನು ಕುರಿತು ಬರೆದಿರುವ ಲೇಖನಗಳಲ್ಲಿ ನನಗೆ ಸಿಗದ ಏಳೆಂಟು ಕೃತಿಗಳ ವಿಮರ್ಶೆ ಒಂದೆರಡು ಮಾತಿನಲ್ಲಿ ಸಿಗುತ್ತದೆ. ನನಗೆ ಸುಮಾರು ಹದಿನೈದು ಕೃತಿಗಳು ನೋಡಲು ಸಿಕ್ಕಿವೆ. ವೆಂಕಟಾಚಾರ್ಯರು ಅನುವಾದಿಸಿರುವ ಬಹುತೇಕ ಕೃತಿಗಳು ಬಂಕಿಮ ಚಂದ್ರರ ಕೃತಿಗಳಾಗಿರುವುದರಿಂದ ಎ.ಆರ್. ಕೃಷ್ಣಶಾಸ್ತ್ರಿ ಅವರ 'ಬಂಕಿಮ ಚಂದ್ರ' ಕೃತಿಯಲ್ಲಿ ವೆಂಕಟಾಚಾರ್ಯರು ಅನುವಾದಿಸಿರುವ ಬಂಕಿಮರ ಕೃತಿಗಳ ಕಥೆಯನ್ನು ಒಂದೆರಡು ಮಾತಿನಲ್ಲಿ ಹೇಳಿರುವೆನಾದರೂ ಎಲ್ಲ ಕೃತಿಗಳ ವಿಮರ್ಶೆಗೆ ಕೈ ಹಚ್ಚಹೋಗಿಲ್ಲ.

'ಲೋಕ ರಹಸ್ಯ' ಒಂದು ಪುಟ್ಟ ಕೃತಿ. ಮೂಲ ಲೇಖಕರು ಬಂಕಿಮ ಚಂದ್ರ. ಇದರಲ್ಲಿ ಮಾನವ ಸ್ವಭಾವ, ಪದ್ಧತಿ, ವ್ಯವಸ್ಥೆ ಇತ್ಯಾದಿಗಳನ್ನು ಪರಿಹಾಸ್ಯಮಾಡುವ ಲಘು ಲೇಖನಗಳಿವೆ. ಇಂಗ್ಲಿಷಿನಿಂದ ನಮ್ಮ ವ್ಯವಸ್ಥೆಯ ಮೇಲೆ, ನೀತಿ ಸಂಹಿತೆಯ ಮೇಲೆ ಆಗುತ್ತಿರುವ ಹೇರಿಕೆಯ ಬಗ್ಗೆ ವಿರೋಧವಿದೆ. ಕುಟುಂಬ ವ್ಯವಸ್ಥೆಯ ಸುಧಾರಣೆಯ ಬಗೆಗೆ ವಿರೋಧವಿದೆ. ಇಂಗ್ಲಿಷ್ ಭಾಷೆಯ ಪ್ರಭಾವದಿಂದ ನಮ್ಮ ಮಾತೃಭಾಷೆಯನ್ನು ಮರೆಯುತ್ತಿರುವುದರ ಬಗ್ಗೆ ವ್ಯಂಗ್ಯಾತ್ಮಕವಾದ ಟೀಕೆಯಿದೆ. ಈ ಎಲ್ಲ ಟೀಕೆಗಳನ್ನು ಮಾಡುವುವು ಪ್ರಾಣಿಗಳು-ವ್ಯಾಘ್ರಗಳು ಮತ್ತು ಕೋಡಗ. ಪ್ರಾಣಿಗಳ ಮೂಲಕ ಮನುಷ್ಯನ ಗುಣಸ್ವಭಾವಗಳ ವಿಮರ್ಶೆಯ ರೀತಿ ಪಂಚತಂತ್ರವನ್ನು ನೆನಪಿಗೆ ತರುತ್ತದೆ.

'ಪ್ರಾಚೀನ ಮತ್ತು ನವೀನ ಕಾಲದ ಹೆಂಗಸರು' ಎಂಬ 'ಈ ಪ್ರಬಂಧವು ವಿಖ್ಯಾತರಾದ ಶ್ರೀ ಬಂಕಿಮಚಂದ್ರ ಚಟ್ಟೋಪಾಧ್ಯಾಯರು ಶ್ರೀ ರಾಜನಾರಾಯಣ ವಸು ಮುಂತಾದ ಪಂಡಿತರು ಬರೆದು ಪ್ರಸಿದ್ಧ ಪಡಿಸಿರುವ ಪ್ರಬಂಧಗಳಲ್ಲಿ ಉಕ್ತವಾಗಿರುವ ಉಕ್ತಿಗಳನ್ನವಲಂಬಿಸಿ ಬರೆದುದಾಗಿದೆ. ಧರ್ಮಮೂಲವಿಲ್ಲದ ವಿದ್ಯಾಭ್ಯಾಸವು ಹೆಂಗಸರಿಗಾಗಲಿ, ಗಂಡಸರಿಗಾಗಲಿ ಉದ್ದಿಷ್ಟ ಫಲದಾಯಕ -ವಾಗಲಾರದೆಂದು ತೋರುವ ಅಂಶವನ್ನು ಈ ಪ್ರಬಂಧದಲ್ಲಿ ಸೂಚಿಸಿದೆ' ಎಂದು ವಿಜ್ಞಾಪನೆಯಲ್ಲಿ ವೆಂಕಟಾಚಾರ್ಯರು ಹೇಳಿದ್ದಾರೆ. 'ಸ್ತ್ರೀ ಪುರುಷರ ಸಮಷ್ಟಿಗೆ ಸಮಾಜವೆಂದು ಹೆಸರು. ಉಭಯರ ಸಮಾನವಾದ ಉನ್ನತಿಯಿಂದಲೇ ಸಮಾಜದ ಉನ್ನತಿಯಾಗಬೇಕು. ಒಂದು ಭಾಗದ ಉನ್ನತಿಯು ಸಮಾಜದ ಸಂಸ್ಕರಣಕ್ಕೆ ಮುಖ್ಯವಾದ ಉದ್ದೇಶವೆಂದೂ ಆ ಉನ್ನತಿಗೆ ಸಹಕಾರಿಯಾಗಿ ಮತ್ತೊಂದು ಭಾಗದ ಉನ್ನತಿಯು ಗೌಣವಾದ ಉದ್ದಶವೆಂದೂ ಹೇಳುವುದು ನೀತಿ ವಿರುದ್ಧವಾದ ಮಾತಾಗಿದೆ.' (ಪು.೪) ಹೀಗೆ ಈ ಪ್ರಬಂಧವು ಮುಂದುವರೆಯುತ್ತಾ 'ಹೆಂಗಸರಿಗೆ ಲಜ್ಜೆಯೇ ಮುಖ್ಯವಾದ ಆಭರಣ' (ಪು.೨೫), 'ಕತ್ತೆಯಲ್ಲಿ ಖಂಡಗ ಹಾಲು ಇದ್ದ ಹಾಗಾಗುತ್ತದೆ' (ಪು.೨೫) ಎಂಬಂತಹ ಹೇಳಿಕೆಗಳೊಡನೆ ಸಾಗುತ್ತದೆ.

ಪಂಡಿತ ಹರಪ್ರಸಾದ ಶಾಸ್ತ್ರಿಯವರ 'ಭಾರತ ಮಹಿಳಾ' ಕೃತಿಯಲ್ಲಿ ಹಿಂದೂಧರ್ಮದ ಪವಿತ್ರ ಗ್ರಂಥಗಳಾದ ಸ್ಮೃತಿಪುರಾಣಗಳಲ್ಲಿ ಮತ್ತು ಕಾಳಿದಾಸನೇ ಮೊದಲಾದ ಕವಿಗಳ ಭರತಖಂಡದ ಶ್ರೇಷ್ಠ ಕಾವ್ಯಗಳಲ್ಲಿ ಮೂರ್ತೀಭವಿಸಿರುವ ಆದರ್ಶ ರಮಣೆಯರ ಗುಣಲಕ್ಷಣಗಳು ಮತ್ತು ಸ್ತ್ರೀ ಧರ್ಮ ನಿರೂಪಿತವಾಗಿದೆ. ಪ್ರಾಚೀನ ಕಾಲದಲ್ಲಿ ಅವರಿಗಿದ್ದ ಸ್ವಾತಂತ್ರ್ಯ, ಆಸ್ತಿಯ ಹಕ್ಕು, ವಿದ್ಯಾಭ್ಯಾಸ ಇವುಗಳನ್ನು ಯಥಾವತ್ತಾಗಿ ನಿರೂಪಿಸಿದೆ ಮತ್ತು ಅಂದಿನ ಕಾಲದ ಹೆಣ್ಣಿನ ಗುಣ ನಡತೆಗಳೇ ಶ್ರೇಷ್ಠ ಎಂಬಂತೆ ಚಿತ್ರಿಸಿದೆ. ಕೆಲವು ಕಡೆ ಅವು ತೀವ್ರ ಪ್ರತಿಗಾಮಿದೃಷ್ಟಿಯಿಂದ ಕೂಡಿವೆ. ಬಹುಶಃ ಬ್ರಿಟಿಷರಿಂದ ಮತ್ತು ರಾಜಾರಾಮ ಮೋಹನರಾಯ ಮೊದಲಾದವರಿಂದ ಬರುತ್ತಿದ್ದ ಸುಧಾರಣಾ ಕ್ರಮಗಳನ್ನು ಎದುರಿಸಲು ಇಂತಹ ಕೃತಿಗಳು ಹುಟ್ಟಿರಬೇಕು. ಉದಾಹರಣೆಗೆ 'ಸ್ತ್ರೀಯು ತನ್ನ ಪತಿಯನ್ನೇ ಹೊರತು ಪರಪುರುಷನೊಡನೆ ಸಹ ವಾಸ ಮಾಡಕೂಡದು. ಹಾಗೇನಾದರೂ ಮಾಡಿದರೆ ಇಹದಲ್ಲಿ ದುರಂತವಾದ ಶಿಕ್ಷೆಯೂ, ಪರದಲ್ಲಿ ದುರಂತವಾದ ನರಕವೂ ಪ್ರಾಪ್ತಿಯಾಗುತ್ತದೆ. ಸ್ತ್ರೀಯು ತನ್ನ ಪತಿಯನ್ನು ದೇವರ ಹಾಗೆ ತಿಳಿದು ಗೃಹ ಕಾರ್ಯದಲ್ಲಿಯೂ ಅತಿಥಿ ಸತ್ಕಾರದಲ್ಲಿಯೂ, ದೇವತಾ ಪೂಜೆಯಲ್ಲಿಯೂ ಆಸಕ್ತಳಾಗಿರಬೇಕು. ಪತಿಯು ಪತಿತನಾಗಲೀ, ಪಲಾತಕನಾಗಲೀ ಬೇರೆ ವಿವಾಹವನ್ನು ಮಾಡಿಕೊಳ್ಳಬೇಕಾದ ವಿಧಿಯಿದ್ದರೂ ಅವನನ್ನು

ಬಿಟ್ಟು ಬೇರ ಮದುವೆಯನ್ನು ಮಾಡಿಕೊಳ್ಳುವವಳಿಗೆ ನಾಯಿಜನ್ಮ ಬರುವುದೆಂದು ಹೇಳಲ್ಪಡುತ್ತದೆ...' (ಪು.೩೩) ಎಂಬಂತಹ ಹೇಳಿಕೆಗಳನ್ನು ನೋಡಬಹುದು.

'ಅವಕಾಶ ತೋಷಿಣೀ' ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದು ೧೯೨೦ರಲ್ಲಿ ಪುಸ್ತಕ ರೂಪದಲ್ಲಿ ಬಂದ ದಾಮೋದರ ಮುಖ್ಯೋಪಾಧ್ಯಾಯರ 'ಶಾಂತಿ' ತೃಟಿತಾವಸ್ಥೆಯಲ್ಲಿದ್ದುದರಿಂದ ಅದರ ಬಗ್ಗೆ ಹೆಚ್ಚಿಗೆ ಏನನ್ನೂ ಹೇಳಲಾಗದು. ಆದರೂ ಅದೊಂದು ಅದ್ಭುತ ಚಮತ್ಕಾರಗಳಿಂದ ಕೂಡಿದ ಕೃತಿಯೊ ಅಥವಾ ಪತ್ತೇದಾರಿ ಕಾದಂಬರಿಯೊ ಆಗಿರಬೇಕೆಂದು ಊಹಿಸಲು ಸಾಕಷ್ಟು ಕಾರಣಗಳು ಇವೆ. ಗಂಡನನ್ನು ಕೊಲೆಮಾಡಿದ ಅಪರಾಧಕ್ಕಾಗಿ ಮರಣದಂಡನೆಗೆ ಗುರಿಯಾಗಿದ್ದ ಕಾಳಿಂದಿಯ ಸ್ಥಾನದಲ್ಲಿ ಸುಕುಮಾರಿ ಎನ್ನುವವಳು ಬರುತ್ತಾಳೆ. ಮತ್ತು ಜೈಲಿನಿಂದ ಅದೃಶ್ಯಳೂ ಆಗುತ್ತಾಳೆ. ಅವಳ ಹಿಂದಿನ ಪ್ರಿಯಕರನಿಂದ ಅವಳು ಅಗಲಿದ್ದಾದರೂ ಏಕೆ? (ಸಮುದ್ರ ಯಾನದಲ್ಲಿ ಅಗಲಿಕೆಯುಂಟಾಗಿರುತ್ತದೆ.) ಇಂತಹ ಇನ್ನೂ ಅನೇಕ ಆಶ್ಚರ್ಯಗಳಿಗೆ, ಸಂದೇಹಗಳಿಗೆ ಪೂರ್ಣಕೃತಿ ದೊರೆತ ಮೇಲೆಯೆ ಉತ್ತರ ಸಿಗಬೇಕು.

ಬಾಬು ಸತ್ಯೇಂದ್ರನಾಥ ಕುಮಾರ ಬಾಬು ಅವರ 'ಸಾಧನೆ'ಯನ್ನು ೧೯೦೦ರಲ್ಲಿ ವೆಂಕಟಾಚಾರ್ಯರು ಕನ್ನಡಿಸಿದ್ದಾರೆ. ಆಗ್ರಾದಲ್ಲಿ ಸಾಧನೆ ಎಂಬ ಹುಡುಗಿ ಕೊಲೆಯಾಗುವುದರಲ್ಲಿದ್ದಾಗ ಅವಳನ್ನು ಕೊಲೆಮಾಡಬೇಕೆಂದಿದ್ದವಳೇ ಕೊಲೆ-ಯಾಗುತ್ತಾಳೆ. ಹಾಗೇ ಕೊಲೆಯಾದವಳು ಚುನಿಲಾಲ ಎಂಬುವನ ಸೊಸೆ. ಸಾಧನೆ ಕುರುಡಿ, ಮೂಗಿ ಮತ್ತು ಕಿವುಡಿ, ಸಾಧನೆಯನ್ನು ಯಾರು ಕೊಲೆಮಾಡಲು ಬಂದಿದ್ದರು, ಏಕೆ ಬಂದಿದ್ದರು ಎಂಬುದನ್ನು ಮುನೀಂದ್ರಬಾಬು ಎಂಬ ಇಪ್ಪತ್ತೈದು ವರ್ಷಗಳ ತರುಣ ಪತ್ತೇದಾರ ಪತ್ತೆ ಹಚ್ಚುವ ಕಥೆಯೆ 'ಸಾಧನೆ'. ಪತ್ತೇದಾರ ಪತ್ತೇದಾರಿಕೆಗಿಂತ ಊಹಾಪ್ರಪಂಚದಲ್ಲಿಯೆ ಹೆಚ್ಚಾಗಿರುತ್ತಾನೆ. ಕೊನೆಗೆ ಸಾಧನೆಯನ್ನಪಹರಿಸಿಕೊಂಡು ಹೋಗಲು ಬಂದಿದ್ದ ಸನ್ಯಾಸಿಯೊಬ್ಬನಿಂದ ಅವಳ ಪೂರ್ವವೃತ್ತಾಂತ ಗೊತ್ತಾಗುವು-ದಲ್ಲದೆ ಅವಳಿಗೆ ವಾಕ್, ಶ್ರವಣ ಮತ್ತು ದೃಷ್ಟಿಶಕ್ತಿಗಳು ದೊರಕೊಳ್ಳುತ್ತವೆ. ಮತ್ತೊಬ್ಬ ಅಪಹರಣಕಾರನಿಂದ ಸಾಧನೆಯ ಕೊಲೆಯ ಪ್ರಯತ್ನದಲ್ಲಿ ಮೃತಳಾದವಳು ಚುನಿಲಾಲನ ಸೊಸೆ ಎಂದು ಗೊತ್ತಾಗುತ್ತದೆ. ಹೀಗೆ ರಹಸ್ಯ ಸ್ಫೋಟಗೊಳ್ಳುತ್ತಾ ಓದಿಸಿಕೊಳ್ಳುವ ಗುಣ ಹೊಂದಿರುವ ಸಾಧಾರಣವೆನ್ನಬಹುದಾದ ಕೃತಿ ಇದು.

ಪಾಂಚಕಡಿ ದೆ (Pancherdi De) ಅವರ 'ಪರಿಮಳಾ' ಮತ್ತು 'ಮನೋರಮೆ' ಎಂಬ ಪತ್ತೇದಾರಿ ಕಾದಂಬರಿಗಳನ್ನು ವೆಂಕಟಾಚಾರ್ಯರು ಅನುವಾದಿಸಿದ್ದಾರೆ. ರಾಮಕುಮಾರ ಬಾಬುವಿನ ಏಕಮಾತ್ರ ಪುತ್ರಿಯಾದ ವಿಮಲೆಯನ್ನು ವಿವಾಹದ ಹಿಂದಿನ ದಿನ ಅಪಹರಿಸಲಾಗುತ್ತದೆ. ಈ ಅಪಹರಣ ಸ್ಥೂಲನೋಟಕ್ಕೆ ಕೊಲೆಯೆಂದೇ

ಅನ್ನಿಸಿದರೂ ಅದು ಕೊಲೆಯಲ್ಲವೆಂದು ಪತ್ತೇದಾರ ಸಂಜೀವಚಂದ್ರ ಮುಖ್ಯೋ-ಪಾಧ್ಯಾಯ ಹೇಳಿ ವಿಮಲೆಯನ್ನು ಪತ್ತೆ ಮಾಡಿಕೊಡುತ್ತಾನೆ. ಪತ್ತೇಕಾರ್ಯದಲ್ಲಿ ತೊಡಗಿದ್ದಾಗ ರಾಮಕುಮಾರ ಬಾಬುವಿಗೆ ಅಳಿಯನಾಗಬೇಕಾಗಿದ್ದ ದೇವೀದಾಸ ಮುಖ್ಯೋಪಾಧ್ಯಾಯನ ಮೇಲೆ ಅನುಮಾನ ಬಂದರೆ ಪತ್ತೇದಾರನಿಗೆ ರಾಮಕುಮಾರ ಬಾಬುವಿನ ತಂಗಿಯ ಮಗಳು ಪರಿಮಳೆಯ ಮೇಲೆ ಸಂದೇಹ ಬರುತ್ತದೆ. ಈ ಸಂದೇಹ ಬಲಗೊಳ್ಳುವಂತಹ ಸಾಕ್ಷ್ಯಗಳು ದೊರಕಿದರೂ ಕೊನೆಯಲ್ಲಿ ಆ ರಹಸ್ಯ ಬಯಲಾಗುತ್ತದೆ. ಪರಿಮಳೆಯಂತೆ ಕಾಣುತ್ತಿದ್ದ, ಮೃತಳಾದಳೆಂದೇ ಭಾವಿಸಿದ್ದ ಪರಿಮಳೆಯ ಅವಳಿ ಸೋದರಿ ನಿರಮಲೆಯೆ ಅವಳು. ಅವಳು ರಾಮಕುಮಾರ ಬಾಬುವಿನ ಮಾವನಾದ ಘನಶ್ಯಾಮ ಮುಖ್ಯೋಪಾಧ್ಯಾಯನ ಅಣ್ಣನ ಮಗನಾದ ಮಹೇಂದ್ರ ಮತ್ತು ದೇವೀದಾಸನ ಚಿಕ್ಕಪ್ಪನಾದ ಮಹೀಂದ್ರ ಇವರ ದುಷ್ಟಕೂಟದಲ್ಲಿ ಸೇರಿಕೊಂಡು ವಿಮಲೆಯ ಅಪಹರಣದಲ್ಲಿ ಭಾಗಿಯಾಗಿರುತ್ತಾಳೆ. ಪತ್ತೇದಾರಿಕೆಯಲ್ಲಿ ಬುದ್ಧಿಗಿಂತಲೂ ದೇಹಬಲಕ್ಕೆ ಹೆಚ್ಚು ಒತ್ತುಕೊಡುತ್ತಾನೆ ಪತ್ತೇದಾರ. ಅವನ ಸಾಹಸಗಳು ಮೂರ್ಖತನದ ಪರಮಾವಧಿ. ಕೊನೆಯಲ್ಲಿ ಸುಖಾಂತವಾಗಿ ದೇವೀದಾಸನು ವಿಮಲೆಯನ್ನೂ ಪತ್ತೇದಾರ ಸಂಜೀವಚಂದ್ರನು ಪರಿಮಳೆಯನ್ನೂ ವಿವಾಹವಾಗುತ್ತಾರೆ. ಕಾದಂಬರಿಯ ಮಧ್ಯದಲ್ಲಿ ಇಡೀ ಒಂದು ಅಧ್ಯಾಯದಲ್ಲಿ ಸೂರ್ಯೋದಯದ ವರ್ಣನೆ ಬರುತ್ತದೆ. ಕಥೆಗೆ ಎಳ್ಳಷ್ಟು ಹೊಂದಿಕೊಳ್ಳದ ಈ ವರ್ಣನೆ ಬಲವಂತವಾಗಿ ತುರುಕಿದಂತಿದೆ. ಈ 'ಕಾದಂಬರಿಯನ್ನು ಬರೆವಾಗ ವೆಂಕಟಾಚಾರ್ಯರ ಕೀರ್ತಿ ಶಿಖರವನ್ನು ಮುಟ್ಟಿತೆಂದೇ ಹೇಳಬೇಕು'[೧೨] ಎಂಬ ಎನ್. ಪಂಕಜರ ಹೇಳಿಕೆ ತೀರ ಬಾಲಿಶವಾದದ್ದು. 'ಮನೋರಮೆ' ವೆಂಕಟಾಚಾರ್ಯರ ಸ್ವಂತ ಕೃತಿಯೆಂದೂ, ವೆಂಕಟಾಚಾರ್ಯರಿಂದಲೆ ಕನ್ನಡ ಕಲಿತಿದ್ದ ಬಂಕಿಮಚಂದ್ರರು 'ಮನೋರಮೆ'ಯನ್ನು ಮೆಚ್ಚಿ ಅದಕ್ಕೆ ಉತ್ತರಭಾಗವೊ ಎಂಬಂತೆ 'ಜುಮಲೆ' ಎಂಬ ಕಾದಂಬರಿಯನ್ನು ಬರೆದರು ಎಂಬುದಾಗಿ ಎನ್. ಪಂಕಜ ಹೇಳುತ್ತಾರೆ.[೧೩] ಆದರೆ 'ಮನೋರಮೆ' ವೆಂಕಟಾಚಾರ್ಯರ ಸ್ವಂತ ಕೃತಿಯಲ್ಲ. ಪಾಂಚಕಡಿ ದೆ ಅವರ ಕೃತಿಯ ಅನುವಾದ. ಪತ್ತೇದಾರಿ ಕಾದಂಬರಿ. ಅನೇಕ ರೋಮಾಂಚನ ಘಟನೆಗಳುಳ್ಳ ಈ ಕಾದಂಬರಿಯಲ್ಲಿ ಜುಮಲೆ ಒಂದು ಪಾತ್ರ. ಪತ್ತೇದಾರನಿಂದ ದುಷ್ಟಕೂಟ ನಿರ್ನಾಮವಾದಾಗ, ಪತ್ತೇದಾರನಿಗೆ ಸಿಗದ, ಅವನ ಮೇಲೆ ಸೇಡನ್ನೂ ತೀರಿಸಿಕೊಳ್ಳುವ ಪ್ರತಿಜ್ಞೆಯನ್ನು ಮಾಡಿ ತಪ್ಪಿಸಿಕೊಳ್ಳುವವಳೆ ಈ ಜುಮಲೆ, ಬಹುಶಃ ಪಾಂಚಕಡಿ ದೆ ಅವರೆ 'ಮನೋರಮೆ'ಯ ಮುಂದಿನ ಭಾಗವಾಗಿ 'ಜುಮಲೆ'ಯನ್ನು ಬರೆದಿರಬಹುದು.

ರಮೇಶಚಂದ್ರ ದತ್ತರ 'ವಂಗವಿಜೇತ'ವನ್ನು ೧೯೧೩ನೆ ಅಕ್ಟೋಬರಿನಲ್ಲಿ ವೆಂಕಟಾಚಾರ್ಯರು ಅನುವಾದಿಸಿದರು. '೧೫೮೦ನೆ ಕ್ರಿಸ್ತಾಬ್ದದಲ್ಲಿ ಟೋಡರ

ಮಲ್ಲನು.....ವಂಗ, ಬಿಹಾರು, ಉರಿಸ್ಸಾ ದೇಶಗಳನ್ನಾಳಿದ ಎರಡು ವರ್ಷಗಳ ಕಾಲದಲ್ಲಿ ನಡೆದ ಘಟನೆಗಳನ್ನವಲಂಬಿಸಿ ಈ ಅಖ್ಯಾಯಿಕೆಯನ್ನು' ಬರೆದುದಾಗಿ ವಿಜ್ಞಾಪನೆಯಲ್ಲಿ ವೆಂಕಟಾಚಾರ್ಯರು ಹೇಳಿದ್ದಾರೆ. (ಪು.೩) ರಾಜಾ ಸಮರಸಿಂಹನು ಮೂರನೆಯ ಬಾರಿಗೆ ವಂಗ ಬಿಹಾರು ಉರಿಸ್ಸಾ ದೇಶಗಳನ್ನಾಳಿದ ಎರಡು ವರ್ಷಗಳ ಕಾಲದಲ್ಲಿ ರಾಜಾಸಮರ ಸಿಂಹನನ್ನು ಮೋಸದ ಆರೋಪದಿಂದ ರಾಜದ್ರೋಹಿಯೆಂದು ಕೊಲ್ಲಿಸಿದ ಸತೀಶಚಂದ್ರ ಮತ್ತು ಅವನ ಮಂತ್ರಿ ಶಕುನಿ ಇವರಿಗೆ ಶಿಕ್ಷೆಯಾದದ್ದು, ರಾಜಾಸಮರಸಿಂಹನ ಹಿತೈಷಿಯಾಗಿದ್ದ ನಾಗೇಂದ್ರನಾಥನ ಎರಡನೆಯ ಮಗ ಇಂದ್ರನಾಥನ ಸಾಹಸಗಳು, ಇಂದ್ರನಾಥ ರಾಜಾಸಮರ ಸಿಂಹನ ಮಗಳನ್ನು ಮದುವೆಯಾಗುವುದು, ಸತೀಶ ಚಂದ್ರನ ಮಗಳು ವಿಮಲೆ ಇಂದ್ರನಾಥನಿಗೆ ವಿಪತ್ಕಾಲದಲ್ಲಿ ನೆರವಾಗುವುದು, ಹುಲಿಯಿಂದ ಹತನಾದನೆಂದು ತಿಳಿದಿದ್ದ ನಾಗೇಂದ್ರನಾಥನ ಹಿರಿಯ ಮಗ ಉಪೇಂದ್ರ ಮರಳಿ ಬರುವುದು, ಮತ್ತು ಅವನ ಹೆಂಡತಿ ಕಮಲೆಯೊಡನೆ, ಪುನರ್ಮಿಲನ, ಯುದ್ಧದ ವಿದ್ರೋಹದ ಒಂದೆರಡು ಚಿತ್ರಗಳು ಇವೆಲ್ಲಾ ಸೇರಿ ಇದನ್ನೊಂದು ಚಾರಿತ್ರಿಕ ಕಾದಂಬರಿ ಎಂದು ಹೇಳುವಂತಾಗಿದೆ. ಯಾವ ಚಾರಿತ್ರಿಕ ಹಿನ್ನೆಲೆಯೂ ಇಲ್ಲದೆ ಈ ಕಾದಂಬರಿಯನ್ನು ರಚಿಸಬಹುದಾಗಿತ್ತು. ರಚನೆಯಾದ ಕಾಲದ ದೃಷ್ಟಿಯಿಂದಷ್ಟೆ ಇದಕ್ಕೆ ಬೆಲೆ. ಒಂದೊಂದು ಅಧ್ಯಾಯಕ್ಕೂ ಸೂಕ್ತವಾದ ಇಂಗ್ಲಿಷ್ ಕವನಗಳ ಸೂಕ್ತಿಯಿದೆ.

ವಂಗೀಯ ಪರಿವ್ರಾಜಕರೊಬ್ಬರಿಂದ ರಚನೆಯಾದ 'ಕೋಹಿನೂರು' ೧೯೦೫ ರಲ್ಲಿ ವೆಂಕಟಾಚಾರ್ಯರ ಮೂಲಕ ಕನ್ನಡಕ್ಕೆ ಬಂದಿತು. ಇದು ಔರಂಗಜೇಬನ ಕಾಲಕ್ಕೆ ಸೇರುವ ಐತಿಹಾಸಿಕ ಕಾದಂಬರಿ. ಇದರ ಮುಖ್ಯ ಉದ್ದೇಶ ಹಿಂದೂಗಳಲ್ಲಿನ ದೇಶ ಪ್ರೇಮವನ್ನು ಪ್ರಚೋದಿಸುವುದು. ಅದಕ್ಕಿಂತಲೂ ಮುಖ್ಯವಾಗಿ ಮೇವಾರದ ರಾಣ ಜಯಸಿಂಹನ ಮಗ ಅಮರಸಿಂಹನ ಪ್ರಣಯ ಕಥೆಯನ್ನು ನಿರೂಪಿಸುವುದು. ಅಮರಸಿಂಹ ಬಾಲ್ಯದಲ್ಲಿ ನೋಡಿದ್ದ ಅಂಬಾಲಿಕೆಯಲ್ಲಿ ಪ್ರಾಣನೆಟ್ಟವನಾಗಿ ಅನ್ನಹಾರಾದಿಗಳನ್ನು ತೊರೆದು ವಿರಹದಲ್ಲಿರಲು ಜಯಸಿಂಹನ ಕಿರಿಯ ರಾಣಿ ಸೇನಾಪತಿ ವಿಕ್ರಮ ಸಿಂಹನ ಮಗಳನ್ನು ತಂದು ಮದುವೆ ಮಾಡುತ್ತಾಳೆ. ಆದರೆ ಅವಳು ತಾನು ಹಿಂದೆ ನೋಡಿದ್ದ ಹುಡುಗಿಯಲ್ಲವೆಂದು ಅಮರಸಿಂಹ ಅರಮನೆಯಿಂದ ಹೊರಟು ಬಿಡುತ್ತಾನೆ. ಅಮರಸಿಂಹನು ಕೃಷಿಕನ ವೇಷದಲ್ಲಿದ್ದುಕೊಂಡು ಅಂಬಾಲಿಕೆಯ ರಕ್ಷಣೆಯನ್ನು ಎರಡು ಮೂರು ಬಾರಿ ಮಾಡುತ್ತಾನೆ. ವಿಕ್ರಮಸಿಂಹನ ಮಗಳು ವಿಲಾಸ ಕುಮಾರಿ ಅಥವಾ ದೇವಯಾನಿ, ಅಮರಸಿಂಹನನ್ನು ಮದುವೆಯಾದವಳು, ಅಂಬಾಲಿಕೆ ಮತ್ತು ಅಮರಸಿಂಹರ ವಿವಾಹಕ್ಕೆ ನೆರವಾಗುತ್ತಾಳೆ. ತನ್ನ ತಂದೆ ವಿಕ್ರಮ ಸಿಂಹನನ್ನು ಮೋಸದಿಂದ ಕೊಂದಿದ್ದ ಔರಂಗಜೇಬನ ಸೇನಾಪತಿ ಅಫಜಲಖಾನನನ್ನು

ವಿಲಾಸಕುಮಾರಿ ಕೊಂದು ಸೇಡುತೀರಿಸಿಕೊಳ್ಳುತ್ತಾಳೆ. ಕಾದಂಬರಿಯಲ್ಲಿ ಅಮರ ಸಿಂಹನಲ್ಲದೆ ಇನ್ನೂ ಅನೇಕ ಜಯಸಿಂಹ, ಕೇಸರಿಸಿಂಹ, ದುರ್ಗಾದಾಸ ಮೊದಲಾದ ರಜಪೂತ ವೀರರ ಚಿತ್ರಣವಿದೆ. ಈ ಕಾದಂಬರಿಯಲ್ಲಿ ಹಿಂದೂ ಪಕ್ಷಪಾತಿಯಾದ ಫಕೀರನಾರೆಂಬ ಪ್ರಶ್ನೆ ಕೊನೆಗೂ ಓದುಗರ ಕುತೂಹಲವನ್ನು ತಣಿಸುವುದಿಲ್ಲ. ಇದೊಂದು ಹೆಚ್ಚು ಭಾವನಾತ್ಮಕವಾದ ಕಾದಂಬರಿ.

'..... ಆ ಪ್ರಕಾಂಡ ದೇಹವುಳ್ಳ ಕಾಡುಕೋಣವು ಕುತ್ತಿಗೆಯನ್ನು ಬಗ್ಗಿಸಿ ಕೊಂಬುಗಳನ್ನು ನೆಟ್ಟಗೆ ಮಾಡಿಕೊಂಡು ಒಬ್ಬ ಕುದುರೆ ಸವಾರನನ್ನು ಆಕ್ರಮಣ ಮಾಡಲು ಓಡುತ್ತಿತ್ತು. ಸವಾರನು ನಗುಮೊಗವಾಗಿ ಕತ್ತಿಯನ್ನೆತ್ತಿ ಹಿಡಿದು ಅದು ಬರುವುದನ್ನು ಕಾದಿದ್ದನು. ನೋಡಲಾಗಿ ಕುದುರೆ ಸವಾರನು ಭಾರತದ ಸಾಮ್ರಾಜನಾದ ಅಕಬರಷಹನಾಗಿದ್ದನು!... ಮಹಿಷವು ಹತ್ತಿರ ಬಂದಕೂಡಲೇ ಅಕಬರನು ಅದರ ತಲೆಗೆ ಗುರಿಯಿಟ್ಟು ಕತ್ತಿಯಿಂದ ಹೊಡೆದನು. ಆದರೆ ಆ ಸಮಯದಲ್ಲಿ ಕುದುರೆಯು ಬೆದರಿ ಹಾರಿತು. ಕತ್ತಿಯ ಪೆಟ್ಟು ಎಸೆತಪ್ಪಿ ಮಹಿಷದ ತಲೆಗೆ ಬೀಳದೆ ಎದುರಿಗಿದ್ದ ಮರದ ಕೊಂಬೆಗೆ ತಗಲಿ ಎರಡು ತುಂಡಾಗಿ ಮುರಿದು ಹೋಯಿತು. ಮಹಿಷದ ಭೀಷಣವಾದ ಕೊಂಬು ಕುದುರೆಯ ಹೊಟ್ಟೆಯನ್ನು ಸೀಳಿತು. ಅಕಬರನ ಮುಖ ಮಂಡಲವು ಪಾಂಡು ವರ್ಣವನ್ನು ತಾಳಿತು. ಅವನು ಕುದುರೆಯಿಂದಿಳಿದು ಪಕ್ಕದಲ್ಲಿದ್ದ ಮರದ ಕೊಂಬೆಯನ್ನು ಮುರಿದು ಹಿಡಿದುಕೊಂಡು ನಿಂತನು. ಮಹಿಷವು ಹೊಸ ಉತ್ಸಾಹದಿಂದಲೂ ಜಯೋಲ್ಲಾಸದಿಂದಲೂ ಕುತ್ತಿಗೆಯನ್ನು ತಿರುಗಿಸಿಕೊಂಡು ಅವನ ಕಡೆ ತಿರುಗಿತು. ಯುವಕನು ಕುದುರೆಯಿಂದ ಧುಮುಕಿ ಬೇಗನೆ ಹೋಗಿ ಅಕಬರನೆದುರಿಗೆ ನಿಂತನು. ಯುವಕನು ನಕ್ಕು ಮೊಗಲ್ ಸಾಮ್ರಜನೆ! ರಜಪೂತ ವೀರನು ಮಹಿಷದ ಸಂಗಡ ಯುದ್ಧ ಮಾಡುವ ಬಗೆಯನ್ನು ನೋಡೋಣವಾಗಲಿ' ಎಂದು ಹೇಳಿದನು.

ಅನಂತರದ ಯುವಕನು ದರ್ಪದಿಂದ ಮಹಿಷದ ತಲೆಗೆ ಒಂದು ಸಲ ಕಾಲಿಂದೊದ್ದು ಕತ್ತಿಯನ್ನು ಕಂಕುಳಲ್ಲಿದ್ದ ಒರೆಯಲ್ಲಿ ಕೂಡಿಸಿ, ಬಳಿಕ ಹಾರಿಹೋಗಿ ಮಹಿಷದ ಬೆನ್ನಿನ ಮೇಲೇರಿಕೊಂಡು ಬಲದ ಕೈಯಿಂದ ಅದರ ಕೊಂಬನ್ನು ಹಿಡಿದು ಎಡಗೈಯಿಂದ ಅದರ ಮುಂಗಾಲನ್ನು ಹಿಡಿದೆತ್ತಿ ಕೊಂಬಿನಲ್ಲಿ ಸಿಲುಕಿಸಿ ಎರಡನ್ನು ಮುಷ್ಟಿಯಿಂದ ಹಿಡಿದುಕೊಡು, ಬಲದ ಕೈಯನ್ನೆತ್ತಿ, ನೋಡೋಣವಾಗಲಿ ಸಮ್ರಾಜನೆ! ನನ್ನ ಮುಷ್ಟಿಯ ಪ್ರಹಾರದಿಂದಲೇ ಮಹಿಷನನ್ನು ಹೊಡೆದು ಹಾಕುವೆನು; ಆದರೆ ಪಶ್ಚಿಮದಲ್ಲಿ ಸೂರ್ಯದೇವನು ಅಸ್ತಮಿಸುತ್ತಿದ್ದಾನೆ. ರಾಣಾಪ್ರತಾಪಸಿಂಹನು ಸೂರ್ಯಾಸ್ತದೊಳಗೆ ಮಹಿಷವನ್ನು ಸಂಹರಿಸಬೇಕೆಂದು ಅಪ್ಪಣೆ ಮಾಡಿರುವುದರಿಂದ ಈ ಪವಿತ್ರವಾದ ಕತ್ತಿಯನ್ನು ಪಶುರಕ್ತದಿಂದ ತೋಯಿಸಬೇಕಾಗಿದೆ, ಎಂದನು.

ಹೀಗೆಂದು ಹೇಳಿ ಯುವಕನು ಕತ್ತಿಯನ್ನು ಪುನಃ ಒರೆಯಿಂದ ಕಳಚಿ ಮಹಿಷದ ಪ್ರಕಾಂಡ ದೇಹವನ್ನು ಎರಡು ತುಂಡಾಗಿ ಕಡಿದು ಹಾಕಿದನು.....[೧೪]

ಹೀಗೆ ರೋಮಾಂಚಕಾರಕವಾದ ಬೇಟೆಯ ವರ್ಣನೆಯಿಂದ 'ಅಮೃತಪುಲಿನ' ಕಾದಂಬರಿ ಪ್ರಾರಂಭವಾಗುತ್ತದೆ. ಇದರ ಮೂಲ ಕರ್ತೃ ಸನಿಲಾಲ -ವಂದ್ಯೋಪಾಧ್ಯಾಯ. ೧೯೦೭ರಲ್ಲಿ ವೆಂಕಟಾಚಾರ್ಯರು ಕನ್ನಡಿಸಿದರು, 'ಅಮೃತಪುಲಿನ' ಒಂದು ಗೋದಾವರೀ ತೀರದ ಹೆಸರು. ಅಲ್ಲಿಯೆ ಮೇವಾರದ ರಾಣಾಪ್ರತಾಪ ಸಿಂಹನ ಕಿರಿಯ ಮಗ ಅಜಯಸಿಂಹ, ಮೇಲಿನ ಬೇಟೆಯಲ್ಲಿ ಮಹಿಷವನ್ನು ಕೊಂದವನು, ಮತ್ತು ಗ್ವಾಲಿಯರ್ ರಾಜನ ಔರಸ ಪುತ್ರಿ ಹಿರಣ್ಮಯಿ ತಮ್ಮ ಪವಿತ್ರ ಪ್ರೇಮಕ್ಕೆ ಮಂಗಳ ಹಾಡಿದುದು. ಅವರ ಪವಿತ್ರ ಪ್ರೇಮಕ್ಕೆ ಅಡ್ಡಿಯಾದುದಾದರೂ ಏನು? ಯವನನೊಬ್ಬ ಹಿರಣ್ಮಯಿಯನ್ನು ಸ್ಪರ್ಶಮಾಡಿದನೆಂಬ ಆರೋಪ ಮತ್ತು ಮೋಸದ ವಿವಾಹವೊಂದು ಯವನನೊಡನೆ ಅವಳಿಗೆ ಆಗುವುದರಲ್ಲಿತ್ತು ಎಂಬುದು. ಇಷ್ಟು ಕಾರಣದಿಂದಲೆ ರಾಣಾಪ್ರತಾಪಸಿಂಹನು ತನ್ನ ಮಗನಿಗೆ ಹಿರಣ್ಮಯಿಯನ್ನು ಮರೆಯಲು ಹೇಳಿದನು ಮತ್ತು ಮರೆಯಲಾಗದಿದ್ದರೆ ಪ್ರಾಣತ್ಯಾಗಮಾಡಲು ಹೇಳಿದನು. ಪಿತೃ ವಾಕ್ಯಪರಿಪಾಲಕನಾದ ವೀರ ಅಜಯಸಿಂಹ ಪ್ರಾಣತ್ಯಾಗ ಮಾಡಿದನು. ಅದೇ ಗ್ವಾಲಿಯರ್ ರಾಜನ ಮತ್ತೊಬ್ಬ ಔರಸಪುತ್ರಿ ಗಿರಿರಾಣಿ. ಅಹಮದ್‌ನಗರದ ಸುಲತಾನೆಯಾದ ಚಾಂದಬೇಗಂನ ಚಿಕ್ಕಪ್ಪನ ಮಗಳಾದ ಮಮತಾಜಬೇಗಂ ಮತ್ತು ಗ್ವಾಲಿಯರ್ ರಾಜನ ಮಗಳು ಗಿರಿರಾಣಿ. ಹೆತ್ತತಾಯಿಗೂ ತಿಳಿಯದ ಗುಪ್ತ ಸ್ಥಳವಾದ ಗಿರಿರಾಜ್ಯಾದಲ್ಲಿ ಅವಳು ಬೆಳೆಯುತ್ತಿದ್ದಳು. ಅಜಯಸಿಂಹನ ತೊಳಲಾಟದ ಕೊನೆಯ ಎರಡು ವರ್ಷದಲ್ಲಿ ಅವನಲ್ಲಿ ಅನುರಕ್ತಳಾದವಳು. ವಿವಾಹದ ದಿನವೇ ತನ್ನ ಪ್ರಿಯಕರ ಅಜಯಸಿಂಹ ಅವನ ಮೊದಲ ಪ್ರೇಯಸಿ ಹಿರಣ್ಮಯಿಯೊಡನೆ ಗೋದಾವರಿಯಲ್ಲಿ ಜಲಸಮಾಧಿಯಾದುದನ್ನು ಕಂಡಳು. ಈ ಕಾದಂಬರಿಯಲ್ಲಿ ಅತಿಯಾದ ಹಿಂದೂ ಧರ್ಮಾಭಿಮಾನ, ಮೇವಾರದ ರಾಣಾಪ್ರತಾಪಸಿಂಹನ ಅತಿಯಾದ ವಂಶಾಭಿಮಾನ, ಅಕ್ಬರನ ಕೋಮಲ ಹೃದಯದ ಅನೇಕ ಮುಖಗಳು ಅಕ್ಬರನ ಮಗನಾದ ಸಲೀಮನ ಸ್ತ್ರೀಚಾಪಲ್ಯದ ಚಿತ್ರಣಗಳಿವೆ. ಮತ್ತ್ತ ಕಾದಂಬರಿ -ಯುದ್ಧಕ್ಕೂ ಅಜಯಸಿಂಹ ಮತ್ತು ಹಿರಣ್ಮಯಿ ಮತ್ತು ಗಿರಿರಾಣಿಯರ ಪ್ರೇಮದ ಹೊನಲಿದೆ. ಈ ಕಾದಂಬರಿಯಲ್ಲಿ ಮುಸಲ್ಮಾನರೆಲ್ಲರೂ ಕಾಮಪಿಪಾಸುಗಳಂತೆಯೂ, ರಜಪೂತರೆಲ್ಲರೂ ಆದರ್ಶವ್ಯಕ್ತಿಗಳೂ, ವೀರರೂ ಎಂಬಂತೆಯೂ ಚಿತ್ರಿಸಲಾಗಿದೆ. ಮಮತಾಜಬೇಗಂ ಉನ್ಮಾದಿನಿಯ ವೇಷದಲ್ಲಿ ಎಲ್ಲೆಂದರಲ್ಲಿ ಕಾಣಸಿಕೊಳ್ಳುವುದಾಗಲಿ, ಹಿರಣ್ಮಯಿ ಅಂಬರ ರಾಜಕುಮಾರಿಯ ನೆರವಿನಿಂದ ಅಕ್ಬರನ ಅಂತಃಪುರದಿಂದ ತಪ್ಪಿಸಿಕೊಂಡು ಬಂದು ಗೋದಾವರೀ ತೀರದಲ್ಲಿದ್ದ ತನ್ನ ಪ್ರಿಯಕರನ ಬಳಿಯಲ್ಲಿ

ಸನ್ಯಾಸಿ ಮತ್ತು ರಜಪೂತ ಸೈನಿಕನ ವೇಷದಲ್ಲಿ ಅವನಿಗೆ ನೆರವು ನೀಡುವುದು ಮತ್ತು ಸೇವೆ ಗೈಯುವುದಾಗಲಿ ಅಸಾಧ್ಯ; ಔಚಿತ್ಯರಹಿತವಾದುದು ಮತ್ತು ವಾಸ್ತವಿಕಕ್ಕೆ ಭಂಗತರುವಂತಹುದು. ಕಾದಂಬರಿಯಲ್ಲಿನ ಕನಸುಗಳೂ ಅಷ್ಟೆ. ಕನುಸಗಳೆಲ್ಲವೂ ನಿಜವಾಗುವವೆ? ಹಿರಣ್ಮಯಿಯ ಅಪಹರಣ ಅಷ್ಟು ಸುಲಭವೆ? ಕಾದಂಬರಿಯಲ್ಲಿ ಎಲ್ಲೇ ಕೇಡಾಗಲಿ ಅಲ್ಲಿ ಆಸಮಯಕ್ಕೆ ಹಾಜರಾಗುವ ಅಕ್ಬರನಿಗೆ ಬೇರೇನೂ ಕೆಲಸವಿಲ್ಲವೆ? ಅಕ್ಬರನ ಮಗ ಸೆಲೀಮನಿಗೆ ಕಂಡ ಕಂಡ ಚೆಲುವೆಯರನ್ನು ಅಪಹರಿಸುವುದೊಂದೆ ಕೆಲಸವೆ? ಹೀಗೆ ಈ ಕಾದಂಬರಿಯನ್ನೋದಿದ ನಂತರ ಅನೇಕ ಪ್ರಶ್ನೆಗಳು ಏಳುತ್ತವೆ. ಮೇವಾರದ ರಾಜ ಅಕ್ಬರನಿಗೆ ಸೋತ ವಿಷಯವೊಂದನ್ನು ಬಿಟ್ಟು ಇದನ್ನೊಂದು ಪ್ರಣಯ ಕಥೆ ಎಂದೇ ಹೇಳಬಹುದು. ಅಪ್ರಬುದ್ಧ ಓದುಗರಿಗೆ ಹೇಳಿ ಮಾಡಿಸಿದ ಕೃತಿಯಿದು.

ಸತೀಶಬಾಬು ವಿರಚಿತ 'ನೀರದೆ' ಒಂದು ಉತ್ತಮ ಕಾದಂಬರಿ. ಆರ್ಯ ಮಹಿಳೆಯರ ಪತಿಭಕ್ತಿ, ಕರ್ತವ್ಯ ಪರಾಯಣತೆಗಳು 'ನೀರದೆ'ಯಲ್ಲಿ ಪ್ರತಿಬಿಂಬಿತವಾಗಿವೆ.[೧೫]

ಬಂಕಿಮಚಂದ್ರರ 'ಮೃಣಾಳಿನಿ' ಕಾದಂಬರಿಯಲ್ಲಿ ಬಂಗಾಳದ ಪತನದ ನಿಜವಾದ ಅರ್ಥವಿದೆ. 'ರಜನೀ' ಕಾದಂಬರಿ ಕುರುಡು ಹುಡುಗಿಯೊಬ್ಬಳು ದೃಷ್ಟಿ ಪಡೆಯುವ ಪುಣ್ಯ ಸಂದರ್ಭವನ್ನು ಚಿತ್ರಿಸುತ್ತದೆ.[೧೬] 'ಸೀತಾರಾಮ' ಕಾದಂಬರಿಯು ಮುಸಲ್ಮಾನರ ಮಧ್ಯೆ ಹಿಂದೂಗಳು ಸ್ವರಾಜ್ಯ ಸ್ಥಾಪಿಸಲು ಯತ್ನಿಸಿ ವಿಫಲವಾದದ್ದನ್ನು ಹೇಳುತ್ತದೆ.[೧೭]

'ಇಂದಿರಾ', 'ಯುಗಳಾಂಗುರೀಯ' ಮತ್ತು 'ರಾಧಾ ರಾಣಿ' ಇವು ಮೂರೂ ಬಂಕಿಮರ ಸಣ್ಣ ಕಾದಂಬರಿಗಳು. ಇಂದಿರಾ ಮೊದಲು ನಲವತ್ತೈದು ಪುಟಗಳ ಕಥೆಯಾಗಿ ಪ್ರಕಟವಾಗಿದ್ದದ್ದು ಐದನೆಯ ಮುದ್ರಣದ ವೇಳೆಗೆ ಒಂದುನೂರ ಎಪ್ಪತ್ತೇಳು ಪುಟಗಳ ಕಾದಂಬಯಾಗಿ ಬೆಳೆಯಿತು. ಇದರಲ್ಲಿ 'ನವತರುಣಿಯ ಬುದ್ಧಿ ಚಾತುರ್ಯ ಸಾಹಸಗಳ ಕಥೆಯಿದೆ'.[೧೮] 'ಯುಗಳಾಂಗುರೀಯ'ದಲ್ಲಿ ಗಂಡಹೆಂಡಿರು ಉಂಗುರಗಳ ದೆಸೆಯಿಂದ ಒಂದುಗೂಡಿ ಸುಖಿಸುವ ಘಟನೆಯಿದೆ.[೧೯] 'ರಾಧಾರಾಣಿ'ಯು ಇಪ್ಪತ್ತೊಂಬತ್ತು ಪುಟಗಳ ಕಿರು ಕಾದಂಬರಿ. ಕಾದಂಬರಿ ಎನ್ನುವುದಕ್ಕಿಂತ ನೀಳ್ಗತೆ ಎಂದರೆ ಸರಿಹೋದೀತು. (ಇವುಗಳನ್ನು ಬಂಕಿಮರೇ 'ಉಪಕಥೆ' ಅಥವಾ 'ಕ್ಷುದ್ರ ಕತೆ'ಗಳೆಂದು ಕರೆದಿದ್ದಾರೆ. 'ಇಂದಿನ ಸಣ್ಣ ಕಥೆ ಅವರ ಕಾಲಕ್ಕೆ ಇನ್ನೂ ಖಚಿತವಾದ ರೂಪಲಕ್ಷಣಗಳನ್ನು ತಾಳಿರಲಿಲ್ಲ ಆದ್ದರಿಂದ ಅವನ್ನು 'ಸಣ್ಣ ಕತೆ'ಗಳೆಂದು ಕರೆದು ವಿಮರ್ಶಿಸುವುದು ತಪ್ಪಾಗುತ್ತದೆ' ಎಂದು ಎ.ಆರ್. ಕೃಷ್ಣಶಾಸ್ತ್ರಿಗಳು ಹೇಳಿದ್ದಾರೆ.[೨೦])

ಕಡುಬಡತನದಿಂದ ಸಿರಿಯ ಸುಪ್ಪತ್ತಿಗೆಗೇರಿದ ರಾಧಾ ರಾಣಿ ತಾನು ಹತ್ತು ವರ್ಷದ ಬಾಲಕಿಯಾಗಿದ್ದಾಗ ಅಯಾಚಿತವಾಗಿ ನೆರವು ನೀಡಿದ ರುಕ್ಮಿಣೀಕುಮಾರ್ ಬಾಬು ಎಂಬ ವ್ಯಕ್ತಿಯನ್ನು ಮರೆಯದೆ ಅವನನ್ನು ಹುಡುಕಿಸಿ ಕೊನೆಗೆ ಅವನನ್ನೇ ವರಿಸುವ ಕಥೆ ಇದರಲ್ಲಿ ಬರುತ್ತದೆ. ಈ ಕಥೆಯಲ್ಲಿ ಮಧುರವೂ, ಕೋಮಲವೂ ಆದ ಒಂದು ಭಾವ ಉದ್ದಕ್ಕೂ ಹರೆದಿದೆ. ಕಥಾ ಹಂದರಕ್ಕೆ ತಕ್ಕಂತಹ ಪುಟ್ಟ ಪುಟ್ಟ ವಾಕ್ಯಗಳಿಂದ ಮತ್ತು ಕಣ್ಣಿಗೆ ಕಟ್ಟುವಂತಹ ವರ್ಣನೆಗಳಿಂದ ಇದು ಕೂಡಿದೆ. ಉದಾಹರಣೆಗೆ '... ಅವನ ವರ್ಣವು ಗೌರವರ್ಣವಾಗಿ ಅರಳಿದ ಮಲ್ಲಿಕಾ ರಾಶಿಯಂತಿದ್ದಿತು; ಅವನ ಶರೀರವು ದೀರ್ಘವಾಗಿ ಸ್ವಲ್ಪ ಸ್ಥೂಲವಾಗಿದ್ದಿತು, ಕಪಾಲವು ದೀರ್ಘವಾಗಿ ಅತಿ ಸೂಕ್ಷ್ಮವಾಗಿ ಪರಿಷ್ಕರಿಸಲ್ಪಟ್ಟ ಘನಕೃಷ್ಣ ವರ್ಣವುಳ್ಳ ಸರಂಜಿತವಾದ ಕೇಶಜಾಲ -ದಿಂದಲಂಕೃತವಾಗಿದ್ದಿತು; ಕಣ್ಣುಗಳು ವಿಶಾಲವಾಗಿ ಸ್ಥಿರವಾದ ಕಟಾಕ್ಷವುಳ್ಳವಾಗಿದ್ದುವು; ಭ್ರೂಯುಗ್ಮವು ಸೂಕ್ಷ್ಮವಾಗಿಯೂ, ಸಾಂದ್ರವಾಗಿಯೂ, ದೂರಾಯತವಾಗಿಯೂ, ನಿಬಿಡ ಕೃಷ್ಣವರ್ಣವುಳ್ಳುದುದಾಗಿಯೂ ಇದ್ದಿತು...' ಈ ವರ್ಣನೆಯನ್ನು ನೋಡುವುದು.

'ವಿಷವೃಕ್ಷ' ಮತ್ತು 'ಕೃಷ್ಣಕಾಂತನ ಉಯಿಲು' ಎರಡೂ ಬಂಕಿಮರ ಸಾಮಾಜಿಕ ಕಾದಂಬರಿಗಳು. 'ವಿಷವೃಕ್ಷ'ವು ಮೊದಲು 'ಕರ್ಣಾಟಕ ಗ್ರಂಥಮಾಲೆ' ಎಂಬ ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಮೂರು ವರ್ಷಕಾಲ ಪ್ರಕಟವಾಗಿ ೧೯೦೦ನೆಯ ವರ್ಷದ ಆದಿಭಾಗದಲ್ಲಿ ಸಂಪೂರ್ಣವಾಯಿತು. ಪುಸ್ತಕ ರೂಪದಲ್ಲಿ ೧೯೧೨ರಲ್ಲಿ ಬಂದಿತು. 'ವಿಷವೃಕ್ಷ' ಬಂಕಿಮರ ಶ್ರೇಷ್ಠ ಕೃತಿಗಳಲ್ಲೊಂದು. ಇದೊಂದು ಸಾಮಾಜಿಕ ಕಾದಂಬರಿ. ಅಚ್ಚುಕಟ್ಟಾದ ಪಾತ್ರ ಪೋಷಣೆ, ಸನ್ನಿವೇಶ ನಿರ್ಮಾಣ ಮತ್ತು ವರ್ಣನೆಗಳಿಂದೊಡಗೂಡಿದ ದುಃಖಾಂತ ಕಾದಂಬರಿ. ಅನಾಥಳಾದ ಕುಂದನಂದಿನಿಯನ್ನು ತಾನೇ ಕರೆತಂದು ಸಾಕಿ ವಿವಾಹ ಮಾಡಿ ಅವಳು ವಿಧವೆಯಾದ ಮೇಲೆ ಅವಳನ್ನು ವಿವಾಹವಾಗಿ ತನ್ನ ಸಂಸಾರವನ್ನು ದುಃಖಕ್ಕೀಡು ಮಾಡಿಕೊಂಡವನು ನಾಗೇಂದ್ರ. ಈ ವಿವಾಹಕ್ಕೆ ಪತಿಯ ಮೇಲಿನ ಪ್ರೇಮದಿಂದೊಪ್ಪಿ ತಾನೆ ಕೈಯಾರೆ ಗಂಡನಿಗೆ ಮದುವೆ ಮಾಡಿದವಳು ಪತ್ನಿ ಸೂರ್ಯಮುಖಿ. ಆದರೆ ಪತಿಯ ಪ್ರೇಮದಲ್ಲಿ ಬೇರೊಬ್ಬರ ಪ್ರವೇಶವನ್ನು ಸಹಿಸಲಾರದೆ ಗೃಹತ್ಯಾಗ ಮಾಡಿದವಳು. ಏನೂ ಅರಿಯದ ಮುಗ್ಧೆ ಕುಂದನಂದಿನಿ ನಾಗೇಂದ್ರನನ್ನು ಪ್ರೀತಿಸಿ ವಿವಾಹವಾದವಳು. ನಾಗೇಂದ್ರನ ತಂಗಿ ಮತ್ತು ಅವಳ ಗಂಡ ಶ್ರೀಷಚಂದ್ರರ ಸುಖ ದಾಂಪತ್ಯ - ಆದರ್ಶ ದಾಂಪತ್ಯ, ದೇವೇಂದ್ರ ಬಾಬು ಮತ್ತು ಹೈಮವತಿಯರ ವಿಷಮ ದಾಂಪತ್ಯ, ಹೀರೆಯ ಕುಟಿಲತೆ ಇವೆಲ್ಲವೂ ನೈಜವಾಗಿ ಚಿತ್ರಿತವಾಗಿವೆ. 'ಇದು ಗದ್ಯರೂಪವಾಗಿದ್ದರೂ ಷೇಕ್ಸ್‌ಪಿಯರ್‌ನ

ವಿಷಾದ ನಾಟಕಗಳಿಗೆ ಸಮಾನವಾದುದೆಂದು ನಮ್ಮ ಅಭಿಪ್ರಾಯ... ಷೇಕ್ಸ್‌ಪಿಯರ್ ಬರೆದಿರುವ ವಿಷಾದ ನಾಟಕಗಳಲ್ಲಿ ಬರುವ ನಾಟಕದ ಲಕ್ಷಣಗಳೆಲ್ಲವನ್ನೂ 'ವಿಷವೃಕ್ಷ'ದಿಂದ ಉದಾಹರಿಸಬಹುದು'[೨೧] ಎಂದು ಎ.ಆರ್. ಕೃಷ್ಣಶಾಸ್ತ್ರಿ ಹೇಳುತ್ತಾರೆ. 'ಗೃಹಸ್ಥಧರ್ಮ ನಿರೂಪಣೆಯನ್ನೊಳಗೊಂಡ ಸಾಮಾಜಿಕ ಕಾದಂಬರಿ. ಎಲ್ಲ ರೀತಿಯಿಂದಲೂ ಪರಿಪೂರ್ಣವಾದ ಕಾದಂಬರಿ. ಪಾಶ್ಚಾತ್ಯರು ಅಭಿಪ್ರಾಯಪಡುವ ದುರಂತ ಕಾದಂಬರಿಯ ಲಕ್ಷಣಗಳು ಇದರಲ್ಲಿ ನಿರೂಪಿತವಾಗಿದೆ'[೨೨] ಎಂದು ಸದಾಶಿವ ಎಣ್ಣೆಹೊಳೆ ಹೇಳಿದ್ದಾರೆ. 'ಕೃಷ್ಣಕಾಂತನ ಉಯಿಲು' ಹೊರನೋಟಕ್ಕೆ ಪತ್ತೇದಾರಿ ಕಾದಂಬರಿಯಂತೆ ಕಂಡರೂ ವಾಸ್ತವವಾಗಿ ಅದು ಸಾಮಾಜಿಕ ಕಾದಂಬರಿಯೆ. 'ಅದನ್ನು ವಿಷವೃಕ್ಷದ ದ್ವಿತೀಯ ಖಂಡವೆಂದು ಬೇಕಾದರೂ ಹೇಳಬಹುದು. ಏಕೆಂದರೆ ಇವೆರಡರಲ್ಲಿಯೂ ಇರತಕ್ಕ ಕಥೆಯು ಬೇರೆ ಬೇರೆಯಾದರೂ ವಿಷಯವು ಒಂದೇ-ವಿಷವೃಕ್ಷ ಮತ್ತು ಅದರ ಫಲ. ಇದು ಗೊತ್ತಾಗಬೇಕಾದರೆ 'ಕೃಷ್ಣಕಾಂತನ ಉಯಿಲು'ನಲ್ಲಿ ಬರುವ ಕಥೆಯನ್ನು ಜ್ಞಾಪಿಸಿಕೊಳ್ಳಬೇಕು.'[೨೩] ಇಲ್ಲಿಯ ಕಥಾನಾಯಕ ಗೋವಿಂದಾಲಾಲ ರೋಹಿಣಿ ಎಂಬ ವಿಧವೆಯಲ್ಲಿ ಆಸಕ್ತನಾಗಿ ಕೆಲ ಕಾಲಾನಂತರ ಅವಳನ್ನು ಕೊಂದು ತಾನೂ ಮೃತಪ್ರಾಯನಾಗುತ್ತಾನೆ. ಇಷ್ಟು ಕಥೆಯಾದರೆ ಕಥೆಯೊಳಗಡೆ ಉಯಿಲುಗಳ ಪ್ರಭಾವ, ಸಂದೇಹ, ದುಡುಕುಗಳ ಪರಿಣಾಮ ಇವುಗಳೆಲ್ಲಾ ಬಂದು ಕಥೆ ಸರಾಗವಾಗಿ ಕುತೂಹಲಭರಿತವಾಗಿ ಮುಂದುವರಿದು -ಕೊಂಡು ಹೋಗುತ್ತದೆ. 'ವಿಷವೃಕ್ಷ' ಮತ್ತು 'ಕೃಷ್ಣಕಾಂತನ ಉಯಿಲು' ಎರಡೂ ಕಾದಂಬರಿಗಳಲ್ಲಿ ಮೇಲು ನೋಟಕ್ಕೆ ಧರ್ಮ ಬಾಹಿರವಾದ ಕಾಮದಿಂದ ಅನರ್ಥವುಂಟಾಗುತ್ತದೆ ಎಂಬ ನೀತಿ ಕಂಡುಬಂದರೂ ವಾಸ್ತವವಾಗಿ ಈ ಎರಡೂ ಕಾದಂಬರಿಗಳಲ್ಲಿ ಬಂಗಾಳದಲ್ಲಿ ಅದೇ ತಾನೇ ಪ್ರಚಾರಕ್ಕೆ ಬರುತ್ತಿದ್ದ ವಿಧವಾವಿವಾಹವನ್ನು ವಿರೋಧಿಸುವುದೇ ಕಾದಂಬರಿಕಾರರ ಉದ್ದೇಶವೆಂದು ತೋರುತ್ತದೆ. 'ವಿಷವೃಕ್ಷ'ದಲ್ಲಿ ಇದಕ್ಕೆ ಸ್ಪಷ್ಟವಾದ ಉದಾಹರಣೆಯು ಸಿಗುತ್ತದೆ. ಒಟ್ಟಿನಲ್ಲಿ ಈ ಎರಡೂ ಕಾದಂಬರಿಗಳು ಪರಿಣಾಮಕಾರಿಯಾಗಿ ಮೂಡಿಬಂದಿವೆ. 'ವೆಂಕಟಾಚಾರ್ಯರು ಬಂಗಾಳಿಯಲ್ಲಿ ಬರುವ ಬಹು ಸಂಸ್ಕೃತ ಶಬ್ದಗಳನ್ನು ತಮ್ಮ ಗ್ರಂಥಗಳಲ್ಲಿ ಉಪಯೋಗಿಸಿ ಕನ್ನಡ ಭಾಷೆಯನ್ನು ಪುಷ್ಟೀಕರಿಸಿದರು. ಈ ಮಧ್ಯೆ ಅವಶ್ಯಕವಲ್ಲದ ಪೆಡಸಾದ ಸಂಸ್ಕೃತ ಶಬ್ದಗಳೂ ಬಂದು ತುಂಬಿಕೊಂಡವು. ಇದನ್ನು ಅವರ ಮಿತ್ರರು ಕೆಲವರು ಅವರ ಗಮನಕ್ಕೆ ತಂದಂತೆಯೂ ಆಗ ಅವರು ಕನ್ನಡ ಪದಗಳನ್ನು ಹೆಚ್ಚಾಗಿ ಉಪಯೋಗಿಸುವುದಕ್ಕೆ ಪ್ರಯತ್ನಪಟ್ಟಂತೆಯೂ ತೋರುತ್ತದೆ. ಆದ್ದರಿಂದ ಈ (ಕೃಷ್ಣಕಾಂತನ ಉಯಿಲು) ಗ್ರಂಥದಲ್ಲಿ ಪ್ರಯತ್ನ ಪುರಸ್ಸರವಾಗಿ ಉಪಯೋಗಿಸಲ್ಪಟ್ಟ ಕೆಲವು ಕನ್ನಡ ಪದಗಳು ಬಂದು ಸೇರಿದುವು...'[೨೪]

ಬಂಕಿಮಚಂದ್ರರ ಎಲ್ಲ ಐತಿಹಾಸಿಕ ಕಾದಂಬರಿಗಳೂ ಬಂಗಾಳ ದೇಶದ ಚರಿತ್ರೆಯನ್ನು ಕುರಿತು ಬರೆದವು. ಇದಕ್ಕೆ ಅಪವಾದ 'ರಾಜಸಿಂಹ'. ಇದು ಮೊಗಲರ ಮತ್ತು ರಜಪೂತರ ವಿಷಯವನ್ನೊಳಗೊಂಡ ಐತಿಹಾಸಿಕ ಕಾದಂಬರಿ. ಇದು ಬಂಕಿಮರ ಕೊನೆಯ ಗ್ರಂಥವೂ ಹೌದು. ೧೮೮೨ರಲ್ಲಿ 'ಕ್ಷುದ್ರಕಥೆ'ಯಾಗಿದ್ದ 'ರಾಜಸಿಂಹ', ತನ್ನ ನಾಲ್ಕನೆಯ ಸಂಸ್ಕರಣ ೧೮೯೩ರ ವೇಳೆಗೆ ವಿಸ್ತೃತ ಪರಿಷ್ಕೃತ ರೂಪವನ್ನು ಪಡೆಯಿತು. 'ಇದನ್ನು ಓದಿ ತಮ್ಮ ಹೃದಯದಲ್ಲಿದ್ದ ಸಾಹಿತ್ಯ ರಸ ಪೀಪಾಸೆಯು ಅಡಗಿತು ಎಂದು ರವೀಂದ್ರನಾಥ ಠಾಕೂರರು ಹೊಗಳಿದ್ದಾರೆ.'[೨೯] 'ಈ ಗ್ರಂಥದಲ್ಲಿ ಬಂಕಿಮರು ಔರಂಗಜೇಬನ ಕಾಲದಲ್ಲಿ ಅವನಿಗೂ ರಾಜಪುತ್ರರಿಗೂ ಇದ್ದ ರಾಜಕೀಯ ಸಾಮಾಜಿಕ ಧಾರ್ಮಿಕ ಸಂಬಂಧವನ್ನು ವಿವರವಾಗಿ ನಿರೂಪಿಸಿರುವುದಲ್ಲದೆ, ಸಂದರ್ಭವಿದ್ದಂತೆ ಬಾಬರನಿಂದ ಮೊದಲು ಮಾಡಿಕೊಂಡು ಮೊಗಲರ ಚರಿತ್ರೆಯನ್ನು ಅಲ್ಲಲ್ಲೇ ಸಿಂಹಾವಲೋಕನ ಕ್ರಮದಿಂದ ನಿರೂಪಿಸಿದ್ದಾರೆ'[೩೦] ಉದಯಪುರದ ರಾಣಾ ರಾಜಸಿಂಹ ಸನ್ನಿವೇಶ ಮತ್ತು ಸ್ಥಳಾನುಕೂಲತೆಯಿಂದ ಔರಂಗಜೇಬನನ್ನು ರೂಪನಗರದ ಬಳಿ ಸೋಲಿಸಿದ ಕಥೆ ಈ ಕೃತಿಯ ಮುಖ್ಯ ವಸ್ತು. ರೂಪನಗರದ ರಾಜ ವಿಕ್ರಮಸಿಂಹನ ಮಗಳು ಚಂಚಲಕುಮಾರಿಯ ಪ್ರೇಮ, ಉದಯಪುರದ ರಾಣಾ ರಾಜಸಿಂಹನ ಪರಾಕ್ರಮ, ಚಂಚಲಕುಮಾರಿಯ ಸಖಿ ನಿರ್ಮಲೆಯ ಚಾಕಚಕ್ಯತೆ, ಕಳ್ಳನಾಗಿದ್ದು, ಅನಂತರ ಸೇನಾಪತಿಯಾದ ಮಾಣಿಕಲಾಲ ಸಿಂಹನ ಪ್ರಸಂಗಾವಧಾನತೆ ಮೊದಲಾದುವು ಕಾದಂಬರಿಯನ್ನು ಓದಿದ ಬಹು ಕಾಲದವರೆಗೂ ನೆನಪಿನಲ್ಲುಳಿಯುವಂಥವು.

'ಕಪಾಲಕುಂಡಲಾ' ಅಕ್ಬರ್ ಮತ್ತು ಸಲೀಮರ ಕಾಲದ ವಾಮಾಚಾರ ಮತ್ತು ಚಾರಿತ್ರಿಕಾಂಶಗಳನ್ನೊಳಗೊಂಡ ಕಾದಂಬರಿ. ಅಕ್ಬರ್ ಮತ್ತು ಸಲೀಮರನ್ನು ತೆಗೆದು ಬೇರೆ ಪಾತ್ರಗಳನ್ನು ಅಲ್ಲಿಟ್ಟರೂ ಆದೀತು. ಅಂದರೆ ಚರಿತ್ರೆಯ ಅಂಶಗಳು ಕಾದಂಬರಿಯಲ್ಲಿ ಅನಿವಾರ್ಯವಾಗೇನೂ ಇಲ್ಲ. ಸಪ್ತಗ್ರಾಮದ ನವಕುಮಾರ ಸಮುದ್ರಯಾನ ಮಾಡುವಾಗ ಅಕಸ್ಮಾತ್ ನಿರ್ಜನವಾದ ಪ್ರದೇಶದಲ್ಲಿ ಕಾಪಾಲಿಕ-ನೊಬ್ಬನಿಗೆ ವಶನಾಗಿ ಕಪಾಲಕುಂಡಲೆಯನ್ನು ವರಿಸಿ ಅವಳ ನೆರವಿನಿಂದ ಮುಕ್ತನಾಗಿ ಮರಳಿ ಊರಿಗೆ ಬರುತ್ತಾನೆ. ಈ ಮಧ್ಯೆ ಇವನ ಪೂರ್ವದ ಪತ್ನಿ, ಬಲತ್ಕಾರವಾಗಿ ಮುಸಲ್ಮಾನ್ ಮತಕ್ಕೆ ಮತಾಂತರಗೊಂಡವಳು. ಪದ್ಮಾವತಿಯ ಪ್ರವೇಶದಿಂದ ಕಥೆಗೆ ಚಾಲನೆ ಬರುತ್ತದೆ. ಮತ್ತೆ ಕಾಪಾಲಿಕನ ಭೇಟಿಯಾಗಿ ಸಂಶಯಕ್ಕೊಳಗಾಗಿದ್ದ ಕಪಾಲಕುಂಡಲೆಯನ್ನು ಬಲಿಕೊಡುವುದರಲ್ಲಿದ್ದಾಗ ನವಕುಮಾರನೂ ಕಪಾಲ-ಕುಂಡಲೆಯೂ ಜಲಸಮಾಧಿಯಾಗುತ್ತಾರೆ. ಕಾದಂಬರಿಯಲ್ಲಿ ಬರುವ ಸಲೀಮ್ ಮತ್ತು ಮೆಹರುನ್ನೀಸಾರ (ಚರಿತ್ರೆಯಲ್ಲಿ ನೂರ್‌ಜಹಾನ್ ಎಂದು ಪ್ರಸಿದ್ಧಳಾದವಳು)

ಪ್ರಸ್ತಾಪ ಆಸಕ್ತಿದಾಯಕವಾಗಿದೆ. ಸಂಸ್ಕೃತಭೂಯಿಷ್ಠ ವ ಶೈಲಿಯಿಂದ ಕೂಡಿದ ಸಾಧಾರಣ ಕಾದಂಬರಿ ಇದಾಗಿದ್ದರೂ ಓದಿಸಿಕೊಂಡು ಹೋಗಬಲ್ಲ ಗುಣವುಳ್ಳದ್ದಾಗಿದೆ. ಸಂಸ್ಕೃತ ಭೂಯಿಷ್ಠ ಶೈಲಿಗೆ ಈ ವಾಕ್ಯವೃಂದವನ್ನು ಗಮನಿಸಬಹುದು. - "ಅದೊಂದು ಅಪೂರ್ವವಾದ ರಮಣೀಯ ಮೂರ್ತಿ. ಕೇಶಬಾರವೂ ವೇಣಿಯಾಗಿ ಬದ್ಧವಾಗದೆ ಸಂಸರ್ಪಿತವಾಗಿ ರಾಶೀಕೃತವಾಗಿ ಅಗಲ್ಪಲಂಬಿತವಾದ (Flowing down to the ankle) ಕೇಶಭಾರ ; ಅದರ ಮುಂದುಗಡೆ ದೇಹರತ್ನ; ಚಿತ್ರಪಟದ ಚಿತ್ರವು ಕಣ್ಣೊಳ್ಗಿಸುವಂತೆ ಹೊಳೆಯುವುದು. ಅಳಕಾವಳಿಯ ಪ್ರಾಚುರ್ಯದಿಂದ ಮುಖ -ಮಂಡಲವು ಸಂಪೂರ್ಣವಾಗಿ ಪ್ರಕಾಶವಾಗುತ್ತಿರಲಿಲ್ಲ. ಆದರೂ ಮೇಘವಿಚ್ಛೇದದಿಂದ ಹೊರಗೆ ಹರಿದು ಬರುವ ಚಂದ್ರಕಿರಣದಂತೆ ಪ್ರತೀತಿಯುಂಟಾಗುತ್ತಿದ್ದಿತು. ವಿಶಾಲವಾದ ಲೋಚನಗಳಲ್ಲಿ ಕಟಾಕ್ಷವು ಅತಿ ಸ್ನಿಗ್ಧಕರವಾಗಿಯೂ ಗಂಭೀರವಾಗಿಯೂ ಜ್ಯೋತಿರ್ಮಯವಾಗಿಯೂ ಇದ್ದಿತು. ಆ ಕಟಾಕ್ಷವು ಆ ಸಾಗರದ ಹೃದಯದಲ್ಲಿ ಕ್ರೀಡಾಶೀಲವಾದ ಚಂದ್ರ ಕಿರಣದ ಲೇಖನದಂತೆ ಸ್ನಿಗ್ಧೋಜ್ವಲವಾದ ಪ್ರಕಾಶವನ್ನು ಹೊಂದುತ್ತಿದ್ದಿತು. ಸ್ಕಂದ ದೇಹವು ಶುದ್ಧವಾಗಿ ನಿರಾಭರಣವಾಗಿದ್ದಿತು. ಆ ಮೂರ್ತಿಯಲ್ಲಿದ್ದಾ ಮೋಹಿನೀ ಶಕ್ತಿಯನ್ನು ವರ್ಣಿಸಲಸಾಧ್ಯ"[೨] ಇದು ಬಂಕಿಮರ ಚಾರಿತ್ರಿಕ ಕಾದಂಬರಿಯಾದರೂ ಹಾಗೆ ಕರೆಸಿಕೊಳ್ಳಲು ಬೇಕಾಗುವಷ್ಟು ಚಾರಿತ್ರಿಕಾಂಶಗಳು ಈ ಕಾದಂಬರಿಯಲ್ಲಿಲ್ಲ; ಇದನ್ನು ೧೮೯೮ರಲ್ಲಿ ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದಿಸಿದರು.

'ಚಂದ್ರಶೇಖರ', 'ಆನಂದಮಠ' ಮತ್ತು 'ದೇವೀಚೌಧುರಾಣಿ' ಈ ಮೂರೂ ಬಂಗಾಳದ ಚರಿತ್ರೆಯನ್ನೊಳಗೊಂಡ ಐತಿಹಾಸಿಕ ಕಾದಂಬರಿಗಳು. 'ಚಂದ್ರಶೇಖರ' ಕಾದಂಬರಿಯ ವಿದ್ವಾಂಸನೂ ಅಧ್ಯಯನ ನಿರತನೂ ಆದ ಚಂದ್ರಶೇಖರ ತನ್ನ ಸೇವೆಗೆಂದು ತನಗಿಂತಲೂ ೨೪-೨೫ ವರ್ಷ ಚಿಕ್ಕವಳಾದ ೮-೧೦ ವರ್ಷದ ಹುಡುಗಿ ಶೈವಲಿನಿಯನ್ನು ಮದುವೆಯಾಗಿ ಸಂಸಾರದ ಬಗ್ಗೆ ವಿರಕ್ತನಲ್ಲದಿದ್ದರೂ ಸಾಕಷ್ಟು ಆಸಕ್ತಿಯನ್ನು ತಾಳದಿರುವುದೇ ಮುಂದಿನ ಎಲ್ಲ ಘಟನೆಗಳಿಗೆ ಬೀಜವಾಗುತ್ತದೆ. ಪತೀಪ್ರೇಮ ವಂಚಿತಳೂ ಸಂತಾನ ವಿಹೀನಳೂ ಆದ ಶೈವಲಿನಿ ತನ್ನ ಬಾಲ್ಯದ ಒಡನಾಡಿ, ಪ್ರತಾಪವನ್ನು ಪಡೆಯಬಹುದೆಂಬ ಆಸೆಯಿಂದ ಲಾರೆನ್ಸ್‌ಫಾರ್ಸ್ಟನ ಅಪಹರಣ ಕಾರ್ಯದಲ್ಲಿ ತಿಳಿದೇ ಒಳಗಾಗುತ್ತಾಳೆ. ಅಲ್ಲಿಂದ ಮುಂದೆ ವಿಧಿ ಅವಳನ್ನು ತನ್ನಿಚ್ಛೆಯಂತೆ ಒಂದೆಡೆಯಿಂದ ಮತ್ತೊಂದೆಡೆಗೆ ತಳ್ಳುತ್ತಾ ಹೋಗುತ್ತದೆ. ಅಲಿಜಾ ಮೀರಖಾಸಿಮನ ರಾಣಿ ದುಲನಿಯು ಅವಳ ಅಣ್ಣ ಗುರಗಣಖಾನನ ಕಾರಸ್ಥಾನದಿಂದಾಗಿ ಬ್ರಿಟಿಷರ ಸೆರೆಯಾಳಾಗಬೇಕಾಗುತ್ತದೆ. ಶೃಂಗಾರ ರಸ ಪ್ರಧಾನವಾದ

ಅನೇಕ ಘಟನೆಗಳೂ, ಪಿತೂರಿ, ದ್ವೇಷ, ಸಾಹಸ, ತ್ಯಾಗ ಇವುಗಳ ಚಿತ್ರಗಳೂ ರಂಜನೀಯವಾಗಿ, ರಾಜಕೀಯ ಕುಟಿಲ ತಂತ್ರಗಳನ್ನು ಚಿತ್ರಿಸುತ್ತಾ ಹೋಗುತ್ತದೆ. ಈಸ್ಟ್ ಇಂಡಿಯಾ ಕಂಪನಿ ಬಂಗಾಳದಲ್ಲಿ ತಳವೂರುತ್ತಿದ್ದಾಗಿನ ಕಾಲದ ರಾಜಕೀಯ, ನೈತಿಕ, ಧಾರ್ಮಿಕ, ಸಾಮಾಜಿಕ ವಿಚಾರಗಳು ಒಂದರೊಡನೊಂದು ಹೆಣೆದುಕೊಂಡು ಕಾದಂಬರಿಯ ಬಂಧವನ್ನು ತೊಡಕಾಗಿಸಿವೆ. ಬ್ರಿಟಿಷರು ತಮಗೆ ಎದುರೇ ಇಲ್ಲವೆನ್ನುವ ಅಹಂ, ಏನಾದರೂ ಮಾಡಿ ತನ್ನ ರಾಜ್ಯವನ್ನುಳಿಸಿಕೊಳ್ಳಬೇಕೆಂಬ ಅಲಿಜಾ ಮೀರಖಾಸಿಂ, ಆ ರಾಜ್ಯವನ್ನಪಹರಿಸಿ ಬ್ರಿಟಿಷರಿಗೂ ಮಣ್ಣು ಮುಕ್ಕಿಸಬೇಕೆಂಬ ದುಲನಿಯ ಅಣ್ಣ ಗುರಗಣಖಾನ, ತನ್ನ ವೇದಾಧ್ಯಯನದಲ್ಲೇ ನಿರತನಾದ ಚಂದ್ರಶೇಖರ, ಅನೇಕ ಸಾಹಸಗಳಲ್ಲಿ ತೊಡಗುವ ಪ್ರತಾಪ, ಅವನ ಸೇವಕ ರಾಮಚರಣನ ಸಮಯ ಪ್ರಜ್ಞೆ, ಮೊದಲಾದುವುಗಳು ಈ ಕಾದಂಬರಿಯಲ್ಲಿ ಹಾಸುಹೊಕ್ಕಾಗಿವೆ. ಸಮ್ಮೋಹನ ಪ್ರಯೋಗದಿಂದ ಶೈವಲಿನಿಯ ಅಂತರಂಗ ಬಹಿರಂಗವಾಗಿ ಅವಳು ಪರಿಶುದ್ಧಳೆಂದು ತಿಳಿಸುವುದಕ್ಕೇ ಒಂದು ಅಧ್ಯಾಯ ಮೀಸಲಾಗಿದೆ. ಚಾರಿತ್ರಿಕ ವಿಚಾರಗಳಿಗಿಂತಲೂ ಹೆಚ್ಚಾಗಿ ಸ್ತ್ರೀಗೆ ಪತಿಯೇ ಪರದೈವ ಎಂಬ ಸನಾತನ ನಂಬಿಕೆಯನ್ನು ದೃಢಪಡಿಸುವುದರ ಕಡೆಗೇ ಕಾದಂಬರಿಯ ಒತ್ತು ಹೆಚ್ಚಾಗಿದೆ. ಕಾದಂಬರಿಗೆ 'ಚಂದ್ರಶೇಖರ' ಎಂಬ ಹೆಸರಿಗಿಂತಲೂ 'ಶೈವಲಿನೀ' ಎಂದೋ 'ಪ್ರತಾಪ' ಎಂದೋ ಹೆಸರಿದ್ದಿದ್ದರೆ ಹೆಚ್ಚು ಉಚಿತವಾಗುತ್ತಿತ್ತು.

ಬಂಗಾಳ ದೇಶದಲ್ಲಿ ಕ್ರಿ.ಶ. ೧೭೭೩-೭೪ನೆ ವರ್ಷಗಳಲ್ಲಿ ನಡೆದ ಸನ್ಯಾಸಿ ವಿದ್ರೋಹದ ಹಿನ್ನೆಲೆಯಲ್ಲಿ 'ಆನಂದಮಠ' ಕಾದಂಬರಿ ರಚನೆಯಾಗಿದೆ. ಈ ಸನ್ಯಾಸಿಗಳು ದೇಶವನ್ನೇ ಮಾತೆಯೆಂತಲೂ ತಮ್ಮನ್ನು ಆಕೆಯ ಪುತ್ರರೆಂದೂ (ಸಂತಾನರೆಂದು) ಕರೆದುಕೊಂಡು ಆಗ ದುರ್ಬಲವಾಗಿದ್ದ ಪ್ರಜಾಪೀಡಕವಾಗಿದ್ದ ಬಂಗಾಳದ ಮೇಲಿನ ಮುಸಲಮಾನರ ಆಡಳಿತವನ್ನು ಕಿತ್ತೊಗೆಯುವ ಪ್ರಯತ್ನ ಮಾಡಿದರು. ಮುಸಲಮಮಾನರ ವಿರುದ್ಧ ಬಂಡೆದ್ದ ಈ ಸನ್ಯಾಸಿಗಳಿಗೆ ಬ್ರಿಟಿಷರ ಆಗಮನ ಅಪೇಕ್ಷಣೀಯವಾಗಿದ್ದದ್ದು ಆಶ್ಚರ್ಯಕರ. ಇದು ಗ್ರಂಥಕರ್ತರ ಸ್ವಂತ ಅಭಿಪ್ರಾಯ ಇರಬಹುದು. (ಈ ಅಭಿಪ್ರಾಯವನ್ನು ಆ ಕಾಲದ ಅನೇಕ ವಿದ್ಯಾವಂತರು ಇಟ್ಟುಕೊಂಡಿದ್ದರು.) ಅದನ್ನು ಗ್ರಂಥಕರ್ತರು ಕಾದಂಬರಿಯಲ್ಲಿ ತುರುಕಿದ್ದಾರೆ. ಈ ಕಾದಂಬರಿಯಲ್ಲಿನ ಸಂತಾನರು ಮೃತ್ಯುಮುಖದಲ್ಲಿಯೂ ಆಧುನಿಕ ಶಸ್ತ್ರಾಸ್ತ್ರಗಳೆ -ದುರಿನಲ್ಲಿಯೂ ಜ್ವಾಲಾಕರ್ಷಿತ ಪತಂಗಗಳತೆ ನುಗ್ಗುವುದು ಮೌಢ್ಯದ ಪರಮಾವಧಿ ಎನಿಸುತ್ತದೆ. ಅಂತಹ ಸಮಯದಲ್ಲಿ ಸಂತಾನರ ನಾಯಕರಾದ ಸತ್ಯಾನಂದ, ಭವಾನಂದ, ಜೀವಾನಂದ ಮೊದಲಾದವರು ಮಾತೆಯ ರಕ್ಷಣೆಗೆ ಸಂತಾನರ

ಸೇನೆಯನ್ನು ಪ್ರೋತ್ಸಾಹಿಸುವುದು ಮೌಢ್ಯವನ್ನು ಬೆಂಬಲಿಸುವಂತೆ ಕಾಣುತ್ತದೆ. ಜೀವಾನಂದನ ಹೆಂಡತಿ ಶಾಂತಿ ಸನ್ಯಾಸಿಯಾಗಿ ಸಂತಾನರ ಜೊತೆಯಲ್ಲಿರುವುದೂ ಹೋರಾಡುವುದೂ ಸಹಜವಾಗಿ ಚಿತ್ರಿತವಾಗಿದೆ. ವಿಷಪ್ರಾಶನ ಮಾಡಿದ್ದ ಮಹೇಂದ್ರಸಿಂಹನ ಹೆಂಡತಿ ಕಲ್ಯಾಣಿಯನ್ನು ಭವಾನಂದ ಬದುಕಿಸುವುದೂ, ಯುದ್ಧದಲ್ಲಿ ಗತಪ್ರಾಣನಾಗಿದ್ದ ಜೀವಾನಂದನನ್ನು ಓರ್ವ ಚಿಕಿತ್ಸಕ ಬದುಕಿಸುವುದೂ ಆಶ್ಚರ್ಯಕರವಾದ ಘಟನೆಗಳು. ಸಂತಾನರ ಕಠೋರ ನಿಯಮ ವ್ರತಗಳ ಎದುರಿನಲ್ಲಿ ಶುಷ್ಕವಾಗಿ ಹೋಗಬಹುದಾಗಿದ್ದ ಈ ಕಾದಂಬರಿಯಲ್ಲಿ ಮಹೇಂದ್ರ, ಕಲ್ಯಾಣಿ ಭವಾನಂದ, ಜೀವಾನಂದ, ನವೀನಾನಂದರಿಂದ ಪ್ರೇಮ, ವಾತ್ಸಲ್ಯ, ತ್ಯಾಗ ಇವುಗಳ ಸೆಲೆ ಅಲ್ಲಲ್ಲಿ ಕಂಡುಬಂದು ಕಾದಂಬರಿ ನೀರಸವಾಗುವುದು ತಪ್ಪಿದೆ. ಏನೇ ಆದರೂ ಕೆಲವು ಕಾಲ ರಾಷ್ಟ್ರಗೀತೆಯಾಗಿದ್ದ 'ವಂದೇಮಾತರಂ...' ಅನ್ನು ಕೊಟ್ಟಿದ್ದ ಕಾದಂಬರಿ ಇದು. ಆ ಭಾವನಾತ್ಮಕವಾದ ಸ್ಥಾನ ಇದಕ್ಕಿದ್ದೇ ಇರುತ್ತದೆ. ಸಂವೇದನಾ ಶೀಲನಾದ ಓದುಗನಿಗೆ ಮುಸಲ್ಮಾನ ವಿರೋಧಿ ಧ್ವನಿ ಈ ಕಾದಂಬರಿಯಲ್ಲಿ ಕಂಡುಬಂದರೆ ಆಶ್ಚರ್ಯವಿಲ್ಲ. ಅತಿಯಾದ ಸಂಸ್ಕೃತ ಪ್ರಾಚುರ್ಯವಾದ ಶೈಲಿ ಆ ಕಾದಂಬರಿಯಲ್ಲಿನ ಮತ್ತೊಂದು ದೋಷ. "ದೇಶವು ಕ್ಷಾಮ, ರೋಗ ಮುಂತಾದ ನಾನಾ ಸಂಕಟಗಳಿಂದ ಪರಿತಾಪ ಪಡುತ್ತಿರುವಾಗ ಸ್ವಾರ್ಥತ್ಯಾಗಮಾಡಿ ಐಕಮತ್ಯದಿಂದ ದೇಹವನ್ನು ತೆಯ್ದು ಸಾವಿರಾರು ಪ್ರಾಣಿಗಳಿಗೆ ಸಹಾಯಮಾಡಿದ ಸತ್ಯಾನಂದ ಜೀವಾನಂದ ಮುಂತಾದ ಸನ್ಯಾಸಿಗಳು ಧರ್ಮಿಷ್ಠರಲ್ಲದೆ ಮತ್ತೇನು?" ಎಂದು ಎ.ಆರ್. ಕೃಷ್ಣಶಾಸ್ತ್ರಿಗಳು ಪ್ರಶ್ನಿಸುತ್ತಾರೆ. ಉತ್ತರ ಅಷ್ಟು ಸುಲಭವಲ್ಲ. ಆದರೆ ಅಲ್ಲ ಎನ್ನುವವನು ರಾಷ್ಟ್ರಾಭಿಮಾನ ಶೂನ್ಯ ಎಂಬ ಹಣೆಪಟ್ಟಿಯನ್ನು ತಗಲಿಸಿಕೊಳ್ಳಬೇಕಾಗುತ್ತದೆ. ಹಿಂದೂ ಧರ್ಮದ ಪುನರುತ್ಥಾನಕ್ಕಾಗಿಯೂ ಅವರಲ್ಲಿ ಧೈರ್ಯ ಸಾಹಸಗಳನ್ನು ತುಂಬಲಿಕ್ಕಾಗಿಯೂ ರಚನೆಯಾದ ಈ ಕಾದಂಬರಿ ಆ ಕೆಲಸವನ್ನು ಯಶಸ್ವಿಯಾಗಿ ಪೂರೈಸಿದೆ. ೧೮೮೨ರಲ್ಲಿ ಬಂಗಾಳಿಯಲ್ಲಿ ಪ್ರಕಟವಾದ ಈ ಕಾದಂಬರಿ ಹತ್ತು ವರ್ಷಗಳಲ್ಲಿ ಐದು ಮುದ್ರಣಗಳನ್ನು ಕಂಡಿರುವುದೇ ಅದಕ್ಕೆ ಸಾಕ್ಷಿ. ೧೮೯೭ರಲ್ಲಿ ಕನ್ನಡದಲ್ಲಿ ಮೊದಲು ಪ್ರಕಟವಾಯಿತು.

ಬಂಗಾಳ ದೇಶದಲ್ಲಿ ೧೭೭೩-೭೪ರಲ್ಲಿ ನಡೆದ ಸನ್ಯಾಸಿ ವಿದ್ರೋಹ ಮತ್ತು ಅದನ್ನು ಅಡಗಿಸಿದ ಅನಂತರದ ಕಾಲಕ್ಕೆ ಸೇರುವ ಎಂದರೆ ವಾರನ್ ಹೇಸ್ಟಿಂಗ್ಸ್‌ನ ಕಾಲಕ್ಕ ಸೇರುವ ಕಾದಂಬರಿಯೆ 'ದೇವಿಚೌದುರಾಣಿ'. ಈ ಕಾದಂಬರಿಯಲ್ಲಿ ಬರುವ ದೇವೀಚೌದುರಾಣಿ, ಭವಾನಿ ಠಾಕೂರ, ರಂಗರಾಜ ಮೊದಲಾದವರ ಹೆಸರುಗಳು ಮತ್ತು ಬ್ರಿಟಿಷ್ ಅಧಿಕಾರಿಗಳ ಹೆಸರುಗಳು ಆ ಕಾಲದ ಚರಿತ್ರೆಯಲ್ಲಿ ಕಂಡುಬರುವ ಹೆಸರುಗಳು. ಈ ಕಾರಣದಿಂದಾಗಿ ಇದನ್ನು ಚಾರಿತ್ರಿಕ ಕಾದಂಬರಿಯೆನ್ನಬೇಕು.

ಇಲ್ಲದಿದ್ದರೆ ಇದೊಂದು ಕೌಟುಂಬಿಕ-ಸಾಮಾಜಿಕ ಕಾದಂಬರಿಯೆ. ಒಂದು ಕ್ಷುಲ್ಲಕ ಕಾರಣಕ್ಕಾಗಿ ಮಾವ ಹರವಲ್ಲಭ ಅಪೂರ್ವ ಲಾವಣ್ಯವತಿಯೂ, ಯೌವನೆಯೂ ಆದ ಪ್ರಫುಲ್ಲೆಯನ್ನು ಮನೆಯಿಂದಟ್ಟುತ್ತಾನೆ. ಪತಿಯಾದ ವಜ್ರೇಶ್ವರನಿಗೆ ಪತ್ನಿಯಮೇಲೆ ಅಪಾರವಾದ ಪ್ರೇಮವಿದ್ದರೂ ಪಿತೃವಿಧೇಯನಾದ ಅವನು ನಿಸ್ಸಹಾಯಕನಂತಿರುತ್ತಾನೆ. ಪ್ರಫುಲ್ಲೆ ಅನೇಕ ಕಷ್ಟನಷ್ಟಗಳಿಗೆ ಸಿಕ್ಕಿ ಅನಂತರ ಕಳ್ಳರ ಯಜಮಾನನಾದ ಭವಾನಿ ಠಾಕೂರನಿಗೆ ಸಿಕ್ಕಿ ಅವನಲ್ಲಿ ಸುರಿತು ಕಳ್ಳರಕೂಟದ ನಾಯಕಿಯಾಗಿ ದೇವಿಚೌದುರಾಣಿ -ಯಾಗುತ್ತಾಳೆ. ತನಗೆ ದೊರಕಿದ್ದ ಅಪಾರವಾದ ನಿಧಿಯನ್ನು ಬಡವರ ಹಿತಕ್ಕಾಗಿ ಉಪಯೋಗಿಸುತ್ತಾಳೆ. ಭಾಗ್ಯಚಕ್ರ ಉರುಳಿ ಹಣದ ಅವಶ್ಯಕತೆಯಲ್ಲಿದ್ದ ಮಾವನಿಗೆ ನೆರವು ನೀಡುತ್ತಾಳೆ. ಮಾವನ ನೆರವಿನಿಂದ ಸೆರೆಹಿಡಿಯಲು ಬಂದ ಬ್ರಿಟಿಷರಿಗೆ ಚಳ್ಳೆಹಣ್ಣು ತಿನ್ನಿಸುತ್ತಾಳೆ. ಇಷ್ಟೆಲ್ಲಾ ಅಧಿಕಾರ, ಸಂಪತ್ತಿದ್ದರೂ ಪತಿಯ ಪ್ರೇಮ ಮರಳಿ ದೊರೆತೊಡನೆ ಎಲ್ಲವನ್ನೂ ತ್ಯಜಿಸಿ ಸಾಮಾನ್ಯ ಗೃಹಸ್ಥೆಯಾಗುತ್ತಾಳೆ. ದೇವಿಚೌದುರಾಣಿ ಮತ್ತು ಪ್ರಫುಲ್ಲೆಯ ಎರಡೂ ಪಾತ್ರಗಳಲ್ಲಿ ಅವುಗಳಿಗೆ ತಕ್ಕಂತಹ ನಡೆನುಡಿ ಕಾದಂಬರಿಯಲ್ಲಿ ಮೂಡಿಬಂದಿದೆ. 'ಇಲ್ಲಿ ಬರುವ ಪ್ರಫುಲ್ಲೆಯ ಕಥೆಗಿಂತಲೂ ನೀತ್ಯೋಕ್ತ ಧರ್ಮ ಮುಖ್ಯ'[೩೯] ಸ್ತ್ರೀಯರಿಗೆ ರಾಜ ಶಾಸನದ ಹೊಣೆ ಬೇಕಿಲ್ಲ. ಅವರು ಗೃಹಿಣಿಯರಾಗಿದ್ದರೆ ಸಾಕು ಎನ್ನುವುದು ಕಾದಂಬರಿಕಾರರ ಆಶಯವಿದ್ದಂತೆ ತೋರುತ್ತದೆ. ಉದಾಹರಣೆಗೆ ಪ್ರಫುಲ್ಲೆ ತನ್ನ ಸವತಿ ಸಾಗರೆಗೆ ಹೇಳುವ ಈ ಮಾತುಗಳನ್ನು ನೋಡೋಣ '... ಸಂಸಾರಧರ್ಮವೇ ಕಠಿಣವಾದ ಧರ್ಮ; ಅದಕ್ಕಿಂತಲೂ ಮತ್ತಾವ ಯೋಗವೂ ಕಠಿಣವಾದುದಾಗಿರದು. ಈಗ ನೋಡು, ಎಷ್ಟುಮಂದಿ ನಿರಕ್ಷರಕುಕ್ಷಿಗಳಾದ ಸ್ವಾರ್ಥಪರರಾದ ಅನಭಿಜ್ಞರಾದ ಮೂಢರಾದ ಜನರನ್ನಿಟ್ಟುಕೊಂಡು ನಾವು ನಿತ್ಯವೂ ಕಾರ್ಯವನ್ನು ನಿರ್ವಹಿಸಬೇಕು? ಅದರಲ್ಲಾರಿಗೂ ಆವ ಕಷ್ಟವಾಗದಂತೆ ಎಲ್ಲರೂ ಸುಖಿಗಳಾಗಿರುವುದಕ್ಕೇರ್ಪಾಡು ಮಾಡಬೇಕು. ಅದಕ್ಕಿಂತ ಮತ್ತಾವ ಸನ್ಯಾಸವೂ ಕಷ್ಟವಾದುದಾಗಿರದು. ಅದಕ್ಕಿಂತ ಮತ್ತಾವ ಪುಣ್ಯಕೆಲಸವೂ ಹೆಚ್ಚು ಪುಣ್ಯದಾಯಕವಾದುದಾಗಿರದು. ನಾನದಕ್ಕೆ ಸನ್ಯಾಸವೆಂದು ಹೇಳುವೆನು.'[೪೦]

'ದುರ್ಗೇಶ ನಂದಿನಿ' ಬಂಕಿಮರ ಮೊದಲ ಮತ್ತು ಅತ್ಯಂತ ಜನಪ್ರಿಯವೂ ಆದ ಕೃತಿ. ೧೮೬೫ರಲ್ಲಿ ಮೊದಲು ಪ್ರಕಟವಾದ ಅನಂತರ ಅದು ಕೇವಲ ೨೫ ವರ್ಷಗಳಲ್ಲಿ ೧೩ ಆವೃತ್ತಿಗಳನ್ನು ಕಂಡಿತು. ಬಂಕಿಮರು ತಮ್ಮ ಅನೇಕ ಕೃತಿಗಳನ್ನು ಮುದ್ರಣದಿಂದ ಮುದ್ರಣಕ್ಕೆ ತಿದ್ದಿ ಬೆಳೆಸುತ್ತಿದ್ದಂತೆ ಇದನ್ನು ಮಾಡದಿರುವುದನ್ನು ನೋಡಿದರೆ ಇದರ ಬಗ್ಗೆ ಅವರಿಗೆ ತೃಪ್ತಿಯಿದ್ದಂತೆ ಕಾಣುತ್ತವೆ. ಇದನ್ನು ಕ್ರಿ.ಶ. ೧೮೮೫ರಲ್ಲಿ ಬಿ. ವೆಂಕಟಾಚಾರ್ಯರು ಅನುವಾದಿಸಿದರು. 'ದುರ್ಗೇಶ ನಂದಿನಿ'ಯು

ನವರಸಭರಿತವಾದ ಸರ್ವೋತ್ಕೃಷ್ಟ ಕಾದಂಬರಿ...'[೬೧] ಎಂದು ವೆಂಕಟಾಚಾರ್ಯರೇ ಕಾದಂಬರಿಯ ವಿಜ್ಞಾಪನೆಯಲ್ಲಿ ಹೇಳಿದ್ದಾರೆ. 'ದುರ್ಗೇಶ ನಂದಿನಿ' ಬಂಕಿಮ ಚಂದ್ರರ ಐತಿಹಾಸಿಕ ಕಾದಂಬರಿ. ಅಕ್ಬರನ ಕಾಲದಲ್ಲಿ ಬಂಡೆದ್ದ ಬಂಗಾಲದ ಪಠಾನರನ್ನು ಮಾನಸಿಂಹನು ಅಡಗಿಸಿದುದು ಈ ಕಾದಂಬರಿಯ ವಸ್ತು. ಪಠಾನರ ನಿಗ್ರಹಕ್ಕೆ ನಿಯಮಿಸಲ್ಪಟ್ಟ ಮಾನಸಿಂಹನ ಮಗ ಇಪ್ಪತ್ತೈದರ ಯುವಕ ಜಗತ್ಸಿಂಹ ಮಂದಾರಣ ದುರ್ಗದ ವೀರೇಂದ್ರಸಿಂಹನ ಮಗಳು ತಿಲೋತ್ತಮೆಯನ್ನು ಶೈಲೇಶ್ವರ ದೇವಾಲಯದಲ್ಲಿ ಕಂಡ ಪ್ರಥಮ ನೋಟದಲ್ಲಿಯೆ ಮನಸ್ಸನ್ನರ್ಪಿಸುತ್ತಾನೆ. ಅನಂತರ ಕತ್ಲೂಲಖಾನನ ಬಂದಿಯಾಗಿದ್ದಾಗ ತಿಲೋತ್ತಮೆ ಶೀಲಚ್ಯುತಳಾದಳೆಂದು ತಿಳಿದು ಅವಳನ್ನು ಮನಸ್ಸಿನಿಂದ ದೂರಮಾಡುತ್ತಾನೆ. ಮರಣೋನ್ಮುಖನಾಗಿದ್ದ ಕತ್ಲೂಲಖಾನನಿಂದ ಅವಳು ಪವಿತ್ರಳೆಂದು ತಿಳಿದು ಕೊನೆಯಲ್ಲಿ ಅವಳನ್ನು ವಿವಾಹವಾಗುತ್ತಾನೆ. ಬಂದಿಯಾಗಿದ್ದ ಜಗತ್ಸಿಂಹನನ್ನು ಆರೈಕೆ ಮಾಡಿದ ಅಯಷೆಯ ಜಗತ್ಸಿಂಹನ ಬಗೆಗಿನ ನಿರ್ವ್ಯಾಜ್ಯ ಪ್ರೇಮ ಓದುಗರನ್ನು ಮೂಕವಿಸ್ಮಯರನ್ನಾಗಿ ಮಾಡುತ್ತದೆ. ಅಯಷೆಯ ಪ್ರಣಯಾರ್ಥಿಯಾದ ಉಸ್ಮಾನ್‌ಖಾನನ ಪ್ರೇಮವಂಚಿತ ರೋಷ ಬೆರಗುಗೊಳಿಸು-ವಂತಹುದು. ಕಾದಂಬರಿಯ ಎಲ್ಲ ಪಾತ್ರಗಳೂ ಔಚಿತ್ಯ ಪೂರ್ಣವಾಗಿ ಚಿತ್ರಿಸಲ್ಪಟ್ಟಿರುವುದಾದರೂ ಗಜಪತಿ ವಿದ್ಯಾ ದಿಗ್ಗಜನಪಾತ್ರ ಅಳತೆ ಮೀರಿದ ಔಚಿತ್ಯರಾಹಿತ್ಯದಿಂದ ಕೂಡಿದೆ. ಗಂಭೀರ ಸನ್ನಿವೇಶಗಳಲ್ಲಿಯೂ ಅವನ ಬಗ್ಗೆ ಇರುವ ಹಾಸ್ಯ ಅತಿಯಾಯಿತು. ಮಂದಾರಣದುರ್ಗವನ್ನು ಉಸ್ಮಾನ್‌ಖಾನ್ ವಶಪಡಿಸಿ-ಕೊಳ್ಳುವಲ್ಲಿ ಬೇರೆ ರೀತಿಯ ಚಿತ್ರಣವಿದ್ದರೆ ಚೆನ್ನಾಗಿರುತ್ತಿತ್ತು ಎನಿಸುತ್ತದೆ. ಶೈಲಿ ಸಂಸ್ಕೃತಭೂಯಿಷ್ಠವಾಗಿದ್ದು ಪ್ರೌಢವಾಗಿದೆ. ಸನ್ನಿವೇಶ ಚಿತ್ರಣ, ವ್ಯಕ್ತಿ ಚಿತ್ರಣ, ಪ್ರಕೃತಿ ವರ್ಣನೆಗಳಲ್ಲಿ ಶೈಲಿ ಕಾವ್ಯಾತ್ಮವಾಗುತ್ತದೆ. ಜಗತ್ಸಿಂಹನ ಪರಾಕ್ರಮ, ತಿಲೋತ್ತಮೆಯ ಮುಗ್ಧ ಪ್ರೇಮ, ಅಯಷೆಯ ನಿರ್ವ್ಯಾಜ್ಯ ಪ್ರೇಮಗಳು ಓದುಗರ ಮನದಲ್ಲಿ ಬಹುಕಾಲ ಉಳಿಯುತ್ತವೆ. ಈ ಕಾದಂಬರಿ ಚಾರಿತ್ರಿಕ ಕಾದಂಬರಿಯೆ ಅಲ್ಲವೆ ಎಂಬ ವಿಚಾರದಲ್ಲಿ ವಿಮರ್ಶಕರು ಬಹುವಾಗಿ ಚರ್ಚಿಸಿದ್ದಾರೆ. ಎರಡೂ ರೀತಿಯ ಅಭಿಪ್ರಾಯಗಳು ವ್ಯಕ್ತವಾಗಿವೆ. 'ರಾಜಸಿಂಹ' ಹೊರತಾಗಿ ಉಳಿದ ಬಂಕಿಮರ ಚಾರಿತ್ರಿಕ ಕಾದಂಬರಿಗಳಲ್ಲಿ ಚಾರಿತ್ರಿಕಾಂಶ ಕಡಿಮೆಯೆ. ಅದು ಹೇಗಾದರೂ ಇರಲಿ 'ದುರ್ಗೇಶ ನಂದಿನಿ' ಒಂದು ಉತ್ತಮ ಕಾದಂಬರಿಯೆನ್ನುವ ಬಗ್ಗೆ ಎರಡು ಮಾತಿಲ್ಲ.

'ದುರ್ಗೇಶ ನಂದಿನಿ'ಯ ಉತ್ತರ ಭಾಗದಂತಿರುವ 'ನವಾಬ ನಂದಿನಿ'ಯ ಕರ್ತೃ ದಾಮೋದರ ಮುಖ್ಯೋಪಾಧ್ಯಾಯ. 'ದುರ್ಗೇಶ ನಂದಿನಿ'ಯ ಪಾತ್ರಗಳೇ ಇಲ್ಲೂ ಇವೆ. ಅಲ್ಲದೆ 'ದುರ್ಗೇಶ ನಂದಿನಿ'ಯ ಕಥೆ ಕೊನೆಗೊಳ್ಳುವಲ್ಲಿಂದ ಈ ಕಾದಂಬರಿ ಪ್ರಾರಂಭವಾಗುತ್ತದೆ. ಕಾದಂಬರಿಯ ಹೆಸರಿಗೆ ತಕ್ಕಂತೆ ನವಾಬ ನಂದಿನಿಯಾದ ಅಯಷೆ

ಇಲ್ಲಿ ಪ್ರಧಾನ ಪಾತ್ರ. ಅವಳಿಂದ ಪ್ರಭಾವಿತವಾಗದ ಪಾತ್ರಗಳೇ ಇಲ್ಲ ಎನ್ನಬಹುದು. ಅಯಷೆ ತನ್ನ ಅಕುಟಿಲವಾದ, ನಿರಪೇಕ್ಷವಾದ ಪ್ರೇಮದಿಂದ ಓದುಗರನ್ನು ಆಕರ್ಷಿಸುವಂತೆಯೆ ರಾಜಕೀಯ ಚದುರಂಗದಾಟದಲ್ಲಿಯೂ ತಾನು ಯಾರಿಗೇನೂ ಕಡಿಮೆಯಿಲ್ಲವೆಂಬುದನ್ನು ತೋರಿಸಿಕೊಂಡಿದ್ದಾಳೆ. ಕಾದಂಬರಿ ಅಯಷೆಯ ಮರಣದೊಂದಿಗೆ ಮುಕ್ತಾಯವಾಗುತ್ತದೆ. 'ದುರ್ಗೇಶ ನಂದಿನಿ'ಯ ಬಂಧ, ಬಿಗಿ, ಪಾತ್ರಕಲ್ಪನೆ, ಶೈಲಿ ಎಲ್ಲವೂ ಅನ್ಯಕರ್ತೃ ಕೃತವಾದ 'ನವಾಬ ನಂದಿನಿ'ಯಲ್ಲೂ ಮುಂದುವರೆದಿರುವುದು ಬೆರಗುಹುಟ್ಟಿಸುವಷ್ಟು ಆಶ್ಚರ್ಯಕರ. ಅಯಷೆಯ ತ್ಯಾಗ ಪೂರ್ಣ ನಿರಪೇಕ್ಷ ಪ್ರೇಮವನ್ನು ಚಿತ್ರಿಸುವಲ್ಲಿ ಕಾದಂಬರಿ ಯಶಸ್ವಿಯಾಗಿದೆ. ೧೯೧೩ರಲ್ಲಿ ಬಿ. ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದಿಸಿದರು.

ಬಿ. ವೆಂಕಟಾಚಾರ್ಯರು ಅವರ ಕಾಲದ ಪ್ರಸಿದ್ಧ ಬಂಗಾಳಿ ಲೇಖಕರ ಕೃತಿಗಳನ್ನು ಅನುವಾದಿಸಿದ್ದಾರೆ. ಅವುಗಳಲ್ಲಿ ಸಿಂಹಪಾಲು ಬಂಕಿಮ ಚಂದ್ರರ ಕಾದಂಬರಿಗಳು. ಪ್ರಕೃತ ಮೇಲೆ ವಿಮರ್ಶಿಸಿರುವ ಇತರರ ಮತ್ತು ಬಂಕಿಮ ಚಂದ್ರರ ಕೃತಿಗಳನ್ನು ಬಿಟ್ಟು ಉಳಿದವು ಸಿಕ್ಕಿಲ್ಲ. ಇನ್ನಷ್ಟು ಶ್ರಮವಹಿಸಿ ಹುಡುಕಿದರೆ ಇನ್ನು ಕೆಲವಾರು ಕೃತಿಗಳು ಸಿಕ್ಕಿದರೂ ಸಿಕ್ಕಬಹುದು. ಅದಕ್ಕಿಂತಲೂ ಹೆಚ್ಚಾಗಿ ಎ.ಆರ್. ಕೃಷ್ಣಶಾಸ್ತ್ರಿಗಳ 'ಬಂಕಿಮ ಚಂದ್ರ' ಕೃತಿಯಲ್ಲಿ ಬಂಕಿಮ ಚಂದ್ರರ ಎಲ್ಲ ಕೃತಿಗಳ ಸಾರಾಂಶ ಮತ್ತು ವಿಮರ್ಶೆ ಸಿಗುತ್ತದೆ. ಅಲ್ಲಿ ವಿಮರ್ಶೆಯ ಮಧ್ಯೆ ಅವರು ಉದ್ಧರಿಸಿರುವ ಭಾಗಗಳು ಎ.ಆರ್. ಕೃಷ್ಣಶಾಸ್ತ್ರಿಗಳೆ ನೇರವಾಗಿ ಮೂಲದಿಂದ ಭಾಷಾಂತರ ಮಾಡಿದಂಥ ಭಾಗಗಳು. ಬಿ. ವೆಂಕಟಾಚಾರ್ಯರ ಅನುವಾದಗಳಿಂದ ಅವರು ಉದಾಹರಣೆಗಳನ್ನು ಕೊಟ್ಟಿಲ್ಲ. ಹಾಗಾಗಿ 'ಬಂಕಿಮ ಚಂದ್ರ'ದಿಂದಲೆ ವೆಂಕಟಾಚಾರ್ಯರು ಅನುವಾದಿಸಿರುವ ಕೃತಿಗಳ ಸಾರಾಂಶವನ್ನು ಕೊಟ್ಟು ವಿಮರ್ಶೆಯನ್ನು ಮಾಡುವುದು ಔಚಿತ್ಯ ಪೂರ್ಣವಾಗಿರುವುದಿಲ್ಲ. ಅಲ್ಲದೆ ಕೃತಿಗಳನ್ನು ಓದದೇ ಮಾಡುವ ವಿಮರ್ಶೆ ಸೂಕ್ತವಾದುದಲ್ಲವೆನ್ನುವ ಕಾರಣದಿಂದ ಆ ಕೆಲಸವನ್ನು ಮಾಡಲು ನನ್ನ ಮನಸ್ಸು ಒಪ್ಪುತ್ತಿಲ್ಲ. ನನ್ನ ಅವಲೋಕನಕ್ಕೆ ಸಿಕ್ಕಿದಷ್ಟು ಗ್ರಂಥಗಳನ್ನು ಮಾತ್ರ ನಾನು ಇಲ್ಲಿ ವಿಮರ್ಶಿಸಿದ್ದೇನೆ. ಬಿ. ವೆಂಕಟಾಚಾರ್ಯರ ಸ್ವಂತ ಕೃತಿಗಳಾಗಿರಬಹುದಾದ ಚರಿತ್ರೆ, ಸಮಾಜ ವಿಜ್ಞಾನ, ಸಮಾಜ ಸುಧಾರಣೆಗಳಿಗೆ ಸಂಬಂಧಪಟ್ಟ ಕೃತಿಗಳೂ ಸಿಕ್ಕಿಲ್ಲವಾದ್ದರಿಂದ ಆ ಬಗ್ಗೆಯೂ ಏನನ್ನೂ ಹೇಳಲು ಸಾಧ್ಯವಾಗುತ್ತಿಲ್ಲ.

ಪ್ರತಿಯೊಬ್ಬ ಲೇಖಕನು ಯಾವುದೋ ಒಂದು ಉದ್ದೇಶ ಅಥವಾ ಆಶಯವನ್ನಿಟ್ಟುಕೊಂಡು ಕೃತಿ ರಚನೆ ಮಾಡುತ್ತಾನೆ. ವೆಂಕಟಾಚಾರ್ಯರ ಬಹುತೇಕ ಕೃತಿಗಳು ಅನುವಾದಗಳಾಗಿರುವುದರಿಂದ ಅವುಗಳ ಉದ್ದೇಶ, ಆಶಯ ಇವೇನಿದ್ದರೂ

ಅವು ಮೂಲ ಲೇಖಕನವಾಗುತ್ತವೆ. ಆದರೂ ಅನುವಾದಕ ಆಯ್ಕೆ ಮಾಡಿಕೊಂಡ ಕೃತಿಗಳಿಂದ ಅನುವಾದಕನ ಒಲವು ನಿಲುವುಗಳನ್ನು ಸ್ವಲ್ಪ ಮಟ್ಟಿಗೆ ತಿಳಿಯಬಹುದು. ಆದರೆ ಆ ಮಾತನ್ನು ಇಲ್ಲಿ ಹೇಳಲಾಗುವುದಿಲ್ಲ. ಏಕೆಂದರೆ ವೆಂಕಟಾಚಾರ್ಯರು ಅನುವಾದಕ್ಕೆ ತೊಡಗಿದ ದಿನಗಳಲ್ಲಿ ಕನ್ನಡದಲ್ಲಿ ಕಾದಂಬರಿಗಳೇ ಇರಲಿಲ್ಲ. ಆದ್ದರಿಂದ ವೆಂಕಟಾಚಾರ್ಯರು ತಮಗೆ ಸಿಕ್ಕಿದ ಎಲ್ಲ ಲೇಖನಗಳನ್ನೂ, ಕೃತಿಗಳನ್ನೂ, ಕಾದಂಬರಿಗಳನ್ನೂ ಅವುಗಳ ಗುಣಾವಗುಣಗಳನ್ನು ಯೋಗ್ಯತೆಯನ್ನು ನೋಡದೆ ಅನುವಾದ ಮಾಡಿದರು. ಹೀಗಾಗಿ ಚಿನ್ನದ ಅದುರಿನ ಜೊತೆಯಲ್ಲಿ ಕಸರೂ ಬರುವಂತೆ ಒಳ್ಳೆಯ ಕೃತಿಗಳ ಜೊತೆಯಲ್ಲಿ ಅನೇಕ ಸಾಧಾರಣ ಕೃತಿಗಳು ಅನುವಾದಗೊಂಡವು. ಹೂವಿನ ಜೊತೆಯಲ್ಲಿ ನಾರೂ ಸ್ವರ್ಗಕ್ಕೇರುವಂತೆ ಒಳ್ಳೆಯ ಕೃತಿಗಳ ಜೊತೆಯಲ್ಲಿ ಸಾಧಾರಣ ಕೃತಿಗಳು ಕನ್ನಡಕ್ಕೆ ಅನುವಾದಗೊಂಡವು. ಹೀಗೆ ಅನುವಾದಗೊಂಡ ಕೃತಿಗಳಲ್ಲಿ ಸಿಂಹಪಾಲು ಬಂಕಿಮಚಂದ್ರ ಚಟ್ಟೋಪಾಧ್ಯಾಯರ ಕೃತಿಗಳು. ಅವುಗಳನ್ನು ಕುರಿತು ಹೇಳುವ ಮಾತುಗಳೇ ಎಲ್ಲ ಅನುವಾದಿತ ಕೃತಿಗಳಿಗೂ ಅನ್ವಯಿಸುತ್ತವೆ.

'ಸುಪ್ರಸಿದ್ಧರಾದ ಬಂಕಿಮ ಚಟ್ಟೋಪಾಧ್ಯಾಯರ ಕಾದಂಬರೀ ಲೇಖನ ಶಕ್ತಿಯು ಸರ್ವತೋಮುಖವಾದದ್ದು. ಅವರು ಬರೆದಿರುವ ಕಾದಂಬರಿಗಳು ಒಂದು ವಿಧವಾದವುಗಳಲ್ಲ. ಅವುಗಳಲ್ಲಿ ಕೆಲವು ಐತಿಹಾಸಿಕ, ಕೆಲವು ಗಾರ್ಹಸ್ಥ್ಯ ; ಇನ್ನು ಕೆಲವು ಸಮಾಜಿಕ ; ಮತ್ತೆ ಕೆಲವು ವಿಡಂಬಕ. ಹೀಗೆ ಅವರು ವಿಧವಿಧವಾದ ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ. ಇವೊಂದೊಂದರಲ್ಲಿಯೂ ಅವರ ಅಪೂರ್ವವಾದ ಸಾಮರ್ಥ್ಯವೂ ಅಪ್ರತಿಹತವಾದ ಪ್ರತಿಭೆಯೂ ಕಂಡುಬರುತ್ತದೆ...'[೮]
'ಬಂಕಿಮ ಚಂದ್ರರ ಗ್ರಂಥಗಳಲ್ಲಿ ಶೃಂಗಾರ ಮಿಶ್ರವಲ್ಲದ ಶುದ್ಧ ವೀರರಸವನ್ನು ಚಿತ್ರಿಸಿದ ಕಾದಂಬರಿಯೇ ಇಲ್ಲವೆನ್ನಬಹುದು, ಆದರೂ ಅವು ವಜ್ರಕೆತ್ತಿದ ಆಭರಣಗಳಂತೆ ಹೊಂದಿಕೊಂಡು ಸುಂದರವಾಗಿಯೇ ಇವೆ. ಕೆಲವು ವೇಳೆ ಮಾತ್ರ ಹಾಸ್ಯ ರಸವು ಪ್ರವೇಶಮಾಡಿ ಮಿತಿಮೀರಿ ಉಕ್ಕಿ ಸುರಿದು ಮಿಕ್ಕೆರಡು ರಸಗಳ ಬಣ್ಣವನ್ನು ಕೆಡಿಸಿಬಿಡಬಹುದು'[೯]

ಮೊಟ್ಟಮೊದಲು ಇಂಗ್ಲಿಷ್ ಸಾಹಿತ್ಯದ ಪ್ರಭಾವ ಆದುದು ಬಂಗಾಳದಲ್ಲಿ. ಹತ್ತೊಂಬತ್ತನೆಯ ಶತಮಾನದ ಕೊನೆಯ ವೇಳೆಗೆ ಇಲ್ಲಿಯೂ ಒಂದೆರಡು ಸ್ವತಂತ್ರ ಕಾದಂಬರಿಗಳು ಬಂದುವಾದರೂ ಕಾದಂಬರಿ ಜನಪ್ರಿಯವಾದುದು ವೆಂಕಟಾಚಾರ್ಯರ ಮತ್ತು ಗಳಗನಾಥರ ಬಂಗಾಳಿ ಮತ್ತು ಮರಾಠಿ ಅನುವಾದಗಳಿಂದ. ಹೀಗೆ ಅನುವಾದಗೊಂಡ ಕಾದಂಬರಿಗಳು ಬಹುತೇಕ ಚಾರಿತ್ರಿಕ ಕಾದಂಬರಿಗಳು. ಈ ಕಾದಂಬರಿಗಳಿಗೆ ಮೂಲದಲ್ಲಿ ಪ್ರೇರಣೆ ಸರ್‌ವಾಲ್ಟರ್ ಸ್ಕಾಟ್. ಹೀಗೆ ಸರ್ ವಾಲ್ಟರ್

ಸ್ಕಾಟ್‌ನ ಪ್ರಭಾವ ಕನ್ನಡಕ್ಕೆ ಬಂಗಾಳಿ ಮತ್ತು ಮರಾಠಿ ಕಾದಂಬರಿಗಳ ಅನುವಾದಗಳ ಮೂಲಕ ಆಯಿತು. ಐತಿಹಾಸಿಕ ಕಾದಂಬರಿಗಳ ಅದ್ಭುತ ರಮ್ಯತೆ, ಗದ್ಯಕ್ಕೆ, ಸಹಜವಾಗಿರುವ ಆತ್ಮೀಯತೆ ಸಹಜವಾಗಿ ಜನರ ಮನಸ್ಸನ್ನು ಸೂರೆಗೊಂಡವು.

'ಬಂಕಿಮ ಚಂದ್ರರ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಐತಿಹಾಸಿಕ ಎಂದು ಕರೆಯುವ ಕೃತಿಗಳಲ್ಲಿಯೂ ಐತಿಹಾಸಿಕ ಅಂಶ ಕಡಿಮೆಯೇ. ಆದರೆ ಐತಿಹಾಸಿಕ ಸಂಗತಿಗಳನ್ನೂ ಸಂದರ್ಭಗಳನ್ನೂ ಬಳಸಿ ಕಾದಂಬರಿಯನ್ನು ರಚಿಸುವ ಮಾದರಿ ಇವರಿಂದ ಕನ್ನಡಕ್ಕೆ ದೊರಕಿತು. ಕಾದಂಬರಿಗಳೇ ಇಲ್ಲ ಎನ್ನಬಹುದಾಗಿದ್ದ ಕಾಲದಲ್ಲಿ ಸ್ವಾರಸ್ಯಕರ ವಸ್ತುವಿರುತ್ತಿದ್ದ ಬಂಕಿಮರ ಕಾದಂಬರಿಗಳು ಕನ್ನಡದಲ್ಲಿಯೂ ಜನಪ್ರಿಯವಾದದ್ದು ಆಶ್ಚರ್ಯವಲ್ಲ'[೧೪]

'ವೆಂಕಟಾಚಾರ್ಯರು ಯಥಾವತ್ತಾಗಿ ತರ್ಜುಮೆ ಮಾಡಿದ್ದಾರೆ, ಅಥವಾ ಅಲ್ಲಲ್ಲಿ ಒಂದೆರಡು ಮಾತುಗಳನ್ನು ಅಥವಾ ವಾಕ್ಯಗಳನ್ನು ಬದಲಾಯಿಸಿದ್ದರೂ, ಬಿಟ್ಟಿದ್ದರೂ, ಸೇರಿಸಿದ್ದರೂ ಬಂಕಿಮಚಂದ್ರರ ಗ್ರಂಥಗಳಿಗೂ ಇವರ ತರ್ಜುಮೆಗಳಿಗೂ ಒಟ್ಟು ಅಭಿಪ್ರಾಯಗಳಲ್ಲಿ ಅಥವಾ ಕಾವ್ಯ ಶೋಭೆಯಲ್ಲಿ ಹೆಚ್ಚು ವ್ಯತ್ಯಾಸವಾಗಲಾರದು.'[೧೫] ಅಲ್ಲದೆ 'ಬಂಗಾಳಿಯಲ್ಲಿ ಬರುವ ಬಹು ಸಂಸ್ಕೃತ ಶಬ್ದಗಳನ್ನು ತಮ್ಮ ಗ್ರಂಥಗಳಲ್ಲಿ ಉಪಯೋಗಿಸಿ-ಕನ್ನಡ ಭಾಷೆಯನ್ನು ಪುಷ್ಟೀಕರಿಸಿದರು. ಈ ಮಧ್ಯೆ ಅವಶ್ಯಕವಲ್ಲದ ಪೆಡಸಾದ ಸಂಸ್ಕೃತ ಶಬ್ದಗಳೂ ಬಂದು ಸೇರಿಕೊಂಡವು'[೧೬] ಇದನ್ನು ಅವರ ಮಿತ್ರರು ಅವರ ಗಮನಕ್ಕೆ ತಂದಾಗ ತಮ್ಮ ಮುಂದಿನ ಅನುವಾದಗಳಲ್ಲಿ ಹೆಚ್ಚಾಗಿ ಕನ್ನಡ ಪದಗಳನ್ನೇ ಉಪಯೋಗಿಸಲು ಪ್ರಯತ್ನ ಪಟ್ಟಂತೆ ತೋರುತ್ತದೆ. ಇದರಿಂದಾಗಿ ಕನ್ನಡ ಜಾಯಮಾನಕ್ಕೊಗ್ಗದ ಅನೇಕ ಪದಗಳು ಅವರ ಅನುವಾದಗಳಲ್ಲಿ ಕಂಡುಬಂದುವು. ಇದನ್ನು ವಿಶೇಷವಾಗಿ 'ಕೃಷ್ಣಕಾಂತನ ಉಯಿಲು' ಕಾದಂಬರಿಯಲ್ಲಿ ಕಾಣಬಹುದು.

'ವೆಂಕಟಾಚಾರ್ಯರು ಗತಿಸಿ ೫೦ ವರ್ಷಗಳಾದರೂ (ಇಂದಿಗೆ ಎಪ್ಪತ್ತು) ಆ ಗ್ರಂಥಗಳ ಶೈಲಿ ನಮಗೆ ಹಳದಾಗಿ ಕಾಣುತ್ತಿಲ್ಲ. ಮೂಲವನ್ನು ಅನುಸರಿಸಿರುವುದರಿಂದ ಗುಣವು ಮೂಲಕ್ಕೆ ಸಲ್ಲಬೇಕಾದರೂ ಕನ್ನಡದ ಬಿಗಿಯಲ್ಲಿ ನಾವು ವೆಂಕಟಾಚಾರ್ಯರ ವಿದ್ವತ್ತನ್ನೂ, ಕಲ್ಪನೆಯನ್ನು ಕಾಣಬಹುದು. ಅವರ ಕಾದಂಬರಿಗಳಲ್ಲಿ ಇಂದಿಗೂ ಅಚ್ಚಳಿಯದ ತಾರುಣ್ಯ, ರಮ್ಯತೆ, ರುಚಿಗಳು ಅಡಗಿವೆ. ಹೊಸ ಚಿಗುರು ಬಂದರೂ ಅವುಗಳ ಕಾಂತಿ ಮಸುಳಿಸಿಲ್ಲ'[೧೭]

ಬಂಕಿಮ ಚಂದ್ರರು ಸಾಮಾಜಿಕ ಅಥವಾ ಕೌಟುಂಬಿಕ ಕಾದಂಬರಿಗಳಲ್ಲಿ ಉದಾತ್ತ ಭಾವಗಳಾದ ಸೇವೆ, ತ್ಯಾಗ, ದೈವಭಕ್ತಿ, ಪತಿಭಕ್ತಿ ಇತ್ಯಾದಿಗಳನ್ನೂ, ಸ್ತ್ರೀಯರು ಕೌಟುಂಬಿಕ ಜೀವನಕ್ಕೆ ಮತ್ತು ಅದರ ನೆಮ್ಮದಿಗೆ ಹೆಚ್ಚು ಗಮನ ಕೊಡಬೇಕೆಂಬುದನ್ನೂ

ಹಾಗೆಯೆ ಪುರುಷರು ಪರಸ್ತ್ರೀ ವ್ಯಾಮೋಹಕ್ಕೊಳಗಾಗದೆ ತಮ್ಮ ಪತ್ನಿಯರಲ್ಲಿ ನಿಷ್ಠೆಯುಳ್ಳವರಾಗಿರಬೇಕೆಂಬುದನ್ನು ತಿಳಿಯ ಹೇಳಿದ್ದಾರೆ. ಒಟ್ಟಾರ ಕೌಟುಂಬಿಕ ಸೌಖ್ಯ ತನ್ಮೂಲಕ ಸಾಮಾಜಿಕ ಸೌಖ್ಯ ಅವರ ಆಶಯ. ಅವರ ಚಾರಿತ್ರಿಕ ಕಾದಂಬರಿಗಳಲ್ಲಿ ಚಾರಿತ್ರಿಕಾಂಶ ಕಡಿಮೆಯಿದ್ದು ಮೇಲೆ ಹೇಳಿದ ಅಂಶಗಳೇ ಅವುಗಳಲ್ಲಿ ಕಂಡುಬರುತ್ತವೆ. ಅಲ್ಲದೆ ಅವರ ಚಾರಿತ್ರಿಕ ಕಾದಂಬರಿಗಳ ಜೀವಾಳವಾದ ಸ್ವದೇಶ ಪ್ರೇಮ, ರಾಷ್ಟ್ರ ಭಕ್ತಿ, ಹಿಂದೂಧರ್ಮದ ಪುನರುತ್ಥಾನ ಇವುಗಳು ಆ ಕಾದಂಬರಿಗಳಲ್ಲಿ ಪ್ರಮುಖ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಸ್ವದೇಶಿಯರು ಬ್ರಿಟಿಷರು, ಮೊಗಲರು ಮತ್ತು ಪಠಾಣರಿಗಿಂತ ಶಕ್ತಿ, ಸಾಹಸ, ಪರಾಕ್ರಮ ಮತ್ತು ಬುದ್ಧಿ ಮತ್ತೆ ಇವುಗಳಲ್ಲಿ ಯಾವುದರಲ್ಲಿಯೂ ಕಡಿಮೆಯಿಲ್ಲವೆಂಬುದನ್ನು ಚಿತ್ರಿಸಿ ತನ್ಮೂಲಕ ಅಂದಿನ ಜನಾಂಗವನ್ನು ಜಾಗೃತಗೊಳಿಸುವುದೇ ಅವರ ಕಾದಂಬರಿಗಳ ಆಶಯ. ಅವು ಈಗಲೂ ಸ್ಪೃಹ್ಯ.

ಸ್ವತಂತ್ರ ಕಾದಂಬರಿಗಳನ್ನು ವೆಂಕಟಾಚಾರ್ಯರು ರಚಿಸಲಿಲ್ಲವಾದರೂ ತಮ್ಮ ಅಪಾರವಾದ ಅನುವಾದಗಳ ಮೂಲಕ ಕನ್ನಡಿಗರಲ್ಲಿ ಓದುವ ಹವ್ಯಾಸವನ್ನು ಬೆಳೆಸಿದರು. ಕನ್ನಡದಲ್ಲಿ ಕಾದಂಬರಿಗಳಿಲ್ಲವೆಂಬ ಕೊರತೆಯನ್ನು ನೀಗಿದರು. 'ಭಾಷಾಂತರಕಾರರಾದರೂ' 'ಕರ್ಣಾಟಕ ಕಾದಂಬರೀ ಪಿತಾಮಹ'ರೆಂದು ಕರೆಯಲ್ಪಡು -ಬಹುದಾದ ಮ. ವೆಂಕಟಾಚಾರ್ಯರು ತಮ್ಮ ಭಾಗ್ಯೋದಯದಿಂದಲೂ, ಕನ್ನಡಿಗರ ಭಾಗ್ಯೋದಯದಿಂದಲೂ ಬಂಗಾಳೀ ದೇಶದ ಕಾದಂಬರೀ ಖನಿಯಿಂದ ಇಂಥ ಅಮೋಘವಾದ ರತ್ನಗಳನ್ನು ಆರಿಸಿಕೊಂಡು ಬಂದು ಕನ್ನಡ ದೇಶದಲ್ಲಿ ಅವುಗಳನ್ನು ಪ್ರಚಾರ ಮಾಡಿದರು. ಇದರಿಂದ ತಮಗೆ ಕೀರ್ತಿಯೂ ಕನ್ನಡ ಸಾಹಿತ್ಯಕ್ಕೆ ಮಹೋಪಕಾರವೂ ಆಯಿತು'[೩೮] ಎಂಬ ಎ.ಆರ್. ಕೃಷ್ಣಶಾಸ್ತ್ರಿ ಅವರ ಹೇಳಿಕೆ ಯತಾರ್ಥವಾದದು. 'ಒಟ್ಟಿನಲ್ಲಿ ವೆಂಕಟಾಚಾರ್ಯರು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಒಂದು ಶಾಶ್ವತವಾದ ಸ್ಥಾನವನ್ನು ಪಡೆದು ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ.[೩೯] ಆದ್ದರಿಂದ ಕನ್ನಡ ಕಾದಂಬರಿಯ ಇತಿಹಾಸದಲ್ಲಿ ಅವರದು ಮರೆಯಲಾಗದ ಹೆಸರು.'[೪೦]

ವೆಂಕಟಾಚಾರ್ಯರಿಂದ ಅನುವಾದಗೊಂಡ ಕೃತಿಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದೆ. ಎಲ್ಲಿ ಮೂಲ ಲೇಖಕರ ಹೆಸರು ಗೊತ್ತಿದೆಯೊ ಅಂಥಕಡೆ ಮೂಲ ಲೇಖಕರ ಹೆಸರನ್ನೂ, ಕೃತಿ ಲೇಖನವೆ, ಕಥೆಯೆ, ಕಾದಂಬರಿಯೆ, ಕಾದಂಬರಿಯಾಗಿದ್ದರೆ ಪತ್ತೇದಾರಿಯೆ, ಸಾಮಾಜಿಕವೆ ಅಥವಾ ಐತಿಹಾಸಿಕವೆ ಎಂಬುದು ಗೊತ್ತಿರುವ ಕಡೆ ಮತ್ತು ಅವು ಕನ್ನಡದಲ್ಲಿ ಪ್ರಕಟವಾದ ವರ್ಷ ತಿಳಿದಿರುವ ಕಡೆ ಅದನ್ನೂ ಕಂಸದಲ್ಲಿ ಸೂಚಿಸಲಾಗಿದೆ.

ಗ್ರಂಥಗಳು

೧. ಅಡವಿಯ ಹುಡುಗಿ (ಯೋಗೀಂದ್ರನಾಥ ಚಟ್ಟೋಪಾಧ್ಯಾಯ, ೧೯೧೬)
೨. ಅತ್ತಿಗೆ (೧೯೦೭)
೩. ಅಮೃತಪುಲಿನ (ನನಿಲಾಲವಂಧ್ಯೋಪಾಧ್ಯಾಯ, ಐ.ಕಾ. ೧೯೦೭)
೪. ಅಹಲ್ಯಾಬಾಯಿ (ಯೋಗೀಂದ್ರನಾಥ ಬಸು)
೫. ಅಂತಃಪುರದ ರಹಸ್ಯ (ಕಾ)
೬. ಆನಂದಮಠ (ಬಂಕಿಮಚಂದ್ರ, ಐ.ಕಾ., ೧೮೯೭)
೭. ಇಂದಿರಾ (ಬಂಕಿಮಚಂದ್ರ, ಸಾ.ಕಾ., ೧೮೯೭)
೮. ಉನ್ಮಾದಿನೀ (ಯೋಗೀಂದ್ರನಾಥ, ಸಾ.ಕಾ.)
೯. ಉಪವಾಸ
೧೦. ಕಪಾಲಕುಂಡಲಾ (ಬಂಕಿಮಚಂದ್ರ, ಐ.ಕಾ., ೧೮೯೮)
೧೧. ಕಮಲಾಕಾಂತ (ಬಂಕಿಮಚಂದ್ರ, ಸಾ.ಕಾ., ೧೯೦೯)
೧೨. ಕರ್ಮಕ್ಕೆ ತಕ್ಕ ಫಲ
೧೩. ಕಾಗೆ
೧೪. ಕೋಹಿನೂರು (ಒಬ್ಬ ಪರಿವ್ರಾಜಕ, ಐ.ಕಾ. ೧೯೦೫)
೧೫. ಕೃಷ್ಣಕಾಂತನ ಉಯಿಲು (ಬಂಕಿಮಚಂದ್ರ, ಸಾ.ಕಾ.,)
೧೬. ಕ್ಷತ್ರಿಯರಮಣಿ (ಸಾ.ಕಾ.)
೧೭. ಗೀತೋಕ್ತ ಧರ್ಮ (ಧಾರ್ಮಿಕ)
೧೮. ಚಂದ್ರಶೇಖರ (ಬಂಕಿಮಚಂದ್ರ, ಐ.ಕಾ.)
೧೯. ಚಿತ್ರವಿಚಿತ್ರಾವಳಿ, ಭಾಗ ೧ ಮತ್ತು ಭಾಗ ೨ (ಅರೇಬಿಯನ್ ನೈಟ್ಸ್ ಕಥೆಗಳು)
೨೦. ಚಿದ್ರತ್ನ ನಾಟಕ ರತ್ನ
೨೧. ದಾಡಿಯ ಹೇಳಿಕೆ
೨೨. ದುರ್ಗೇಶನಂದಿನಿ (ಬಂಕಿಮಚಂದ್ರ, ಐ.ಕಾ. ೧೮೮೫)
೨೩. ದೇವೀಚೌದುರಾಣಿ (ಬಂಕಿಮಚಂದ್ರ, ಐ.ಕಾ. ೧೮೯೯)
೨೪. ದೇಶಾಂತರಗಳಲ್ಲಿ ಪ್ರಾಚೀನ ಭಾರತ ಪುರುಷರು (ಚರಿತ್ರೆ)
೨೫. ನವಾಬನಂದಿನಿ (ದಾಮೋದರ ಮುಖ್ಯೋಪಾಧ್ಯಾಯ, ಐ.ಕಾ.)
೨೬. ನೀರದೆ (ಸತೀಶಬಾಬು, ಕಾ.)
೨೭. ನೀಳಾಗೀತ (ಕಾ.)
೨೮. ನೊಂದನುಡಿ (ಕಾ)

೨೯. ಪರಿಮಳಾ (ಪಾಂಚಕಡಿ ದೆ, ಪ.ಕಾ. ೧೯೦೨)
೩೦. ಪ್ರಾಚೀನ ಮತ್ತು ನವೀನ ಕಾಲದ ಸ್ತ್ರೀ ಪುರುಷರು (ಬಂಕಿಮಚಂದ್ರ ಮತ್ತು ಇತರರು, ಸಾಮಾಜಿಕ, ೧೮೯೯)
೩೧. ಭಗವಚ್ಛಾಸ್ತ್ರ ಭಾಸ್ಕರ
೩೨. ಭಾಸ್ಕರ
೩೩. ಭರತಖಂಡದ ಪೂರ್ವ ವೃತ್ತ (ಇತಿಹಾಸ)
೩೪. ಭಾರತ ಮಹಿಳಾ (ಹರಪ್ರಸಾದ ಶಾಸ್ತ್ರಿ, ಸಾಮಾಜಿಕ ೧೮೮೪)
೩೫. ಭ್ರಾಂತಿವಿಲಾಸ (ಈಶ್ವರಚಂದ್ರ ವಿದ್ಯಾಸಾಗರ, ಕಾ. ೧೮೭೬)
೩೬. ಮನೋರಮೆ (ಪಾಂಚಕಡಿ ದೆ, ಪ.ಕಾ. ೧೯೦೭)
೩೭. ಮಶಕ
೩೮. ಮಾಧವೀಲತಾ (ರಮೇಶಚಂದ್ರ? ಸತೀಶಚಂದ್ರ? ೧೯೦೧)
೩೯. ಮಾಲತಿ (ಕಾ)
೪೦. ಮೃಣ್ಮಯಿ (ಕಾ)
೪೧. ಮೃಣಾಳಿನಿ (ಬಂಕಿಮ, ಕಾ)
೪೨. ಯವನಯಾಮಿನೀ ವಿನೋದಗಳು (ಅರೇಬಿಯನ್ ನೈಟ್ಸ್)
೪೩. ಯುಗಳಾಂಗುರೀಯ (ಬಂಕಿಮ, ಕಥೆ)
೪೪. ರಜನಿ (ಬಂಕಿಮ, ಕಾ)
೪೫. ರಮಾಬಾಯಿ (ಕಾ)
೪೬. ರಾಜಸಿಂಹ (ಬಂಕಿಮ, ಚಾ.ಕಾ. ೧೮೯೮)
೪೭. ರಾಜಸ್ಥಾನದ ಕಥೆಗಳು
೪೮. ರಾಧಾರಾಣಿ (ಬಂಕಿಮ, ಸಣ್ಣ ಕಥೆ ೧೯೧೯)
೪೯. ರಾಮೇಶ್ವರನ ಅದೃಷ್ಟ (ಬಂಕಿಮ, ಕಥೆ,)
೫೦. ರಾಸೆಲಾಸ
೫೧. ಲೀಲೆ
೫೨. ಲೋಕರಹಸ್ಯ, ಭಾಗ ೧ ಮತ್ತು ೨ (ಬಂಕಿಮ)
೫೩. ಲೋಕೈಕ ಚತುರನ ಕಥೆ
೫೪. ವಿಷವೃಕ್ಷ (ಬಂಕಿಮ, ಸಾ.ಕಾ. ೧೯೦೦)
೫೫. ವೆನಿಸು ನಗರದ ವಣಿಕ (The Merehant of Venice)
೫೬. ವೈಜ್ಞಾನಿಕ ಪ್ರಹಸನ
೫೭. ವಂಗವಿಜೇತ (ರಮೇಶಚಂದ್ರ ದತ್ತ, ಐ.ಕಾ. ೧೯೧೩)
೫೮. ಶಕುಂತಳಾ (ಈಶ್ವರಚಂದ್ರ ವಿದ್ಯಾಸಾಗರ, ಚರಿತ್ರೆ, ೧೮೮೨)

೫೯. ಶರಣಾಗತ

೬೦. ಶಾಕುಂತಳ (ಈಶ್ವರಚಂದ್ರ ವಿದ್ಯಾಸಾಗರ)

೬೧. ಶಾರದಾಸ್ತೋತ್ರ ಕದಂಬಕಂ (ಪದ್ಯ)

೬೨. ಶಾರದಾಸ್ತೋತ್ರ ನಿರ್ಮಿತ ಮಂಡಲಂ (ಶ್ರೀ ಶೃಂಗೇರಿ ಜಗದ್ಗುರುಗಳ ಮುಖೋನ್ನಿರ್ಗಣವಾದದು, ಪದ್ಯ)

೬೩. ಶಾಂತಿ, ಭಾಗ ೧ ಮತ್ತು ಭಾಗ ೨ (ದೋಮೋದರ ಮುಖ್ಯೋಪಾಧ್ಯಾಯ, ಕಾ ೧೯೨೦)

೬೪. ಸಾಧನೆ (ಬಾಬು ಸತ್ಯೇಂದ್ರನಾಥ ಕುಮಾರ ಬಾಬು, ೧೯೧೧)

೬೫. ಸೀತಾರಾಮ (ಬಂಕಿಮ, ಐ.ಕಾ., ೧೯೦೧)

೬೬. ಸೀತಾವನವಾಸ (ಈಶ್ವರಚಂದ್ರ ವಿದ್ಯಾಸಾಗರ, ಪೌ.ಕ., ೧೮೮೪)

೬೭. ಸ್ತ್ರೀ ಶಿಕ್ಷೆಯ ರಹಸ್ಯ (ಸಾಮಾಜಿಕ)

೬೮. ಸುಶಿಕ್ಷಿತ ಸಭ್ಯರಾದ ಹಿಂದುಗಳು (ಸಾಮಾಜಿಕ)

೬೯. ಸೂರ್ಯಪೂಜೆ (ಲೇಖನ)

ಅಡಿಟಿಪ್ಪಣಿಗಳು

೧. ಎಲ್.ಎಸ್. ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ, ಪು ೧೭-೧೮.

೨. ಜಿ. ವೆಂಕಟಯ್ಯ : ಬಿಂಡಿಗನವಿಲೆ ವೆಂಕಟಾಚಾರ್ಯರು, ಲೋಕಪಾವನಿ, ಪು ೧೩೨-೧೩೫.

೩. ಅದೇ, ಪು ೧೩೮-೧೪೦.

೪. ಎಲ್.ಎಸ್. ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ, ಪು ೧೬೫.

೫. 'ಮಂಡ್ಯ ಜಿಲೆಯ ನಾಗಮಂಗಲ ತಾಲೂಕಿನಲ್ಲಿರುವ ಬಿಂಡಿಗನವಿಲೆ ಇವರ ತವರೂರು' ಎಂದು ಜಿ. ವೆಂಕಟಯ್ಯ 'ಲೋಕಪಾವನಿ'ಯಲ್ಲಿ ಬರೆದಿರುವ 'ಬಿಂಡಿಗನವಿಲೆ ವೆಂಕಟಾಚಾರ್ಯರು' ಎಂಬ ಲೇಖನದಲ್ಲಿ ಹೇಳಿದ್ದಾರೆ. ವೆಂಕಟಾಚಾರ್ಯರು ಬಿಂಡಿಗನವಿಲೆ ವೆಂಕಟಾಚಾರ್ಯರು ಎಂದೇ ಪ್ರಸಿದ್ಧರಾಗಿರುವುದರಿಂದ ಮತ್ತು ಮಂಡ್ಯಜಿಲ್ಲೆಯ ಲೇಖಕರನ್ನು ಕುರಿತು ಹೊರತಂದಿರುವ 'ಲೋಕಪಾವನಿ' ಮತ್ತು 'ಇಕ್ಷು ಕಾವೇರಿ' ಗ್ರಂಥಗಳಲ್ಲಿ ವೆಂಕಟಾಚಾರ್ಯರನ್ನು ಕುರಿತ ಲೇಖನಗಳಿರುವುದರಿಂದ ಜಿ. ವೆಂಕಟಯ್ಯನವರ ಮಾತಿಗೆ ಹೆಚ್ಚು ಪುಷ್ಟಿ ದೊರಕುತ್ತದೆ.

೬. ಜಿ. ವೆಂಕಟಯ್ಯ ; ಬಿಂಡಿಗನವಿಲೆ ವೆಂಕಟಾಚಾರ್ಯರು, ಲೋಕಪಾವನಿ, ಪು ೧೩೨-೧೩೫.

೭. ಜಿ. ವೆಂಕಟಸುಬ್ಬಯ್ಯ ; ಬಿ. ವೆಂಕಟಾಚಾರ್ಯರು, ಜೀವನ, ಸಂ. ೨೪, ಸಂ. ೨, ಪು ೪೫-೪೭.

೮. ಜಿ. ವೆಂಕಟಯ್ಯ ; ಬಿಂಡಿಗನವಿಲೆ ವೆಂಕಟಾಚಾರ್ಯರು, ಲೋಕಪಾವನಿ, ಪು ೧೩೨-೧೩೫.

೯. ಎನ್. ಪಂಕಜ, ಬಿ. ವೆಂಕಟಾಚಾರ್ಯ ಪು ೪೦-೪೧.

೧೦. ಅದೇ, ಪು ೪೦-೪೧.

೧೧. ವೆಂಕಟೇಶ ಸಾಂಗಲಿ ; ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ, ಪ್ರ. ಸಂ., ಪು ೧೬೧-೧೬೨.

೧೨. ಎಸ್. ಪಂಕಜ ; ಬಿ. ವೆಂಕಟಾಚಾರ್ಯ, ಪು ೩೩.

೧೩. ಅದೇ,

೧೪. ಬಿ. ವೆಂಕಟಾಚಾರ್ ; ಅಮೃತ ಪುಲಿನ, (ನಾ. ಮು.) ಪು ೯-೧೦.

೧೫. ಸದಾಶಿವ ಎಣ್ಣೆಹೊಳೆ ; ಗದ್ಯ ಲೇಖಕರು, ಲೋಕಪಾವನಿ, ಪು ೧೦೭-೮.

೧೬. ಜಿ. ವೆಂಕಟಸುಬ್ಬಯ್ಯ ; ಬಿ. ವೆಂಕಟಾಚಾರ್ಯರು, ಜೀವನ, ಸಂ. ೨೪, ಸಂ. ೨, ಪು ೪೫-೪೭.

೧೭. ಮ.ಗ. ಶೆಟ್ಟಿ ; ಕನ್ನಡ ಸಾಹಿತ್ಯದೊಡನೆ ಇತರ ಬಾರತೀಯ ಸಾಹಿತ್ಯಗಳ ಸಂಬಂಧ, ಚಿನ್ನದ ಬೆಳಸು, ಪು ೨೦೫-೬.

೧೮. ಜಿ. ವೆಂಕಟಸುಬ್ಬಯ್ಯ ; ಬಿ. ವೆಂಕಟಾಚಾರ್ಯರು, ಜೀವನ, ಸಂ. ೨೪, ಸಂ. ೨, ಪು ೪೫-೪೭.

೧೯. ಅದೇ,

೨೦. ಎ.ಆರ್. ಕೃಷ್ಣಶಾಸ್ತ್ರೀ ; ಬಂಕಿಮ ಚಂದ್ರ, ಪು ೧೧೬.

೨೧. ಎ.ಆರ್. ಕೃಷ್ಣಶಾಸ್ತ್ರೀ ; ವಿಷವೃಕ್ಷ, ಭಾಷಣಗಳು ಮತ್ತು ಲೇಖನಗಳು, ಪು ೩೨೪.

೨೨. ಸದಾಶಿವ ಎಣ್ಣೆಹೊಳೆ ; ಗದ್ಯ ಲೇಖಕರು, ಲೋಕಪಾವನಿ, ಪು ೧೦೭-೮.

೨೩. ಎ.ಆರ್. ಕೃಷ್ಣಶಾಸ್ತ್ರೀ ; ಕೃಷ್ಣಕಾಂತನ ಉಯಿಲು, ಭಾಷಣಗಳು ಮತ್ತು ಲೇಖನಗಳು, ಪು ೩೪೦.

೨೪. ಅದೇ, ಪು ೩೫೦.

೨೫. ಎ.ಆರ್. ಕೃಷ್ಣಶಾಸ್ತ್ರೀ ; ರಾಜಸಿಂಹ, ಬಂಕಿಮಚಂದ್ರ, ಪು ೨೧೭.

೨೬. ಅದೇ, ಪು ೨೩೩.

೨೭. ಬಿ. ವೆಂಕಟಾಚಾರ್ ; ಕಪಾಲಕುಂಡಲಾ, ಪು ೧೯.

೨೮. ಎ.ಆರ್. ಕೃಷ್ಣಶಾಸ್ತ್ರೀ ; ಕನ್ನಡ ಐತಿಹಾಸಿಕ ಕಾದಂಬರಿಗಳು, ಭಾಷಣಗಳು ಮತ್ತು ಲೇಖನಗಳು, ಪು ೨೩೬.

೨೯. ಜಿ. ವೆಂಕಟಯ್ಯ ; ಬಿಂಡಿಗನವಿಲೆ ವೆಂಕಟಾಚಾರ್ಯರು, ಲೋಕಪಾವನಿ, ಪು ೧೩೮.

೩೦. ಬಿ. ವೆಂಕಟಾಚಾರ್ಯ ; ದೇವೀಚೌಧುರಾಣಿ (ಮೂ.ಮು), ಪು ೧೭೧.

೩೧. ಬಿ. ವೆಂಕಟಾಚಾರ್ಯ ; ದುರ್ಗೇಶನಂದಿನಿ (ಎ.ಮು)

೩೨. ಎ.ಆರ್. ಕೃಷ್ಣಶಾಸ್ತ್ರೀ ; ಕನ್ನಡ ಐತಿಹಾಸಿಕ ಕಾದಂಬರಿಗಳು, ಭಾಷಣಗಳು ಮತ್ತು ಲೇಖನಗಳು, ಪು ೩೧೪.

೩೩. ಅದೇ, ಪು ೨೩೩-೩೫.

೩೪. ಎಲ್.ಎಸ್. ಶೇಷಗಿರಿರಾವ್ ; ಹೊಸಗನ್ನಡ ಸಾಹಿತ್ಯ, ಪು ೧೭-೧೮.

೩೫. ಎ.ಆರ್. ಕೃಷ್ಣಶಾಸ್ತ್ರೀ ; ಭಾಷಣಗಳು ಮತ್ತು ಲೇಖನಗಳು, ಪು ೩೧೪.

೩೬. ಅದೇ, ಪು ೩೫೦.

೩೭. ಜಿ. ವೆಂಕಟಸುಬ್ಬಯ್ಯ ; ವೆಂಕಟಾಚಾರ್ಯರು, ಜೀವನ ಸಂ. ೨೪, ಸಂ. ೨, ಪು ೪೫-೪೭.

೩೮. ಎ.ಆರ್. ಕೃಷ್ಣಶಾಸ್ತ್ರೀ ; ಭಾಷಣಗಳು ಮತ್ತು ಲೇಖನಗಳು, ಪು ೩೧೪.

೩೯. ಸದಶಿವ ಎಣ್ಣೆಹೊಳೆ ; ಗದ್ಯ ಲೇಖಕರು, ಲೋಕಪಾವನಿ, ಪು ೧೦೭-೮.

೪೦. ಜಿ. ವೆಂಕಟಯ್ಯ ; ಬಿಂಡಿಗನವಿಲೆ ವೆಂಕಟಾಚಾರ್ಯರು, ಲೋಕಪಾವನಿ, ಪು ೧೩೮-೧೪೦.

ಪರಾಮರ್ಶನ ಸಾಮಗ್ರಿ

೧. ಅ.ನ. ಕೃಷ್ಣರಾಯ ; ಸಜೀವ ಸಾಹಿತ್ಯ, ೧೯೬೫

೨. ಆರ್. ನರಸಿಂಹಾಚಾರ್ ; ಕರ್ಣಾಟಕ ಕವಿ ಚರಿತ್ರೆ, ಭಾಗ III, ೧೯೨೯

೩. ಜ್ಞಾನ ಗಂಗೋತ್ರಿ, ಕಿರಿಯರ ವಿಶ್ವಕೋಶ, ಸಂ. ೫., ೧೯೭೩

೪. ವೆಂಕಟೇಶ ಸಾಂಗಲಿ ; ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ, ಪ್ರ. ಸಂ., ೧೯೬೦

೫. ಎನ್. ಪಂಕಜ ; ಬಿ. ವೆಂಕಟಾಚಾರ್ಯ, ೧೯೭೮

೬. ಕೆ.ಡಿ. ಕುರ್ತುಕೋಟಿ (ಸಂ) ; ನಡೆದು ಬಂದ ದಾರಿ, ೧೯೬೦

೭. ಎಂ.ವಿ. ಸೀತಾರಾಮಯ್ಯ (ಸಂ) ; ಚಿನ್ನದ ಬೆಳಸು, ೧೯೭೦

೮. ಜಿ. ವೆಂಕಟಸುಬ್ಬಯ್ಯ ; ಬಿ. ವೆಂಕಟಾಚಾರ್ಯರು, ಜೀವನ, ಸಂ. ೨೪, ಸಂ. ೨.

೯. ಎಲ್.ಎಸ್. ಶೇಷಗಿರಿರಾವ್ ; ಹೊಸಗನ್ನಡ ಸಾಹಿತ್ಯ, ೧೯೭೫

೧೦. ಎ.ಆರ್. ಕೃಷ್ಣಶಾಸ್ತ್ರೀ ; ಭಾಷಣಗಳು ಮತ್ತು ಲೇಖನಗಳು, ೧೯೬೦

೧೧. ಎ.ಆರ್. ಕೃಷ್ಣಶಾಸ್ತ್ರೀ ; ಬಂಕಿಮ ಚಂದ್ರ, ೧೯೬೦

೧೨. ಅದೇ, ಲೋಕಪಾವನಿ, ೧೯೭೧

೧೩. ಅದೇ, ಇಕ್ಷು ಕಾವೇರಿ

❑

'ಕುವೆಂಪು' ಅವರ ಸಣ್ಣಕಥೆಗಳು

ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯಂತೆ 'ಕುವೆಂಪು' ಅವರು ಕೈಯಾಡಿಸದ ಸಾಹಿತ್ಯ ಕ್ಷೇತ್ರವಿಲ್ಲ. 'ಕುವೆಂಪು' ಅವರು ಸಣ್ಣಕಥೆಗಳನ್ನು ಬರೆದೇ ಇಲ್ಲವೇನೊ ಅನ್ನುವಷ್ಟರ ಮಟ್ಟಿಗೆ ಸಾಹಿತ್ಯದ ಇತರ ಕ್ಷೇತ್ರಗಳಲ್ಲಿ ಹೆಸರು ವಾಸಿಯಾಗಿದ್ದಾರೆ.

'ಕುವೆಂಪು' ಅವರು ವೃತ್ತಿಯಿಂದ ಕಥೆಗಾರರಲ್ಲ. ಆದರೂ ಕಥೆಗಳನ್ನು ಬರೆದಿದ್ದಾರೆ, ಏಕೆಂದರೆ ಒಂದು ಭಾಷೆಯಲ್ಲಿ ನವೋದಯ ಉಂಟಾದಾಗ, ಆ ಭಾಷೆಗೆ ಬಂದ ಸಾಹಿತ್ಯದ ಸರ್ವಪ್ರಕಾರಗಳಲ್ಲೂ ಮಹಾಕವಿಯಾದವನು ಅಥವಾ ಮಹಾಕವಿ ವ್ಯಕ್ತಿತ್ವವುಳ್ಳವನು ತನ್ನ ನಾಡು, ನುಡಿಯ ಸೇವೆಯನ್ನು ಮಾಡುತ್ತಾನೆ. ಹಾಗೆ ಮಾಡಿರುವವರಲ್ಲಿ 'ಕುವೆಂಪು' ಅವರೊಬ್ಬರು. ಅದಕ್ಕೆ ಸಾಕ್ಷಿಯಾಗಿ ಸಣ್ಣಕಥೆಗಳಿವೆ.

'ಕುವೆಂಪು' ಸಣ್ಣಕಥೆಗಳನ್ನು ಹೆಚ್ಚು ಹೆಚ್ಚಾಗಿ ಬರೆಯಲಿಲ್ಲ. ಅವರ ಕಥಾಸಂಕಲನ ಎರಡೇ ಎರಡು- 'ಸಂನ್ಯಾಸಿ ಮತ್ತು ಇತರ ಕಥೆಗಳು' ಮತ್ತು 'ನನ್ನ ದೇವರು ಮತ್ತು ಇತರ ಕಥೆಗಳು'. ಎರಡು ಕಥಾಸಂಕಲನಗಳಿಂದ ಒಟ್ಟು ಕಥೆಗಳ ಸಂಖ್ಯೆ ಹದಿನೇಳು. ಇವರು ಬರೆದ ಕಥೆಗಳು ಕೆಲವೇ ಆಗಿದ್ದರೂ ಶ್ರೇಷ್ಠ ತರಗತಿಯವಾಗಿರುವುದರಿಂದ, ಸಾಹಿತ್ಯದ ದೃಷ್ಟಿಯಿಂದ ಆ ಕೃತಿಗಳ ಬೆಲೆ ಮಹತ್ವದ್ದಾಗಿದೆ. 'ಕುವೆಂಪು' ಅವರು ಬರೆದಿರುವುದೆಲ್ಲಾ ಸರ್ವೋತ್ತಮ ತರಗತಿಯವೆಂಬ ಭ್ರಮೆ ನಮಗೇನೂ ಬೇಕಾಗಿಲ್ಲ. ಆದರೆ, ಅವರ ಕಥೆಗಳನ್ನು ಓದಿದ ಯಾರಿಗೇ ಆದರೂ ಸಾಮಾನ್ಯ ದರ್ಜೆಯ ಒಂದು ಕಥೆಯೂ ಅವರ ಕಥಾಸಂಕಲಗಳಲ್ಲಿಲ್ಲ ಎಂದು ಅನ್ನಿಸಿದರೆ ಆಶ್ಚರ್ಯಪಡಬೇಕಾಗಿಲ್ಲ. ಇದಕ್ಕೆ ಸಮರ್ಥನೆಯಾಗಿ The Indian P.E.N. ನಲ್ಲಿ ಬಂದಿರುವ ವಿಮರ್ಶಾ ನುಡಿಯನ್ನು ನೋಡಬಹುದು- "There arc only a few authour-as for as story writers in Kannada are concerned who can bring emotion and satire to their full bloom, even in their short stories, And amongst those who can, Mr. Puttappa occupies ad-mittedly a prominent place."

'ಕುವೆಂಪು' ಅವರ ಸಣ್ಣಕಥೆಗಳು ಕೆಲವೇ ಆದರೂ ವೈವಿಧ್ಯಮಯವಾಗಿವೆ. ಅವರ ಕಥೆಗಳೆಲ್ಲವನ್ನೂ ಪರಿಪೂರ್ಣ ದೃಷ್ಟಿಯಿಂದ ವಿಮರ್ಶಿಸುವುದು ಪ್ರಕೃತ ನನ್ನ ಲೇಖನದ ಉದ್ದೇಶವಲ್ಲ- ಈ ಪರಿಚಯಾತ್ಮಕ ಲೇಖನದಲ್ಲಿ ಅದು ಸಾಧ್ಯವೂ ಅಲ್ಲ. ಏಕೆಂದರೆ ಅವರ ಕಥೆಗಳಲ್ಲಿಯ ಬಾಷೆಯ ಸೊಗಸು, ಕಾವ್ಯಮಯತೆ, ಪ್ರಕೃತಿ ಚಿತ್ರಣ, ಸಾಮಾಜಿಕ ಪ್ರಜ್ಞೆ, ದರ್ಶನ ಇವುಗಳೊಂದೊಂದೂ ಸುದೀರ್ಘವಾದ ಪ್ರಬಂಧಕ್ಕೆ ವಸ್ತುಗಳು.

* * *

೧. 'ಈಶ್ವರನೂ ನಕ್ಕಿರಬೇಕು' ಹಾಸ್ಯ ಪ್ರಧಾನವಾದ ಆದರೆ ನಾವು ಯಾರಿಗೆ ಮೋಸಮಾಡಿದರೂ ವಿಶ್ವವ್ಯಾಪಿಯಾದ ಭಗವಂತನನ್ನು ಮೋಸಪಡಿಸಲಾರೆವು ಎಂಬ ತತ್ವ ನಿರೂಪಿಸುವ ಕಥೆ.

ನಾಗರಾಜನಿಗೆ ಹಿಂದೂ ಪತ್ರಿಕೆಯಲ್ಲಿ "ಸತ್ಕುಲ ಪ್ರಸೂತೆಯಾದ ಒಬ್ಬ ಹನ್ನೆರಡು ವರುಷದ ಬ್ರಾಹ್ಮಣ ಕನ್ಯೆಗೆ ತಿಂಗಳಿಗೆ ೫೦ ರೂಪಾಯಿಗೆ ಕಡಿಮೆಯಿಲ್ಲದೆ ಸಂಪಾದನೆ ಮಾಡುವ ವರನು ಬೇಕಾಗಿದೆ" ಎಂಬ ಜಾಹೀರಾತನ್ನು ನೋಡಿ ಅತ್ಯಾನಂದವಾಯಿತು. ಅತ್ಯಾನಂದವಾಗದೇನು ಮಾಡೀತು ಪಾಪ! ಸಣ್ಣದರಿಂದಲೂ ವಾರಾನ್ನ ಮಾಡಿ ಹೇಗೋ ಕಷ್ಟಪಟ್ಟು ರೆವಿನ್ಯೂ ಇಲಾಖೆಯಲ್ಲಿ ೬೦ ರೂಪಾಯಿಗೆ ಸಂಬಳಕ್ಕೆ ಸೇರಿದನು. ಆದರೂ ಯಾರೂ ಹೆಣ್ಣು ಕೊಟ್ಟಿರಲಿಲ್ಲ. ಯಾರು ತಾನೇ ಕುರೂಪಿಯಾದ, ಹರುಕು ಕಿವಿಯ ನಾಗರಾಜನಿಗೆ ಕಂಡೂ ಕಂಡೂ ತಮ್ಮ ಮಕ್ಕಳನ್ನು ಕೊಟ್ಟಾರು? ಆದ್ದರಿಂದಲೇ ಆ ಜಾಹೀರಾತನ್ನು ನೋಡಿ ನಾಗರಾಜನಿಗೆ ಅತ್ಯಾನಂದವಾದದ್ದು. ಆಮೇಲೆ ಅತ್ಯಮೂಲ್ಯವಾದ ಒಂದೊಂದು ಕ್ಷಣವನ್ನೂ ವ್ಯರ್ಥಮಾಡದೆ, ಅವರಿವರಲ್ಲಿ ಸಾಲಮಾಡಿ, ಒಂದು ತಸ್ವೀರು ತೆಗೆಸಿ, ಕಿವಿಯ ಊನ ಕಾಣದ ಹಾಗೆ "Golden touch" ಮಾಡಿಸಿ ತನ್ನ ವಯಸ್ಸನ್ನು ೩೦ ರಿಂದ ೨೫ಕ್ಕೆ ಇಳಿಸಿ, ತನ್ನ ಸಕಲ ಅರ್ಹತೆಗಳನ್ನೂ ನಮೂದಿಸಿ ಧಾರವಾಡದ ಶಾಂತರಾಯರಿಗೆ ಕಾಗದ ಬರೆದನು.

ಶಾಂತರಾಯರೇನೂ ಲಲಿತಮ್ಮನ ಮದುವೆಗೆ ಪ್ರಯತ್ನ ಮಾಡಬೇಕಾಗಿರಲಿಲ್ಲ. ಏಕೆಂದರೆ ಅವಳು ಅವರ ಹತ್ತಿರದ ಸಂಬಂಧವೇನೂ ಅಲ್ಲ. ಲಲಿತಮ್ಮನ ಮದುವೆಗೆ ಪ್ರಯತ್ನ ಮಾಡಿದ್ದು ಶಾಂತರಾಯರ ಔದಾರ್ಯ.

ಅಂತೂ ಮದವೆಯಾಯಿತು. ನಾಗರಾಜನಿಗೆ ತನ್ನ ಮೋಸಕ್ಕೆ ಎಲ್ಲರೂ ಒಳಗಾದರಲ್ಲ ಎಂದು ಒಳಗೊಳಗೇ ನಗು. ಲಲಿತಮ್ಮನಿಗಾದರೋ ಒಳಗೊಳಗೇ ಯಾತನೆ! ಏಕೆ? ಏಕೆಂದರೆ, "ಆಕೆಯ ಎಡಗೈ ಬಹಳ ಮೋಟಾಗಿ ಡೊಂಕಾಗಿ

ದೇಹಕ್ಕೊಂದು ಕೆಲಸಕ್ಕೆ ಬಾರದ ಕೊಂಬೆಯಾಗಿತ್ತು. ಹೆಸರು ಲಲಿತಮ್ಮನಾದರೂ ರೂಪ ಅಷ್ಟೇನೂ ಲಲಿತವಾಗಿರಲಿಲ್ಲ"

ನಿಜಾಂಶ ಇಬ್ಬರಿಗೂ ತಿಳಿಯಿತು. ತಿಳಿದಿದ್ದರಿಂದ ಅನಾಹುತವೇನೂ ಆಗಲಿಲ್ಲ. ಏಕೆ ಆದೀತು? "ಅನುರಾಗ ಅಂಕುರಿಸಿತೆಂದರೆ ಕೋಡಗ ಕೂಡ ಕಣ್ಣಿನ ಮುದ್ದಾಗುವುದೇನೂ ಆಶ್ಚರ್ಯವಲ್ಲ."

ನಾಗರಾಜನ ಒಳಸಂಚಿಗೆ ವಿಧಿ ಸರಿಯಾಗಿ ಮತ್ತೊಂದು ಒಳಸಂಚು ಹೂಡಿತು. ಮೋಟುಗೈ ಹೆಣ್ಣನ್ನು ಗಂಟು ಹಾಕಿತು. ಮೋಸಕ್ಕೆ ಪ್ರತಿಮೋಸ. ಇದೇ ಅಲ್ಲವೆ ವಿಧಿ ವಿಲಾಸ! ಕೊನೆಗೆ ತಮ್ಮ ತಮ್ಮ ಹಂಚಿಕೆಗೆ ತಮಗೇ ನಗು! ಈ ಕವಲ ಆಟ ಕುಡು ಆಡಿದ ಇವರೇ ಹೀಗೆ ನಕ್ಕರೆ ಇವರ ಆದ್ಯಂತವೆಲ್ಲವನ್ನೂ ಬಲ್ಲ, ಇವರನ್ನು ಪಾತ್ರಧಾರಿಗಳನ್ನಾಗಿ ಆಡಿಸಿದ ಆ ಸೂತ್ರಧಾರ ಇನ್ನೆಷ್ಟು ನಗಬೇಡ! ಎಲ್ಲ ನಕ್ಕರು. ಆದರೆ ಈಶ್ವರನ ನಗೆಯ ಅರ್ಥವೇ ಬೇರೆ.

ಈ ಕಥೆ ಹಿಂದಿಗೆ ಭಾಷಾಂತರವಾಗಿದೆ. ಜಾನಪದ ಗೀತೆಗಳಂತೆಯೇ ಜನಮನದ ಹೃದಯದಲ್ಲಿ ಮನೆ ಮಾಡಿ ಇಂದಿನವರೆಗೂ ಹರಿದುಬಂದಿರುವ ಜಾನಪದ ಕಥೆಗಳಲ್ಲಿ ಇದೂ ಒಂದು. ಈ ಕಥೆಯನ್ನು ಅಲ್ಪಸ್ವಲ್ಪ ಬದಲಾವಣೆ ಮಾಡಿ ಆಧುನಿಕ ಸಣ್ಣಕಥೆಯ ತಂತ್ರದಿಂದ ಸೊಗಸಾಗಿ ಚಿತ್ರಿಸಿದ್ದಾರೆ.

೨. "ಹೋಳಿಗೆ ಪ್ರತಿಜ್ಞೆ"ಯಲ್ಲಿ ಕಥೆಗಾರರ ಗೆಳೆಯರು ಎಂಟು ವರ್ಷದವರಿದ್ದಾಗ, ಪಾಠಶಾಲೆಯಲ್ಲಿ ಸಿದ್ದುವಿನ ಜೇಬಿಗೆ ಎಂಜಲು ಹೋಳಿಗೆಯನ್ನು ಹಾಕಿ, ಅದಕ್ಕಾಗಿ ಮೇಷ್ಟರು ಗುಂಡಪ್ಪನವರಿಂದ ದ್ವಾದಶಪೂಜೆಯನ್ನು ಹೊಂದಿ, ಇನ್ನು ಮುಂದೆ ಹೋಳಿಗೆಯನ್ನು ತಿನ್ನುವುದಿಲ್ಲವೆಂದು ಪ್ರತಿಜ್ಞೆ ಮಾಡಿದಂತೆ. ಈ ವಿಷಯವನ್ನು ಅವರು ಕಥೆಗಾರರಿಗೆ ಹೇಳಿದಾಗ ಎಪ್ಪತ್ತೈದು ವರ್ಷ. ಈ ಅಂತರದಲ್ಲಿ ಅವರ ಪ್ರತಿಜ್ಞೆಗೆ ಭಂಗ ಬಂದಿಲ್ಲ. ಈ ವಿಷಯದಲ್ಲಿ ಕಥೆಗಾರರಿಗೆ ಯಾವ ಮಹತ್ವವೂ ಕಾಣಿಸುವುದಿಲ್ಲ.

ಆದರೆ ಈ ವಿಚಾರದಲ್ಲಿ ಗೆಳೆಯರು ಹೇಳಿದ ಮಾತುಗಳನ್ನು ಕೇಳಿದ ಮೇಲೆ ಅವರ ಅಭಿಪ್ರಾಯವೇ ಬದಲಾಯಿಸುತ್ತದೆ. "ಹೋಳಿಗೆ ತಿನ್ನುವುದು ಬಿಡುವುದರಲ್ಲಿ ಯಾವ ಮಹತ್ವವೂ ಇಲ್ಲ. ಆದರೆ ಇಂದಿನವರೆಗೆ ಪ್ರತಿಜ್ಞೆಯನ್ನು ಪರಿಪಾಲಿಸಿರು-ವೆನೆಂಬ ಮನೋಭಾವವು ನನ್ನ ಧರ್ಮಬುದ್ಧಿಗೆ ಬಲಕಾರಿಯಾಗಿರುತ್ತದೆ! ದೊಡ್ಡ ಮನಸ್ಸಿನಿಂದ ಮಾಡಿದ ಸಣ್ಣ ಕಾರ್ಯಗಳು ಸಣ್ಣ ಮನಸ್ಸಿನಿಂದ ಮಾಡಿದ ದೊಡ್ಡ ಕಾರ್ಯಗಳಿಗಿಂತಲೂ ಎಷ್ಟೋ ಶ್ರೇಷ್ಠವಾದವುಗಳೆಂದು ನನ್ನ ನಿಶ್ಚಲವಾದ ಅಭಿಪ್ರಾಯ.

ಮಹಿಮೆ ಕಾರ್‍ಯಗಳಲ್ಲಿಲ್ಲ; ಕಾರ್ಯ ಮಾಡಿಸುವ ಚಿತ್ತವೃತ್ತಿಯಲ್ಲಿದೆ". ಎಂಬ ಗೆಳೆಯರ ಮಾತನ್ನು ಕೇಳಿದ ಕಥೆಗಾರರಿಗೆ ಅವರ ಗೆಳೆಯರ ಬಗ್ಗೆ ಗೌರವ ಭಾವನೆ ಮೂಡುತ್ತದೆ.

ಈಗ್ಗೆ ೪೦-೫೦ ವರ್ಷಗಳ ಕೆಳಗೆ ಬಹಳವಾಗಿದ್ದ ಬ್ರಾಹ್ಮಣ ಶೂದ್ರರ ಸಾಮಾಜಿಕ ಸಂಬಂಧವನ್ನು ಬಹಳ ಸೂಕ್ಷ್ಮವಾಗಿ 'ಕುವೆಂಪು'ರವರು ಚಿತ್ರಿಸಿದ್ದಾರೆ. ಈಗ ಅದು ಅಷ್ಟಾಗಿ ಕಾಣಿಸುತ್ತಿಲ್ಲವಾದರೂ ಅಲ್ಲಲ್ಲಿ ಅದರ ಅವಶೇಷಗಳನ್ನು ಕಾಣಬಹುದು.

ಕಥೆಯ ಪ್ರಾರಂಭದಲ್ಲಿ ಬರುವ "ಎಲ್ಲರೂ ಊಟ ಮಾಡಬಹುದು" ಎಂಬ ಸಂಪ್ರದಾಯದ ಅಪ್ಪಣೆಯ ವಿಚಾರದಲ್ಲಿ ಕಥೆಗಾರರ ಟೀಕೆ ಕಥಾ ದೃಷ್ಟಿಯಿಂದ ಅನಾವಶ್ಯಕ.

೩. "ಗಂಟು ಅಥವಾ ಗುಪ್ತಧನ"ದಲ್ಲಿ ಕಥೆಗಾರರು ಮೂಢನಂಬಿಕೆಗಳ ವಿಚಾರವಾಗಿ ಬರೆದಿದ್ದಾರೆ.

ಮೊಸೂರೂರ ಮಂಜಣ್ಣ ಒಬ್ಬ ಜಮೀನುದಾರರ ಒಕ್ಕಲು, ಅವನಿಗೆ ಇದ್ದಕ್ಕಿದ್ದಂತೆ ಶ್ರೀಮಂತನಾಗುವ ಹುಚ್ಚು ಹಿಡಿಯಿತು. "ಕಾಸಿಗೆ ಕಾಸು ಗಂಟು ಹಾಕಿ, ಹೊಟ್ಟೆಗೆ ಬೆನ್ನು ಅಂಟುಹಾಕಿ" ಮಂಜಣ್ಣನು ಮೊಸರೂರು ಮಂಜಣ್ಣ ಗೌಡರಾದನು.

ಹೀಗಿರಲು ಒಂದು ದಿನ ಮಂಜಣ್ಣ ತನ್ನ ತೋಟದಲ್ಲಿ ಸಂಚರಿಸುತ್ತಿದ್ದಾಗ ಒಂದು ಹಲಸಿನ ಮರದಲ್ಲಿ ಕೈ ಮೂಡಿದ್ದನ್ನು ಕಂಡನು. ಗುಟ್ಟನ್ನು ಯಾರಿಗೂ ಹೇಳದೆ ತಾನೊಬ್ಬನೇ ಗಂಟು ಕೀಳಬೇಕೆಂದು ನಿಶ್ಚಯಿಸಿದನು. ಆದರೆ ಮಂಜಣ್ಣನಿಗೆ ಐಶ್ವರ್ಯದಲ್ಲಿ ಆಸೆಯಿದ್ದುದಕ್ಕಿಂತಲೂ ಹೆಚ್ಚಾಗಿ ಭೂತ ಪಿಶಾಚಿಗಳಲ್ಲಿ ನಂಬಿಕೆಯೂ ಭಯವೂ ಇದ್ದುವು. ಆದ್ದರಿಂದ ಸರಿಯಾದ ಮಂತ್ರವಾದಿಯ ಆಗಮನಕ್ಕಾಗಿ ಕಾದಿದ್ದನು. ಕೊನೆಗೆ ಅಂತಹ ಮಂತ್ರವಾದಿಯೊಬ್ಬನು ಮಂಜಣ್ಣನಿಗೆ ಸಿಕ್ಕಿದನು.

ಇಬ್ಬರೂ ಅಮಾವಾಸ್ಯೆಯ ರಾತ್ರಿ ಹಲಸಿನ ಮರದ ಹತ್ತಿರ ಹೋಗಿ ಗಂಟನ್ನು ಕೀಳುವುದಕ್ಕೆ ಮತ್ತೊಂದು ದಿನವನ್ನು ಗೊತ್ತುಮಾಡಿಕೊಂಡು ಬಂದರು. ಈ ಮಧ್ಯೆ ಮಂತ್ರವಾದಿ ಕೊಪ್ಪಕ್ಕೆ ಹೋಗಿಬಂದ.

ಗಂಟನ್ನು ಅಗೆಯುವ ದಿವಸವೂ ಬಂದಿತು. ಮಂಜಣ್ಣ ಸುರಾಪಾನದಿಂದ ಮತ್ತನಾಗಿ ನಿದ್ರಿಸುತ್ತಿದ್ದಾಗ ಮಂತ್ರವಾದಿ ಗಂಟನ್ನು ಕಿತ್ತು ಅದು ಮಂಜಣ್ಣನಿಗೆ ದಕ್ಕಬೇಕಾದರೆ ಒಂದು ತಿಂಗಳು ಸಿಕ್ಕಿದ ಕೊಡಕ್ಕೆ ಪೂಜೆ ನಡೆಯಬೇಕೆಂದು ಹೇಳಿದನು. ಹಣಕ್ಕಾಗಿ ಹೆಣದಂತೆ ಬಾಯಿಬಿಡುತ್ತಿದ್ದ ಮಂಜಣ್ಣ ಮನೆಯಲ್ಲಿ ಒಂದು ಪ್ರತ್ಯೇಕವಾದ ಕೊಠಡಿಯನ್ನು ಕೊಟ್ಟು ಪೂಜೆಗೆ ತನ್ನ ಮನೆಯಲ್ಲಿದ್ದ ಒಡವೆಗಳನ್ನೂ ಪರರ

ಮನೆಯವನ್ನೂ ತಂದು ಮಂತ್ರವಾದಿಗೆ ಕೊಟ್ಟನು. ಇಷ್ಟಾದರೂ ಮಂಜಣ್ಣ ಗಂಟು ಕಿತ್ತ ಗುಟ್ಟನ್ನು ಯಾರಿಗೂ ಹೇಳಲಿಲ್ಲ. ಹದಿನೈದು ಇಪ್ಪತ್ತು ದಿನಗಳಾದ ಮೇಲೆ ಒಂದು ಪ್ರಾತಃಕಾಲ ಇದ್ದಕ್ಕಿದ್ದ ಹಾಗೆ ಮಂಜಣ್ಣನ ಮನೆಯಿಂದ ರೋದನದ ಬೊಬ್ಬೆ ಕೇಳಿಸಿತು. ನೆರೆಯವರು ಗಾಬರಿಗೊಂಡು ಓಡಿಹೋಗಿ ನೋಡಲು ಮಂಜಣ್ಣನೂ ಅವನ ಹೆಂಡತಿಯೂ ಬಾಯಿ ಬಾಯಿ ಎದೆ ಎದೆ ಬಡಿದುಗೊಂಡು ಗಟ್ಟಿಯಾಗಿ ಗೋಳಿಡುತ್ತಿದ್ದರು. ನೆಲದ ಮೇಲೆ ಬಾಯಿ ತೆರೆದು ಕಲ್ಲು ಮಣ್ಣು ತುಂಬಿದ ಕೊಡವೊಂದು ಬಿದ್ದಿತ್ತು. ಬೈರಾಗಿ ಅಲ್ಲಿರಲಿಲ್ಲ. ಇಷ್ಟಕ್ಕೇ ಕಥೆಯನ್ನು ಮುಕ್ತಾಯ ಮಾಡಿದ್ದರೆ ಸೊಗಸಾಗಿರುತ್ತಿತ್ತು.

ಕಥೆಗೆ ಪೋಷಕವಲ್ಲದ ಹಲವಾರು ವಿಷಯಗಳು ಇಲ್ಲಿ ಬಂದಿವೆ. ಇದೊಂದು ಕುಂದನ್ನು ಬಿಟ್ಟರೆ ಈ ಕಥೆ ಮೂಢನಂಬಿಕೆಯ ಒಂದು ನೈಜ ಕಥೆಯಾಗಿದೆ.

೪. "ಕ್ರಿಸ್ತನಲ್ಲ ಪಾದ್ರಿಯ ಮಗಳು" ಕಥೆಗೆ ಕಥಾ ದೃಷ್ಟಿಯಿಂದಲೂ ಅಲ್ಲದೆ ಅದು ಬರೆದ ಕಾಲದ ದೃಷ್ಟಿಯಿಂದಲೂ ಬೆಲೆ ಕೊಡಬೇಕಾಗಿದೆ. ಮತಾಂತರ -ಗೊಳಿಸುವುದಕ್ಕಾಗಿ ಕ್ರಿಸ್ತಮತ ಪ್ರಚಾರಕರು ಅನುಸರಿಸುತ್ತಿದ್ದ ಹೀನ -ಮಾರ್ಗವನ್ನು ಇಲ್ಲಿ ಕಥೆಗಾರರು ಬಯಲಿಗೆಳೆದಿದ್ದಾರೆ. ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ ಇಂತಹ ಕಥೆಗಳನ್ನು ಬರೆದಿರುವುದು ಸಾಹಸದ ಮಾತೇ ಸರಿ.

ಇಲ್ಲಿ ಯಾರು ಕ್ರೈಸ್ತ ಪಾದ್ರಿಗಳನ್ನು ನಿಂದಿಸಿ, ಎದುರಿಸಿ ಮಾತನಾಡುತ್ತಿದ್ದನೋ ಅವನೇ ಅವರ ಕುತಂತ್ರಕ್ಕೆ ಈಡಾದ ವಿಚಾರ ನಮ್ಮ ಕರುಳನ್ನು ಹಿಂಡುತ್ತದೆ.

ಎರಡು ಜನ್ಮಗಳದರಷ್ಟು ಅಜಗಜಾಂತರವಿರುವ ಯೋಗಿನ್ನನ ವಿದ್ಯಾರ್ಥಿ ದೆಸೆಯ ಊರ್ಧ್ವ ಮುಖದ ಚಿತ್ರವನ್ನೂ ಅದರ ಮುಂದಣ ದೆಸೆಯ ಅಧೋ ಮುಖದ ಚಿತ್ರವನ್ನೂ ಕಥೆಗಾರರು ಮಾರ್ಮಿಕವಾಗಿ ಕೊಟ್ಟಿದ್ದಾರೆ. ಒಂದು ಚಿತ್ರವನ್ನು ಇನ್ನೊಂದು ಚಿತ್ರದೊಡನೆ ಹೋಲಿಸಿದಾಗ ಕರುಳು ಹಿಂಡಿದಂತಾಗುತ್ತದೆ. ತನ್ನ ಕಾಗದವನ್ನು ಆತ್ಮ ಕಥೆಯ ರೀತಿಯಲ್ಲಿ, ತನ್ನ ಬೀಳು ಗತಿಯನ್ನು ತಾನೇ ವರ್ಣಿಸಿಕೊಳ್ಳುವಂತೆ ಕಥೆಯನ್ನು ವರ್ಣಿಸಿರುವುದು, ವಾಚಕರಿಂದ ನಿಟ್ಟುಸಿರಿನ ಕಾಣಿಕೆಯನ್ನು ಸೆಳೆಯುತ್ತದೆ. ಮುಳುಗುತ್ತಿರುವ ಸೂರ್ಯನನ್ನು ನೋಡಿ ಗೆಳೆಯನ ಆತ್ಮ ವಿನಾಶದ ನೆನಪು ಮರುಕಳಿಸಿತೆಂದು ಹೇಳುತ್ತಾ ಮುಂದೆ ಎರಡು ಮಾತಿನಲ್ಲಿ ಮುಗಿಯುವ ಮುಕ್ತಾಯ ತುಂಬ ಮಾರ್ಮಿಕ! ಈ ಕಥೆಗೆ ಇಟ್ಟಿರುವ ಹೆಸರು ಅನ್ವರ್ಥವಾಗಿದೆ.

೫. ಲಕ್ಷಾಧಿಕಾರಿ ಭಿಕ್ಷಾಧಿಕಾರಿಯಾಗಿ ಮರಳಿ ಲಕ್ಷಾಧಿಕಾರಿಯಾದ ಕಥಾವಸ್ತುವಿನ ಹೆಸರು "ಆರಾಣೆ ಮೂರು ಕಾಸು." ಕಥೆಯ ನಾಮಕರಣದ ನವ ವಿಧಾನವೇ ಓದುಗರ ಕುತೂಹಲವನ್ನು ಕೆರಳಿಸುತ್ತದೆ.

ಈ ಕಥೆ ನಡೆದದ್ದು ಸಿಪಾಯಿದಂಗೆ ಕಾಲದಲ್ಲಿ. ಈಸ್ಟ್ ಇಂಡಿಯಾ ಸರ್ಕಾರ ಹೋಗಿ ಬ್ರಿಟಿಷ್ ಸರ್ಕಾರ ಬಂದಾಗ. ಆ ಸರ್ಕಾರದವರು ಸರಕಾರಿ ಕಟ್ಟಡಕ್ಕೋಸ್ಕರ ಕರ್ನೂಲಿನ ನವಾಬನಿಂದ ಸ್ವಲ್ಪ ಜಮೀನನ್ನು ಹದಿನೈದು ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿ ಅದರ ಪತ್ರವನ್ನು ಸಿದ್ಧಮಾಡಿಕೊಡುವಂತೆ ಕರ್ನೂಲಿನ ಲಾಯರೊಬ್ಬರಿಗೆ ಆ ಜವಾಬ್ದಾರಿಯನ್ನು ವಹಿಸಿದರು. "ರೋಗಿ ಬಯಸಿದ್ದೂ ಹಾಲು ಅನ್ನ ವೈದ್ಯ ಹೇಳಿದ್ದೂ ಹಾಲೂ ಅನ್ನ"ವೆಂಬಂತಾಯಿತು ಆ ಲಾಯರ ಪಾಲಿಗೆ! ಏಕೆಂದರೆ ಅದೇ ಸ್ಥಳವನ್ನು ನವಾಬನಿಂದ ಕೇವಲ ಎರಡು ಮೂರು ಸಾವಿರಕ್ಕೆ ಹೊಡಯಬೇಕೆಂದು ಯೋಚಿಸಿದ್ದ ಆ ಲಾಯರ್ ಮಹಾಶಯ. ಅದು ನೆರವೇರಿರಲಿಲ್ಲ. ಆ ಕೇಸಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ನೋಡುವಾಗ ಆಗಿನ ನವಾಬನು ಹಿಂದಿನ ನವಾಬನ ಧರ್ಮಪತ್ನಿಯ ಮಗನಲ್ಲವೆಂದು ತಿಳಿದನು. ಆ ಲಾಯರೋ 'ತನ್ನ ಒಂದು ಕಣ್ಣು ಹೋದರೂ ಚಿಂತೆಯಿಲ್ಲ ತನ್ನ ಶತ್ರುವಿನ ಎರಡು ಕಣ್ಣುಗಳೂ ಹೋಗಲಿ' ಎಂಬ ಜಾತೀಗೆ ಸೇರಿದವನು. ಆದ್ದರಿಂದಲೇ ಆ ವಿಷಯವನ್ನು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿದನು. ಅವರಿಗೆ ಬೇಕಾಗಿದ್ದದ್ದೂ ಅದೇ. ತೋಳ ಕುರಿಮರಿಯ ನ್ಯಾಯದಂತೆ ನವಾಬನ ಆಸ್ತಿಯನ್ನೆಲ್ಲಾ ಬ್ರಿಟಿಷ್ ಸರ್ಕಾರ ಮಟ್ಟಗೋಲು ಹಾಕಿಕೊಂಡಿತು. ಲಕ್ಷಾಧಿಕಾರಿ ಕಣ್ಣುಮುಚ್ಚಿ ತೆರೆಯುವುದರೊಳಗೆ ಭಿಕ್ಷಾಧಿಕಾರಿ -ಯಾದನು. ಅವನ ಸುತ್ತ ಮುತ್ತ ಇರುತ್ತಿದ್ದ ಪರಿವಾರವೂ ಬಿಸಿಲು ಸೋಕಿದ ಮಂಜಿನಂತೆ ಕರಗಿಹೋಯಿತು. ಕಬ್ಬಿಣದ ಅಂಗಡಿಯಲ್ಲಿ ನೊಣಗಳಿಗೇನು ಕೆಲಸ!

ಈ ಸಮಯದಲ್ಲೇ ಮಾಧವರಾಯರು ಕರ್ನೂಲಿಗೆ ಹೋದದ್ದು. ನವಾಬ ಕೇಳದಿದ್ದರೂ ಆತನು ಪ್ರೀವಿ ಕೌನ್ಸಿಲಿಗೆ ಹೋಗಲು ಎಂಟನೂರ ಐವತ್ತು ರೂಪಾಯಿಗಳನ್ನು ಕೊಟ್ಟರು.

ಪುನಃ ನವಾಬ ಮತ್ತು ಮಾಧವರಾಯರ ಭೇಟಿಯಾಗುವುದು ಗುಂತಕಲ್ಲಿನ ರೈಲ್ವೆ ಸ್ಟೇಷನ್ನಿನಲ್ಲಿ. ಅಲ್ಲಿ ಮಾಧವರಾಯರು ನವಾಬನಿಗೆ ಊಟಕ್ಕೆ ಆರು ಆಣೆಯನ್ನೂ ಅವನ ಮಕ್ಕಳ ತಿಂಡಿಗಾಗಿ ಮೂರು ಕಾಸನ್ನೂ ಕೊಟ್ಟರು.

ಮಾಧವರಾಯರು ತಾವು ಧರ್ಮಿಷ್ಠರಲ್ಲ, ಮೃದುಸ್ವಭಾವದವರಲ್ಲ, ಪರಾರ್ಥಿಗಳಲ್ಲ, ತಾವು ನವಾಬನಿಗೆ ಊಟ ಹಾಕಿಸಿದ್ದು ಹೆಮ್ಮೆಗಾಗಿ, ಅವನಿಗೆ ಮೂರು ಕಾಸು ಕೊಟ್ಟದ್ದು ಅವನು ತೊಲಗಲಿ ಎಂದು ಮುಂತಾಗಿ ಹೇಳಿಕೊಂಡಿದ್ದಾರೆ. ಅವರು ಯಾವ ಭಾವನೆಯಿಂದಲಾದರೂ ಸಹಾಯ ಮಾಡಿರಲಿ ಅಂತಹ ಸಹಾಯಗಳಿಗೂ ವಿಘ್ನ ತಂದೊಡ್ಡುವವರು ಇದ್ದಾರಲ್ಲಾ ಎಂಬುದೇ ಖೇದಪಡಬೇಕಾದ ಸಂಗತಿ. ಇಂತಹ ಹೆಮ್ಮೆ, ಇಂತಹ ಔದಾರ್ಯ ಎಷ್ಟಿದ್ದರೂ ಏನೂ ಕೆಡುಕಲ್ಲ.

ಕೊನೆಗೆ ಸತ್ಯಕ್ಕೆ ಜಯವೆಂಬಂತೆ ನವಾಬನಿಗೆ ಪ್ರೀವೀ ಕೌನ್ಸಿಲ್‌ನಲ್ಲಿ ಜಯವಾಗುತ್ತದೆ. ತಕ್ಷಣವೇ ಮಾಧವರಾಯರ ಹಿತೈಷಿಗಳು ನವಾಬನ ಮೇಲೆ ಕೇಸು ಮಾಡುವಂತೆ ಸಲಹೆ ಮಾಡುತ್ತಾರೆ. ಎಲ್ಲಿರುತ್ತಾರೋ ಈ ಹಿತೈಷಿಗಳು ಇಂತಹ ಸಂದರ್ಭಗಳು ಒದಗಿದರೆ ಸಾಕು 'ಉಬ್ಬೆ ಮಳೆಯಲ್ಲಿ ಹುಟ್ಟುವ ಅಣಬೆಗಳಂತೆ' ಹುಟ್ಟಿಕೊಳ್ಳುತ್ತಾರೆ. ಇಂತಹ ವ್ಯಕ್ತಿಗಳಿಲ್ಲದಿದ್ದರೆ ಜೀವನ ನೀರಸವಾಗಿ ಬಿಡುತ್ತಿತ್ತೋ ಏನೋ?

ನವಾಬ ಎಂಟನೂರ ಐವತ್ತು ರೂಪಾಯಿ, ಆರು ಆಣೆ ಮೂರುಕಾಸನ್ನು ಹಿಂತಿರುಗಿಸಿದ್ದಲ್ಲದೆ ಇವರ ತಾತನವರ ಹತ್ತಿರ ಮಾಡಿದ ಸಾಲಕ್ಕೆ ಸಿಕ್ಕ ಪತ್ರಗಳ ಆಧಾರದಿಂದ ತಾನೇ ಹನ್ನೆರಡು ಸಾವಿರ ಕೊಡಲು ಒಪ್ಪುತ್ತಾನೆ.

ಕಥೆ ಓದಿದ ಮೇಲೆ ಕಥೆಗಾರರೇ ಹೇಳುವಂತೆ "ನಮಗೆ ಮಾಧವರಾಯರನ್ನು ಹೊಗಳಬೇಕೋ ನವಾಬನನ್ನು ಹೊಗಳಬೇಕೋ ಗೊತ್ತಾಗಲಿಲ್ಲ" ಎನ್ನಿಸುತ್ತದೆ. ಮಾಧವರಾಯರ ದಾಕ್ಷಿಣ್ಯವೋ, ಪ್ರತಿಷ್ಠೆಯೋ, ಸ್ವಾರ್ಥವೋ ಹಣ ಕೊಟ್ಟರಲ್ಲ! ಇವರು ಆ ಕಾಲಕ್ಕೆ ಕೊಡದಿದ್ದರೆ ಅವನು ಗೆಲ್ಲುವುದುಂಟೆ? ಇವರ ಔದಾರ್ಯ ದೊಡ್ಡದು. ನವಾಬ ಅದನ್ನು ಆ ಆರಾಣೆ ಮೂರುಕಾಸಿನೊಡನೆ ಹಿಂತಿರುಗಿಸಿದನಲ್ಲ! ಜೊತೆಗೆ ಹಿಂದಣ ಹನ್ನೆರಡು ಸಾವಿರವನ್ನೂ ಕೊಡುವನಲ್ಲ! ಇವನ ಪ್ರಾಮಾಣಿಕ -ತನವೂ ದೊಡ್ಡದೇ. ಅದು ಎಂಟನೂರ ಐವತ್ತು ರೂಪಾಯಿ ಆದರೆ ಇದು ಆರಾಣೆ ಮೂರು ಕಾಸು. ಇದು ಆರಾಣೆ ಮೂರುಕಾಸಾದರೆ ಅದು ಎಂಟನೂರು ಐವತ್ತು ರೂಪಾಯಿ. ಎಂತಹ ಸೋಜಿಗ ಇದು!

೬. ಮತದ ಹೆಸರಿನಲ್ಲಿ, ಸಂಪ್ರದಾಯದ ಹೆಸರಿನಲ್ಲಿ ಸ್ವಾರ್ಥಸಾಧಕರು ಸೋಗುವೇಶವನ್ನು ಧರಿಸಿ ತಮ್ಮ ಸ್ವಾರ್ಥ ಸಾಧನೆಯನ್ನು ಸಾಧಿಸಿಯೂ ತಮಗಿನ್ನ ನೈತಿಕವಾಗಿ ನೂರುಪಾಲು ಉತ್ತಮರಾಗಿರುವ ಮುಗ್ಧಜನರಿಂದ ಮೇಲಿರುವಂತೆ ವರ್ತಿಸುವ ಜನಗಳನ್ನು ಕುರಿತು ಬರೆದ ವಿಡಂಬನಾತ್ಮಕ ಕಥೆಯೇ "ವೈರಾಗ್ಯದ ಮಹಾತ್ಮೆ" ಅಥವಾ "ಅಟ್ಟಿದರೆ ಓಡುತ್ತದೆ ; ಬಿಟ್ಟರೆ ಹಿಂಬಾಲಿಸುತ್ತದೆ."

ವೈಷ್ಣವ ಬೈರಾಗಿ ಬೈರಾಗಿಣಿಯರು ಆಚರಿಸುವ ಮಧುರಭಾವ ಸಾಧನೆಯ ಆದರ್ಶ ಒಳ್ಳೆಯದೇ. ಆದರೆ ಅದರ ಫಲಿತಾಂಶ ಸೋಗಿನವೇಶದ ಜನರ ಸ್ವಾರ್ಥ ಸಾಧನೆ. ಅದಕ್ಕೆ ಉದಾಹರಣೆಯಾಗಿ ರಾಯಚರಣ ಮತ್ತು ಕೇನರಾಮ ಗೋಸ್ವಾಮಿಯ ನಾಲ್ಕನೆಯ ಚಿಕ್ಕ ವಯಸ್ಸಿನ ವಿಧವೆ ಹೆಂಡತಿಯರ ಪ್ರಸಂಗವನ್ನು ನೋಡಬಹುದು.

ಕಥೆಯ ಮುಕ್ತಾಯ ಸೊಗಸಾಗಿ ಬಂದಿದೆ. ಎಲ್ಲ ಕಥೆಗಳಲ್ಲಿಯ ಶೈಲಿಯಂತೆ ಈ ಕಥೆಯ ಶೈಲಿಯೂ ಕಾವ್ಯಮಯವಾಗಿದೆ.

೭. ತೀವ್ರ ವೈರಾಗಿಯಾಗಿದ್ದ ರಮೇಶ-ಚೈತನ್ಯ ಪುನಃ ಸಂಸಾರಿಯದದ್ದು ಸರಿಯೆ? ಸಂಸಾರದ ನಿತ್ಯಾನಿತ್ಯತೆಗಳನ್ನು ಚೆನ್ನಾಗಿ ಅರಿತುಕೊಂಡು ಅದರಿಂದ ದೂರವಾಗಲು ಬಯಸಿದ ರಮೇಶನನ್ನು ಮದುವೆಯ ಬಂಧನದಿಂದ ಬಂಧಿಸಲೆತ್ನಿಸಿದ ಅವನ ತಂದೆ ತಾಯಿಗಳ ಪ್ರಯತ್ನವನ್ನು ಮೆಚ್ಚಬಹುದೆ? ಸಂನ್ಯಾಸಿಯಾಗಲೇಬೇಕೆಂದು ನಿರ್ಧರಿಸಿದ್ದ ರಮೇಶ ಮದುವೆಗೆ ಮುಂಚೆ ಮನೆಯನ್ನು ಬಿಟ್ಟಿದ್ದರೆ ಆತನು ನಿಜವಾಗಿಯೂ ಸಂನ್ಯಾಸಿಯಾಗಬಹುದಿತ್ತಲ್ಲವೆ? ಸಂಸಾರವೆಂಬುದು ಒಂದು ಮಧುರ ಸ್ವಪ್ನವೆಂದು ತಿಳಿದೂ ಪ್ರೇಮಾನಂದರು ರಮೇಶನಿಗೆ ಸಂಸಾರಿಯಾಗಲು ಅನುಮತಿಯಿತ್ತರೇಕೆ? ಎಂಬ ಮುಂತಾದ ಪ್ರಶ್ನೆಗಳು "ಸಂನ್ಯಾಸಿ" ಕಥೆಯನ್ನೋದಿದ ಯಾರಿಗಾದರೂ ಬರುವುದು ಸಹಜ. ಕೆಲವಕ್ಕೆ ಉತ್ತರಿಸಬಹುದು ಕೆಲವಕ್ಕೆ ಉತ್ತರಿಸಲಾಗುವುದಿಲ್ಲ.

ರಮೇಶ ಪುನಃ ಸಂಸಾರಿಯಾದದ್ದು ಸರಿಯೋ ತಪ್ಪೋ, ಕಥೆಗಾರರ ದೃಷ್ಟಿಯಲ್ಲಿ ಅದು ಸರಿ! ಏಕೆಂದರೆ ಸಂಸಾರದಲ್ಲಿದ್ದುಕೊಂಡೇ ಭಗವಂತನನ್ನು ಕಾಣುವ ಹಂಬಲ ಕಥೆಗಾರರದ್ದು. ಯಾವ ತಂದೆ ತಾಯಿಯರೇ ಆಗಲಿ ತಮ್ಮ ಮಗ ಸಂನ್ಯಾಸಿಯಾಗಲಿ ಎಂದು ಬಯಸುವುದಿಲ್ಲ. ಅಂತೆಯೇ ರಮೇಶನ ತಂದೆತಾಯಿ. ಪ್ರೇಮಾನಂದರಿಗೆ ಸಂಸಾರವೆಂಬುದೊಂದು ಮಧುರ ಸ್ವಪ್ನವೆಂದು ಗೊತ್ತು. ಆದರೂ ಅವರು ರಮೇಶ ಸಂಸಾರಿಯಾಗಲು ತಮ್ಮ ಅನುಮತಿಯನ್ನಿತ್ತರು. ಏಕೆಂದರೆ ಅಭಾವ ವೈರಾಗ್ಯ, ಸ್ಮಶಾನ ವೈರಾಗ್ಯಗಳಿಗಿಂತ ಸಹಜ ವೈರಾಗ್ಯ ಉತ್ತಮವಾದುದೆಂದೂ, ಜೀವನದಲ್ಲಿ ಎಲ್ಲ ಅನುಭವಿಸಿ ಜೀವನ ಇಷ್ಟೇಯೆ ಎಂಬ ಜುಗುಪ್ಸೆ ಬಂದಾಗ ಮುಕ್ತಿಮಾರ್ಗದಲ್ಲಿ ಮನಸ್ಸನ್ನು ತೊಡಗಿಸುವುದು ಇನ್ನೂ ಸುಲಭವೆಂದು ಅನುಮತಿಯಿತ್ತರು.

ಗುರು-ಮುಕುಂದ, ಮುಕುಂದ-ಚೈತ್ಯ ಇವರ ಸಂಬಾಷಣೆಯ ಮೂಲಕವಾಗಿಯೇ ಕಥೆಯ ವಸ್ತು ಸುರುಳಿ ಬಿಟ್ಟಿಕೊಳ್ಳುತ್ತಿದೆ. ಅರ್ಥಪೂರ್ಣವಾದ ಪುಟ್ಟ ಪುಟ್ಟ ಮಾತುಗಳ ಚಕಮಕಿ ಹಾರುವ ಈ ಸಂಭಾಷಣೆ ಬಿಕ್ಕಟ್ಟಾಗಿದೆ, ಸ್ವಾರಸ್ಯವಾಗಿದೆ.

ಸಂಭಾಷಣೆಯಲ್ಲಿ ಒಂದು ಸೊಗಸಿರುವಂತೆ ವಸ್ತು ಸಂವಿದಾದಲ್ಲಿಯೂ ಒಂದು ಸೊಗಸಿದೆ. ಈ ಕಥೆಯನ್ನು ಮೂರು ಭಾಗಗಳಲ್ಲಿ ಹೇಳಲಾಗಿದೆ. ಮೊದಲ ಭಾಗದಲ್ಲಿ ಚೈತನ್ಯ ಮುಕುಂದ ಇವರ ಸಂವಾದವಿದೆ. ಎರಡನೆಯ ಭಾಗದಲ್ಲಿ ಗುರು ಮುಕುಂದ ಇವರ ಸಂವಾದವಿದೆ. ಮೂರನೆಯ ಭಾಗದಲ್ಲಿ ಮತ್ತೆ ಚೈತನ್ಯ-ಗುರು ಇವರ ಸಂವಾದವಿದೆ. ಇನ್ನು ಯಾರಾದರೂ ಸಾಮಾನ್ಯ ದರ್ಜೆಯ ಕಥೆಗಾರರಾಗಿದ್ದರೆ ಎರಡನೆಯ ಭಾಗದ ವಿಷಯವನ್ನು ಮೊದಲು ಕೇಳಿ ಆ ಬಳಿಕ ಒಂದು ಮೂರರ ವಿಷಯವನ್ನು ಹೇಳುತ್ತಿದ್ದರು. ನ್ಯಾಯವಾಗಿ ಕಥೆ ಇರಬೇಕಾದ್ದದು. ಆದರೆ ಕಲೆಯ

ದೃಷ್ಟಿಯಿಂದ ಈ ರೀತಿ ತುಂಬ ಸೊಗಸಾಗಿದೆ. ಹೀಗೆ ಸಂನ್ಯಾಸಿ ಸೋಗಿನ ಮುಕುಂದ ವೇಶ ತೆಗೆದು ಸ್ತ್ರೀಯಾಗಿ ನಿಲ್ಲುವ ರೀತಿ ತುಂಬ ನಾಟಕೀಯವಾಗಿದ.

ಕಥೆ ಚಂದ್ರನ ವರ್ಣನೆಯಿಂದ ಪ್ರಾರಂಭವಾಗಿ ಚಂದ್ರನ ವರ್ಣನೆಯಿಂದಲೇ ಮುಕ್ತಾಯವಾಗುತ್ತದೆ. ಕಥೆಯ ಆರಂಭದಲ್ಲಿ ಬರುವ ಚಂದ್ರನ ಬೆಳುದಿಂಗಳಲ್ಲಿ ರಮಣೀಯವಾಗಿ ತೋರುವ ಗಂಗಾ ಯಮುನ ಸಂಗಮದ ಪ್ರಕೃತಿ ಸೌಂದರ್ಯದ ವರ್ಣನೆ ತುಂಬ ಹಿತವಾಗಿದೆ. ಗಂಗೆ ಮತ್ತು ಯಮುನೆಯರ ಸಂಗಮ ಇಂದಿರೆ ರಮೇಶರ ಸಂಗಮಕ್ಕೆ ಎಂತಹ ಉಚಿತವಾದ ಹಿನ್ನೆಲೆ! ಗುರುದೇವನ ಗಾಂಭೀರ್ಯ, ಚೈತನ್ಯದ ದೃಢತೆ, ಮುಕುಂದನ ನಿರ್ಮಲಪ್ರೇಮ ಇವುಗಳೆಲ್ಲವನ್ನೂ ಬೆಳಗುವ ಆ ಬೆಳದಿಂಗಳು ಎಷ್ಟು ಅರ್ಥಪೂರ್ಣ.

ಸುಮಾರು ಆರು ತಿಂಗಳಕಾಲ ತನ್ನ ಜೊತೆಯಲ್ಲಿದ್ದ, ಆತ್ಮೀಯ ಗೆಳೆಯನಂತಿದ್ದ ಮುಕುಂದನನ್ನು ಸೋಗಿನ ವೇಶದ ಸ್ತ್ರೀ ಎಂದು ತಿಳಿಯಲಾರದಷ್ಟು ರಮೇಶ ವಿರಾಗಿಯಾಗಿದ್ದಾನೆ? ನಿರ್ಲಿಪ್ತನಾಗಿದ್ದಾನೆ? ತೀವ್ರ ವಿರಾಗಿಯಾದಾಕ್ಷಣ ಸ್ತ್ರೀ ಪುರುಷ ಭೇದವನ್ನು ತಿಳಿಯಲಾಗುವುದಿಲ್ಲವೆ? ಹಾಗಿದ್ದರೆ ಅದು ಅಸಹಜವಲ್ಲವೆ? ಎಂಬ ಪ್ರಶ್ನೆಗಳು ಓದುಗರಲ್ಲಿ ಬರುತ್ತವೆ. ಆದರೆ ಅವು ಕಥೆಯ ಓಘದಲ್ಲಿ ಗೌಣವಾದುವು.

" 'ಕುವೆಂಪು' ಅವರ ಮೊದಲಿನ ಕಥೆಗಳು ರವೀಂದ್ರರ ಕಥೆಗಳನ್ನು ಅನುಸರಿಸಿ ಬರೆದವುಗಳಾಗಿವೆ. ಆದ್ದರಿಂದ ವಸ್ತು ಶೈಲಿಗಳಲ್ಲಿ ಕೃತಿಮತೆಯಿದೆ. 'ಕ್ರಿಸ್ತನಲ್ಲ ಪಾದ್ರಿಯ ಮಗಳು', 'ಆರಾಣೆ ಮೂರುಕಾಸು', 'ಈಶ್ವರನೂ ನಕ್ಕಿರಬೇಕು' ಇವು ಇಂಥ ಕಥೆಗಳಾಗಿವೆ" ಎಂದು ಶ್ರೀಮಾನ್ ಕೆ.ಡಿ. ಕುರ್ತುಕೋಟಿಯವರು ಅಭಿಪ್ರಾಯ ಪಡುತ್ತಾರೆ. ಆದರೆ ಕುರ್ತುಕೋಟಿಯವರು ಹೆಸರಿಸಿರುವ ಮೇಲಿನ ಮೂರು ಕಥೆಗಳಲ್ಲಿ ರವೀಂದ್ರರ ಛಾಯೆಯಾಗಲೀ, ಕಥಾಸಂವಿಧಾನ, ವಸ್ತು ಶೈಲಿಗಳಲ್ಲಿ ಕೃತಿಮತೆಯಾಗಲೀ ಕಂಡುಬರುವುದಿಲ್ಲ.

ಕುರ್ತುಕೋಟಿಯವರ ವಿಮರ್ಶಕ ದುರ್ಬೀನಿನಿಂದ 'ಕುವೆಂಪು'ರವರ ಕಥೆಗಳನ್ನು ನೋಡಿದರೆ, ನಿಜವಾಗಿಯೂ ರತ್ನಗಳಾದ ಅವು ಸಾಮಾನ್ಯ ಹರಳುಗಳಾಗಿ ಕಾಣಿಸುತ್ತವೆ. ಅನಿವಾರ್ಯರಾಗಿ ಮೆಚ್ಚಲೇಬೇಕಾದ ಕಥೆಗಳ ಬಗ್ಗೆ ಒಂದೊಂದು ವಾಕ್ಯದಲ್ಲಿ ತೇಲಿಸಿ ಹೇಳಿದ್ದಾರೆ.

ಇದುವರೆಗೆ ನಾವು ನೋಡಿದ ಕಥೆಗಳು ಒಂದು ರೀತಿಯಲ್ಲಿ ಬಿಡಿ ಕಥೆಗಳು. ಒಂದೊಕ್ಕೊಂದಕ್ಕೆ ಸಂಬಂಧವಿಲ್ಲ. ಇನ್ನುಳಿದ ಕಥೆಗಳು ವಸ್ತುವಿನ ದೆಸೆಯಿಂದಲೋ, ಮನಶ್ಶಾಸ್ತ್ರವನ್ನು ಕಥಾತಂತ್ರದಲ್ಲಿ ಅಳವಡಿಸಿಕೊಂಡಿರುವುದರಿಂದಲೋ, ಕಥೆ ನಡೆಯುವ ಪರಿಸರದಿದಲೋ ಒಂದಕ್ಕೊಂದು ಸಂಬಂಧಿಸಿದೆ.

'ಮಾಯದ ಮನೆ', 'ದೆವ್ವದ ಕಾಟ' ಮತ್ತು 'ಔದಾರ್ಯ'ಗಳು ವಸ್ತುವಿನ ದೆಸೆಯಿಂದ ಒಂದಕ್ಕೊಂದು ಸಂಬಂಧಿಸಿವೆ.

೧. ಡಾಖಾನಗರದ ಸುಪ್ರಸಿದ್ಧ ವೈದ್ಯನಾದ ಸುರೇಂದ್ರಬಾಬು ರಾತ್ರಿ ಹತ್ತು ಗಂಟೆಯಲ್ಲಿ, ದಕ್ಷಿಣ ಮೋಷಂಡಿಗೆ, ವಿಪಿನ ಚಂದ್ರಬಾಬುವಿನ ಪತ್ನಿಯ ಶುಷ್ರೂಶೆಗಾಗಿ ಹೊರಟನು. ವೈದ್ಯ ಧರ್ಮದ ಪ್ರಕಾರ ಅವನು ರೋಗಿಯ ಸೇವೆಗಾಗಿಯೇ ಹೊರಟಿರಲಿಲ್ಲ. ಧನಿಕನಾದ ಚಂದ್ರಬಾಬುವು ಕೊಡಬಹುದಾದ ಕೈತುಂಬ ಫೀಜಿಗಾಗಿ ಹೊರಟಿದ್ದನು. ಅಂದು ಬೆಳಗ್ಗೆ ಫೀಜು ಕೊಟ್ಟ ಹೊರತು ರೋಗಿಯ ಶುಷ್ರೂಶೆಗೆ ಹೋಗದೆಯಿದ್ದು ಬಡ ವಿಧವೆಯೊಬ್ಬಳ ಮಗನ ಸಾವಿಗೆ ಕಾರಣನಾಗಿದ್ದನು.

ಅಯಾಚಿತವಾಗಿ ತಮ್ಮ ಪ್ರೇತಲೋಕದ ಸದಸ್ಯ ಸಂಖ್ಯೆ ಹೆಚ್ಚುವುದಕ್ಕೆ ಅಪರೋಕ್ಷವಾಗಿ ಸಹಾಯ ಮಾಡಿದ ಸುರೇಂದ್ರ ಬಾಬುವನ್ನು ಯೋಗ್ಯ ರೀತಿಯಿಂದ ಸತ್ಕರಿಸಲು ಪ್ರೇತಗಳು ನಿರ್ಧರಿಸಿದವು. ಹಾಗೆ ನಿರ್ಧರಿಸಿದ ನಂತರ ಸುರೇಂದ್ರ ಬಾಬುವನ್ನು, ಹೆಸರು ಕೇಳಿದರೇ ಹೆದರುವ ದೆವ್ವಗಳ ಬೀಡೆಂದು ಪ್ರಸಿದ್ಧವಾಗಿದ್ದ ದಕ್ಷಿಣ ಮೋಷಂಡಿಯ ಮನೆಗೆ ಕರೆದೊಯ್ದು ಧನಪಿಶಾಚಿ ವೈದ್ಯರಿಗೆ ತಕ್ಕ ರೀತಿಯಲ್ಲಿ ಸತ್ಕರಿಸಿದುವು.

ಮೇಲಿನ 'ಮಾಯದ ಮನೆ' ಒಂದು ವಿಚಿತ್ರವಾದ ಕಥೆ. ಕಥೆಯ ಆವರಣ ಪ್ರಧಾನವಾಗಿದೆ. ಕಥೆಯಲ್ಲಿ ಬರುವ ಒಂದೊಂದು ಮಾತೂ ಭಯಾನಕ ಸನ್ನಿವೇಶವನ್ನು ಮೈ ನವಿರೇಳುವಂತೆ ಚಿತ್ರಿಸುತ್ತದೆ.

ಇದೊಂದು ಕಲ್ಪನಾ ಪ್ರಧಾನವಾದ ಕಥೆ. ಇಲ್ಲಿ ಬರುವ 'ವೈದ್ಯ ಮಹಾಶಯ' ಮುಂತಾದ ಪದಗಳು ಬಂಗಾಳಿ ಸಾಹಿತ್ಯದ ಪ್ರಭಾವ ಇವರ ಮೇಲೆ ಬಿದ್ದಿದೆಯೇನೋ ಅನ್ನಿಸುತ್ತದೆ. ಗಳಗನಾಥರ ಮತ್ತು ವೆಂಕಟಾಚಾರ್ಯರ ಕಾದಂಬರಿಗಳನ್ನು ನೆನಪಿಗೆ ತರುತ್ತದೆ.

೨. 'ದೆವ್ವದ ಕಾಟ'ದಲ್ಲಿ ಮಾತ್ರ 'ಕುವೆಂಪು' ತಮ್ಮ ನೈಜ ಲೋಕವಾದ ಮಲೆನಾಡಿಗೆ ತಿರುಗಿ ಬಂದದ್ದರಿಂದ ಸಹಜತೆ ತಾನೇ ತಾನಾಗಿದೆ. ದೆವ್ವಗಳಲ್ಲಿರುವ ಮೂಢ ನಂಬಿಕೆಗಳ ಬಗ್ಗೆ ಸಹಜ ವಿನೋದ ಇಲ್ಲಿದೆ. ಒಂದು ದೊಡ್ಡ ಪತ್ತೇದಾರಿ ಕಾದಂಬರಿ ಬರೆಯಬಹುದಾದ ವಸ್ತುವನ್ನುಳ್ಳ ಈ ಕಥೆಯನ್ನು ಸಣ್ಣ ಕಥೆಯ ಚೌಕಟ್ಟಿನಲ್ಲಿ ಹಿಡಿದು, ಪತ್ತೇದಾರಿ ಕಾದಂಬರಿಗಳಲ್ಲಿರುವಂತೆಯೇ ಇಲ್ಲಿಯೂ "ಮುಂದೇನಾಗು-ವುದು? ಕಲ್ಲು ಬೀರುತ್ತಿರುವುದು ದೆವ್ವವೆ ಮನುಷ್ಯನೆ?" ಎಂಬ ಕುತೂಹಲವನ್ನು ಸೆರೆ ಹಿಡಿದು ಕಥೆಯನ್ನು ಹೆಣೆದಿರುವ ಕಥೆಗಾರರನ್ನು ನಾವು ಹೊಗಳಲೇ ಬೇಕು.

ದೆವ್ವಗಳಲ್ಲಿ ನಂಬಿಕೆಯಿರಲಿ ಇಲ್ಲದಿರಲಿ, ಜನರು ಆ ವಿಚಾರದಿಂದ ತಮ್ಮ ಸ್ವಂತ ಲಾಭ ಮಾಡಿಕೊಳ್ಳುವುದನ್ನು ಬಿಡುವುದಿಲ್ಲ. ಇದಕ್ಕೆ ಉದಾಹರಣೆ ಮಂಗನಹಳ್ಳಿಯ ಸಿಂಗಾ ಜೋಯಿಸರು.

"ಕಥೆ ಕೊನೆಯವರೆಗೂ ಏರೇರಿಕೆಯಲ್ಲಿ ವಾಚಕರ ಕುತೂಹಲವನ್ನು ಕೆರಳಿಸುತ್ತದೆ. ಮುಕ್ತಾಯದ ರಮ್ಯ ವಿಸ್ಮಯ ಆಕೃತವಾಗಿದೆ" ಎಂದು ಎಸ್.ವಿ. ಪರಮೇಶ್ವರ ಭಟ್ಟರು ಹೇಳಿದ್ದಾರೆ. ಅವರು ಹೇಳಿರುವುದು ನಿಜ. ಆದರೂ ಕಥೆಗಾರರು ಕೊನೆಗೆ ಮುತ್ತಣ್ಣನೇ ಕಲ್ಲು ಬೀರುತ್ತಿದ್ದನೆಂದು ವಿವರಿಸಿ ಹೇಳಬೇಕಾಗಿರಲಿಲ್ಲ. ನವಿಲೂರಿನಲ್ಲಿದ್ದುದು ರಂಗರಾಯರದೊಂದೇ ಮನೆ. ರಾಯರು ನವಿಲೂರಿಗೆ ಬಂದ ಎರಡು ದಿನದಲ್ಲೇ ಮನೆಯ ಮೇಲೆ ಕಲ್ಲು ಬೀಳಲಾರಂಭಿಸಿತು. ಯಾರಿಗೂ ಕಾಣದ ಕಳ್ಳ ಮುತ್ತಣ್ಣನಿಗೆ ಕಂಡು ಗುಂಡು ಹಾರಿಸಿದ. ಆದರೂ ಕಳ್ಳ ಸಿಗಲಿಲ್ಲ. ಗುಂಡಿನ ಪೆಟ್ಟಿನಿಂದ ಸೋರಿದ ನೆತ್ತರು ಮಾತ್ರ ಕಾಣಿಸಿತು. ಚೇಲರ ಮಾದನ ಗುಂಡಿನಿಂದ ಕಾಲಿನ ಮೂಳೆ ಮುರಿದಿದ್ದ ಮುತ್ತಣ್ಣನನ್ನು ಬೆಂಗಳೂರು ವಿಕ್ಟೋರಿಯ ಆಸ್ಪತ್ರೆಗೆ ಸಾಗಿಸಿದ್ದ ಕಾಲದಲ್ಲಿ ಕಳ್ಳರ ಗಲಾಟೆಯಿರಲಿಲ್ಲ ಎಂಬ ಅಂಶಗಳನ್ನೆಲ್ಲಾ ಗಮನಿಸಿದ ಓದುಗನಿಗೆ ಮುತ್ತಣ್ಣನೇ ಕಲ್ಲು ಬೀರುತ್ತಿದ್ದ ಎಂಬ ಅನುಮಾನ ಸಹಜವಾಗಿ ಬಂದಿರುತ್ತದೆ. ಅದು ಇನ್ಸ್‌ಪೆಕ್ಟರ್ ಹುಸೇನರು ಮುತ್ತಣ್ಣನನ್ನು ಜೇಬಿನಲ್ಲಿರುವ ಕಲ್ಲು ಸಮೇತ ಹಿಡಿದಾಗ ದೃಢವಾಗುತ್ತದೆ. ಇಷ್ಟಕ್ಕೆ ಕಥೆ ಮುಕ್ತಾಯವಾಗಿದ್ದರೆ, ಮುಕ್ತಾಯದ ರಮ್ಯ ವಿಸ್ಮಯಕ್ಕೆ ಮತ್ತಷ್ಟು ಕಳೆಯೇರುತ್ತಿತ್ತು ಎಂದು ಹೇಳಬಹುದು.

೩. 'ಕುವೆಂಪು'ರವರ ಇನ್ನೊಂದು ಕಥೆ "ಔದಾರ್ಯ"ದಲ್ಲಿಯೂ ದೆವ್ವದ ವಸ್ತುವೇ ಇದ್ದರೂ ಅದು ವಿನೋದಕ್ಕಾಗಿ ಬರದೆ ಕಥೆಯನ್ನು ಒಂದು ಕರುಣ ಗೀತವನ್ನಾಗಿ ಮಾರ್ಪಡಿಸಿದೆ. ಡೇವಿಡ್ ಮಾಸ್ತರರ ಅದ್ಭುತ ರಮ್ಯತೆ 'ಎಡ್ಗರ್ ಅಲಾನ್ ಪೋ'ರ ಕಥೆಗಳನ್ನು ನೆನಪಿಗೆ ತರುವಷ್ಟು ಉಜ್ವಲವಾಗಿದೆ." ಎಂದು ಕುರ್ತುಕೋಟಿಯವರು ಹೇಳಿದ್ದಾರೆ.

ಇಲ್ಲಿನ ಕಥಾತಂತ್ರ ಉತ್ತಮವಾಗಿದೆ. ಸತ್ತ ಡೇವಿಡ್ ಮಾಸ್ತರೆ ತಮ್ಮ ಕಥೆಯನ್ನು ಹೇಳುವಂತೆ ಚಿತ್ರಿಸಿದೆ. ಡೇವಿಡ್ ಮಾಸ್ತರು ತಮ್ಮ ಕಥೆಯನ್ನು ಮುಗಿಸಿದ ಕೂಡಲೆ ನಾವೂ ಅಮಲ್ದಾರರೊಡನೆ "ಹೇಗೆ ಮೇಲಕ್ಕೆ ಬಂದಿರಿ?" ಎಂದು ಪ್ರಶ್ನಿಸುವಂತಾಗುತ್ತದೆ. "ಯಾರೋ ಕಿಲಕಿಲ ನಕ್ಕಂತಾಯಿತು. ನೋಡಿದರೆ ಡೇವಿಡ್ ಮಾಸ್ತರು ಮಾಯವಾಗಿದ್ದರು" ಎಂದು ಓದಿದಾಗ ಅಮಲ್ದಾರರಿಗೆ ಮೈ ಬೆವರಿಟ್ಟಂತೆ ವಾಚಕರಿಗೂ ಮೈಬೆವರಿಟ್ಟರೆ ಆಶ್ಚರ್ಯವೇನಲ್ಲ.

ಮೇಲಿನ ಮೂರು ಕಥೆಗಳಲ್ಲಿಯೂ ದೆವ್ವದ ವಸ್ತುವೇ ಬಂದಿದೆ. ಆದರೂ ದೆವ್ವಗಳಲ್ಲಿ ಕಥೆಗಾರರಿಗೆ ನಂಬಿಕೆಯಿದೆಯೇ ಇಲ್ಲವೇ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ!

* * *

ಸಣ್ಣ ಕಥೆಗಳಲ್ಲಿ ಮನಶ್ಶಾಸ್ತ್ರದ ಪ್ರಯೋಗದ ದೃಷ್ಟಿಯಿಂದ 'ನನ್ನ ದೇವರು', 'ಆದರ್ಶ ಸಾಧನೆ' ಮತ್ತು 'ಮೀನಾಕ್ಷಿಯ ಮನೆ ಮೇಷ್ಟರು' ಒಂದಕ್ಕೊಂದು ಸಂಬಂಧಪಟ್ಟಿವೆ. ಆದರೆ ಕಥಾ ತಂತ್ರದಲ್ಲಿ Flash back ಮತ್ತು Personal revelation ದೃಷ್ಟಿಯಿಂದ 'ನನ್ನ ದೇವರು' ಮತ್ತು 'ಆದರ್ಶ ಸಾಧನೆ' ತೀರ ನಿಕಟವಾಗಿವೆ. ಮೇಲಿನ ತಂತ್ರಗಳನ್ನು ಸಣ್ಣ ಕಥಾ ಪ್ರಪಂಚದಲ್ಲಿ ಉಪಯೋಗಿಸಿದವರಿದ್ದರೂ 'ಕುವೆಂಪು'ರವರಷ್ಟು ಸಮರ್ಥವಾಗಿ ಮತ್ತು ಸಮರ್ಪಕವಾಗಿ ಉಪಯೋಗಿಸಿದವರು ಇನ್ನೊಬ್ಬರಿಲ್ಲ.

೧. 'ನನ್ನ ದೇವರು'ವಿನಲ್ಲಿ ಭಾಷೆ ಬಹು ರಮ್ಯವಾಗಿದೆ. ಅವಳು, ವಯಸ್ಸಿಗೆ ಸಹಜವಾಗಿ ವಿಷಯ ಸುಖದತ್ತ ತನ್ನ ಮನಸ್ಸು ಹರಿದಾಗ, ತನ್ನಂತೆಯೇ ಇತರರೂ, ತನ್ನ ಭಾವನವರೂ ಕೂಡ ಎಂದು ಭಾವಿಸುತ್ತಾಳೆ. ತನ್ನ ಕಾಮವಾಸನೆಯ ಛದ್ಮವೇಷದ ದುಷ್ಟ ಆಸೆಗೆ ಮೇಲಿನ ವಾದದಿಂದ ಸಮರ್ಥಿಸಿಕೊಂಡು, ತನ್ನ ಭಾವನವರ ಕೊಠಡಿಗೆ ಒಂದು ರಾತ್ರಿ ಹೋಗುತ್ತಾಳೆ. ಒಂದು ವ್ಯಕ್ತಿಯಲ್ಲಿ, ಆತ ಅಥವಾ ಆಕೆ ಬೆಳೆದ ಸಂಸ್ಕೃತಿಯ ಪಾಪ-ಪುಣ್ಯ, ನರಕ-ಸ್ವರ್ಗ ಮುಂತಾದ ಭಾವಗಳು ಅವ್ಯಕ್ತವಾಗಿ ಮನಸ್ಸಿನ ಆಳದಲ್ಲಿ ಬೇರುಬಿಟ್ಟಿರುತ್ತವೆ. ಈ ಭಾವನೆಗಳಿಗೆ ವಿರುದ್ಧವಾಗಿ ನಡೆಯಲು ಹೋದಾಗ ಅವು ಜಾಗ್ರತವಾಗಿ ಕೆಲಸ ಮಾಡುತ್ತವೆ. ಅಂತೆಯೇ ಆಕೆಗೂ, ಆ ರಾತ್ರಿಯಲ್ಲಿ, ತನ್ನ ಭಾವನವರನ್ನು ನೋಡಿದಾಗ ತನ್ನ ಗಂಡನೇ ಅಲ್ಲಿ ಕಾಣಿಸುತ್ತಾನೆ. ಆಕೆ ಮೂರ್ಛೆ ಹೋಗುತ್ತಾಳೆ. ಮಾರನೆಯ ಬೆಳಗ್ಗೆ ತನ್ನ ಭಾವನವರು ತನ್ನ ಗುಟ್ಟನ್ನು ರಟ್ಟು ಮಾಡದಿದ್ದುದಕ್ಕಾಗಿ ಆ ಪವಿತ್ರ ಮುಖ ಮಂಡಲವನ್ನೇ ನೋಡುತ್ತಾ "ನನ್ನ ದೇವರೇ, ನಿನಗೆ ಸಹಸ್ರ ನಮಸ್ಕಾರ!" ಎನ್ನುವ ಮಾತು ಅರ್ಥವತ್ತಾಗಿದೆ. ಕಥೆಯ ಮುಕ್ತಾಯ ಸೊಗಸಾಗಿದೆ. ಒಟ್ಟಿನಲ್ಲಿ ಈ ಕಥೆ ಒಂದು ಭಾವಗೀತದಂತಿದೆ.

೨. ನಾವು ಮಾಡುತ್ತಿರುವುದೇ ಸರಿಯಾದ್ದು, ಸರ್ವೋತ್ಕೃಷ್ಟವಾದದ್ದು ಎಂಬ ಭಾವನೆ ಪ್ರತಿಯೊಬ್ಬನಲ್ಲಿಯೂ ಇರುತ್ತದೆ. ಆದರೆ ಅದನ್ನು ಇತರರಿಗೆ ಸ್ಪಷ್ಟವಾಗಿ, ಪರಿಣಾಮಕಾರಿಯಾಗಿ ಬಿಂಬಿಸಿ ಹೇಳುವುದು ಕಷ್ಟ. ಈ ಕಷ್ಟಸಾಧ್ಯವಾದ ಕೆಲಸವನ್ನು ಲೀಲಾಜಾಲವಾಗಿ ನಿರ್ವಹಿಸುತ್ತಾನೆ "ಆದರ್ಶ ಸಾಧನೆ"ಯ ಚಂದ್ರು.

ಚಂದ್ರು ಮೊದಲು ಆದರ್ಶ ಸಂನ್ಯಾಸಿಯಾಗಬೇಕೆಂದಿದ್ದ, ಅವಿವಾಹಿತ-ನಾಗಿದ್ದುಕೊಂಡು ಆದರ್ಶವ್ಯಕ್ತಿಯಾಗಬೇಕೆಂದಿದ್ದ, ಆದರ್ಶ ಗ್ರಾಮಸೇವಕ-ನಾಗಬೇಕೆಂದಿದ್ದ, ಆದರ್ಶ ಪತಿಯಾಗಬೇಕೆಂದಿದ್ದ. ಆದರೆ ಯಾವುದೂ ಆಗಲಿಲ್ಲ. ಈ ಮನೋಭಾವಗಳ ಪರವಾಗಿ, ಅವುಗಳ ಶ್ರೇಷ್ಠತೆಯ ವಿಚಾರವಾಗಿ, ಎಷ್ಟು ಉದ್ವೇಗದಿಂದ, ಎಷ್ಟು ಸಾಮರ್ಥ್ಯದಿಂದ, ಎಷ್ಟು ಶ್ರದ್ಧೆಯಿಂದ ವಾದಿಸಿ ಬೋಧಿಸುತ್ತಿದ್ದನೋ ಅಷ್ಟೇ ಉದ್ವೇಗ ಸಾಮರ್ಥ್ಯ ಶ್ರದ್ಧೆಗಳಿಂದ ಅಲ್ಲದೆ ಇನ್ನೂ ಪ್ರಬಲವಾದ ವಾಗ್ವೈಖರಿಯಿಂದ ವಾದಿಸಿ ಬೋಧಿಸಿ ಆ ಮನೋಭಾವದ ವಿರುದ್ಧ-ವಾಗಿಯೂ ನಮ್ಮನ್ನು ಒಪ್ಪಿಸುತ್ತಾನೆ.

ಇಂತಹ ಸಣ್ಣ ಕಥೆ, ಕಥಾಪ್ರಪಂಚದಲ್ಲೇ ಅತಿ ವಿರಳವೆಂದು ಹೇಳಬಹುದು.

೩. "ಮೀನಾಕ್ಷಿಯ ಮನೆ ಮೇಷ್ಟ್ರ"ರ ಮಾನಸಿಕ ಪ್ರಪಂಚ ಮತ್ತೊಂದು ತೆರನಾದುದು. ಮೊದಮೊದಲು ಮೀನಾಕ್ಷಿಯನ್ನು ಕಂಡರೆ ಮೇಷ್ಟರಿಗೆ ತಂಗಿಯ ಭಾವನೆ. ಅನಂತರ ನಿಧಾನವಾಗಿ, ಮೀನಾಕ್ಷಿಯ ವಯಸ್ಸು ಲಂಗಕ್ಕೂ ಸೀರೆಗೂ ನಡುವೆ ಉಯ್ಯಾಲೆಯಾಡಿ ಸೀರೆಯನ್ನೇ ಉಡತೊಡಗಿದ ಮೇಲೆ, ತಮ್ಮ ಮನೋಪ್ರಪಂಚದಲ್ಲಿ ಆಕೆಯ ಪತಿಯಾಗಿ ವಿಹರಿಸತೊಡಗಿದರು. ಆದರೆ ಬಹುಕಾಲ ಕಟ್ಟಿಕೊಂಡಿದ್ದ ಶೃಂಗಾರ ಮಂದಿರ ಭೂಕಂಪಕೆಂಬಂತೆ ಮುರಿದು ಬಿರಿಯಿತು. ಮೀನಾಕ್ಷಿಗೆ ಮದುವೆಯಾಯಿತು. ಆಕೆ ತನ್ನ ಪತಿಗೆ ಎರಡನೆಯ ಪತ್ನಿ. ಮೀನಾಕ್ಷಿಯ ಮನೆಯ ಮೇಷ್ಟರು, ಆಕೆಯ ಪತಿಯನ್ನು ರಾಕ್ಷಸನಿಗೆ ಹೋಲಿಸಿಕೊಂಡು, ಆತನಿಂದ ಮೀನಾಕ್ಷಿಯನ್ನು ಪಾರುಮಾಡಲು ಹರಿತವಾದ ಚಾಕುವೊಂದನ್ನು ತೆಗೆದುಕೊಂಡು ಹೋಗುತ್ತಾನೆ. ಅಲ್ಲಿ ನಯವಿನಯ ಸಂಪನ್ನನೂ, ಸುಸಂಸ್ಕೃತನೂ, ವಿದ್ಯಾವಂತನೂ ಆದ ಮೀನಾಕ್ಷಿಯ ಗಂಡನನ್ನು ನೋಡಿ ತಾನು ಬಂದ ಕಾರಣಕ್ಕಾಗಿ ತನಗೇ ಹೇಸಿಗೆಯಾಗಿ, ತಾನು ಬಂದ ಕಾರಣವನ್ನು ಮರೆಸಿ ಮೀನಾಕ್ಷಿಗೆ ಚಾಕುವನ್ನು ಉಡುಗೊರೆಯಾಗಿ ಕೊಟ್ಟುಬರುತ್ತಾರೆ.

ವಿದ್ಯಾವಂತರಾದವರು, ಭಾವುಕರಾದವರಿಂದ ಹೇಗೆ ಸಮಾಜಕ್ಕೆ ತೊಂದರೆ-ಯುಂಟಾಗುತ್ತದೆಂಬುದನ್ನು ಮೇಷ್ಟರು ಮದುವೆಗೆ ಮುಂಚೆ ಕಾಗದ ಬರೆದ ಸಂದರ್ಭ ಮತ್ತು ಮೀನಾಕ್ಷಿಯ ಗಂಡನನ್ನು ಕೊಲೆ ಮಾಡಬೇಕೆಂದು ಹೊರಟ ಸಂದರ್ಭಗಳು ಚೆನ್ನಾಗಿ ಚಿತ್ರಿಸುತ್ತವೆ.

* * *

ಮಲೆನಾಡಿನ ಸ್ಮೃತಿ ತರಂಗದಲ್ಲಿ- 'ದೈತ್ಯ ಶೈಲಿ' ಎಂದು 'ಕುವೆಂಪು'ರವರೇ ಕರೆದುಕೊಂಡಿರುವ ತಮ್ಮ ಶೈಲಿಯನ್ನು ಜಿ.ಎಸ್. ಶಿವರುದ್ರಪ್ಪನವರು 'ಪರ್ವತಾರಣ್ಯ

ಶೈಲಿ' ಎಂದರೆ ಹೆಚ್ಚು ಸಮರ್ಪಕವಾಗಬಹುದು ಎಂದು ಹೇಳಿದ್ದಾರೆ. ಈ 'ಪರ್ವತಾರಣ್ಯಶೈಲಿ' ಅವರ ನೈಜ ಲೋಕದ ಮಲೆನಾಡಿಗೆ ಸಂಬಂಧಪಟ್ಟ 'ಯಾರೂ ಅರಿಯದ ವೀರ', 'ದೆವ್ವದ ಕಾಟ', 'ಶ್ರೀಮಸ್ಸೂಕ್ರವಾಗಿತ್ತು' ಮತ್ತು 'ಸಾಲದ ಮಗು' ಕಥೆಗಳಲ್ಲಿ, ಅವರ ಇತರ ಕತೆಗಳಲ್ಲಿಯಂತೆಯೇ ಆದರೂ ಇನ್ನೂ ಹೆಚ್ಚಾಗಿ ಬಂದಿದೆ.

"'ಯಾರೂ ಅರಿಯದ ವೀರ'ದಲ್ಲಿ 'ಕುವೆಂಪು ಕಥಗಾರಿಕೆಯ ಕೊನೆಯ ಹಂತವನ್ನು ಮುಟ್ಟಿದರು. ಮಲೆನಾಡಿನ ನೆರೆ ಹಾವಳಿಯಲ್ಲಿ ಮುಳುಗುತ್ತಿದ್ದ ದೋಣಿಯನ್ನುಳಿಸಲು ನೀರಿಗೆ ಹಾರಿದ ಲಿಂಗನೇ 'ಯಾರೂ ಅರಿಯದ ವೀರ.' ಮಲೆನಾಡಿನ ದಟ್ಟವಾದ ಕತ್ತಲೆಯಲ್ಲಿ, ನೆರೆಯ ನೀರಿನ ರಭಸದಲ್ಲಿ, ಪ್ರಕೃತಿಯ ಭೀಕರ ನಿರ್ಜನತೆಯಲ್ಲಿಯೂ ಕೂಡ, ಸಾವಿನೊಂದಿಗೆ ಹೋರಾಡುವ ಜೀವ ಶಕ್ತಿಯ ಉದಾತ್ತತೆ ಜುಮ್ಮು ತಟ್ಟಿಸುವ ರಸಾನುಭವವನ್ನುಂಟುಮಾಡುತ್ತದೆ. ಶೈಲಿಯಲ್ಲಿ ಭಾವಗೀತದಂತಿದ್ದರೂ ಮಹಾಕಾವ್ಯದ ಸನ್ನಿವೇಶವೊಂದರ ಪ್ರಭಾವವನ್ನು ಈ ಕಥೆ ಬೀರುತ್ತದೆ" ಎಂದು ಕುರ್ತಕೋಟಿಯವರು ಹೇಳಿದ್ದಾರೆ.

'ಯಾರೂ ಅರಿಯದ ವೀರ' ಕಥೆಯ ಸುಬ್ಬೇಗೌಡರು ಮತ್ತು 'ದೆವ್ವದ ಕಾಟದ' ನವಿಲೂರ ರಂಗರಾಯರು ಉತ್ತರ ಧ್ರುವವಾದರೆ 'ಸಾಲದ ಮಗು'ವಿನ ಗೌಡರು ದಕ್ಷಿಣ ಧ್ರುವವಾಗುತ್ತಾರೆ, ಗುಣದಲ್ಲಿ. ಈ ಎರಡು ಧ್ರುವಗಳ ನಡುವೆ ಬರುತ್ತಾರೆ 'ಶ್ರೀಮಸ್ಸೂಲಕವಾಗಿತ್ತು' ಕಥೆಯ ನಾಲೂರು ನಾಗಣ್ಣಗೌಡರು. ಸುಬ್ಬೇಗೌಡರು ಮತ್ತು ರಂಗರಾಯರು ತಮ್ಮ ಆಳುಗಳ ಮೇಲೆ ಸಂಪೂರ್ಣ ವಿಶ್ವಾಸ ಮಮತೆ ಇಟ್ಟಿದ್ದವರು. 'ಸಾಲದ ಮಗು'ವಿನ ಗೌಡರು ಏಳು ಎಂಟು ವರ್ಷದ ಹುಡುಗ ಸುಬ್ಬನನ್ನು, ಅದೂ ಜ್ವರ ಬಂದವನನ್ನು ಮೀನಿನ ಆಸೆಗಾಗಿ ನಿಶಾರಾತ್ರಿಯಲ್ಲಿ, ಧಾರಾಕಾರವಾಗಿ ಮಳೆ ಸುರಿಯುತ್ತಿರುವಾಗ ಕಳಿಸುವಂತಹ ನಿಷ್ಕರುಣಿ. ನಾಗಣ್ಣಗೌಡರಾದರೆ ಅತಿ ಕಟುಕರಲ್ಲ, ಆದರೆ ಸಮಯ ಸನ್ನಿವೇಶಗಳೊದಗಿದರೆ ಕ್ರೂರವಾಗಿ ವರ್ತಿಸಲು ಹಿಂದೆಮುಂದೆ ನೋಡುವವರಲ್ಲ.

'ಯಾರೂ ಅರಿಯದ ವೀರ'ದ ಲಿಂಗನ ಪಾತ್ರ ಮೂಡಲಾದರೆ 'ದೆವ್ವದ ಕಾಟ'ದ ಮುತ್ತಣ್ಣನ ಪಾತ್ರ ಪಡುವಲು. ಲಿಂಗ ತನ್ನ ಸ್ವಾಮಿಯ ಸಂಸಾರವನ್ನುಳಿಸಲು ತುಂಬಿದ ನೆರೆಯಲ್ಲಿ ನೀರಿಗೆ ಹಾರಿ ಹೇಗೋ ಬದುಕಿಬಂದರೂ ತನ್ನ ತ್ಯಾಗವನ್ನು ಹೇಳಿಕೊಳ್ಳಲೊಲ್ಲ. ಮುತ್ತಣ್ಣ ತನಗೆ ಅನ್ನವಿಟ್ಟು ಒಬ್ಬ ಮನುಷ್ಯನನ್ನಾಗಿ ಮಾಡಿ ಮನೆ ಮಗನಂತೆಯೇ ಭಾವಿಸಿರುವ ರಂಗರಾಯರು ನವಿಲೂರಿಗೆ ಬಂದದ್ದರಿಂದ ತನ್ನ ಆಟ, ದರ್ಪ, ಬಲಗಳಿಗೆ ಚ್ಯುತಿ ಬರುವುದೆಂದು ರಂಗರಾಯರನ್ನೇ ನವಿಲೂರಿನಿಂದ ಓಡಿಸಲು ಯತ್ನಿಸಿದ.

ಮಹಾರಾಷ್ಟ್ರದ ಸುಪ್ರಸಿದ್ಧ ಸಾಹಿತಿ ಮಾಮಾವಾರೇರ್ಕರ್ ಹೇಳುವಂತೆ 'ಕುವೆಂಪು' ಮೇಲೆ ಮೇಲೆ ಹಾರುತ್ತಲೇ ಭೂಮಿಯ ಮೇಲಿನ ಸರ್ವಸ್ವವನ್ನೂ ಗ್ರಹಿಸುವ ಗರುಡನ ದೃಷ್ಟಿಯಂತೆ ಜೀವನದ ಎಲ್ಲ ಚಟವಟಿಕೆಗಳನ್ನೂ ಗ್ರಹಿಸುವವರು. ಆವರಿಗೆ ಜನರ ಮೌಢ್ಯವನ್ನೇ ಬಂಡವಾಳವನ್ನಾಗಿಟ್ಟುಕೊಂಡು ಸುಲಿಗೆಮಾಡುವ ಮಂಗನಹಳ್ಳಿ ಸಿಂಗಾಜೋಯಿಸರಾಗಲಿ, ಕಿರಣಕೇರಿ ಶಂಕರಶಾಸ್ತ್ರಿಗಳಾಗಲಿ, ತಿಮ್ಮು, ಸೀತೆ, ವಾಸು, ನಾಗರ ಮುಗ್ಧತೆ, ನಿರ್ಮಲ ಅಂತಃಕರಣವಾಗಲೀ, ಸುಬ್ಬ ಇದ್ದ ಚಿಂತಾಜನಕ ಸ್ಥಿತಿಯಾಗಲೀ, ಮೂನಿನಿಂದ ತುಂಬಿಹೋಗಿ ಕೂಣೆಯೊಳಗಿನಿಂದ ಬರುತ್ತಿದ್ದ 'ಚೊಳ್ ಚೊಳ್' ಎಂಬ ಶಬ್ದವಾಗಲೀ ಹೆಚ್ಚಲ್ಲ ಅಥವಾ ಕಡಿಮೆಯಲ್ಲ. ಎಲ್ಲವನ್ನೂ ಒಂದೇ ವಿಧವಾದ ಆಸಕ್ತಿ ಕುತೂಹಲಗಳಿಂದ ಗಮನಿಸಿ ಅದೇ ಆಸಕ್ತಿಯಿಂದ ಎಲ್ಲ ಸನ್ನಿವೇಶಗಳನ್ನೂ ಒಂದೇ ತೆರನಾಗಿ ಚಿತ್ರಿಸ ಬಲ್ಲವರು 'ಕುವೆಂಪು'.

* * *

ಕ್ರಾಂತಿಕಾರಕವಾದ, ವಿನೂತನ ಶೈಲಿಯಲ್ಲಿ ಸಂಕೇತಗಳ ಮೂಲಕ ಚಿತ್ರಿಸಿರುವ ಕಥೆ 'ಧನ್ವಂತರಿಯ ಚಿಕಿತ್ಸೆ'. ಈ ಕಥೆ ಬಡತನದ ಒಂದು ನೈಜ ಚಿತ್ರಣವೆಂದು ಕೆಲವರು ತಿಳಿದಿದ್ದಾರೆ. ಅದು ಬಡತನವಲ್ಲ-ಸಮಾಜದ ರಾಜಯಕ್ಷ. ಅದಕ್ಕೆ ಸಕಾಲದಲ್ಲಿ ಚಿಕಿತ್ಸೆಯಾಗಬೇಕು. ಅಂತಿಂತಹ ಚಿಕಿತ್ಸೆ ಸಾಲದು. ದೇವ ವೈದ್ಯನಾದ ಧನ್ವಂತರಿಯಿಂದಲೇ ಚಿಕಿತ್ಸೆ ನಡೆಯಬೇಕು.

ಈ ಕಥೆಯಲ್ಲಿ ಬರುವ ವಿಶ್ವಾಮಿತ್ರ ಮತ್ತು ಪರಶುರಾಮರು ಕ್ರಾಂತಿಶಕ್ತಿಗಳ ಸಂಕೇತವಾಗಿದ್ದಾರೆ. ರೈತನ ಎದೆಯ ಮೇಲೆ ಸಮಸ್ತ ಚಕ್ರಾಧಿಪತ್ಯವೂ ಮಹಾ ಪರ್ವತಾಕಾರವಾಗಿ ನಿಂತಿದೆ. ಮುಖ್ಯಪಟ್ಟಣ ಅದರ ನೆತ್ತಿಯಲ್ಲಿ ರಾಜಿಸುತ್ತಿದೆ. ಅಲ್ಲಿಯ ದೇವಾಲಯಗಳೂ ವಿದ್ಯಾನಿಲಯಗಳೂ ಕ್ರೀಡಾಮಂದಿರಗಳೂ ಪ್ರಮೋದವನಗಳೂ ಕರ್ಮಸೌಧಗಳೂ ರಾಜಪ್ರಸಾಧಗಳೂ ತಮ್ಮ ಭಾರವನ್ನೆಲ್ಲಾ ರೈತನ ಎದೆಯ ಮೇಲೆ ಹಾಕಿ ಸಂಸ್ಕೃತಿ ನಾಗರಿಕತೆಯ ಹೆಸರಿನಿದ ಮೆರೆಯುತ್ತಿದೆ.

ಕ್ರಾಂತಿಗೆ ಇಂತಹ ಸಮಯಕ್ಕಿನ್ನ ಅನುಕೂಲವಾದ ಸನ್ನಿವೇಶ ಮತ್ತೊಂದು ದೊರೆಯಲಾರದು. ರೈತನ ಮೇಲಿರುವ ಭಾರ ಕಡಿಮೆಯಾದರೆ ದೃಢಕಾಯನಾಗುವ ಅವನೇ ಕೆಳಕ್ಕೆ ಬೀಳುವ ರಾಜ್ಯದ ಭಾರವನ್ನು ಎದೆಯ ಮೇಲೆ ಹಾಕಿಕೊಳ್ಳುವುದಕ್ಕೆ ಬದಲಾಗಿ ಹೆಗಲ ಮೇಲೆ ಹೊತ್ತು, ರಾಜ್ಯಭಾರ ನಿರ್ವಹಿಸುತ್ತಾನೆ ಎಂಬ ಸೂಚನೆ ಇಲ್ಲಿದೆ.

'ಶ್ರೀಮನ್ನೂಕ್ಕವಾಗಿತ್ತು' ಕಥೆಗೆ ಹಿಂದೆಯಿಟ್ಟಿದ್ದ ಹೆಸರು 'ಪಾಪ ಎಳೆಗರು.' ನಾಗಣ್ಣಗೌಡರ ಏಳೆಂಟು ವರುಷದ ಮಗ, ವಾಸು, ಕಾಯಿಲೆ ಮಲಗಿದ್ದ. ಅವನು ಬಹುವಾಗಿ ನರಳುತ್ತಿದ್ದ. ಆಗಾಗ ತನ್ನ ಸತ್ತ ತಾಯಿಯನ್ನು ಕರೆಯುತ್ತಿದ್ದ. ಇದನ್ನು

ನೋಡಿ ರಂಗನಿಗೆ ತನ್ನ ಎಳೆಗರು ಅದರ ತಾಯಿಗಾಗಿ ಮರುಗುವ ಚಿತ್ರ ಕಣ್ಣೆದುರು ಸುಳಿಯಿತು. ರಂಗ ಎಳೆಗುರವಿಗೂ ಮರುಗಿದ; ವಾಸುವಿಗೂ ಮರುಗಿದ.

ವಾಸು ಇದ್ದಕ್ಕಿದ್ದ ಹಾಗೆ "ಪಾಪ ಎಳೆಗರು ಹೊಡೆದು ಕೊಂಡು ಹೋಗೋ ರಂಗಾ" ಎಂದ. ನಾಗಣ್ಣಗೌಡರು "ಹೊಡೆದುಕೊಂಡು ಹೋಗಲಿ ಇವನೆಮ್ಮೆ ತೋರಿಸು" ಎಂದು ಆಳಿಗೆ ಹೇಳಿದರು. ಗೌಡರು ವಾಸು ಹೇಳದಿದ್ದರೆ ಎಮ್ಮೆ ಹೊಡೆದುಕೊಂಡು ಹೋಗಲು ಹೇಳುತ್ತಿದ್ದರೋ ಇಲ್ಲವೋ ಅನುಮಾನ. ರಂಗ "ದೇವರೇ ಇವರನ್ನು ಉಳಿಸು" ಎಂದು ಎಮ್ಮೆಯೊಡನೆ ಹೊರಟ. ರಂಗನ ಹಾರೈಕೆಯೂ ವಾಸುವನ್ನುಳಿಸುವಲ್ಲಿ ಸಹಾಯಕವಾಗಿಲ್ಲದೆಯಿಲ್ಲ. ರಂಗನ ನಿಷ್ಕಲ್ಮಷವಾದ ಹೃದಯ ಕಥೆಯ ಶ್ರೀಮಂತಿಕೆಯನ್ನು ಹೆಚ್ಚಿಸಿದೆ. ರಂಗನ ಹರಕೆ, ಎಮ್ಮೆಯ ಆಶೀರ್ವಾದ ಇವು ಸಾಮಾನ್ಯವೇನಲ್ಲ. ರಂಗ "ದೇವರೇ ಇವರನ್ನು ಉಳಿಸು" ಎಂದಾದರೂ ಹೇಳಿದ ಬಾಯಿಯಿದ್ದದ್ದರಿಂದ. ಆ ಮೂಕಪ್ರಾಣಿ ಬಾಯಿಯಿಲ್ಲದೆ ಏನನ್ನೂ ಹೇಳಲಾಗಲಿಲ್ಲ. ಆದರೇನು! ಅದರ ಕರುಳ ಒಲವು ರಂಗನದಕ್ಕಿಂತಲೂ ಕಡಮೆಯದೇನೂ ಅಲ್ಲ. ಅದರ ಶ್ರೀಮನ್ಮೌನದಲ್ಲಿ ಚಿರಕೃತಜ್ಞತೆಯ, ಅನಂತ ಋಣಸಮರ್ಪಣೆಯ ಭಾವ ಭಾರವಾಗಿತ್ತು. ಅದರ ಒತ್ತಡ ವರ್ಣನಾತೀತ.

ಕೆರೆಯೂರಿನಲ್ಲಿ ಎಮ್ಮೆ ತನ್ನ ಎಳೆಗರುವನ್ನು ಮೂಸಿ ನೆಕ್ಕಿದಾಗ ಅತ್ತಾ ನಾಲೂರಿನಲ್ಲಿ ವಾಸುವಿಗೆ ಅದೇ ಸಮಯಕ್ಕೆ ಜ್ವರ ಇಳಿಯಿತು. ಗೌಡರು ಜೋಯಿಸರ ವಿಭೂತಿ ಮಹಿಮೆಯನ್ನು ಹೊಗಳಿದರು. "ನೋಡಿದಿರೋ ನಮ್ಮ ಜೋಯಿಸರ ಮಹಿಮೆ! ಹುಡುಗಗೆ ಜ್ವರ ಬಿಟ್ಟೇಹೋಗಿದೆ" ಎಂದರು. (ಪಾಪ ಅವರಿಗೇನು ಗೊತ್ತು ಅದು ಮೂಗು ಪ್ರಾಣಿಯ ಆನಂದದ ಆಶೀರ್ವಾದದ್ದೆಂದು) ದೂರದ ಕೆರೆಯೂರಿನಲ್ಲಿ ತನ್ನ ಮುದ್ದು ಕರುವನ್ನು ಮೂಸಿ ನೆಕ್ಕುತ್ತಿದ್ದ ಮೂಗುಪ್ರಾಣಿಯ ಆನಂದದ ಆಶೀರ್ವಾದ ವಿಭೂತಿ ಅದನ್ನಾಲಿಸಿ ಶ್ರೀಮನ್ಮೂಕವಾಗಿತ್ತು!

ಇದನ್ನು ಕಥೆಗಾರರು ಕಲಾತ್ಮಕವಾಗಿ ಸೂಚಿಸಿದ್ದಾರೆ. ಜೋಯಿಸರ ವಿಭೂತಿ ಮೇಲುಕಣ್ಣಿಗೆ ತೋರುವ ಕಾರಣ. ಒಳಕಣ್ಣಿಗೆ ಬೇರೆ ಋತುವೇ ಹೊಳೆಯುತ್ತದೆ. ಅದೇ ದರ್ಶನ. ತನ್ನನ್ನು ಕೃಪೆಗೈದು ಬಿಡುಗಡೆ ಮಾಡಿದ ಆ ಮಗುವನ್ನು ಮಾತು ಬಾರದ ತಾಯಿ ಎಮ್ಮೆ ಆಶೀರ್ವದಿಸಿತು. ಆ ಆಶೀರ್ವಾದದ ಫಲವಾಗಿ ಹುಡುಗ ಬದುಕಿದ.

'ದರ್ಶನ ವಿಮರ್ಶೆ' ಗ್ರಂಥದ ಮುನ್ನುಡಿಯಲ್ಲಿ "ಬಹುಶಃ ನಮಗೆ ತಿಳಿದ ಮಟ್ಟಿಗೆ ದರ್ಶನ ವಿಮರ್ಶೆಯನ್ನು ಮೊದಲಿಗೆ ಬರೆದವರು 'ಕುವೆಂಪು' " ಎಂದು

ಹೇಳಿದ್ದಾರೆ. ಅದೇ ರೀತಿಯಲ್ಲಿ 'ಶ್ರೀಮನ್ಮೂಲಕವಾಗಿತ್ತು' ಅಂತಹ ದರ್ಶನ ಕಥೆಗಳನ್ನು ಬರೆದವರಲ್ಲಿ 'ಕುವೆಂಪು'ರವರೇ ಮೊದಲಿಗರಿರಬಹುದು ಎಂದು ಹೇಳಬಹುದು.

* * *

'ಕುವೆಂಪು'ರವರು ಬರೆದುದು ಮೇಲಿನ ಹದಿನೇಳು ಕಥೆಗಳನ್ನು ಮಾತ್ರ. 'ಸನ್ನ ದೇವರು ಮತ್ತು ಇತರ ಕಥೆಗಳು' ಅನ್ನು ಕುರಿತು The Indian P.E.N. ಪತ್ರಿಕೆ "The eight stories of the book are, in a word, eight gems" ಎಂದು ಹೇಳಿದೆ. ಇದೇ ಮಾತನ್ನು "ಸಂನ್ಯಾಸಿ ಮತ್ತು ಇತರ ಕಥೆಗಳು" ಕಥಾಸಂಕಲನಕ್ಕೂ ಹೇಳಬಹುದು.

ಸಣ್ಣ ಕಥೆಗಳಲ್ಲಿ ವರ್ಣನೆ ಎಷ್ಟಿರಬೇಕು, ಏಕಿರಬೇಕು ಎನ್ನುವುದಕ್ಕೆ 'ಕುವೆಂಪು'ರವರ ಕಥೆಗಳನ್ನೋದಬೇಕು. 'ಕುವೆಂಪು'ರವರಿಗಿನ್ನ ಮೊದಲು ನಿಸರ್ಗದ ಇಷ್ಟೊಂದು ವಿವರಗಳನ್ನು ಯಾರೂ ಸಣ್ಣಕಥೆಗಳಲ್ಲಿ ತಂದಿರಲಿಲ್ಲ. ಇಂತಹ ವರ್ಣನೆಗಳಿಂದ ಅವರ ಕಥೆಗಳಿಗೆ ಒಳ್ಳೆಯ ಮೆರಗು ಬಂದಿದೆ.

ಕಥೆಯಲ್ಲಿ ನಿರೂಪಣಾಕೌಶಲ್ಯ ಬಹಳ ಮುಖ್ಯ. ಈ ಕೌಶಲದ ಒಂದು ಮುಖ ಬರವಣಿಗೆಯ ಸೊಗಸಿನಲ್ಲಿದೆ, ಮಾತುಗಾರಿಕೆಯ ಬೆಡಗಿನಲ್ಲಿದೆ. ಈ ಸೊಗಸು ಈ ಬೆಡಗು ಇವರ ಕಥೆಗಳಲ್ಲಿ ರೇಷ್ಮೆಯ ಕರವಸ್ತ್ರದ ಮೇಲಣ ಕಸೂತಿ ಹೂವಿನಂತೆ ಬಹಳ ಆಕರ್ಷಕವಾಗಿ ಬಂದಿದೆ... ಶೈಲಿ ಕಾಂತಿಯುಕ್ತವಾಗಿದೆ. ಸತ್ವಪೂರ್ಣವಾಗಿದೆ. ಹಾಸ್ಯವನ್ನೂ, ಗಾಂಭೀರ್ಯವನ್ನೂ ಬರವಣಿಗೆಯಲ್ಲಿ ಸೊಗಸಾಗಿ ಕಥೆಗಾರರು ಪ್ರಕಟಿಸಿದ್ದಾರೆ. ವಸ್ತುವಿಗೆ ಅನುಗುಣವಾದ ನಿರೂಪಣಾ ಶೈಲಿ ಇಲ್ಲಿದೆ. ಕಥೆಗಳ ಆರಂಭ, ಬೆಳವಣಿಗೆ, ಮುಕ್ತಾಯ ಇವು ಕಲಾತ್ಮಕವಾಗಿ ಬಂದಿವೆ. ಕವಿಯ ಪ್ರಪಂಚ ಜ್ಞಾನ ಮಾನವನ ಸ್ವಭಾವದ ವರ್ಣನೆಯಲ್ಲಿ ಎದ್ದುಕಾಣುತ್ತದೆ. ಜನರ ಬಾಳುವೆಯನ್ನು ಕಂಡು ಕೇಳಿ ತಿಳಿದು ನುಡಿಯುವ ಹಿರಿಮೆ ಇಲ್ಲಿದೆ.

'ಕುವೆಂಪು'ರವರ ಸಣ್ಣ ಕಥೆಗಳ ಶ್ರೇಷ್ಠತೆಯಿರುವುದು ಅವು ಸಮಕಾಲೀನ ಜೀವನದ ಎಲ್ಲ ಅಂಶಗಳಿಗೂ ಪ್ರತಿಸ್ಪಂದಿಯಾದುವೆಂಬುದರಲ್ಲಿ. ನಿಸರ್ಗದ ಚೆಲುವು, ಆದರ್ಶಪ್ರಿಯತೆ, ಕ್ರಾಂತಿಯ ವೀರಭಾವ, ಆಧ್ಯಾತ್ಮಿಕತೆ ಮೊದಲಾದ ಎಲ್ಲ ವಿಷಯಗಳಿಗೂ ಅವರ ಸಣ್ಣ ಕಥೆಗಳು ಇಂಬುಕೊಟ್ಟಿವೆ. ಹೀಗಾಗಿ ಹೊಸಗನ್ನಡ ಸಣ್ಣ ಕಥೆಗಳ ಇತಿಹಾಸದಲ್ಲಿ ಅವರ ಸ್ಥಾನ ಭದ್ರಾವಾಗಿದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

'ಕುವೆಂಪು'ರವರು ಸಂಖ್ಯೆಯಲ್ಲಿ ಕಡಿಮೆ ಕಥೆಗಳನ್ನು ಬರೆದಿರುವುದರಿಂದಲೂ ಮತ್ತು ಸಾಹಿತ್ಯದ ಇತರ ಕ್ಷೇತ್ರಗಳಲ್ಲಿ ಪ್ರಸಿದ್ಧರಾಗಿರುವುದರಿಂದಲೂ ಅವರ ಸಣ್ಣ ಕಥೆಗಳು ಜನಪ್ರಿಯತೆಯನ್ನು ಗಳಿಸಲಿಲ್ಲ ಎಂಬ ವಾದವಿದೆ. ಈ ವಾದದಲ್ಲಿ ಹುರುಳಿಲ್ಲ. ಅವು ನಾಲ್ಕು ಬಾರೀ, ಐದು ಬಾರಿ ಪುನರ್‌ಮುದ್ರಣ ಹೊಂದಿರುವುದೇ ಅವುಗಳ ಜನಪ್ರಿಯತೆಗೆ ಸಾಕ್ಷಿ.

"ಸಣ್ಣ ಕಥೆ ಅಲ್ಪಜೀವಿಗಳ ಮಹಾಕಾವ್ಯ" ಎಂದು ರಂ.ಶ್ರೀ. ಮುಗುಳಿಯವರೂ, "ಸಣ್ಣ ಕಥೆ ಬರೆಯುವುದು ಬಹಳ ಕಷ್ಟದ ಕೆಲಸ-ಕಿರಿದರಲ್ಲಿ ಹಿರಿದಾದ ಭಾವ, ಜ್ಞಾನ, ಅನುಭವಗಳನ್ನು ತುಂಬಿ ಜೀವನಕ್ಕೆ ಬೆಳಕು ಬೀರುವುದು ಅದರ ವೈಶಿಷ್ಟ್ಯ" ಎಂದು ಬಿ.ಎಂ.ಶ್ರೀ. ಅವರೂ ಹೇಳಿದ್ದಾರೆ. ಈ ಮಾತುಗಳ ಸತ್ಯವನ್ನು 'ಕುವೆಂಪು'ರವರ ಕಥೆಗಳಲ್ಲಿ ಕಾಣಬಹುದು. ಆದ್ದರಿಂದ ಸಂಖ್ಯಾದೃಷ್ಟಿಯಿಂದ 'ಕುವೆಂಪು'ರವರ ಸಣ್ಣ ಕಥೆಗಳನ್ನು ಅವಗಣನೆ ಮಾಡಿದರೆ ಸತ್ಯಕ್ಕೆ ಅಪಚಾರವಾದೀತು. ಆ ಕಥೆಗಳ ಸ್ಥಾನಮಾನ ಸಣ್ಣ ಕಥೆಗಳ ಪ್ರಪಂಚದಲ್ಲಿ ಏನು ಎನ್ನುವುದು ಪೂರ್ವಗ್ರಹ ಪೀಡಿತರಲ್ಲದ ವಿಮರ್ಶಕರಿಂದ ನಡೆಯಬೇಕಾದ ಕೆಲಸ.

"ಸಂನ್ಯಾಸಿ ಮತ್ತು ಇತರ ಕಥೆಗಳು" ಕಥಾಸಂಕಲನಕ್ಕೆ ನಮ್ಮ ಶ್ರೇಷ್ಠ ಕಥೆಗಾರರೂ, ಹಿರಿಯರೂ ಆದ ಶ್ರೀನಿವಾಸರು ಸೊಗಸಾದ ಮುನ್ನುಡಿ ಬರೆದು, ಕಥೆ ಬರೆಯುವುದನ್ನು ಶ್ರೀ 'ಕುವೆಂಪು'ರವರು ಎಲ್ಲಾದರೂ ಕಡಿಮೆ ಮಾಡಿದರೆ ನಮ್ಮ ಸಾಹಿತ್ಯಕ್ಕೆ ಬಹಳ ನಷ್ಟವಾಗುವುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಅಭಿಪ್ರಾಯವನ್ನು 'ಕುವೆಂಪು'ರವರ ಕಥೆಗಳನ್ನೋದಿದ ಎಲ್ಲರೂ ಒಪ್ಪುತ್ತಾರೆ.

ಗ್ರಂಥಋಣ

೧. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ
- ಕೆ.ಡಿ. ಕುರ್ತುಕೋಟಿ

೨. 'ಉಡುಗೊರೆ'ಯಲ್ಲಿ ಎಸ್.ವಿ. ಪರಮೇಶ್ವರಭಟ್ಟ, ಎಂ.ಎ. ಅವರ ಲೇಖನ

೩. ವಿಮರ್ಶೆಯ ಪೂರ್ವ ಪಶ್ಚಿಮ
- ಜಿ.ಎಸ್. ಶಿವರುದ್ರಪ್ಪ

೪. ಕಾವ್ಯವಿಹಾರ
- ಕುವೆಂಪು

೫. ದರ್ಶನ ವಿಮರ್ಶೆ
ಸಂಪಾದಕರು : ಡಾ. ಜಿ.ಎಸ್. ಶಿವರುದ್ರಪ್ಪ ಮತ್ತು
ಡಾ. ಪ್ರಭುಶಂಕರ

❑

'ಕುವೆಂಪು' ಅವರ ಕಥನ ಕವನಗಳು*

ಕನ್ನಡನಾಡಿನ ಹಿರಿಯ ಸಾಹಿತಿಗಳಲ್ಲಿ ಒಬ್ಬರಾದ 'ಕುವೆಂಪು'ರವರು ಹೊಸಗನ್ನಡ ಸಾಹಿತ್ಯದ ನವೋದಯದ ಕಾಲದಲ್ಲಿ, ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಕಥನ ಕವನಗಳನ್ನು ರಚಿಸಿದ್ದುಂಟು. ಅವರು ಬರೆದಿರುವ ಕಥನ ಕವನಗಳು ಸಂಖ್ಯಾದೃಷ್ಟಿಯಿಂದ ಅತ್ಯಲ್ಪ. ಆದರೆ ಅವುಗಳಲ್ಲೇ ಅವರು ಸಾಧಿಸಿರುವ ಸಿದ್ಧಿ ಅದ್ಭುತವಾದುದು. ಇಂತಹ ಸಿದ್ಧಿಯನ್ನು ಪಡೆದ 'ಕುವೆಂಪು' ಹೆಚ್ಚು ಹೆಚ್ಚಾಗಿ ಕಥನ ಕವನಗಳನ್ನೇಕೆ ರಚಿಸಲಿಲ್ಲ ಎಂದು ಅನ್ನಿಸುತ್ತದೆ. ಮಹಾಕಾವ್ಯ ಕಥನ ಕವನಗಳ ಗುಚ್ಛ ಎಂಬ ಅರ್ಥದಲ್ಲಿ 'ಕುವೆಂಪು' ಈ ಪ್ರಕಾರದಲ್ಲಿ ಗೌರೀಶಂಕರದ ಉತ್ತುಂಗ ಶಿಖರವನ್ನೇರಿದ್ದಾರೆ.

'ಕುವೆಂಪು' ಅವರ ಕಥನ ಕವನಗಳು ಜೀವನದ ಎಲ್ಲ ವಿಷಯಗಳನ್ನೂ ಒಳಗೊಂಡಿಲ್ಲ. ಆದರೆ ಅವರ ಕಥನ ಕವನಗಳಲ್ಲಿ ಮಲೆನಾಡಿನ ಸಾಮಾನ್ಯ ವ್ಯಕ್ತಿಗಳಾದ ಕರಿಸಿದ್ದ, ಗಿಡ್ಡಿಯರೂ, ಐತಿಹಾಸಿಕ ವ್ಯಕ್ತಿಗಳಾದ ತಾನಾಜಿ, ಪ್ರತಾಪಸಿಂಹರೂ, ಪೌರಾಣಿಕ ವ್ಯಕ್ತಿಯಾದ ದಶರಥನೂ ಬರುತ್ತಾರೆ. ಜೊತೆಗೆ ಇಂಗ್ಲಿಷ್ ಕಥನ ಕವನಗಳ ಅನುವಾದಗಳಿವೆ. ಈ ಅನುವಾದಗಳೋ, ಅನುವಾದಗಳೆಂದು ಯಾರಾದರೂ ಹೇಳದೆ ಹೋದರೆ ಅವುಗಳನ್ನು ಅನುವಾದಗಳೆಂದು ತಿಳಿಯುವುದು ಕಷ್ಟವಾಗುತ್ತದೆ.

'ಕುವೆಂಪು' ಅವರ ಕಥನ ಕವನಗಳಲ್ಲಿ ಅಲ್ಲಲ್ಲಿ ಬರುವ ಪ್ರಕೃತಿ ವರ್ಣನೆಗಳು ಸ್ವತಂತ್ರ ಭಾವಗೀತೆಗಳಿಂತಿವೆ. ಅಲ್ಲದೆ ಅವರ ಶೈಲಿ ವಸ್ತುಶೀಲವಾದದ್ದು :

'ಕರಿಸಿದ್ದ' ಕವನದಲ್ಲಿ ಒಸರುವ ಕರುಣರಸಕ್ಕೆ ಕರಗದ ಹಿರಿಯರಿಲ್ಲ. ಅತ್ಯಂತ ಸಾಮಾನ್ಯನ ಹೃದಯದಲ್ಲಿಯೂ ಉಂಟಾಗುವ ಆಸೆ ನಿರಾಸೆಗಳನ್ನೂ ಸದ್ದುಗದ್ದಲಗಳನ್ನೂ ಕಾಣಲಿಚ್ಛಿಸುವವರು 'ಕರಿಸಿದ್ದ' ಕವನವನ್ನು ಓದಬೇಕು. ಇಲ್ಲಿ

---

* ಇದು 'ಕುವೆಂಪು' ಅವರ ಕಥನ ಕವನಗಳನ್ನು ಕುರಿತ ಪ್ರಬಂಧವಾದರೂ ಕಥನ ಕವನದ ವ್ಯಾಪ್ತಿಗೆ ಒಳಪಡುವ 'ಹಾಳೂರು', 'ದೇವಕೇತು', 'ಮುಕ್ತಿರಾಹು', 'ಶ್ರೀಕೃಷ್ಣ ಜನ್ಮಾಷ್ಟಮಿ' ಮತ್ತು 'ಚಿತ್ರಾಂಗದಾ'ಗಳು ಈ ಪ್ರಬಂಧದ ವ್ಯಾಪ್ತಿಯೊಳಗೆ ಬಂದಿಲ್ಲ.

ಅಜ್ಞಾತನೊಬ್ಬನ ಚಿತ್ರವನ್ನು ಸಮಯ ಸನ್ನಿವೇಶಗಳಿಗೆ ತಕ್ಕುದಾದ ಶೈಲಿಯಲ್ಲಿ ಸರಣಿಯಲ್ಲಿ ನಿರೂಪಿಸಿರುವರು.

ಇಲ್ಲಿ ಕರಿಸಿದ್ದ ಗಿಡ್ಡಿಗೆ ಒಬ್ಬ ಮಗ ಬೈರ ಹುಟ್ಟಿದುದು, ತಂದೆ ತಾಯಿಯರಿಗೆ ಕಣ್ಮಣಿಯಾಗಿ ಬೆಳೆದುದು ಕೊನೆಗೊಂದು ದಿನ ಕೆರೆಯಲ್ಲಿ ಕಾಲು ಜಾರಿ ಬಿದ್ದು ತೀರಿಕೊಂಡುದರ ಚಿತ್ರಣವಿದೆ. ಇಲ್ಲಿ 'ಮೆಕೇಲ್' ಕವಿತೆಯ ಪ್ರಭಾವವನ್ನು ಕಾಣಬಹುದು, ಕಥೆಯ ನಿರೂಪಣೆಯಲ್ಲಿ. ಕರಿಸಿದ್ದ ಗಿಡ್ಡಿಯರ ವರ್ಣನೆಯಲ್ಲಿ ವರ್ಡ್ಸ್‌ವರ್ತ್‌ನ ಕವಿತೆಯ ಪ್ರಭಾವ ಸ್ಪಷ್ಟವಾಗಿದೆ.

> "ಕರಿಸಿದ್ದ ದನಗಳನು ಕಾಯುವನು, ಗಿಡ್ಡಿ
> ಮನೆಮನೆಗೆ ತಿರುಗಿ ದಿನಗೂಲಿ ಮಾಡುವಳು
> ಬಹುಕಾಲವಾದರೂ ಮಕ್ಕಳಾಗಲೆ ಇಲ್ಲ"

ಎಂಬ ಸಾಲುಗಳಲ್ಲಿ 'ಮೈಕೇಲ್' (Michael) ಕವಿತೆಯ ಪ್ರತಿಧ್ವನಿಯಿದೆ.

"ಯಾರು ಅರಿಯದ ಮಲೆಯ-
ನಾಡಿನಾ ಮೂಲೆಯಲಿ ನಾಗರಿಕತೆಯ ಸುಳಿಗೆ
ಬೀಳದೆಯೆ, ಜಗದ ದೊಂಬಿಯನ್ನು ಕೇಳಿ
ಬೇಸರದೆ"

ಎಂಬ ಕಡೆ 'For From the maddening crowd's ignoble strife' ಎಂಬ ಗ್ರೇ (Gray) ಕವಿಯ ಸಾಲುಗಳೂ, 'For away from the bustle and noise of city-life ಎಂಬ ವರ್ಡ್ಸ್‌ವರ್ತ್‌ನ ಸಾಲುಗಳೂ ನೆನಪಾಗುತ್ತವೆ. ಹಳ್ಳಿಯ ಜನಗಳು ಯಾವ ಅತಿಯಾದ ಆಸೆ ಆಕಾಂಕ್ಷೆಗಳು ಯಾವುವೂ ಇಲ್ಲದೆ ಮಿತಿಯಿಂದ ಸುಖವಾಗಿ ಬಾಳಿದರು ಎಂಬಲ್ಲಿ ಗ್ರೇ ಕವಿಯ 'ಎಲಿಜಿ' (Elegy)ಯ ವಿಚಾರಗಳ ಪ್ರಭಾವ ಕಂಡುಬರುತ್ತದೆ. ಹಳ್ಳಿ ಹಳ್ಳಿಯಲ್ಲಿಯೂ ಶ್ರೀರಾಮನಿದ್ದಾನೆ, ವಾಲ್ಮೀಕಿಯಿದ್ದಾನೆ, ಹನುಮಂತನಿದ್ದಾನೆ, ಆದರೆ 'ಜಸವಂತನಾಗದಿಹ ವ್ಯಕ್ತಿಗಳು ಇವರು ಎಂಬ ವಿಚಾರವು ಗ್ರೇ ಕವಿಯ 'ಎಲಿಜಿ'ಯಿಂದ ಪ್ರೇರಿತವಾದಂತೆ ತೋರುತ್ತದೆ.[೧] ಇಲ್ಲಿ ಬರುವ ಬೈರನ ಬಾಲ್ಯ, ಗಿಡ್ಡಿಯ ಮಾತೃ ವಾತ್ಸಲ್ಯ, ಹಂಡನಾಯಿಯ ಮೂಕ ಸಂಕಟ, ಸುಖದುಃಖಗಳ ಏರಿಳಿತಗಳು ಮೊದಲಾದುವು ತುಂಬ ಸಹಜವಾಗಿವೆ. ಒಟ್ಟು ಕವಿತೆಯಲ್ಲಿಯೆ ಸರಳತೆ ವಾಸ್ತವಿ ಕತೆಗಳು ಮೂಡಿ ಬಂದಿವೆ.

---

೧. ಎಸ್. ಅನಂತನಾರಾಯಣ : ಹೊಸಗನ್ನಡ ಕಾವ್ಯದ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಪು. ೩೨೮-೨೯.

'ಮರಸು ಬೇಟೆ'ಯಲ್ಲಿ ಮಲೆನಾಡಿನ ಸಾಮಾನ್ಯ ಜನರ ದೈನಂದಿನ ಜೀವನದಲ್ಲಿ ನಡೆವ ಒಂದು ವಿಶೇಷ ಘಟನೆಯ ಚಿತ್ರಣವಿದೆ. ಸಂಜೆ ಮರಸಿಗೆ ಹೊರಟ ತಂದೆಗೆ

> "ಏಳು ವರುಷದ ರನ್ನನವನು;
> ತುಂಬುದಾವರೆ, ಕೆನ್ನೆಯವನು;
> ನೇರಿಳೆಯ ಕರಿ ಕಣ್ಣಿನವನು ದುಂಬಿಗುರುಳವನು!
> ಜೊಲ್ಲ ಸೂಸುವ ಕೆಂಪು ತುಟಿಯಲಿ,
> ಮುದ್ದು ಮೋಹಿಪ ತೊದಲು ನುಡಿಯಲಿ,"
>
> "ನಾನು ಬಹೆನಪ್ಪಯ್ಯ ಕಾಡಿಗೆ"

ಎಂದು ಹಠ ಹಿಡಿಯುತ್ತದೆ. ಆಗ ತಂದೆ ಅವನಿಗೆ ಹಠಮಾಡಿದರೆ ಪೆಟ್ಟ ಕೊಡುವುದಾಗಿ ಹೆದರಿಸಿ-ಕಾಡಿನಲ್ಲಿ ಹುಲಿ, ಕರಡಿಗಳಿವೆ ಎಂದೂ ಹೆದರಿಸಿ-ಮಗನನ್ನು ಮನೆಯಲ್ಲಿಯೇ ಬಿಟ್ಟು ಕಾಡಿಗೆ ಹೊರಡುತ್ತಾನೆ. ಅವನಿಗೆ ಹಿಂದೆ ಯಾರೋ ಬರುತ್ತಿರುವಂತೆ ಅನುಮಾನ. ತಿರುತಿರುಗಿ ನೋಡಿ ಯಾರೂ ಬರುತ್ತಿಲ್ಲವೆಂದು ಅನುಮಾನ ಪರಿಹಾರಮಾಡಿಕೊಂಡು ಕಾಡಿಗೆ ಹೋಗಿ

> "ಕೊಲೆಯ ಕೋವಿಯ ತಪದೊಳಿದ್ದನು
> ಜಾಣ ಗುರಿಗಾರ"

ಹೀಗೆ ತಪಸ್ಸು ಮಾಡುತ್ತಿರುವಾಗ ಹಳುವಿನಲ್ಲಿ ಯಾವುದೋ ಪ್ರಾಣಿ ಬರುತ್ತಿರುವಂತೆ ಅನ್ನಿಸಿ ಗುರಿಯಿಟ್ಟು ಕುದುರೆಯನ್ನೊತ್ತಿದರೆ ಈಡೇ ಹಾರಲಿಲ್ಲ! ಏಕೆ ಹೀಗೆಂದು ಕೋವಿಯನ್ನು ಬೈದು, ಮುಂದೆ ನೋಡಿದರೆ ಬರುತ್ತಿರುವುದು ಪ್ರಾಣಿಯಲ್ಲ ತನ್ನ ಮುದ್ದು ಕಂದ. ಕೂಡಲೆ-

> "ಬೈದ ಕೋವಿಗೆ ಮಣಿದನೊಡನೆಯೆ!
> 'ಹೈದನುಳುಹಿದ ದೇವದೇವನೆ
> ನೀನು' "

ಎಂದು ಅಂದಿನಿಂದ ಬೇಟೆಯನ್ನು ಬಿಟ್ಟುಬಿಟ್ಟ.

'ಮಂಜಣ್ಣ ಹೇಳಿದ ಸ್ಥಳಗತೆ'ಯಲ್ಲಿ ಚಿಕ್ಕೂರಿನ ಸಿದ್ಧ ತೌರೂರಿನಲ್ಲಿದ್ದ ತನ್ನ ಹೆಂಡತಿ ಸಿಂಗಿಯನ್ನು ಕರೆದುಕಂಡು ಬರುವಾಗ, ಚಿಕ್ಕೂರಿಗೆ ಐದಾರು ಮೈಲಿ ದೂರದಲ್ಲಿ

> "ಕತ್ಲಾಗಿ, ಮುಗಿಲೇರಿ, ಮಳೆ ಬಂದಿತು!
> ಸಿದ್ದಗೆ ಕಂಬಳಿ; ಸಿಂಗಿಗೆ ಗೊರಬಿತ್ತು;
> ಮಿಂಚಿದ್ದು ಸಿಡಿಲಾಗಿ ಚಿಕ್ರೆಂದು ಜಡಿಬಿತ್ತು!"

ಸರಿ ಮೇಲಿನ ಗುಡ್ಡದಿಂದ ಬರುತ್ತಿದ್ದ ಮಳೆಯ ನೀರಿನಿಂದ ಊರ ಬಳಿಯಿದ್ದ ಹಳ್ಳ ತುಂಬಿ ಹರಿಯುತ್ತಿತ್ತು. ಅದರಲ್ಲಿ ಸಿದ್ಧ, ಸಿಂಗಿ ಇಬ್ಬರೂ ದಾಟಲು ಹೋಗಿ ಪ್ರಾಣ ನೀಗಿಕೊಳ್ಳುವರು. ಹಾಗೆ ಅಪಮೃತ್ಯುವಿಗೀಡಾಗುವಾಗ ಅವರ ಮನಸ್ಸಿನ ಮುಂದೆ ಏನೇನು ಹಾಯ್ದುಹೋಯಿತೋ ಯಾರಿಗೆ ಗೊತ್ತು?

'ಡೂಲಿ' ಬಹಳ ಸಣ್ಣ ಕಥನ ಕವನ. ಇಲ್ಲಿ ಬೇಟೆಗಾರನ ಕೈಯಿಂದಲೇ ಅವನ ನಾಯಿ ಸಾಯುವುದನ್ನು ಕಾಣುತ್ತೇವೆ.

"ತಿಮ್ಮ ದೊಡ್ಡ ಬೇಟೆಗಾರ, ಮಲೆಯನಾಡಿನೀಡುಗಾರ,
ಡೂಲಿಯೊಳ್ಳೆ ಬೇಟೆ ನಾಯಿ, ಹಿರಿಯಕುಲದ ಚೀನಿನಾಯಿ;
ಹಂದಿ ಮಿಗಗಳನ್ನು ಹಿಡಿದು ಕೀರ್ತಿವೆತ್ತುದದರ ತಾಯಿ!
ಬೆಟೆಗಾರರಿಬ್ಬರಿಂತು ಬೇಟೆಯಾಡುತ್ತಿದ್ದರು"

ಡೂಲಿ ಹಂದಿಯನ್ನು ಅಟ್ಟಿಸಿಕೊಂಡು ಬಂದಾಗ,

"ತಿಮ್ಮನೊಡನೆ ಕೋವಿಯೆತ್ತಿ ಗುರಿಯ ಗುಂಡು ಹೊಡೆದನು!
ಮುಗ್ಗರಿಸುತ ಹಂದಿ ಬಿತ್ತು! ಡೂಲಿ ಕೂಗುತಾಚೆ ಬಿತ್ತು!
ತಿಮ್ಮ ಮುಂದೆಯೋಡಿನನೋಡೆ ನಾಯಿಯಳುತ ಹೊರಳುತ್ತಿತ್ತು!
ಹಂದಿಯೊಡಲದಾಟಿ ಗುಂಡು ನಾಯಿಯೊಡಲ ಭೇದಿಸಿತ್ತು!
ತಿಮ್ಮನ ಕಡೆ ನೋಡುತೊರಲಿ ಡೂಲಿ ಕಣ್ಣು ಮುಚ್ಚಿತು!"

ಡೂಲಿ ಹಾಗೆ ನೋಡಿದಾಗ ತನ್ನ ಪ್ರಾಣಕ್ಕಿಂತಲೂ ಮಿಗಿಲಾಗಿ ತನ್ನ ಬೇಟೆ ನಾಯಿಯನ್ನು ಪ್ರೀತಿಸುವ ಬೇಟೆಗಾರನಾದ ತಿಮ್ಮುವಿನಲ್ಲಿ ಎಂತೆಂತಹ ಭಾವನೆಗಳು ಮೂಡಿರಬಹುದೆಂಬುದನ್ನು ಸಹೃದಯ ಓದುಗರು ಕಲ್ಪಿಸಿಕೊಳ್ಳಬಹುದು.

'ನಾಗಿ'ಯಲ್ಲಿ ಸವತಿ ತಾಯಿ ಮಾದಿ ತುಂಗೆ ಎಂಬ ಒಂದು ಹಸು ಗುಡಿಸಲಿಗೆ ಬಾರದಿರುವುದಕ್ಕೆ-

"ಬೆನ್ನ ಮೇಲೆ ಗುದ್ದಿ ಗುದ್ದಿ,
ಎದೆಯ ಬಾನಿನಲ್ಲಿ ಸಿಟ್ಟು ಮೋಡದಂತೆ ಕವಿಯಲು
ಗುಡುಗಿ ಗುಡುಗಿ ಮಿಂಚಿ ಮಿಂಚಿ, ಸವತಿ ತಾಯಿ ಮಾರಿಯಾಗಿ
ಪಾಪ! ತಬ್ಬಲಿ ಹೆಣ್ಣು ನಾಗಿಯ ಮೇಲೆ ಬೈಗುಳ ಕರೆದಳು"
"ಹೊಟ್ಟೆ ತುಂಬಾ ಹಿಟ್ಟು ಕೊಟ್ಟು, ಗುಡಿಸಲಲ್ಲಿ ಜಾಗ ಕೊಟ್ಟು,
ಸಾಕಿ ಸಹಲಹಿದೆ, ಮುಂಡೆ, ನಿನ್ನ" ಮೊಸಳೆಯಂತೆ ಆದೆಯಾ?
... ...
... ...
ಹೋಗು ಮುಂಡೆ ಮನೆಯ ಒಳಗೆ ಕಾಲು ಇಕಬೇಡೆಂ"ದಳು

ಆ ಸಣ್ಣ ಹುಡುಗಿ ಕಾಡಿನ ಕಗ್ಗತ್ತಲೆಗೆ ಮೊದಲು ಹೆದರಿ ನಂತರ ಸವತಿ ತಾಯಿಯ ತಿರಸ್ಕಾರಕ್ಕಿಂತ ಕಾಡೇ ಮೇಲೆಂದು ಭಾವಿಸಿ ತುಂಗೆಯನ್ನು ಹುಡುಕಲು ಕಾಡಿಗೆ ಹೋಗುತ್ತಾಳೆ. ಕಾಡಿಗೆ ಹೋದವಳು ಕಾಡಿನಲ್ಲಿ ತನ್ನ ಸತ್ತ ತಾಯಿಯು ಇರಬಹುದೆಂದು ಊಹಿಸಿ ಹುಡುಕುತ್ತಾಳೆ. ಪೊದೆಪೊದೆಗಳಲ್ಲಿ. ಬೇಟೆಗಾಗಿ ಹೋದ ಮಾದ, ನಾಗಿಯ ತಂದೆ, ಕತ್ತಲಲ್ಲಿ ಬರುವ ನಾಗಿಯನ್ನು ಹಂದಿಯೆಂದು ಬೇಗ ಗುರಿಯಿಟ್ಟು ಈಡು ಹೊಡೆಯುತ್ತಾನೆ. ನಾಗಿ ತುಂಗೆಯನ್ನು ಹುಡುಕಿ ತರುವುದಾಗಿ ಹೇಳುತ್ತಾ ಸಾಯುತ್ತಾಳೆ. ಮಾದನಿಗೆ ತಾನು ಗುಂಡು ಹೊಡೆದದ್ದು ಹಂದಿಗಲ್ಲ ತನ್ನ ಮಗಳು ನಾಗಿಗೆ ಎಂದು ತಿಳಿದ ಕೂಡಲೆ ಅವನೂ ನಾಗಿಯನ್ನು ತಬ್ಬಿಕೊಂಡು ಪ್ರಾಣಬಿಡುತ್ತಾನೆ.

> "ಮಗಳ ಎದೆಯನು ತನ್ನ ಕೋವಿಯ ಗುಂಡು ಹೊಕ್ಕು ಕೊಂದರೇನು?
> ತಾನೆ ಕೊಂದ ಮಗಳ ಸಾವೆ ಗುಂಂಡಿನೇಟಾಯ್ತವನಿಗೆ!"

ಹೀಗೆ 'ನಾಗಿ' ಕವನದಲ್ಲಿ ನಾಗಿಯ ಸ್ಥಿತಿ ಎಲ್ಲರಿಂದಲೂ ಮರುಕವನ್ನು ಸಂಪಾದಿಸುತ್ತದೆ. ಅಲ್ಲದೆ ಮಾದನಿಗೆ ತನ್ನ ಮಗಳ ಮೇಲಿರುವ ಉತ್ಕಟ ಪ್ರೇಮ ಎಂಥವರಿಂದಲೂ ಮೆಚ್ಚು ಪಡೆಯುವಂಥದ್ದು. ಸವತಿ ತಾಯಿ ಮಾದಿಯ ಬೈಯ್ಗುಳ ಗ್ರಾಮ್ಯವಾಗಿದ್ದರೂ ಅದನ್ನು ಹಾಗೇ ಕೊಟ್ಟಿರುವುದರಿಂದ ಕವನಕ್ಕೆ ಒಂದು ರೀತಿಯ ಸಹಜತೆ ಉಂಟಾಗಿದೆ.

ಹೀಗೆ ನಾಲ್ಕೈದು ಕವನಗಳಲ್ಲಿ ಮಲೆನಾಡಿನ ಜೀವನವನ್ನು ಚಿತ್ರಿಸಿದ 'ಕುವೆಂಪು' ಅವರು ಪೌರಾಣಿಕ ವಸ್ತುಗಳನ್ನೂ ಚಿತ್ರಿಸಿದ್ದಾರೆ.

'ಘಂಟಾಕರ್ಣ' ಒಬ್ಬ ಶಿವ ಭಕ್ತ. ಅನುಗಾಲವೂ ಶಿವನ ಚರಿತ್ರೆಯ ಹೊರತು ಮತ್ತೆ ಯಾವ ಶಬ್ದವೂ ತನ್ನ ಕಿವಿಗೆ ಬೀಳದಿರಲೆಂಬ ಅಭಿಪ್ರಾಯದಿಂದ ತನ್ನ ಎರಡು ಕಿವಿಗಳಿಗೂ ಘಂಟೆಗಳನ್ನು ಕಟ್ಟಿಕೊಂಡಿದ್ದ. ಇದು ಪುರಾಣದಲ್ಲಿ ಸಿಗುವ ಘಂಟಾಕರ್ಣನ ವಿಷಯ. ಈ ಕಥೆಯನ್ನು 'ಕುವೆಂಪು' ಅವರು ಹಾಸ್ಯಮಯವಾಗಿ ಚಿತ್ರಿಸಿದ್ದಾರೆ.

ಘಂಟಾಕರ್ಣನಿಗೆ

> 'ಹರಿ ಎಂದರೆ ಅವನಿಗೆ ಬರಿಬೊಂತೆ
> ಹರನೆನೆ ಹಾಲಿಗೆ ಜೇನಿಳಿದಂತೆ!
> ಬೊಮ್ಮನದಂತೂ ಕಬ್ಬಟಕಂತೆ'

ಆಗ ಅವನಿಗೆ ತ್ರಿಶೂಲಿಯೇ ಪ್ರತ್ಯಕ್ಷನಾಗಿ

'ರೂಪವು ಬೇರೆ; ನಾಮವು ಬೇರೆ
ಸಕ್ಕರೆ ತಿಂಡಿಯ ರುಚಿ ಬೇರೇನು?
ಜಲವೆನಲೇನು? ನೀರೆನಲೇನು?
ಸಂಸ್ಕೃತವೆನಲೇನು? ಕನ್ನಡವೆನಲೇನು?
ಬಾಯಾರಿದ ಮಾನವ ತಾ ಕುಡಿಯಲು
ತೃಷ್ಣೆಯೂ ನಿಲ್ಲುವುದಿಲ್ಲೆನು'

ಎಂದು ಬುದ್ಧಿ ಹೇಳಿದರೂ

'ಘಂಟಾಕರ್ಣನು ತಾನೆಂದಿನವೊಲೆ
ಜೀವಿಸುತ್ತಿದ್ದನು ಶಿವನುಪದೇಶವ
ನಿನಿತೂ ತಾರದೆ ಲಕ್ಷ್ಯಕ್ಕೆ'

ಭಕ್ತನಿಗೆ ಬುದ್ಧಿ ಹೇಳಿಯಾಯಿತು. ಇನ್ನು ಬುದ್ಧಿ ಕಲಿಸಬೇಕೆಂದು ಮಹೇಶನು ಹರಿಹರ ರೂಪವ ತಳೆದು ಬರುತ್ತಾನೆ. ಆಗ ಘಂಟಾಕರ್ಣನಿಗೆ

'ಹರಭಾಗವ ಕಾಣಲು ಸಂತೋಷ;
ಹರಿ ಭಾಗವ ಕಂಡರತಿರೋಷ'

ಉಂಟಾಗುತ್ತದೆ. ಹರನನ್ನು ಪೂಜಿಸಬೇಕಾದಾಗ ಏನು ಮಾಡುವುದೆಂದು ತೋರುವುದಿಲ್ಲ. ಆದರೆ ಸಂಜೀವನಿಯಂತೆ ಅವನಿಗೆ ಹೊಳೆದ ಶ್ಲೇಷೆಯಿಂದ, ಒಂದೇ ಸ್ತೋತ್ರದಿ

'ಹರಸ್ತುತಿಗೈದು, ಹರಿಯನು ಬೈದು
ಹರವಿದ್ದಾ ಪಕ್ಷಕೆ ನಮಿಸಿ
(ಹರಚಂದ್ರನ ಹರಿ ದೋಷವ ಕ್ಷಮಿಸಿ)
ಫಲಪುಷ್ಪದಿ ಪೂಜೆಯ ಮಾಡುತಿರೆ'

ಪೂಜೆಯ ಧೂಪ ಹರಿಯ ಮೂಗಿಗೂ ಹೋಗುತ್ತದೆ. ಅದನ್ನು ಕಂಡು ಘಂಟಾಕರ್ಣ

'ಹರನವರುರಿಸಿದ ಧೂಪದ ಚಕ್ಕೆ
ನಿನಗೆಂದಿಗು ಸಗಣಿಯ ಹೊಗೆಯಕ್ಕೆ'

ಎಂದು ಶಪಿಸಿದ್ದಲ್ಲದೆ, ಧೂಪ ಹರಿಯ ಮೂಗಿಗೆ ಹೋಗದಂತೆ ಅವನ ಮೂಗನ್ನೇ ಮುಚ್ಚಿ ಹಿಡಿಯುತ್ತಾನೆ. ಹರಿಹರರಿಬ್ಬರೂ ಗಾಂಭೀರ್ಯವನ್ನೀಡಾಡಿ

ಕಣ್ಮರೆಯಾಗುತ್ತಾರೆ. ಈ ಸುದ್ದಿ ನಾಡಿನಲ್ಲೆಲ್ಲಾ ಹರಡಿ ಹುಡುಗರು ಇವನನ್ನು ಲೇವಡಿ ಮಾಡಲು 'ಹರಿಹರಿ' ಎಂದು ಅವನ ಹಿಂದೆ ಮುಂದೆ ಯದ್ವಾತದ್ವಾ ಕೂಗುತ್ತಾರೆ. ಅದಕ್ಕೆ ಹರಿ ಶಬ್ದ ಕಿವಿಗೆ ಬೀಳದಿರುವಂತೆ ಎರಡು ಘಂಟೆಗಳನ್ನು ಎರಡು ಕಿವಿಗಳಿಗೂ ಕಟ್ಟಿಕೊಳ್ಳುತ್ತಾನೆ. ಅಂದಿನಿಂದ ಘಂಟಾಕರ್ಣನೆಂಬ ಹೆಸರುಂಟಾಗುತ್ತದೆ ಅವನಿಗೆ. ಇಲ್ಲಿ ಘಂಟಾಕರ್ಣನ ಕಡುಭಕ್ತಿಯನ್ನು ಮೆಚ್ಚಬಹುದು.

'ಕುವೆಂಪು' ಅವರು ದಶರಥನು ಮುನಿಕುಮಾರನನ್ನು ಅರಿಯದೆ ಕೊಂದ ಪ್ರಸಂಗವನ್ನು ಅತ್ಯಂತ ಪ್ರಭಾವ ಪೂರ್ಣವಾಗಿ 'ರಕ್ತ ರಜನಿ' ಎಂಬ ತಮ್ಮ ಕವಿತೆಯಲ್ಲಿ ಚಿತ್ರಿಸಿರುತ್ತಾರೆ. ಬೇಟೆಯಾಡಲು ಬಂದಿದ್ದ ದಶರಥನು ಕತ್ತಲು ಕವಿದುಕೊಂಡ ಕಾಡಿನಲ್ಲಿ ಕೊಳದ ಬಳಿ ತುಸು ಶಬ್ದವಾಗಲು,

'ಮದಗಜವೊ ಹೆಬ್ಬುಲಿಯೊ ಕೊಬ್ಬಿದ
ಕಾಡುಕೋಣವೊ, ಸೊಕ್ಕಿ ಮಲೆತಿಹ
ಸೂಕರವೊ, ಕೇಸರಿಯೊ, ಕರಡಿಯೊ,
ಎಂದು ಶಂಕಿಸಿ'
'ತನ್ನ ಪುಣ್ಯದಕ್ಷಿಯ
ತಾನರಿಯದಿರಿವಂತೆ'

ಬಾಣವನ್ನು ಬಿಡುತ್ತಾನೆ. ಕೂಡಲೆ ಆ ಬಾಣಕ್ಕೆ ಗುರಿಯಾದ ಬಾಲಕನ ಆರ್ತನಾದ ಕೇಳಿಬರುತ್ತದೆ. ಅನಂತರ ಆ ಬಾಲಕನನ್ನು ಸಂತೈಸಿ, ಆತನ ಹೆಣವನ್ನು ಹೆಗಲಲ್ಲಿ ಹೊತ್ತು ಮುನಿಯ ಸಮೀಪಕ್ಕೆ ಬಂದು ತಲೆ ತಗ್ಗಿಸಿ ಕ್ಷಮಾಪಣೆ ಕೇಳಲು ಆ ಮುನಿಯು,

'ಏಳು! ನೃಪತಿಯೆ ಏಳು! ಶಪಿಸೆನು
ನಿನ್ನನಾದರೆ ಕಾಲಗರ್ಭವ
ಹೊಕ್ಕ ದೃಷ್ಟಿಗೆ ತೋರುತಿದೆ: ನೀ-
ನಳಿವ ಸಮಯದಿ ನಿನ್ನ ಪುತ್ರರು
ಬಳಿಯೊಳಿರದೆ ವನಾಂತರದಿ ಸಂ
ಚರಿಸುತಿರುವರು! ಸುತರನಗಲಿದ
ನೀನು ದುಃಖದಿ ಮಡಿವೆ!'

ಎಂದು ಭವಿಷ್ಯವನ್ನು ಹೇಳುವನು. ಈ ಕವಿತೆಯಲ್ಲಿನ ವೈಶಿಷ್ಟ್ಯವೆಂದರೆ -ಪುರಾಣದಲ್ಲಿ ಪಿಂಗಳ ಮುನಿಯು ತನ್ನ ಸುತನಾದ ಸಿಂಧುವನ್ನು ಕೊಂದುದಕ್ಕಾಗಿ ದಶರಥನೂ ಕೂಡ ತನ್ನ ಅವಸಾನ ಕಾಲದಲ್ಲಿ ಸುತರನಗಲಿದ ದುಃಖದಿಂದ ಮಡಿಯಲಿ

ಎಂದು ಶಪಿಸುತ್ತಾನೆ. ಆದರೆ ಇಲ್ಲಿ ವಿಧಿಯ ವಜ್ರಹಸ್ತದಿಂದ ಮೊದಲೇ ರೂಪಿತಗೊಂಡಿರುವ ದಶರಥನ ಅವಸಾನ ಕಾಲವನ್ನು ಯೋಗದೃಷ್ಟಿಯಿಂದ ತಿಳಿದು ಹೇಳುತ್ತಾನೆ ಪಿಂಗಳ. ಪಿಂಗಳಮುನಿ ಶಾಪವನ್ನು ಕೊಡುವುದಿಲ್ಲ. 'ರಕ್ತ ರಜನಿ'ಯಲ್ಲಿ ದಶರಥನಿಗೆ ನಿಸರ್ಗವೂ ಮೋಸ ಮಾಡುತ್ತದೆ.

'ಕಣ್ಣು ಕತ್ತಲೆ ಕಿವಿಯು ಕತ್ತಲೆ
ಮುಟ್ಟಿದರೆ ಕತ್ತಲೆಯು, ಕತ್ತಲೆ
ಮುಟ್ಟದಿರೆ ಉಸಿರೆಳೆಯೆ ಕತ್ತಲೆ,
ಉಸಿರುಬಿಡೆ ಕತ್ತಲೆಯು, ಕಾಲವು
ಕತ್ತಲೆಯು, ದೇಶವದು ಕತ್ತಲೆ
ದೇಹವೇ ಕತ್ತಲೆಯ ಕುಪ್ಪಸ
ವಾಯ್ತು ಜೀವನಿಗೆ!'

ಇಂತಹ ಸನ್ನಿವೇಶದಲ್ಲಿ, ಪೊಮ್ಮರೆಯನ್ನಟ್ಟಿಕೊಂಡು ಬಂದು ಅದು ಸಿಗದೆ ನಿರಾಶನಾಗಿದ್ದಾಗ ಸರಯೂ ನದಿಯ ತಡಿಯಲ್ಲಿ ಗುಳು ಗುಳು ಶಬ್ದವಾದರೆ ಅದು ನೀರು ಕುಡಿಯಲು ಬಂದ ಕಾಡುಪ್ರಾಣಿಯಿಂದಾದ ಶಬ್ದವೆಂದೇ ದಶರಥನು ಬಗೆದುದು ಸಹಜ. ಹೀಗೆ ಸಿಂಧುವಿನ ಕೊಲೆಗೆ ಅವ್ಯಕ್ತವಾಗಿ ನಿಸರ್ಗವೂ ಸಹಾಯ ಮಾಡಿದೆ. ಅನಂತರ ರಮ್ಯ ಕೌಮುದಿಯ ಉದಯವಾಗುತ್ತದೆ. ಮುನಿಕುಮಾರನ ಹತ್ತಿರ ಹೋದ ದಶರಥನನ್ನು,

"ಅಂತರಿಕ್ಷ
ನೋಡಲದು 'ನಡೆಪಾಪಿ' ಎಂದಿತು!
'ಪಾಪಿಗಳು ನಾವಲ್ಲ ನೋಡದಿ
ರೆಮ್ಮ ನೋಡದಿರೆಂ'ದು ಚುಕ್ಕೆ
ಗಳೆಲ್ಲ ಮಿಣುಕಿದುವು"

ಹೀಗೆಯೇ ನಿಸರ್ಗದಲ್ಲಿದ್ದ ಚೇತನಾಚೇತನ ವಸ್ತುಗಳೆಲ್ಲವೂ ಒಕ್ಕೊರಲಿನಿಂದ ದಶರಥನನ್ನು 'ಪಾಪಿ' ಎಂದು ಮೂದಲಿಸಿದಂತಾಗುತ್ತದೆ. ಅವನ ಏಕಾಂಗಿತನ, ನಿಸ್ಸಹಾಯಕತೆ ನಮ್ಮ ಹೃದಯವನ್ನು ತಟ್ಟುತ್ತದೆ.

'ಮಿಂಚಿದ ಕಜ್ಜವನು ಹಿಂ-
ತಿರುಗಿಸುವರಿಹರಾರು? ಬಲ್ಲಿರೆ?
ನೆಲವನೀಯುವೆ ನಿಮಗೆ! ದಶರಥ
ತನವದೇಕೆ'

ಎಂದು ಹಲಬುತ್ತಾನೆ. ಆದರೂ

> 'ಧರ್ಮದೆದುರಲಿ
> ತನ್ನ ಪಾಪವನೊಪ್ಪಿಕೊಳ್ಳುವ
> ವೀರನಂದದಲಿ!'

ಮುನಿಕುಮಾರನ ಸಹಿತ ಪಿಂಗಳನೆಡೆಗೆ ಹೋಗುತ್ತಾನೆ.

ಕವಿತೆಯ ಆರಂಭದಲ್ಲಿ ಬರುವ ಸಂಧ್ಯಾಕಾಲದ ವರ್ಣನೆ ಮತ್ತು ಮುನಿಕುಮಾರನ ಮರಣವಾದ ಮೇಲೆ ಬರುವ ಚಂದ್ರೋದಯದ ವರ್ಣನೆಗಳು ಸ್ವತಂತ್ರ ಭಾವಗೀತೆಗಳಂತಿವೆ. ಅಲ್ಲದೆ ಪ್ರಾಣಿ ಜೀವನದ ಸೂಕ್ಷ್ಮ ಚಿತ್ರಗಳು ನಮಗೆ ಇಲ್ಲಿ ಸಿಗುತ್ತವೆ,

> 'ಗೊರಸಿಗಂಟಿದ ತರಗೆಲೆಯ ಕೊಡ
> ಕೊಡಗಿ ಮರ್ಮರನಾದ ಗೈಯುತ'

ಓಡುವ ಜಿಂಕೆಯ ಚಿತ್ರ ಮತ್ತು

> 'ನಿಂತು ಮೊಳಕಾಲೂರಿ ಮೋರೆಯ
> ನೀರೀಗಿಟ್ಟು'!

ನೀರನ್ನೀಂಟುವ ಚಿತ್ರಗಳು ಸಹಜವಾಗಿವೆ, ರಮ್ಯವಾಗಿವೆ.

ಪಿಂಗಳ ಮುನಿ ಮತ್ತು ಅವನ ಸತಿಯನ್ನು,

> 'ಕಾಲ ಸಮೆದಿಹ ಮೆಯ್ಯ ಮುದುಕರು
> ಕಣ್ಣ ಬೆಳಕಳಿದಿರುವ ಹಳಬರು
> ಸದ್ದನಗಲಿದ ಕಿವಿಯ ವೃದ್ಧರು
> ಶಕ್ತಿಗುಂದಿದ ಗತಿಯ ಮುನಿಗಳು'

ಎಂಬ ನಾಲ್ಕು ಸಾಲುಗಳಲ್ಲಿ ಕಣ್ಣ ಮುಂದೆ ಕಟ್ಟುವಂತೆ ಚಿತ್ರಿಸಿದ್ದಾರೆ. ಈ ಕವನಕ್ಕೆ 'ರಕ್ತ ರಜನಿ' ಎಂಬ ಹೆಸರು ಔಚಿತ್ಯಪೂರ್ಣವಾಗಿದೆ.

ಪ್ರಾಚೀನ ಪುರಾಣ ವಸ್ತುಗಳಿಗೆ ಮನಸೋತಿರುವಂತೆಯೇ 'ಕುವೆಂಪು' ಅವರು ವೀರಾವೇಶದಿಂದ ಮಿಡಿಯುವ ಐತಿಹಾಸಿಕ ಸಂಗತಿಗಳಿಗೂ ಮಾರುಹೋಗಿದ್ದಾರೆ.

'ತಾನಾಜಿ' ವೀರರಸವೇ ಮೈವೆತ್ತಂತಿರುವ ಕವನ. ಇಲ್ಲಿ ಹೊರಹೊಮ್ಮುವ ವೀರರಸಕ್ಕೆ ಹುರುಪೇರದ ಎಳೆಯರಿಲ್ಲ. 'ತಾನಾಜಿ'ಯ ವೀರಶ್ರೀ ಎದೆ ತಟ್ಟುತ್ತದೆ. ಹೆಜ್ಜೆ ಹೆಜ್ಜೆಗೂ ಕ್ರಿಯೆಯು ಮುಂದುವರಿಯುತ್ತಾ ಹೋಗುವ ಇದೇ ಕವಿತೆಯಲ್ಲಿ ತಾನಾಜಿಯ ಏಕಾಂಗ ಸಾಹಸವನ್ನು ಚಿತ್ರಿಸುವ ಸರಣಿಯೆ ಚಿರನೂತನವಾಗಿದೆ.

'ಎಲ್ಲಿ ಮೈನವಿರೇಳುವುದಲ್ಲಿ
ಎಲ್ಲ ಖಡ್ಗದ ಖಣಖಣೆಲಲ್ಲಿ
ಎಲ್ಲ ವೀರರ ಮುಂಡಗಳಲ್ಲಿ
ಎಲ್ಲಿ ರಕ್ತದ ರಣಧುನಿಯಲ್ಲಿ-ಅಲ್ಲಿ ತಾನಾಜಿ!
ಎಲ್ಲರ ಮುಂದೆಯು ತಾನಾಜಿ!
ವೀರ ಪುಂಗವ ತಾನಾಜಿ:- ಕಲ್ಕಿ ತಾನಾಜಿ!
ಮಿಂಚುವ ಕತ್ತಿಗಳೆಲ್ಲವು ಅವನವೆ,
ಚಿಮ್ಮುವ ಬಾಣಗಳೆಲ್ಲವು ಅವನವೆ;
ಅವನೊಬ್ಬನೆ ರಣಧಾಮದಲಿ
ನೂರಾದನು ಸಂಗ್ರಾಮದಲಿ!'

ಇಲ್ಲಿ ಲಾವಣಿಯ ಸರಣಿ ವಿಷಯದ ಕ್ರಿಯೆಗೆ ತಕ್ಕಂತೆ ಹೊಂದಿಕೊಂಡು ಬಂದಿದೆ. ಸಿಂಹಗಡದ ಮುತ್ತಿಗೆ ಮಾವಳಿ ಆಳ್ಗಳ ಕದನ ಕೋಲಾಹಲ, ತಾನಾಜಿಯ ಅದ್ವಿತೀಯ ಕಾಳಗ ಮೊದಲಾದುವುಗಳು ಕಣ್ಣಿಗೆ ಕಟ್ಟಿದಂತೆ ಚಿತ್ರಿತವಾಗಿವೆ. 'ತಾನಾಜಿ'ಯ ಆರಂಭದ ವಾತಾವರಣ ಕಲ್ಪನೆಗೆ ತಕ್ಕಂತಿದೆ:

'ಸದ್ದಿಲಗತ್ತಲು, ಕತ್ತಲದೆತ್ತಲು!
ಸಿಂಹಗಡದಾ ಕೋಟೆಯ ಸುತ್ತಲು
ಕೃಷ್ಣಪಕ್ಷದ ಕತ್ತಲು! -ಕಗ್ಗತ್ತಲು!
ಚಳಿಗಾಲದ ಚಳಿ ಕೊರೆಯುತಲಿತ್ತು,
ಕುಳಿರ್ಗಾಳಿಯು ಸುಯ್ಯನೆ ಬೀಸಿತ್ತು;
ಮುದುಗಿದ ಮಾಗಿಯ ಚಳಿಯಲಿ ಕಪ್ಪು
ಹೆಪ್ಪು ಗಟ್ಟಿತ್ತು! -ಹೆಪ್ಪುಗಟ್ಟಿತ್ತು!
ನಿದ್ರಿತಭೂಮಿಯ ಮನದಲಿ ದುರ್ಗವು
ಸ್ವಪ್ನವಾಗಿತ್ತು! ಸ್ವಪ್ನವಾಗಿತ್ತು!'

ತಾನಾಜಿಗೆ ಪ್ರತಿಸ್ಪರ್ಧಿಯಾದ ಉದಯಭಾನುವೂ ಸಾಮಾನ್ಯನಲ್ಲ. ಅವನು 'ಕ್ಷತ್ರಿಯ ಪೌರುಷಕುತ್ತಮ ತವನಿಧಿ'. ತಾನಾಜಿಯ ಮತ್ತು ಉದಯಭಾನುವಿನ ಹೋರಾಟ ಕಣ್ಣಿಗೆ ಕಟ್ಟುತ್ತದೆ:

'ಬಂಡೆಯು ಬಂಡೆಗೆ ಬಡಿದಂದದಲಿ
ಸಿಡಿಲಿಗೆ ಸಿಡಿಲೇ ಹೊಡೆದಂದದಲಿ
ಸದ್ದಿರಿಯಿತು ದಿಙ್ಮಂಡಲವ!
ಬಿರಿಯಿತು ಭೂಮಂಡಲವ!'

ಇಬ್ಬರು ಬಿದ್ದರು, ಇಬ್ಬರು ಎದ್ದರು
ಇಬ್ಬರು ತಿವಿದರು, ಇಬ್ಬರು ನೆಗೆದರು
ಇಬ್ಬರು ರಕ್ತವ ಚೆಲ್ಲಿದರು
... ...
... ...
... ...
ಮಿಂಚು ಮಿಂಚನು ಸೆಣಸುವ ತೆರದಿ,
ಸಿಡಿಲು ಸಿಡಿಲನು ಸೆಣಸುವ ತೆರದಿ,
ಆನೆಯಾನೆಯ ಕೆಣಕುವ ತೆರದಿ,
ಸಿಂಹ ಸಿಂಹವ ಕೆಣಕುವ ತೆರದಿ,

ಕಾದಿದರಾ ವೀರಾಳುಗಳು! -ಕಟ್ಬಾಳುಗಳು!
ರಣನಿಂತುದು ಅವರಿಬ್ಬರೊಳೆ!
ಜಯನಿಂತುದು ಅವರೊಬ್ಬರೊಳೆ!

ಈ ಕಥನ ಕವನದ ಅಂತ್ಯವೂ ತಲೆದೂಗಿಸುವಂತಿದೆ. ಸಿಂಹಗಡವೇನೋ ಲಭಿಸಿತು: ಆದರೆ ತಾನಾಜಿಯ ಅಸುವು ಬಲಿಯಾಯಿತು. ಈ ಸಂಕಟವನ್ನು ಸಹಿಸಲಾರದೆ :

"ಕಣ್ಣೀರ್ಗರೆಯದ ಶಿವರಾಯನು ತಾ
ಕಂಬನಿಗರೆದನು ಇಂತೆಂದು:
'ಸಿಂಹದುರ್ಗವು ಕೈಸೇರ್ದುದು; ಹಾ
ಮಾಯವಾದುದೆ ಸಿಂಹವು! ನನ್ನ ಸಿಂಹವು!' "

ಎಂದು ನಿಟ್ಟುಸಿರುನ್ನು ಬಿಡುವನು. 'ತಾನಾಜಿ' ಕಥನ ಕವನದಲ್ಲಿ ಎಲ್ಲಿಯೂ ಏಕಮುಖತೆಗೆ ಭಂಗ ಬಂದಿಲ್ಲ. ಅದು ಈ ಕವನದ ವೈಶಿಷ್ಟ್ಯ.

'ಕುವೆಂಪು' ಅವರು ರಚಿಸಲು ತೊಡಗಿದರೆ ಅಪೂರ್ಣವಾಗಿ ನಿಂತಿರುವ ಕಥನ ಕವನ 'ಪ್ರತಾಪಸಿಂಹ'. ಈ ಕವನದ ಬಗ್ಗೆ 'ಕುವೆಂಪು'ರವರೇ ಈ ರೀತಿ ಹೇಳಿಕೊಂಡಿದ್ದಾರೆ: "ಪ್ರೌಢ ಪ್ರತಾಪಿಯಾದ ಪ್ರತಾಪನು ಸ್ವದೇಶ ರಕ್ಷಣೆಗಾಗಿ ಬಲಾಧಿಕನಾದ ಅಕ್ಬರನೊಡನೆ ಹೋರಾಡಿ ಇನ್ನಿಲ್ಲದ ಕಷ್ಟ ಪರಂಪರೆಗಳನ್ನು ಅನುಭವಿಸಿದರೂ ಅಧೀರನಾಗದೆ ಶತ್ರುವಿಗೆ ತಲೆಬಾಗದಿದ್ದವನು. ಕಾಡಿನಲ್ಲಿ ಅನ್ನ ನೀರುಗಳಿಲ್ಲದೆ ಅಲೆಯುತ್ತಿರುವಾಗ, ಇದ್ದ ಅರೆ ರೊಟ್ಟಿಯನ್ನು ಮಗುವಿನ ಕೈಯಿಂದ ಕಾಡುಬೆಕ್ಕೊಂಡು ಹೊತ್ತುಕೊಂಡು ಹೋಗಲು ಮಗುವಿನ ದುಃಖವನ್ನು ಕಂಡು

ಮರುಗಿ, ರಾಜಪದವಿಯನ್ನು ಶಪಿಸಿ, ಶತ್ರುವಿಗೆ ಶರಣಾಗುವುದೇ ಲೇಸೆಂದು ನಿಶ್ಚಯಿಸಿದನಂತೆ. ಪ್ರತಾಪನ ಯಾವ ಗುಣವನ್ನು ನಾವು ಮೆಚ್ಚೋಣ? ಯಾವ ಗುಣ ಹೆಚ್ಚು ಅಭಿನಂದನೀಯವಾದದ್ದು? ಇಂಥ ಒಂದು ಸಮಸ್ಯೆಯಲ್ಲಿ ಈ ಕವನ ಆರಂಭವಾಗಿ ಅಪೂರ್ಣವಾಗಿ ನಿಂತಿದೆ."

ಇಲ್ಲಿ ಆಗಿರುವುದು ಆರಂಭಮಾತ್ರ. ಈ ಕವನ ಪೂರ್ಣವಾಗಿದ್ದಿದ್ದರೆ ಶ್ರೇಷ್ಠವಾದ ಕಥನ ಕವನವಾಗುತ್ತಿತ್ತು ಎಂದು ಅದರ ಆರಂಭವನ್ನು ಗಮನಿಸಿ ಹೇಳಬಹುದು. ಆರಂಭದಲ್ಲಿ ಬರುವ ದೇಶಪ್ರೇಮದ ನುಡಿಯನ್ನು ಕೇಳಿ ಪ್ರತಿಯೊಬ್ಬನೂ ಉತ್ಕಟ ದೇಶಪ್ರೇಮಿಯಾಗುತ್ತಾನೆ. ದೇಶದ್ರೋಹಿ ಏನಾದರೂ ತನಗಾಗುವ ಗತಿಯನ್ನು ಕೇಳಿದರೆ ಖಂಡಿತ ಪರಿವರ್ತಿತನಾಗುತ್ತಾನೆ.

'ಬಿರುಗಾಳಿಯ ಸ್ವಾತಂತ್ರ್ಯದ ಜೊತೆಯಲಿ
ಕಾನನ ವಾಸವೆ ಲೇಸಲ್ತೆ?
ತಂಗಾಳಿಯ ಪರತಂತ್ರದ ಜೊತೆಯಲಿ,
ಸುರಮಂದಿರವೂ ಹೇಸಲ್ತೆ?'

ಎಂದು ಕೇಳುತ್ತಾರೆ. ಈ ಕವನ ಪೂರ್ಣವಾಗಿದಿದ್ದರೆ ಕನ್ನಡ ಸಾಹಿತ್ಯದ ಕಥನ ಕವನ ಪ್ರಕಾರಕ್ಕೆ ಒಂದು ಉತ್ತಮ ಕೊಡುಗೆಯಾಗುತ್ತಿತ್ತು.

'ಕುವೆಂಪು' ಅವರು ತಾವೇ ಸ್ವತಂತ್ರವಾಗಿ ಕಥನ ಕವನಗಳನ್ನು ರಚಿಸಬಲ್ಲವರಾದರೂ ಆಂಗ್ಲ ಭಾಷೆಯಲ್ಲಿರುವ ಉತ್ತಮ ಕಥನ ಕವನಗಳನ್ನು ಕನ್ನಡಕ್ಕೆ ಭಾಷಾಂತರಿಸಿಯೋ, ರೂಪಾಂತರಿಸಿಯೋ, ಭಾವಾನುವಾದ ಮಾಡಿಕೊಡುವುದಕ್ಕೆ ಹಿಂದೆ ಮುಂದೆ ನೋಡಿಲ್ಲ.

Lord Tennyson ಕವಿಯ 'Morte d' Arthur' ಕನ್ನಡಲ್ಲಿ 'ಜಯಸಿಂಹನ ಕೊನೆಗಾಲ'ವಾಗಿದೆ. ಅಲ್ಲಿಯ King Arthur- ಜಯಸಿಂಹನಾಗಿ, Sir Bedivere- ರಣವೀರನಾಗಿ, Excalibar ಎಂಬ ಕತ್ತಿ 'ಮಾಕಾಳಿ'ಯಾಗಿದೆ.

"So all day long the noise of battle roll'd
Among the mountaino by the winter sea"

ಎಂಬ ಸಾಲುಗಳ ಕನ್ನಡ ರೂಪಾಂತರ ಹೀಗಿದೆ :

'ಇಂತು ಆ ತಪ್ಪಲೊಳು ಕದನ ಕೋಲಾಹಲವು ಹಗಲೆಲ್ಲ ಮೊಳಗಿ
ಮುಳುಗುತಿರೆ ಮುಳುಗಿದನು ಪಡುಗಡಲಿನಂಚಿನಲಿ ದಿನಮಣಿಯು ತೊಳಗಿ

ಹಬ್ಬಿದುದು ಮುಂಗಪ್ಪು; ಮುಸುಗಿದುದು ಬಿಳಿಮಂಜು;
ಚಳಿಗಾಳಿಯಲಿ ತೀಡಿ
ನರಳಿದುದು ಪೂರಾಯಿಗಾಯದಲಿ ನೊಂದು ನರಳುವ ಭಟರ ಕೂಡಿ.'

ಅನಂತರ 'ಕುವೆಂಪು'ರವರು ಕೊಳುಗುಳಿದ ವಿಸ್ತಾರ ವರ್ಣನೆಯನ್ನು ಮಾಡಿದ್ದಾರೆ:

'ಆ ದಿನದ ಕದನದಲ್ಲಿ ಜಯಸಿಂಹ ಭೂವರನ ನೆಚ್ಚಿಗೆಯ ಸೇನೆ
ರೊಚ್ಚಿನಲಿ ಕಾದಾಡಿ ರೊಚ್ಚುತರಿಸಿ ಕರವನು ಹೆಚ್ಚಿ ಬರೆ ಬೇನೆ
ನೊಂದು ತಿರೆಗುರುಳಿದುದು! ಮಿರ್ತುವಿನ ಕರಿನೆರಳು ರಣರಂಗದಲ್ಲಿ
ಸುಳಿದು ತಿರುಗಿತು ಕೆರಳಿ ಮೂಳೆಗಳ ಮುರಿದು ಬಿಸಿನೆತ್ತರನು ಚೆಲ್ಲಿ!
ಸಾಯುವರ ನರಳಾಟ, ಸತ್ತವರ ಚೀರಾಟ, ಮರುಳುಗಳಕಾಟ
ಸಾಯುತಿಪರೆದೆಲುಬುಗಳ ಮುರಿವ ಹಸಿದ ಶಿವಗಣದ ಕೂಗಾಟ,
ಮಜ್ಜೆ, ನೆತ್ತರು, ಮಾಂಸ, ಮುರಿದ ಕೂರಸಿಗಳಿಂದಗುರ್ವಾಯ್ತು
ಭೀಕರದ ರಣರಂಗ!'

ಮೇಲಿನ ವರ್ಣನೆ Tennysonನಲ್ಲಿಲ್ಲ. ರಣರಂಗದ ಅವ್ಯವಸ್ಥೆಯ ವರ್ಣನೆ ಮನಮುಟ್ಟುವಂತಿದೆ.

'ಮುಂದೆಯೂ ಕವಿಗಳು ತಮಗೆ ಆಗತ್ಯ ತೋರಿದಂತೆ ಹಿಗ್ಗಿಸಿ, ಕುಗ್ಗಿಸಿ, ಸ್ವತಂತ್ರವಾಗಿ ಕೆಲವು ಭಾಗಗಳನ್ನು ಮಾಡಿ, ತಮ್ಮದೇ ವರ್ಣನೆಗಳನ್ನು ಮಾತುಗಳನ್ನು ಸೇರಿಸಿ, ಕವಿತೆಯನ್ನು ಬರೆದಿದ್ದಾರೆ' ಈ ಅಭಿಪ್ರಾಯಗಳಿಂದ ಎಸ್. ಅನಂತನಾರಾಯಣ ಅವರು 'ಜಯಸಿಂಹನ ಕೊನೆಗಾಲ'ವನ್ನು 'ಕುವೆಂಪು' ಅವರ ಭಾಷಾಂತರವೆಂದು ಕರೆದಿದ್ದರೂ ಅದು 'Morte-d' Arthur' ಕವಿತೆಯ ರೂಪಾಂತರವೇ ಹೊರತು ಭಾಷಾಂತರವಲ್ಲ ಎಂದು ಹೇಳಿದ್ದಾರೆ. ಆದರೆ ಮೇಲೆ 'ಜಯಸಿಂಹನ ಕೊನೆಗಾಲ'ದಿಂದ ಉದಾಹರಿಸಿರುವ ಸಾಲುಗಳನ್ನು ಬಿಟ್ಟರೆ ಈ ಕವಿತೆ ಮೂಲಕ್ಕೆ ನಿಷ್ಠವಾಗಿದೆ. ಎಲ್ಲಿಯೂ ಕವಿ ತಮಗೆ ಅಗತ್ಯ ತೋರಿದಂತೆ ಹಿಗ್ಗಿಸಿಲ್ಲ, ಕುಗ್ಗಿಸಿಲ್ಲ. ಅಂದರೆ ಎಲ್ಲಿಯೂ ಕವಿಯ ಸ್ವಂತ ಅಭಿಪ್ರಾಯ, ಮಾತು, ಭಾವನೆಗಳು ಬಂದಿಲ್ಲವೆಂದೇನೂ ಅಲ್ಲ. ಒಟ್ಟು ಕವಿತೆಯ ದೃಷ್ಟಿಯಿಂದ ಅದನ್ನು ನಿರ್ಲಕ್ಷಿಸಬಹುದು. ಉದಾಹರಣೆಗೆ.

But if thou spare to fling, Excalibar,
I will arise and slay thee with my hands,

ಎಂಬ ಸಾಲುಗಳ ಅನುವಾದ ಕನ್ನಡದಲ್ಲಿ ಹೀಗಿದೆ :

ಕೂರಸಿಯ ನೆಸೆಯದೆಲೆ ನೀ ಬಂದರೀಯೆಡೆಗೆ
ಕಡಿದು ಕೆಡಹುವೆ ಸಲಹಿದೀ ಕೈಯಲಿ!

ಮೇಲಿನ ಅನುವಾದದಲ್ಲಿ 'ಸಲಹಿದೀ ಕೈಯಲಿ' ಎನ್ನುವುದು ಮೂಲದಲ್ಲಿಲ್ಲದ ಹೊಸಭಾವ. ಆದರೆ ಇಂತಹ ಭಾವನೆಗಳನ್ನು ಒಟ್ಟು ಕವಿತೆಯ ದೃಷ್ಟಿಯಿಂದ ನಿರ್ಲಕ್ಷಿಸಬಹುದು. ಹೀಗೆ ಮೇಲೆ ಉದಾಹರಿಸಿದ ಕೊಳುಗುಳದ ವಿಸ್ತಾರ ವರ್ಣನೆಯೊಂದನ್ನು ಬಿಟ್ಟರೆ ಸ್ವತಃ ಕವಿಗಳೇ ಹೇಳಿರುವಂತೆ ಇದು Lord Tennyson ಕವಿಯ 'Morte d' Arthur' ಕವಿತೆಯ ಭಾಷಾಂತರ ಎನ್ನಬಹುದು.

'ಕುಮುದಿನಿ' Words worth ಕವಿಯ 'ಲಾಡೇಮಿಯ' (Laodamia) ಕವಿತೆಯ ಭಾವವನ್ನು ಗ್ರಹಿಸಿ ರಚಿತವಾದದ್ದು ಎಂದು 'ಕುವೆಂಪು' ಅವರೇ ಹೇಳಿದ್ದಾರೆ. ಈ ಕವಿತೆಯ ತುಂಬ ಪ್ರಕೃತಿ ಚಿತ್ರಗಳಿವೆ :

> "ಮೋಡಗಳ ಸುಳಿವಿಲ್ಲ, ಬಾನೊಳು
> ಮಿಂಚಿದುವು ಚಿಕ್ಕೆಗಳು, ತಳಿರೆಡೆ
> ಚರಿಸಿ ಕಂಪನು ಸೂರೆಗೊಳ್ಳುತ
> ಲೀಲೆಯೊಳು ಮೈಮರೆತ ತಣ್ಣೆಲ-
> ಒಯ್ಯ ನೊಯ್ಯನೆ ತೀಡಿತು"

ಕುಮುದಿನಿಯು ಗಂಡನಿಗಾಗಿ ಪಡುವ ವೇದನೆಯ ವಿಸ್ತಾರ ವರ್ಣನೆ ಇಲ್ಲಿದೆ. ಈ ಭಾವ ಮೂಲದಲ್ಲಿಲ್ಲ. ಅಲ್ಲದೆ ಮೂಲದಲ್ಲಿ Laodamiaಳು ತನ್ನ ಗಂಡನಾದ Prtoesilans ಟ್ರೋಜನ್ ಯುದ್ಧದಲ್ಲಿ Delphic ಭವಿಷ್ಯದಂತೆ. Troy ತೀರದ ಮೇಲೆ ಮೊದಲಿಳಿದು ತನ್ನ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ವಿಷಯವನ್ನು ತಿಳಿದಿರುತ್ತಾಳೆ. 'ಕುಮುದಿನಿ'ಯಲ್ಲಿ ಕುಮುದಿನಿ,

> "ಇನಿಯನಿಹನೋ? ಕದನದಲಿ ಮಡಿ
> ದಿಹನೊ? ಕೈದುಗಳಾಟದಲಿ ನೊಂ
> ದಿಹನೊ? ಅರಿಗಳ ಸೆರೆಮನೆಯಲುರು
> ಳುವನೊ? ದೇಸಿಗನಂತೆ ಚರಿಪನೊ?"

ಎಂಬ ಸಂದೇಹದಲ್ಲಿರುತ್ತಾಳೆ.

ಅವಳ ಗಂಡನ ನೆರಳು ದೇವದೂತನೊಂದಿಗೆ ಬರುವ ವರ್ಣನೆ, ಕುಮುದಿನಿಗೆ ಅವನ ಬುದ್ಧಿವಾದ, ಅವನು ಹೊರಟೊಡನೆಯೇ ಅವಳು ಕೆಳಗುರುಳಿ ಪ್ರಾಣ ಬಿಟ್ಟುದು ಇವುಗಳ ಚಿತ್ರಣ ಚೆನ್ನಾಗಿದೆ. Words Worthನ ಕವನದಲ್ಲಿ Laodamiaಳನ್ನು ಸ್ವರ್ಗಕ್ಕೆ ಸೇರಿಸುವುದಿಲ್ಲ. ಅವಳು ಗಂಡನ ಬುದ್ಧಿವಾದವನ್ನು ಕೇಳದೆ ಅತಿರೇಕಕ್ಕೆಡೆಕೊಟ್ಟಳೆಂದು ಅವಳಿಗೆ ಶಿಕ್ಷೆ ವಿಧಿಸುತ್ತಾರೆ :

"By the just Gods whom no weak pity moved
was doomed to wear out her appointed time
Apart from the happy Ghosts"

'ಕುವೆಂಪು' ಅವರ 'ಕುಮುದಿನಿ'ಯಲ್ಲಿ ಕುಮುದಿನಿಗೆ ಹಾಗಾಗುವುದಿಲ್ಲ :

"ತಿಂಗಳಿಗೆ ಬೆಳಕಿನಲಿ ತರಳೆಯ
ಕಾಯವೊರಗಿತು ಗುಡಿಯ ಜಗುಲಿಯ
ಮೇಲೆ, ಜೀವವು ಪತಿಯ ಹಿಂಬಾ
ಲಿಸಿತು, ಕೂಡಿತು ಮರಣವಿಲ್ಲದ,
ನಿಚ್ಚ ಸೊಗದಾವಾಸವಾಗಿಹ,
ಮುಪ್ಪನರಿಯದ, ಯೌವನದ ನೆಲೆ
ವೀಡಾಗಿಹ, ವಿರಹವಿಲ್ಲದ
ಪರಮ ಧಾಮದಲಿ?"

ಈ ಅಂತ್ಯ ಭಾರತೀಯರಿಗೆ ಸಹಜವಾದುದು. ನಿಚ್ಚಳವಾದ ಪ್ರೀತಿಗೆ ಸಿಕ್ಕಲೇಬೇಕಾದ ಫಲ. 'ಕುಮುದಿನಿ' 'Laodamia' ಕವಿತೆಯ ಭಾವವನ್ನು ಗ್ರಹಿಸಿ ರಚಿತವಾದುದಾರೂ ಅಲ್ಲಿನ ಮಾತುಗಳ ಛಾಯೆ ಇಲ್ಲಿ ಕಂಡುಬರುತ್ತದೆ. ಉದಾಹರಣೆಗೆ :

"Come blooming here, place thee by my side!
Give, on this Well known conch, one nuptial kiss
To me. this day, a second time they bride!"

ಎಂದು Laodamia ಹೇಳಿದರೆ.

"ಮುತ್ತನೊಂದನು ನೀಡು, ಕರುಣಿಸು,
ಮರಳಿ ನನ್ನನು ವರಿಸು, ವೀರನೆ"

ಎಂದು ಕುಮುದಿನಿ ರಣವೀರನನ್ನು ಕೇಳುತ್ತಾಳೆ.

ಹಾಗೇ Protesil as Laodamiaಳಿಗೆ

".....for the Gods approve
the depth, and not the tumult, of the soul;
A fervent, not ungovernable, love"

ಎಂದು ಹೇಳಿದರೆ, ರಣವೀರನು ಕುಮುದಿನಿಗೆ

> "ದೇವ ನೋಡುವನೊಲವಿನಂಬುಧಿ
> ಯಾಳವನು; ಆರ್ಭಟವನೆಣಿಸನು"

ಎಂದು ಹೇಳುತ್ತಾನೆ.

'Laodamia' ದಲ್ಲಿ ಬರುವ ಪಾಶ್ಚಾತ್ಯ ಪೌರಾಣಿಕ ನಿದರ್ಶನಗಳಿಗೆ 'ಕುವೆಂಪು'ರವರು 'ಕುಮುದಿನಿ'ಯಲ್ಲಿ ಭಾರತೀಯ ಪುರಾಣಗಳಿಂದ ನಿದರ್ಶನಗಳನ್ನು ಕೊಡುತ್ತಾರೆ. 'Laodamia' ಕವನದಲ್ಲಿ ಪೌರಾಣಿಕ ನಿದರ್ಶನಗಳು ಬರುವ ಸನ್ನಿವೇಶಕ್ಕೂ 'ಕುಮುದಿನಿ'ಯಲ್ಲಿ ಪೌರಾಣಿಕ ನಿದರ್ಶನಗಳೂ ಬರುವ ಸನ್ನಿವೇಶಕ್ಕೂ ಸಂಬಂಧವಿಲ್ಲ. 'Laodamia' ಕವಿತೆ ಟ್ರೋಜನ್ ಯುದ್ಧದ ಹಿನ್ನಲೆಯಲ್ಲಿ ಚಿತ್ರಿತವಾಗಿದೆ. 'ಕುಮುದಿನಿ'ಯಲ್ಲಿ ಹಲವಾರು ಪೌರಾಣಿಕ ನಿದರ್ಶನಗಳನ್ನು ಕೊಟ್ಟಿರುವ 'ಕುವೆಂಪು'ರವರು 'ಕುಮುದಿನಿಗೆ' ಹಿನ್ನಲೆಯಾಗಿ ಯಾವುದಾದರೂ ಪೌರಾಣಿಕ ಅಥವಾ ಐತಿಹಾಸಿಕ ಭಿತ್ತಿಯನ್ನು ಕಲ್ಪಿಸಿದ್ದರೆ 'ಕುಮುದಿನಿ' ಇನ್ನೂ ಸೊಗಸಾಗಿರುತ್ತಿತ್ತು. ಹಾಗಾಗಿಲ್ಲದಿರುವುದರಿಂದ ಕವನಕ್ಕೇನೂ ಕೊರತೆಯಾಗಿಲ್ಲ. ಕವನದ ಏಕಮುಖತೆಗೆ ಎಲ್ಲಿಯೂ ಭಂಗ ಬಂದಿಲ್ಲ.

'ಕುವೆಂಪು' ಅವರ ಹೆಸರು ಮೊದಲು ಪ್ರಸಿದ್ಧಿಗೆ ಬಂದುದು ಅವರ 'ಬೊಮ್ಮನಹಳ್ಳಿಯ ಕಿಂದರಿಜೋಗಿ'ಯಿಂದ. ಇದು ಬ್ರೌನಿಂಗ್ ಕವಿಯ 'The Pied Piper of Hamelin' ಎಂಬ ಕವಿತೆಯಿಂದ ಪ್ರೇರಿತವಾದುದು. ಆದರೆ ಇದು ಅದರ ಭಾಷಾಂತರವಲ್ಲ. 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಸ್ವತಂತ್ರ ಕವನವೆನ್ನುವಷ್ಟು ಮನೋಹರವಾಗಿದೆ. ಬ್ರೌನಿಂಗನ ಕವಿತೆಯನ್ನು ಮೀರಿಸಿ ಜನಪ್ರಿಯವಾಗಿದೆ. ಈ ಕವಿತೆ ಕನ್ನಡ ನಾಡಿನ ಕಂದರಿಗೂ ಹಿರಿಯರಿಗೂ ಮೋಡಿ ಹಾಕಿಬಿಟ್ಟಿದೆ. ಕಿಂದರಿ ಜೋಗಿಯ ಟಿಂಗ್ ಟಿಂಗ್! ಟಿಂಗ್ ಟಿಂಗ್! ನಾದವ ಕೇಳಿ ಚಂಗ್ ಚಂಗನೆ ಬಾಲಕರು ಕುಣಿಯುವುದಿರಲಿ ವಯೋವೃದ್ಧರೂ ಕುಣಿಯುವಂತಾಗುತ್ತದೆ. ನಾಲ್ಕು ಮಾತ್ರೆಯ ಗಣಗಳ ರಗಳೆಯನ್ನು ಇಲ್ಲಿ ಬಳಸಿಕೊಂಡಿದ್ದರೂ, ನಾಟಕೀಯವಾದ ವರ್ಣನೆಗಳೂ ಚಿತ್ರವಿಚಿತ್ರ ಘಟನೆಗಳೂ ಛಂದಸ್ಸು ಗದ್ಯಪದ್ಯ ಮುಂತಾದವುಗಳ ಎಲ್ಲೆಯನ್ನು ದಾಟಿ ಹೋಗಿವೆ. ನಾವು ಕಥೆಯನ್ನು ಬೆಕ್ಕಸಬೆರಗಾಗಿ ಕೇಳುತ್ತೇವೆ. ಬ್ರೌನಿಂಗ್‌ನಲ್ಲಿ ಬರುವ ಒಂದೊಂದು ವಿಚಾರ ಬೀಜವೂ 'ಕುವೆಂಪು' ಅವರ ಕಲ್ಪನೆಯಲ್ಲಿ ಬೆಳೆದು ಹಣ್ಣು ಕೊಟ್ಟಿದೆ ಎಂದರೆ ತಪ್ಪಾಗದು. 'ಕುವೆಂಪು' ಅವರ 'ಕಿಂದರಿಜೋಗಿ'ಯಲ್ಲಿ ಕಲ್ಪನೆಗೂ ನಿಲುಕದ ಅಚ್ಚರಿಯ ವಸ್ತುಗಳು ನಿಚ್ಚವೋ ಎಂಬಂತೆ ಚಿತ್ರಿತವಾಗಿವೆ. ನಾಟಕೀಯ ಸಂಭಾಷಣೆ ಚಿತ್ರವಿಚಿತ್ರ ವರ್ಣನೆಗಳು, ಅಲೌಕಿಕವಾದ

ಮಾಯೆಯ ವಾತಾವರಣ ಸೃಷ್ಟಿಸುವ ಕಿಂದರಿಜೋಗಿಯ ಚಿತ್ರಣ, ಇವುಗಳೆಲ್ಲ ಈ ಕವಿತೆಯನ್ನು 'ಕುವೆಂಪು' ಅವರ ಅತ್ಯುತ್ತಮ ಕೃತಿಗಳಲ್ಲೊಂದಾಗಿಸಿವೆ.

೧೯೦೧ರಲ್ಲಿಯೇ ಎಂ.ಎಸ್. ಶ್ರೀನಿವಾಸ್ ಎಂಬುವರು ಬ್ರೌನಿಂಗ್‌ನ ಈ ಕವಿತೆಯನ್ನು 'ಕೊಳಲ ಜೋಗಿ' ಎಂದು 'ಗೋವಿನ ಕಥೆ'ಯ ಮಟ್ಟಿನಲ್ಲಿ ರೂಪಾಂತರಿಸಿದ್ದಾರೆ.

ಬ್ರೌನಿಂಗ್ ಕವಿಯ 'The Pied Piper of Hamelin', 'ಕುವೆಂಪು' ಅವರ 'ಕಿಂದರಿ ಜೋಗಿ' ಮತ್ತು ಶ್ರೀನಿವಾಸರಾಯರ 'ಕೊಳಲ ಜೋಗಿ' ಮೂರನ್ನೂ ಒಟ್ಟಿಗೆ ನೋಡಬಹುದು.

'ಇಲಿಗಳು ಬಡಿದುವು ನಾಯಿಗಳ!
ಇಲಿಗಳು ಕಡಿದುವು ಬೆಕ್ಕುಗಳ!
ಕೆಲವನು ಕೊಂದುವು, ಕೆಲವನು ತಿಂದುವು
ಕೆಲವನು ಬೆದರಿಸಿ ಹಿಂಬಾಲಿಸಿದುವು!'

ಎಂದು ಓದಿದಾಗ ಈ ತಲೆಕೆಳಗು ಪ್ರಪಂಚವು ನಮ್ಮ ಮೈಯನ್ನು ಜುಮ್ಮೆನ್ನಿಸುತ್ತದೆ. ಇಲಿಗಳ ವರ್ಣನೆಯ ಹಾವಳಿಯಂತೂ ತನ್ನ ನಾಟಕೀಯ ಗುಣದಿಂದ ಮೂಗಿನ ಮೇಲೆ ಬೆಟ್ಟಿಡುವಂತೆ ಮಾಡುತ್ತದೆ.

ಇಲಿಗಳ ಹಾವಳಿಯನ್ನು ಶ್ರೀನಿವಾಸರಾಯರು :

'ಬೆಕ್ಕು ಬಾಳದು, ನಾಯಿ ತಾಳದು
ಲೆಕ್ಕ ಲೆಕ್ಕದ ಇಲಿಯ ಕಾಟದೆ;
ಚಿಕ್ಕ ಇಲಿಗಳು ತಾವು ಕೂಡಾ
ಇಕ್ಕಿ ಕೊಲ್ವುದು ಖಂಡಿತ।
ನಲ್ಲೆಯರನೊಡಗೂಡಿಕೊಂಡು
ಎಲ್ಲ ಕುಣಿವುವು ನೆಲ್ಲ ಕಣಜದೆ
ನೆಲ್ಲ ಕುರುಕುತೆ, ಬೆಲ್ಲ ಮೆಲ್ಲುತೆ
ಚೆಲ್ಲಿ ಸೂಸುತೆ ಮೆರೆವುವು।'

ಎಂದು ವರ್ಣಿಸಿದ್ದಾರೆ. ಇಲ್ಲಿ ಕುವೆಂಪು ಅವರ ಪದ ಪ್ರತಿಭೆಯಾಗಲಿ, ಕಲ್ಪನೆಯ ಹಾರಾಟವಾಗಲಿ, ವರ್ಣನೆಯ ವೈಖರಿಯಾಗಲಿ ಇಲ್ಲ. ಆದರೆ ಸರಳವಾಗಿದೆ ಮನಮುಟ್ಟುವಂತಿದೆ.

'ಬೊಮ್ಮನಹಳ್ಳಿಯ ಕಿಂದರಿಜೋಗಿ'ಯಲ್ಲಿ ಇಲಿಗಳ ಹಾವಳಿಯ ಚಿತ್ರ ಮೂಲಕ್ಕಿನ್ನ ವಿವರವಾಗಿ ಬಂದಿದೆ. ಬೊಮ್ಮನಹಳ್ಳಿಯ ಜನರು ಇಲಿಗಳ ಕೊಲ್ಲಲು

ಮಾಡಿದ ಪ್ರಯತ್ನ ನಿಷ್ಫಲವಾಗುತ್ತದೆ. ಮೂಲದಲ್ಲಾದರೋ ಇಇಗಳ ಕೊಲ್ಲಲು ಯಾವ ಪ್ರಯತ್ನವನ್ನೂ ಮಾಡದೆ ನೇರವಾಗಿ ಈ ಊರಿನ Mayor ನ ಬಳಿಗೆ ಹೋಗುತ್ತಾರೆ. 'ಬೊಮ್ಮನಹಳ್ಳಿಯ ಕಿಂದರಿಜೋಗಿ'ಯಲ್ಲಿ ಮೂಷಿಕನಾಶದ ವಿಫಲ ಪ್ರಯತ್ನದ ಚಿತ್ರ ಔಚಿತ್ಯಪೂರ್ಣವಾಗಿದೆ. ಕೊನೆಗೆ ಬೊಮ್ಮನಹಳ್ಳಿಯ ರಂಗೇಗೌಡ

> 'ಇಲಿಗಳ ಕೊಲ್ಲಲು ದಾರಿಯನಾರು
> ತೋರಿಸಿ ಕೊಡುವರೊ ಅವರಿಗೆ ಆರು
> ಸಾವಿರ ನಾಣ್ಯಗಳೀಯುವೆ ನಾನು:
> ತಿಳಿದವರಿದ್ದರೆ ಬನ್ನಿರಿ! ಏನು?'

ಎಂದು ಕೂಗುತ್ತಾನೆ.

> 'ನಾಣ್ಯಗಳೆಂಬಾ ಮಾತನು ಕೇಳಿ
> ಮಂಗೈಶೆಟ್ಟರು ಕೋಪವ ತಾಳಿ'

ಬ್ರಹ್ಮನ ರಾಣಿಯ ದೂರುವ ಚಿತ್ರ ಮೂಲದಲ್ಲಿಲ್ಲದ ಹಾಸ್ಯದ ಹೊಸ ಲೇಪನ. ಆಗ ಅಲ್ಲಿಗೆ ಕಿಂದರಿಜೋಗಿ ಬರುತ್ತಾನೆ. ಅವನು ಬರುವುದಕ್ಕೆ ಮುನ್ನವೇ ಅವನ ಕಿನ್ನರಿನಾದ ಊರಿನ ಜನರನ್ನಾಕರ್ಷಿಸುತ್ತದೆ. ಕಿಂದರಿಜೋಗಿ ಮೂಲಕ್ಕಿನ್ನ ಇಲ್ಲಿ ಸೊಗಸು. ಬ್ರೌನಿಂಗ್‌ನಲ್ಲಿ ಕಿಂದರಿ ಜೋಗಿ,

> 'And in did come the straight figure!
> His Queer long Coat, from heel to head,
> was half of yellow and half red:
> And he himself was tall and thin,
> With sharp blue eyes, each like a pin,
> And light loose hair, yet, swarthy skin
> No tuft on cheek nor beared on chin,
> But lips where smiles went out and in-
> There was no guessing his Kith and kin!

ಎಂದು ವರ್ಣಿಸಿದೆ. 'ಕುವೆಂಪು' ಅವರ ರೂಪಾಂತರದಲ್ಲಿ ಬ್ರೌನಿಂಗನ ಈ ಸುಂದರ ಚಿತ್ರ ಇನ್ನೂ ಅಲಂಕಾರಗಳನ್ನು ಪಡೆದು ಅಚ್ಚರಿಗೊಳಿಸುವ ವಿಚಿತ್ರ ಶೋಭೆಯನ್ನು ಪಡೆದಿದೆ.

> 'ಬಂದನು ಬಂದನು ಕಿಂದರಿ ಜೋಗಿ!
> ಕೆದರಿದ ಕೂದಲ ಗಡ್ಡದ ಜೋಗಿ!
> ನಾನಾ ಬಣ್ಣದ ಬಟ್ಟೆಯ ಜೋಗಿ!

ಕೈಯಲಿ ಕಿಂದರಿ ಹಿಡಿದಾ ಜೋಗಿ!
ಕುದುರೆಯ ಗೊರಸಿನ ಅಡಿಗಳ ಜೋಗಿ!
ಕಡವೆಯ ಕೊಂಬಿನ ತಲೆಯಾ ಜೋಗಿ!
ಆನೆಯ ಕಿವಿಗಳ ಕಿಂದರಿಜೋಗಿ!
ಹಂದಿಯ ದಾಡೆಯ ಕೋರೆಯ ಜೋಗಿ!
ಮಂಗನ ಮೂತಿಯ ಮುಡಿದಿಹ ಜೋಗಿ!
ಬಂದನು ಬಂದನು ಕಿಂದರಿಜೋಗಿ!
ಹಾರುತ ತೇಲುತಲಿಳಿದನು ಜೋಗಿ!'

ಇದೇ ಭಾಗ ಶ್ರೀನಿವಾಸರಾಯರ 'ಕೊಳಲ ಜೋಗಿ'ಯಲ್ಲಿ

'ಮನೆಯ ಕಾಣನು; ಮಟವ ಕಾಣನು
ದಿನವ ಕಳೆವನು ಮರದ ಕೆಳಗೆಯೆ,
ಮನಕೆ ಬಂದಾವೂರ ಸೇರುವ
ನಿನನು ಮುಳುಗುವ ಸಮಯಕೆ!
ಬಟ್ಟೆಯಿಲ್ಲವು ಹೊದೆಯಲೆಂದೊಡೆ
ಚಿಟ್ಟೆಬಣ್ಣದ ಚಿರತೆ ತೊಗಲನು
ಉಟ್ಟು ತಿರುಗುವ ಕೊಳಲಜೋಗಿಗೆ
ಪಟ್ಟ ಭೂಮಿಯೆ ಹಾಸಿಗೆ!'

ಎಂದು ವರ್ಣಿತವಾಗಿದೆ. ಹೀಗೆ ಶ್ರೀನಿವಾಸರಾಯರೂ ಅಲ್ಲಲ್ಲಿ ತಮ್ಮ ತಮ್ಮ ಕಲ್ಪನೆಯ ಸೃಷ್ಟಿಯನ್ನು ಸೇರಿಸಿಕೊಂಡಿದ್ದಾರೆ.

ಬ್ರೌನಿಂಗನ ಕವಿತೆಯಲ್ಲಿ ಕಿಂದರಿಜೋಗಿ ತಾನಾಗಿಯೇ ತನ್ನ ಪರಿಚಯವನ್ನು ಹೇಳಿಕೊಳ್ಳುತ್ತಾನೆ.

"Please your honours", said he, "I am able
by means of a secret charm, the draw
All creatures living beneath the sun,
That creep or swim or fly or run,
After me so as you never saw!
And I chiefly use my charm
on creature that do harm,
The mole and Toad and newf and viper;
And people call me the pied piper."
"yet" said he "poor piper as I am,
In Tartary I fleed the Charm

Last june, from his huge swarms of gnats
I cased in Asia the Nizam
of a monstrous brood of vampire bats"

'ಕುವೆಂಪು' ಅವರ 'ಕಿಂದರಿ ಜೋಗಿ'ಯಲ್ಲಿ, ರಂಗೇಗೌಡ

'ತೊದಲುತ ಬೆದರುತ ಕಂಪಿತ ಕಂಠದಿ
ನೀನಾರೆಂದನು ಜೋಗಿಯ ಕುರಿತು.
ಅದಕಾ ಜೋಗಿಯು ಇಂತೆಂದ;
ಕೇಳಿದರೆಲ್ಲರು ಬಾಯ್ಬಿಟ್ಟು:
ಹಿಮಗಿರಿಯಲ್ಲಿಹ ಜೋಗಿಯು ನಾನು;
ಪರಮೇಶ್ವರನಿಗೆ ಗೆಳೆಯನು ನಾನು;
ನಿಮ್ಮೀ ಗೋಳನು ಕೇಳಿದ ಶಿವನು
ನನ್ನನ್ನಿಲ್ಲಿಗೆ ಕಳುಹಿದನು.
ಇಲಿಗಳನೆಲ್ಲಾ ಕೊಂದರೆ ಆರು
ಸಾವಿರ ನಾಣ್ಯಗಳೀಯುವೆಯೇನು'

ಎಂದು ಜೋಗಿಯು ಕೇಳಿದಾಗ ಜೋಗಿಯ ಈ ಅತೀಂದ್ರಿಯ ಶಕ್ತಿಯಲ್ಲಿ ಇನ್ನೂ ಸಂಶಯಗ್ರಸ್ತನಾಗಿದ್ದ ರಂಗೇಗೌಡ.

"ಇಲಿಗಳ ನೋಡಿಪ ಶಕ್ತಿಯು ನಿನಗೆ
ನಿಜವಾಗಿರುವುದು ಹೌದಷ್ಟೆ"

ಎಂದು ಪ್ರಶ್ನಿಸುತ್ತಾನೆ.

ಬ್ರೌನಿಂಗನ ಕಿನ್ನರಿ ಹಿಡಿದ ಜೋಗಿ ತನ್ನ ಪರಾಕ್ರಮವನ್ನು ತಾನಾಗಿಯೇ ಹೇಳಿಕೊಂಡರೆ ಇಲ್ಲಿಯ ಕಿಂದರಿಜೋಗಿ ರಂಗೇಗೌಡ ತನ್ನ ಶಕ್ತಿಯ ಬಗ್ಗೆ ಸಂದೇಹಿಸಿದಾಗ ತನ್ನ ಪ್ರತಾಪವನ್ನು ವರ್ಣಿಸಿಕೊಳ್ಳುತ್ತಾನೆ. ಇನ್ನೊಬ್ಬರಲ್ಲಿ ಸಂಶಯಕೀಟ ಉದ್ಭವವಾದಾಗ ಕಿಂದರಿಜೋಗಿ ತನ್ನ ಪ್ರತಾಪ ವರ್ಣನೆಗೆ ತೊಡಗುವುದು ಔಚಿತ್ಯಪೂರ್ಣವಾಗಿದೆ. ಬ್ರೌನಿಂಗನಲ್ಲಿ ಬರುವ ಆತ್ಮಪ್ರಶಂಸೆಯ ಆ ನಾಲ್ಕು ಸಾಲುಗಳು 'ಕುವೆಂಪು' ಅವರಲ್ಲಿ ವಿಸ್ತಾರವಾಗಿ ಈಶ್ವರ, ವಿಷ್ಣು ಮುಂತಾದವರೆಲ್ಲರನ್ನೂ ತನ್ನಲ್ಲಿ ಅಡಗಿಸಿಕೊಂಡಿದೆ. ಕಿಂದರಿಜೋಗಿ ಎಲ್ಲ ದೇವತೆಗಳಿಗೂ ಬೇಕಾದ ಮೂಷಿಕ ನಾಶಕ!

"ಕೃತಯುಗದೊಳು ಕೈಲಾಸದೊಳು
ಇಲಿಗಳ ಕಾಟವು ಮಿತಿ ಮೀರೆ
ಇಲಿಗಳ ಕೊಲ್ಲುವೆನೆಂಬಾ ರೋಷ
ಏರಲು ಭೈರವನಾದನು ಈಶ!

ಆದರು ಆಗದೆ ಮೂಷಿಕ ನಾಶ
ಸಂದಿಯ ಕಳುಹಿದನೆನ್ನೆಡೆಗೆ;
ಕೊಂದೆನು ಅವುಗಳ ನಾ ಕಡೆಗೆ!
ಕಾಮನ ದಹಿಸಿದ ಹಣೆಗಣ್ಣು
ಮೂಷಿಕ ರೋಮವ ಸುಡಲಿಲ್ಲ!"

ಹಾಗೆಯೇ ವಿಷ್ಣುವೂ ಇಲಿಗಳ ಕಾಟದಿಂದ ಪೇಚಾಡಿ ತನ್ನ ಶಕ್ತಿಯು ಅವುಗಳ ಮುಂದೆ ಸಾಗದೆಂದು ಅರಿತು, ಕೊನೆಗೆ ಕಿಂದರಿಜೋಗಿಯ ನೆರವು ಪಡೆಯುತ್ತಾನೆ.

ಕಿಂದರಿ ಜೋಗಿ ಕಿಂದರಿ ಬಾರಿಸಿದಾಗ ಊರಿನಲ್ಲಿದ್ದ ಇಲಿಗಳೆಲ್ಲಾ ಓಡೋಡಿ ಬರುತ್ತಿವೆ. ಅವು ಎಲ್ಲಿಂದ ಬರುತ್ತವೆ ಗೊತ್ತೆ?

'ಅನ್ನದ ಮಡಕೆಯನಗಲಿದುವು!
ಟೋಪಿಯ ಗೂಡನು ತ್ಯಜಿಸಿದುವು!
ಬಂದುವು ಅಂಗಿಯ ಜೇಬನು ಬಿಟ್ಟು
ಮಕ್ಕಳ ಕಾಲಿನ ಚೀಲವ ಬಿಟ್ಟು'

ಹಿಂಡುಹಿಂಡಾಗಿ ಹಾಗೆ ಕಿಂದರಿ ಜೋಗಿಯ ಹಿಂದೆ ಇಲಿಗಳು ಹೋಗುತ್ತಿರಲು,

'ಮುಂದೇನಾಗುವುದೆಂದಲ್ಲಿ:
ದಿವಿಜರು ಕವಿದರು ಗಗನದಲಿ
ಹೂಮಳೆ ಕರೆದರು ಹರುಷದಲಿ
ದುಂದುಭಿ ನಾದವ ಮಾಡಿದರು;
ಕಾಣದ ಬೆರಗನು ನೋಡಿದರು!'

ಈ ಮೇಲಿನ ಎರಡು ಚಿತ್ರಗಳೂ ಬ್ರೌನಿಗ್‌ನಲ್ಲಿಲ್ಲ. ಹೀಗೆ ತಮ್ಮ 'ಕಿಂದರಿ ಜೋಗಿ'ಯಲ್ಲಿ 'ಕುವೆಂಪು' ಅವರು ತಮ್ಮದೇ ಆದ ಹೊಸಹೊಸ ಭಾವನೆಗಳು, ವರ್ಣನೆಗಳು ಚಿತ್ರಗಳನ್ನೂ ಸೇರಿಸಿದ್ದಾರೆ. ಹಾಗೆ ಕೆಲವು ಮೂಲದ ಭಾವನೆಗಳನ್ನು ಬಿಟ್ಟೂಬಿಟ್ಟಿದ್ದಾರೆ. ಹಾಗೆ ಬಿಟ್ಟಿರುವ ಭಾವನೆಗಳಿಂದ, ವರ್ಣನೆಗಳಿಂದ, ಚಿತ್ರಗಳಿಂದ 'ಬೊಮ್ಮನ ಹಳ್ಳಿಯ ಕಿಂದರಿ ಜೋಗಿ' ಈ ಕವನಕ್ಕೆ ಯಾವ ರೀತಿಯಿಂದಲೂ ಶೋಭೆ ಕಡಿಮೆಯಾಗಿಲ್ಲ.

ಮೇಲೆ ಉದಾಹರಿಸಿರುವ ಉದಾಹರಣೆಗಳಿಂದಲೇ ನಾವು ಕನ್ನಡದ ರೂಪಾಂತರದಲ್ಲಿ 'ಕುವೆಂಪು' ಅವರು ಸೇರಿಸಿರುವ ಭಾಗಗಳೆಷ್ಟು ಸೊಗಸಾಗಿವೆ. ಕಥೆಯನ್ನು ಕಳೆಗಟ್ಟುವಂತೆ, ತುಂಬಿಕೊಳ್ಳುವಂತೆ ಮಾಡಿವೆ ಎಂಬುದನ್ನು ತಿಳಿಯಬಹುದು.

ಒಟ್ಟಿನಲ್ಲಿ 'ಕುವೆಂಪು' ಅವರು ಬರೆದಿರುವ ಕಥನ ಕವನಗಳ ಸಂಖ್ಯೆ ಅತ್ಯಲ್ಪವಾದರೂ ಅವುಗಳಲ್ಲೇ ಕೆಲವು ಉತ್ತಮ ಕಥನ ಕವನಗಳನ್ನು ಕನ್ನಡ ಸಾಹಿತ್ಯ ದೇವಿಯ ಸಿರಿಮುಡಿಗೆ ಅರ್ಪಿಸಿದ್ದಾರೆಂದು ಹೇಳಬಹುದು.

ಗ್ರಂಥಋಣ

೧. ಎಸ್. ಅನಂತನಾರಾಯಣ : ಹೊಸಗನ್ನಡ ಸಾಹಿತ್ಯದ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ.

೨. ನಡೆದು ಬಂದ ದಾರಿ : ಶ್ರೀ ಜಿ. ವರದರಾಜರಾಯರ ಕಥನ ಕವನಗಳು.

❑

ಕುವೆಂಪು ಅವರ ಕಥೆಗಳು ಮತ್ತು ಮಲೆನಾಡಿನ ಚಿತ್ರಗಳು

ಕುವೆಂಪು ಅವರ ಕಥೆಗಳನ್ನು ಕುರಿತು ಈಗಾಗಲೆ ಅನೇಕ ವಿಮರ್ಶಕರು ಬರೆದಿದ್ದಾರೆ. ಇನ್ನೂ ಕುವೆಂಪು ಅವರ ಕಥೆಗಳ ನಿಜವಾದ ವಿಮರ್ಶೆ ಬರಬೇಕಾಗಿದೆ. ಅವರ ಕತೆಗಳ ಬಗೆಗೆ ತೀರ ಉತ್ಪ್ರೇಕ್ಷಿತ ಮಾತುಗಳು ಒಂದು ಕಡೆ ಬಂದರೆ ನವೋದಯ ಕಾಲದ ಕತೆಗಾರರ ಸಾಲಿನಲ್ಲಿ ಅವರ ಹೆಸರನ್ನೇ ಬಿಡುವಷ್ಟು ನಿರ್ಲಕ್ಷತನ ಕೆಲವು ವಿಮರ್ಶಕರಲ್ಲಿ ಕಂಡುಬರುತ್ತದೆ. ಯಾರೂ ಹೋರಾಡಿ ಕುವೆಂಪು ಅವರಿಗೆ ಕಥಾ ಸಾಹಿತ್ಯ ಚರಿತ್ರೆಯಲ್ಲಿ ಸ್ಥಾನವನ್ನು ಕೊಡಿಸಬೇಕಾಗಿಲ್ಲ. ಲೋಕ ಮತ್ತು ಕಾಲ ಅವರ ಸ್ಥಾನವನ್ನು ಅವರಿಗೆ ಕೊಡುತ್ತವೆ. ಲೋಕ ಈಗಾಗಲೆ ಕೊಟ್ಟಾಗಿದೆ. ಕಾಲಕ್ಕಾಗಿ ಕಾಯಬೇಕಷ್ಟೆ.

ಈ ಪ್ರಬಂಧದಲ್ಲಿ ಕುವೆಂಪು ಅವರ ಕತೆಗಳಲ್ಲಿ ಅವರು ತಾಳಿದ ತಾತ್ವಿಕ ನಿಲುವೇನು, ಸಾಮಾಜಿಕ ಧೋರಣೆಗಳೇನು, ಅವು ಎಷ್ಟರ ಮಟ್ಟಿಗೆ ಪ್ರಗತಿಪರವಾಗಿವೆ ಎಂದು ನೋಡುವ ಒಂದು ಪ್ರಯತ್ನವನ್ನು ಮಾಡಲಾಗಿದೆ.

ಕುವೆಂಪು ಅವರು ಸಂಖ್ಯೆಯ ದೃಷ್ಟಿಯಿಂದ ಹೆಚ್ಚಿನ ಕಥೆಗಳನ್ನು ಬರೆದಿಲ್ಲ. 'ಸಂನ್ಯಾಸಿ ಮತ್ತು ಇತರ ಕಥೆಗಳು' ಹಾಗೂ 'ನನ್ನ ದೇವರು ಮತ್ತು ಇತರ ಕಥೆಗಳು' ಈ ಎರಡು ಸಂಕಲನದಿಂದ ಬರೆದಿರುವ ಒಟ್ಟು ಕತೆಗಳ ಸಂಖ್ಯೆ ಹದಿನೇಳು. 'ಮಲೆನಾಡಿನ ಚಿತ್ರಗಳ'ಲ್ಲೂ ಕಥಾಂಶ ಪ್ರಧಾನವಾದ ಅಥವಾ ಕತೆಗಳೆಂದೇ ಹೇಳಬಹುದಾದ ಒಂದೆರಡು 'ಚಿತ್ರ'ಗಳಿವೆ. ಹಾಗೆಯೆ ಈ ಕಥಾ ಸಂಕಲನಗಳಲ್ಲಿ ಪ್ರಬಂಧಾಂಶ ಹೆಚ್ಚಾಗಿರುವ ಒಂದೆರಡು ಕತೆಗಳಿವೆ.

'ಸಂನ್ಯಾಸಿ' ಕಥೆ ಸಂವಿಧಾನ, ಶೈಲಿ, ತಾತ್ವಿಕ ನಿಲವು ಎಲ್ಲ ರೀತಿಯಿಂದಲೂ ಉತ್ತಮವಾದ ಕಥೆಗಳ ಸಾಲಿನಲ್ಲಿ ನಿಲ್ಲಬಲ್ಲ ಕಥೆ. ಕಥೆ ಸಂಭಾಷಣಾ ರೂಪದಲ್ಲಿ ಬೆಳೆದುಕೊಂಡು ಹೋಗುತ್ತದೆ. ಕಥೆಗೆ ಹಿನ್ನೆಲೆಯಾಗಿ ಗಂಗ ಯುನೆಯರ ಸಂಗಮದ ಔಚಿತ್ಯಪೂರ್ಣ ಚಿತ್ರಣವಿದೆ. ರಮೇಶ ಇಂದಿರೆಯರ ಸಂಗಮಕ್ಕೆ ಇದಕ್ಕಿಂತಲೂ

ಉಚಿತವಾದ ಹಿನ್ನೆಲೆಯನ್ನು ಕಲ್ಪಿಸಲಾಗದು. ಕತೆಯಲ್ಲಿ ಬರುವ ವರ್ಣನೆಗಳೂ ಅಂತೆಯೇ ಇವೆ. ಉದಾಹರಣೆಗೆ "ತಂಬೆಲರು ಮೆಲ್ಲಮೆಲ್ಲನೆ ತಳಿರು ಹೂಗಳನ್ನು ಮುದ್ದಿಸಿ ತನ್ನಿನಿಯಳನ್ನು ಅರಸುವ ವಿರಹಿಯಂತೆ ತೊಳಲುತ್ತಿತ್ತು." "ಗಂಗೆಯ ಮನೆಯವರಿಬ್ಬರೂ ಒಬ್ಬನ್ನೊಬ್ಬರು ಆಲಂಗಿಸಿ ಪ್ರವಹಿಸುತ್ತಿದ್ದ ಗಂಭೀರ ಗಮನ..." "ಪದತಳದಲ್ಲಿ ನಿರಾವಲಂಬಿಯಾಗಿ ಬಿದ್ದ ಬೆಳ್ಳಿಯಂತೆ ತೋರಿದ ಇಂದಿರೆಯನ್ನೂ, ಯಾವ ಬಿರುಗಾಳಿಗೂ ಕಂಪಿಸದೆ ಮಹೀರುಹದಂತೆ ಕೈ ಕಟ್ಟಿಕೊಂಡು ನಿಂತಿದ್ದ ಚೈತನ್ಯನನ್ನೂ ನೋಡಿದನು!" ಮುಂತಾದ ವಾಕ್ಯಗಳನ್ನು ನೋಡಬಹುದು. ಅದೆಲ್ಲಕ್ಕಿಂತ ಮುಖ್ಯವಾಗಿ ಸಂನ್ಯಾಸಕ್ಕಿಂತ ಗೃಹಸ್ಥಾಶ್ರಮವೇ ಶ್ರೇಷ್ಠ ಎಂದು ಕತೆಗಾರರು ಹೇಳದಿದ್ದರೂ ಗೃಹಸ್ಥಾಶ್ರಮ ತ್ಯಾಜ್ಯ ಎಂಬ ಧೋರಣೆಯನ್ನು ವ್ಯಕ್ತಪಡಿಸಿಲ್ಲ. ಸಂನ್ಯಾಸಿಯ ಹೃದಯ ಕರಗಲಿಲ್ಲ. ಸಂನ್ಯಾಸಿಯಾಗಿದ್ದ ಚೈತನ್ಯ ಗುರುದೇವರ ಅನುಕ್ತ ಸೂಚನೆಯಂತೆ ಗೃಹಸ್ಥಾಶ್ರಮವನ್ನು ಸ್ವೀಕರಿಸಿದಾಗ ಇಂದಿರೆ 'ನೀನೀಗ ನಿಜವಾಗಿ ಸಂನ್ಯಾಸಿ!" ಎಂದು ಹೇಳುವ ಮಾತು ಎಷ್ಟೊಂದು ಅರ್ಥಗರ್ಭಿತ. ಸಂನ್ಯಾಸ ಅಥವಾ ವೈರಾಗ್ಯವನ್ನು ವಸ್ತುವಾಗುಳ್ಳ ಮತ್ತೊಂದು ಕಥೆ 'ವೈರಾಗ್ಯದ ಮಹಿಮೆ' ಅಥವಾ 'ಅಟ್ಟಿದರೆ ಓಡುತ್ತದೆ; ಬಿಟ್ಟರೆ ಹಿಂಬಾಲಿಸುತ್ತದೆ'. ವೈಷ್ಣವ ಪಂಥರ ವೈರಾಗ್ಯ ಸಾಧನೆಯಲ್ಲಿ ಮಧುರಭಾವ ಸಾಧನೆ ಒಂದು. ಎಲ್ಲ ಪುರುಷರೂ ಶ್ರೀಕೃಷ್ಣರು. ಎಲ್ಲ ಸ್ತ್ರೀಯರೂ ರಾಧೆಯರು. ಈ ಭಾವನೆಯಿಂದ ವೈಷ್ಣವ ಬೈರಾಗಿಗಳೂ ವೈಷ್ಣವಿಯರೂ ಸಾಧನೆ ಮಾಡಬೇಕು. ಈ ಭಾವನೆ ಅಥವಾ ಪ್ರಪತ್ತಿ ಮಾರ್ಗ ಉನ್ನತ ಧ್ಯೇಯದಿಂದ ಕೂಡಿದ್ದರೂ ರಾಯಚರಣನಂಥ ಸ್ವಾರ್ಥಿಗಳೂ, ವಂಚಕರೂ, ವಿಷಯಲಂಪಟರೂ ತಮ್ಮ ಸ್ವೇಚ್ಛಾವರ್ತನೆಗೆ ಈ ಮಧುರಭಾವದ ಮುಸುಕನ್ನು ಹಾಕಿಕೊಳ್ಳುವುದನ್ನು ತಪ್ಪಿಸಲಾಗುವುದಿಲ್ಲ. ಅಧ್ಯಾತ್ಮಸಂಬಂಧವಾದ ಸಾಧನೆಯಲ್ಲಿ ಯಾವುದೇ ಕಾರಣದಿಂದ ಇಂದ್ರಿಯ ಚಾಪಲ್ಯಕ್ಕೆ ಒಳಗಾಗಬಾರದೆಂಬುದನ್ನು ಹೇಳುವುದೇ ಕತೆಗಾರರ ಉದ್ದೇಶ. ಈ ಕತೆಯ ಮತ್ತೊಂದು ವ್ಯಂಗ್ಯ ಎಂದರೆ ರಾಯಚರಣನು ಯಾರಿಂದ "ಅಟ್ಟಿದರೆ ಓಡುತ್ತದೆ; ಬಿಟ್ಟರೆ ಹಿಂಬಾಲಿಸುತ್ತದೆ." ಎಂಬ ಲಕ್ಷ್ಮಿಯ ಲಕ್ಷಣಗಳನ್ನು ಉಪದೇಶವಾಗಿ ಕೇಳಿ ವೈರಾಗ್ಯಕ್ಕೊಲಿದನೊ ಆ ಕೇನರಾಮ ಗೋಸ್ವಾಮಿಯ ಕಿರುಹರೆಯದ ನಾಲ್ಕನೆಯ ಪತ್ನಿಗೇ ಈತ ಮಧುರಭಾವದ ಮಹತ್ವವನ್ನು ಬೋಧಿಸಿ ರಾಧಾದಾಸಿಯನ್ನಾಗಿ ಮಾಡಿಕೊಳ್ಳುವುದು. ಕಥೆ ಇಂಥ ಕಪಟವೇಷದ ಬೈರಾಗಿಗಳನ್ನು ಲೇವಡಿ ಮಾಡುವುದರಿಂದ ಕಥಾ ಶೈಲಿಯೂ ಅದಕ್ಕನುಗುಣವಾಗಿದೆ. "ರಾಯಚರಣನು ಕನ್ನಡಿಯ ಮುಂದೆ ಸ್ಫುರದ್ರೂಪಿಯಾಗಿದ್ದರೂ ಹೆರರ ಕಣ್ಣಿಗೆ ಹಾಗೆ ಕಾಣಿಸುತ್ತಿರಲಿಲ್ಲ". "ಮೈ ಕಾಂತಿ ಕೆಂಡವಾಗಿದ್ದರೂ ನೀರಿನ ಸಂಪರ್ಕವಾದಂತಿತ್ತು. ಮೂಗು ಸಂಪಗೆಯಾಗಿದ್ದರೂ ಹುಳುಹಿಡಿದು ಸಿಂಡಾಗಿತ್ತು..." ಇಂತಹ ವರ್ಣನೆ ಉತ್ಪ್ರೇಕ್ಷೆಯಿಂದ ಕೂಡಿದ್ದರೂ ಕತೆಯ ಉದ್ದೇಶವಾದ ವಿಂಡಬನೆಗೆ ನೆರವಾಗಿವೆ.

ಈ ಕತೆಗಳ ಸಾಲಿಗೆ ಸೇರಿಸಬಹುದಾದ ಮತ್ತೊಂದು ಕತೆ 'ಕ್ರಿಸ್ತನಲ್ಲ ಪಾದ್ರಿಯ ಮಗಳು!' ಇಲ್ಲಿಯ ಕಥಾನಾಯಕನಾದ 'ಯೋಗಿನ್' ವಿದ್ಯಾರ್ಥಿ ದೆಸೆಯಲ್ಲಿ ಎಲ್ಲರ ಕಣ್ಮಣಿಯಾಗಿ, ಪ್ರತಿಭಾವಂತನಾಗಿ, ಭವಿಷ್ಯದಲ್ಲಿ ಭರವಸೆಯನ್ನು ಮೂಡಿಸುತ್ತಾ ಗಗನದ ನಿರ್ಮಲವಾದ ಗಾಳಿಯಲ್ಲಿ ಸ್ವತಂತ್ರವಾಗಿ ಯಾರನ್ನೂ ಲೆಕ್ಕಿಸದೆ ಗರುಡನಂತೆ ವಿಹರಿಸುತ್ತಿದ್ದವನು ಕೇವಲ ಎಂಟು ವರ್ಷಗಳಲ್ಲಿ ಹುಳುವಾಗಿ ದುರ್ವಾಸನೆಯಿಂದ ಕೊಳೆತು ನಾರುವ ಕೊಚ್ಚೆಯಲ್ಲಿ ಒದ್ದಾಡುತ್ತಿರುತ್ತಾನೆ. ಅವನ ಈ ದುರವಸ್ಥೆಗೆ ಕಾರಣ ಕ್ರಿಸ್ತನಲ್ಲ, ಪಾದ್ರಿಯ ಮಗಳು! ಕಥೆಯ ಪ್ರಾರಂಭದಲ್ಲಿ ಬರುವ ಗೇರುಸೊಪ್ಪೆಯ ಜಲಪಾತದ ಸೊಬಗು ಯೋಗಿನ್‌ನ ವಿದ್ಯಾರ್ಥಿ ದೆಸೆಗೆ ಸಂಕೇತವಾದರೆ ಕಥೆಗಾರರ 'ಆಗುಂಬೆ ಘಾಟಿಯಿಂದ ಸೂರ್ಯಾಸ್ತ ಸಮಯದ ಅರಬ್ಬಿಸಮುದ್ರವಲ್ಲಾಗುವ ವೈಭವವನ್ನು ನೋಡಬೇಕೆ'ಂಬಾಸೆ 'ಯೋಗಿನ್'ನ ಅವನತಿಯ ಮುನ್ಸೂಚನೆ-ಯಾಗುತ್ತದೆ. 'ಯೋಗಿನ್'ನ ಪತ್ರ ಬಂದ ಮೇಲೆ 'ಯೋಗಿನ್'ನ ಮಿತ್ರ ಕಾಣುವ 'ಪಶ್ಚಿಮಗಗನದಲ್ಲಿ ಸಂಜೆಯ ಸೂರ್ಯ ರಾಜಿಸುತ್ತ ಸಹ್ಯಾದ್ರಿ ಪರ್ವತಗಳ ಹಿಂದೆ ಇಳಿದು ಅಡಗುತ್ತಿದ್ದ' ದೃಶ್ಯ 'ಯೋಗಿನ್'ನ ಸ್ಥಿತಿಗೆ ಸಂಕೇತವಾಗುತ್ತದೆ. 'ನನ್ನ ಜೀವನದ ನಾವೆ ಬಂದರನ್ನು ಸೇರುವುದರೊಳಗಾಗಿ ಪಾದ್ರಿಯ ಮಗಳು ಮಾರಿ ಬಂಡೆಗೆ ಬಡಿದು ಪುಡಿಪುಡಿಯಾಯಿತು' ಎಂದು ಹಿಂದೂ ಧರ್ಮದ ವಕ್ತಾರನೂ ಸುಧಾರಕನೂ ಕ್ರೈಸ್ತಧರ್ಮ ಪ್ರಸಾರಕ್ಕೆ ವಿರೋಧಿಯೂ ಆಗಿದ್ದ 'ಯೋಗಿನ್'ನ ಮಾತುಗಳು ಅರ್ಥವತ್ತಾಗಿವೆ. ಈ ಕತೆಯಲ್ಲಿ ಹಿಂದೂಧರ್ಮದ ಮೇಲಿನ ಲೇಖಕರ ಅಭಿಮಾನ, ಕ್ರೈಸ್ತಧರ್ಮದ ಮೇಲೆ ಅಥವಾ ಅದಕ್ಕಿಂತ ಹೆಚ್ಚಾಗಿ ಆ ಧರ್ಮದ ಧರ್ಮಬೋಧಕರು ಅನುಸರಿಸುವ ಕುತಂತ್ರಗಳ ಬಗೆಗೆ ಸಿಟ್ಟು ಆಕ್ರೋಶ ಸುವ್ಯಕ್ತವಾಗಿವೆ. ಈ ಪಕ್ಷಪಾತ ಧೋರಣೆ ಅವರ ಸಾಹಿತ್ಯದ ಬೇರೆ ಪ್ರಕಾರಗಳಲ್ಲಿಯೂ ಕಂಡುಬರುತ್ತದೆ. ಆದ್ದರಿಂದ ಈ ಕತೆಯ ಮಟ್ಟಿಗೆ ಕತೆಗಾರರಲ್ಲಿ ಪಕ್ಷಪಾತ ಧೋರಣೆಯಿದೆ ಎನ್ನಿಸುತ್ತದೆ. ಆತ್ಮೋದ್ಧಾರದ ದಾರಿ ತೋರುವ ಧರ್ಮ ಯಾವುದಾದರೇನು? ಕೊನೆಗೆಲ್ಲವೂ ಸೇರುವುದು ಒಂದೇ ಎಡೆಗಲ್ಲವೆ?

'ಆದರ್ಶ ಸಾಧನೆ' ಆದರ್ಶ ಪ್ರಿಯನಾದ ಆದರೆ ದೃಢ ಮನಸ್ಕನಲ್ಲದ ತರುಣ ನೋರ್ವನ ಆತ್ಮಕಥೆ. ಆತ್ಮಕಥೆ ಎಂದಿರುವುದು ಕಥೆ ಉತ್ತಮ ಪುರುಷದಲ್ಲಿ ನಿರೂಪಿತವಾಗಿದೆ ಎನ್ನುವ ಅರ್ಥದಲ್ಲಿ. ಇಲ್ಲಿಯ ತರುಣ ವಾಚಾಳಿಯೂ ಕೊಂಚಮಟ್ಟಿಗೆ ವಿದ್ಯಾವಂತನೂ ಆದುದರಿಂದ ಊಸರವಳ್ಳಿಯಂತೆ ಬದಲಾಗುವ ತನ್ನ ನಿಲವುಗಳನ್ನು ಸಮರ್ಥಿಸಿಕೊಳ್ಳುತ್ತಾನೆ. ಎಲ್ಲರೂ ಈ ವಾಗ್ಝರಿಗೆ ಮರುಳಾಗಿ ಬೆನ್ನು ತಟ್ಟಿದರೂ ವಿವೇಚನಾಪರರೂ ಇರುತ್ತಾರೆ. ಅಂಥವರು ಇದೆಲ್ಲವೂ ಕಪಟ ನಾಟಕ ಎಂದೆನ್ನುತ್ತಾರೆ. ಆದರ್ಶ ಸಂನ್ಯಾಸಿಯಾಗಲಾರದೆ, ಆದರ್ಶ ಬ್ರಹ್ಮಚಾರಿ

-ಯಾಗಲಾರದ, ಆದರ್ಶ ಪತಿಯೂ ಆಗಲಾರದೆ ಮರುಮದುವೆಗೆ ಸಿದ್ಧನಾಗಿ ಆತ್ಮವಂಚನೆ ಮಾಡಿಕೊಂಡಾಗ ಅಂತರಂಗ ಬಂಡಾಯವೇಳುತ್ತದೆ. ಆತ್ಮಸಾಕ್ಷಿ ಒಪ್ಪುವುದಿಲ್ಲ. ಕೈಗೆಟುಕಲಾರದ ಆದರ್ಶದ ಬೆನ್ನು ಹತ್ತುವ ದುರ್ಬಲ ಮನಸ್ಕರನ್ನು ವಿಡಂಬಿಸುವುದೇ ಈ ಕತೆಯ ಉದ್ದೇಶ ಎಂದು ಕಾಣುತ್ತದೆ. ಕಥಾನಾಯಕನ ವಾಚಾಳಿತನಕ್ಕೆ ತಕ್ಕಂತೆ ಕತೆಯ ಶೈಲಿ ಸಮರ್ಥ ನ್ಯಾಯವಾದಿಯೊಬ್ಬನ ವಾದಮಂಡನೆಯಂತೆ ಇದೆ. ಕಥಾನಾಯಕ ತಾನು ಪ್ರಥಮ ಮದುವೆಗೆ ಒಪ್ಪಿದುದನ್ನು "ನನ್ನ ನೂರು ವಾದಗಳಿಗೆ ಮನ್ಮಥನೊಡ್ಡಿದ ಮೌನವೂ ಕೋಮಲವೂ ಸುಂದರವೂ ಸುಮನೋಹರವೂ ಆದ ಏಕಮಾತ್ರ ಪ್ರತಿವಾದದಂತೆ ಇದ್ದಳಿವಳು" ಎಂದು ಸಮರ್ಥಿಸಿಕೊಳ್ಳುತ್ತಾನೆ. "ಆದರ್ಶ ಸಾಧನೆ"ಯ ಕಥಾನಾಯಕನಂತೆ "'ಮೀನಾಕ್ಷಿಯ ಮನೆ ಮೇಷ್ಟರು' ಕಥೆಯ ಕಥಾನಾಯಕ ವಾಸ್ತವದ ಅರಿವಿಲ್ಲದ ಕಲ್ಪನಾಲೋಕ ವಿಹಾರಿ. ಬಡತನದಿಂದಾಗಿ ವಯಸ್ಸಿಗೆ ತಕ್ಕ ದೈಹಿಕ ಬೆಳವಣಿಗೆಯಿಲ್ಲದಿದ್ದರೂ ರಸಿಕತೆಗೇನೂ ಕೊರತೆಯಿರಲಿಲ್ಲ. ಲಂಗಕ್ಕೂ ಸೀರೆಗೂ ನಡುವೆ ಉಯ್ಯಾಲೆಯಾಡುತ್ತಿದ್ದ ಮೀನಾಕ್ಷಿಯ ಚೆಲುವಿನ ಬಿರಿಮುಗಳ ಜೇನಿನ ನೋಟದೌತಣಕ್ಕಾಗಿಯೆ ತುಂಬಿ (ಕಥಾನಾಯಕ-) ಹೊತ್ತಿಗೆ ಮುಂಚೆ ಪಾಠ ಹೇಳಿಕೊಡಲು ಹೋಗುತ್ತಿದ್ದದು. "ಈ ಸತ್ಯ ತುಂಬಿಯ ತಲೆಗೂ ಹೊಕ್ಕಿರಲಿಲ್ಲ : ಮೊಗ್ಗಿನ ಎದೆಗೂ ಸೋಂಕಿರಲಿಲ್ಲ." ವಯೋಧರ್ಮಕ್ಕನುಗುಣವಾಗಿ ತಾನು ಪಾಠಹೇಳಿಕೊಡುತ್ತಿದ್ದ ಮೀನಾಕ್ಷಿಯೂ ತನ್ನನ್ನು ಪ್ರೀತಿಸುತ್ತಿರುವಳೆಂದು ಭ್ರಮಿಸಿದ್ದಾನೆ. ಅದರ ಪರಿಣಾಮವಾಗಿ ಜುಟ್ಟು ಹೋಗಿ ಕ್ರಾಪು ಬರುತ್ತದೆ. ಅಂಗಿ ಹೋಗಿ ಪಂಜಾಬಿ ಬರುತ್ತದೆ. ಆದರೆ ಕಥಾನಾಯಕನ ಭ್ರಮೆ ಸುಳ್ಳಾದಾಗ ಮೀನಾಕ್ಷಿಗೆ ಮದುವೆಯ ಏರ್ಪಾಡಾದಾಗ ಸುಳ್ಳು ಕಾಗದಗಳನ್ನು ಬರೆಯುವ ಕೀಳು ಮಟ್ಟಕ್ಕಿಳಿಯುತ್ತಾನೆ. ಅದೂ ಅಸಫಲವಾದಾಗ ಕೊಲೆಯ ಯೋಜನೆಯನ್ನು ಹಾಕಿಕೊಳ್ಳುತ್ತಾನೆ. ಇಂಥವರು ವಾಸ್ತವಲೋಕದಲ್ಲಿ ಇಲ್ಲವೆನ್ನಲಾಗದಿದ್ದರೂ ಈ ಕಥೆಯಲ್ಲಿ ಕಥಾನಾಯಕನನ್ನು ಬೇಕೆಂದೇ ಉತ್ಪ್ರೇಕ್ಷಿಸಿ ಚಿತ್ರಿಸಿರುವಂತೆ ಕಾಣುತ್ತದೆ. ಈ ಕತೆಯಲ್ಲಿ ಅಲ್ಲಲ್ಲಿ ಬರುವ ಹೋಲಿಕೆಗಳು, ಸಂಕೇತಗಳು ಅರ್ಥಗರ್ಭಿತವಾಗಿವೆ. ಉದಾಹರಣೆಗೆ ಕಥಾನಾಯಕ ಕೊಲೆಯ ಉದ್ದೇಶದಿಂದ ಮೀನಾಕ್ಷಿಯ ಪತಿಯ ಮನೆಗೆ ಬಂದಾಗ "ಸಂಜೆ ಕಪ್ಪು ಕಪ್ಪಾಗಿತ್ತು. ಭವ್ಯವಾಗಿದ್ದ ಅವರ ತಾರಸಿಮನೆ ವಿದ್ಯುದ್ದೀಪಗಳಿಂದ ದೀಪ್ತವಾಗಿತ್ತು." ಎನ್ನುವ ವರ್ಣನೆಯಲ್ಲಿ ಕಥಾನಾಯಕನ ಅಂತರಂಗದ ಕತ್ತಲೆ ಮತ್ತು ಆ ಗೃಹ ನಿವಾಸಿಗಳ ಸಂಸ್ಕೃತಿ ಒಂದೇ ಮಾತಿನಲ್ಲಿ ಚಿತ್ರಿತವಾಗಿದೆ. ಮೀನಾಕ್ಷಿಯ ಪತಿಯೊಡನೆ ಮಾತನಾಡಿದ ಮೇಲೆ ಕಥಾನಾಯಕನ ಮನಸ್ಸು ಗಂಗಾಸ್ನಾನ ಮಾಡಿದಂತೆ ಪುನೀತವಾಗುತ್ತದೆ. ಮೀನಾಕ್ಷಿಯನ್ನು ತಾಯಿಯಂತೆ ಕಾಣುತ್ತಾನೆ. ಈ ಪರಿವರ್ತನೆ

ನಾಟಕೀಯ ಎನಿಸುತ್ತದೆ. 'ನನ್ನ ದೇವರು' ಕಥೆಯಲ್ಲಿಯೂ ಆದರ್ಶದ ಚಿತ್ರಣವಿದೆ. ಆದರ ಜೊತೆಯಲ್ಲಿ ಒಂದು ಜ್ವಲಂತ ಸಮಸ್ಯೆಯೂ ಇದೆ. ಆದರೆ ಪರಿಹಾರವನ್ನು ಸೂಚಿಸಿಲ್ಲ. ಅದು ವಿಧವಾ ಸಮಸ್ಯೆ. ಇಲ್ಲಿನ ಕಥಾನಾಯಕಿ ಮದುವೆಯಾದಾಗ ಹದಿನೈದರ ಚೆಲುವೆ. ಅನಂತರ ತಾನು ಬದುಕಬೇಕಾಗಿ ಬಂದುದು ಧೀರನೂ ಗಂಭೀರನೂ ಸುರೂಪಿಯೂ ಆದರ್ಶಮೂರ್ತಿಯೂ, ತನ್ನ ಪತಿಗಿಂತ ಕೇವಲ ಮೂರೇ ವರ್ಷ ದೊಡ್ಡವನೂ ಆದ ಭಾವನವರ ಬಳಿಯಲ್ಲಿ ನಾಲ್ಕುವರ್ಷಗಳ ಸಾಮಿಪ್ಯ ಸಹವಾಸಗಳಿಂದ ಭಾವನವರ ಬಗೆಗಿದ್ದ ಭಕ್ತಿಗೌರವಗಳು ಪ್ರೌಢೆಯಾದ ಕಥಾನಾಯಕಿಯಲ್ಲಿ ಸಹಜವಾಗಿಯೆ ದೈಹಿಕ ಕಾಮನೆಗಳಿಗೆ ದಾರಿಮಾಡುತ್ತವೆ. ಆದರೆ ಅವಳು ಆ ಮೇರು-ಸದೃಶವಾದ ವ್ಯಕ್ತಿತ್ವದ ಮುಂದೆ ಕುಬ್ಜಳಾಗಿ ದೀನಳಾಗಿ ಹೋಗುತ್ತಾಳೆ. ಕಥೆಗಾರರು ಕಥಾನಾಯಕಿಯನ್ನು ಎಲ್ಲೂ ನಿಂದಿಸುವುದಿಲ್ಲ. ಮಾಡಿದ್ದು ಸರಿ ಎಂದೂ ಹೇಳುವುದಿಲ್ಲ. ಹಾಗಾದರೆ ವಿಧವೆಯರು ಬಾಳಿನುದ್ದಕ್ಕೂ ಅಸಹಜವಾದ ಬ್ರಹ್ಮಚರ್ಯದಲ್ಲಿಯೆ ಇರಬೇಕೆ? ಇದಕ್ಕೆ ಕಥೆಗಾರರು ಉತ್ತರಿಸಿಲ್ಲ. ಆದರೆ ಸಮಸ್ಯೆಯ ಅರಿವು ಅವರಿಗಿಲ್ಲ ಎಂದಲ್ಲ. ಕಥಾನಾಯಕೆಯ ಗಂಡ ಸಾಯುವಾಗ ಇವಳನ್ನು ನೋಡುತ್ತಿರುತ್ತಾನೆ. "ಆ ದೃಷ್ಟಿ ದಿಗಂತಗಾಮಿಯಾಗಿತ್ತು. ಅದರಲ್ಲಿ ಅನಂತ ಪ್ರಶ್ನೆಯ ಪ್ರತಿಬಿಂಬವಿತ್ತು" ಎನ್ನುವಲ್ಲಿ ಮತ್ತು ಕಥಾನಾಯಕಿಯ ವಿಕೃತ ನಡತೆಯಿಂದಾಗಿ ಅವಳ ಭಾವನವರು "ಇದ್ದಕ್ಕಿದ್ದಂತೆ ಯಾವುದೋ ಚಿಂತೆಯಲ್ಲಿ ಮುಳುಗಿದರು" ಎನ್ನುವಲ್ಲಿ ಸಮಸ್ಯೆಯ ಆಳ ಅಗಲಗಳ ಅರಿವು ಅವರಿಗಿದೆ ಎಂದು ಭಾವಿಸಬಹುದು. ಅಲ್ಲದೆ ಈಗ್ಗೆ ನಲವತ್ತು ವರ್ಷಗಳ ಹಿಂದೆ ಮರುಮದುವೆಯನ್ನು ಮಾಡಿಸುವಷ್ಟು ಮುಂದುವರೆದಿರಲಾರರು ಎನ್ನಬಹುದು ಅಥವಾ ರಾಮಕೃಷ್ಣ ಪರಮಹಂಸ ವಿವೇಕಾನಂದರ ಪ್ರಭಾವದಿಂದಾಗಿ ಆದರ್ಶ ಜೀವನವೇ ಶ್ರೇಷ್ಠ ಎಂದು ಭಾವಿಸಿರಬಹುದೆ? ಈ ಕಥೆಯಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವಿದೆ ಅದು ಸಮಸ್ಯೆಯಲ್ಲ. ಬದುಕನ್ನು ಕುರಿತ ಮಾತದು. ಬಾಳಿನಲ್ಲಿ ಬಾಹ್ಯಾಡಂಬರ ಕೂಡದು, ಬಾಳಿದಷ್ಟು ದಿನವೂ ಮಾನವನಾಗಿ ಪರರಿಗೆ ಉಪಕಾರಿಯಾಗಿ ಬಾಳಬೇಕೆಂಬ ಮಾತದು. ಈ ಮಾತು ಅಥವಾ ನೀತಿ ಉಕ್ತವಾದುದಲ್ಲ. ಕಥಾನಾಯಕನ ಜೀವನದಿಂದ ಧ್ವನಿಸುತ್ತದೆ. ಅವನು ತನ್ನ ತಂದೆ ಸತ್ತಾಗ ಆಗಲಿ ತಮ್ಮ ಸತ್ತಾಗ ಆಗಲಿ ಅಳುವುದಿಲ್ಲ. ಹಾಗಂದರೆ ಬದುಕಿದ್ದಾಗ ಅವರನ್ನು ಅವಜ್ಞೆಗೈದಿದ್ದ ಎಂಧರ್ಥವಲ್ಲ ತನ್ನ ತಮ್ಮ ವಿಷಮಶೀತಜ್ವರ ಪೀಡಿತನಾಗಿದ್ದಾಗ ಅವನ ಬಳಿಯಲ್ಲಿದ್ದು ಮಾಡಬೇಕಾದ ಸೇವೆಯನ್ನು ಮಾಡಿದ. ಸತ್ತಮೇಲೆ ದುಃಖಿಸಿದರೇನು ಬಂತು? ನಿಜವಾಗಿಯೂ ಸತ್ತ ವ್ಯಕ್ತಿಯ ಬಗೆಗೆ ನಮ್ಮಲ್ಲಿ ಪ್ರೀತಿಗೌರವಗಳಿರುವುದಾದರೆ ಸತ್ತವ್ಯಕ್ತಿಗೆ ಸಂತೋಷವಾಗುವಂತೆ ಅಂದರೆ ಆತ ಏನು ಧ್ಯೇಯಗಳನ್ನು ಇಟ್ಟುಕೊಂಡಿದ್ದನೊ

ಆ ಧ್ಯೇಯಗಳಿಗಾಗಿ ಬದುಕಬೇಕು. ಅದು ಬಿಟ್ಟು ದುಃಖಿಸಿದರೇನು ಪ್ರಯೋಜನ? ಅದು ಬರಿಯ ಪ್ರದರ್ಶನ. ಇಲ್ಲಿಯ ಕಥಾನಾಯಕ ಮದುವೆ ಬೇಡವೆಂದರೂ ಅಲಂಕಾರ ದ್ವೇಷಿಯಲ್ಲ. ದೇವರಿಗೆ ಕೈಮುಗಿಯದಿದ್ದರೂ ಕಟುಕನಲ್ಲ. ಇಷ್ಟರ ಮೇಲೆ ಮನುಷ್ಯನ ಬಾಳು ಹೇಗಿರಬೇಕೆಂಬುದನ್ನು ನಾವೇ ಊಹಿಸಿಕೊಳ್ಳಬಹುದಲ್ಲ!

'ನನ್ನ ದೇವರು'ವಿನ ಭಾವನವರಲ್ಲಿ 'ಮಲೆನಾಡಿನ ಚಿತ್ರ'ಗಳಲ್ಲಿನ 'ಮನೆಯ ಶಾಲೆಯ ಐಗಳ ಮಾಲೆ'ಯ ವ್ಯಾಸರಾಯರಲ್ಲಿ ವಿಮರ್ಶಕರು ಕುವೆಂಪು ಅವರನ್ನು ಅಥವಾ ಕಾನೂರು ಹೆಗ್ಗಡಿತಿಯ ಹೂವಯ್ಯನನ್ನು ಕಂಡರೆ ಅಚ್ಚರಿ ಪಡಬೇಕಾಗಿಲ್ಲ. ಹಾಗೆಯೆ 'ನನ್ನ ದೇವರು' ಕಥೆಯಲ್ಲಿ ಚಿತ್ರಿತವಾಗಿರುವ ಕಲ್ಲುಗುಡ್ಡ ನವಿಲುಕಲ್ಲೋ ಕವಿಶೈಲವೊ ಆಗಿರಬಹುದು.

'ಈಶ್ವರನೂ ನಕ್ಕಿರಬೇಕು' ಸಾಧಾರಣವಾದ ಒಂದು ಕಥೆ. 'ಸತ್ಕುಲ ಪ್ರಸೂತೆಯಾದ ಒಬ್ಬ ಹನ್ನೆರಡು ವರುಷದ ಬ್ರಾಹ್ಮಣ ಕನ್ಯೆಗೆ ತಿಂಗಳಿಗೆ ೫೦ ರೂಪಾಯಿಗೆ ಕಡಮೆಯಿಲ್ಲದೆ ಸಂಪಾದನೆ ಮಾಡುವ ವರನು ಬೇಕಾಗಿದೆ' ಎಂಬ 'ಹಿಂದೂ' ಪತ್ರಿಕೆಯಲ್ಲಿನ ಪ್ರಕಟಣೆಯನ್ನು ನೋಡಿ ಮುವತ್ತು ವಯಸ್ಸಿನ ರೆವಿನ್ಯೂ ಇಲಾಖೆಯಲ್ಲಿ ಅರವತ್ತು ರೂಪಾಯಿ ಸಂಪಾದಿಸುವ ನಾಗರಾಜನು ತಸ್ವೀರೊಂದನ್ನು ತೆಗೆಸಿ ಅದಕ್ಕೆ 'ಗೋಲ್ಡನ್ ಟಚ್' ಮಾಡಿಸಿ ಹೆಣ್ಣಿನ ಕಡೆಯವರಿಗೆ ತೋರಿಸಿ ಮದುವೆಯಾಗುತ್ತಾನೆ. ಅವನಿಗೆ ಬಲಗಿವಿಯು ಇರಲಿಲ್ಲ. ಅವನು ಕೈಹಿಡಿದ ಲಲಿತೆಗಾದರು ಅಷ್ಟೆ : ಅವಳ ಎಡಗೈ ಡೊಂಕಾಗಿ ಮೋಟಾಗಿ ದೇಹಕ್ಕೊಂದು ಭಾರವಾಗಿತ್ತು. ಹೇಗೆ ಪರಸ್ಪರ ಮೋಸಹೋಗುತ್ತಾರೆ. ಅದರಿಂದ ತೊಂದರೆಯೇನೂ ಆಗುವುದಿಲ್ಲ. ಅನುರಾಗ ಅಂಕುರಿಸಿತೆಂದರೆ ಕೋಡಗಕೂಡ ಕಣ್ಣಿಗೆ ಮುದ್ದಾಗಿ ಕಾಣುತ್ತದಲ್ಲವೆ? ಮೋಸಕ್ಕೆ ಪ್ರತಿಮೋಸ ಇದ್ದೇ ಇರುತ್ತದೆ. ಈಶ್ವರನೆಂಬುವ -ನೊಬ್ಬನಿದ್ದರೆ ಅವನೂ ಈ ಕಪಟ ಆಟ ಕಂಡು ನಕ್ಕಿರಬೇಕು! ಒಟ್ಟಿನಲ್ಲಿ ಕಥೆಗಾರರ ಧೋರಣೆ ಪತ್ರಿಕೆಗಳಲ್ಲಿ ಪ್ರಕಟಣೆಕೊಟ್ಟು ವಿವಾಹವಾಗುವುದನ್ನು ಲೇವಡಿಮಾಡುವುದು. ಅಂತಹ ಮದುವೆಗಳಲ್ಲಿ ಮೋಸ ಇರುತ್ತದೆಂಬುದು ಕಥೆಗಾರರ ಅಭಿಪ್ರಾಯವಿದ್ದಂತೆ ತೋರುತ್ತದೆ. ಅವರ ಧೋರಣೆಗೆ ಅನುಗುಣವಾಗಿ ಕಥೆಯನ್ನು ಲಘುವಾದ ಶೈಲಿಯಲ್ಲಿ ನಿರೂಪಿಸುತ್ತಾರೆ. ಲಲಿತಮ್ಮ ಶಾಮರಾಯರಿಗೇನಾಗಬೇಕು ಎಂಬುದನ್ನು 'ಆಕೆ ಅವರ ಹೆಂಡತಿಯ ತಂಗಿಯ ಗಂಡನ ತಮ್ಮನ ಪತ್ನಿಯ ನಾದಿನಿ' ಎಂದು ಹೇಳುತ್ತಾರೆ. 'ಔದಾರ್ಯ' ಕಥೆಯಲ್ಲಿ ಡೇವಿಡ್ ಮಾಸ್ತರು ತಾನು ಕಂಡು ಒಪ್ಪಿದವಳನ್ನೇ ಕೈಹಿಡಿದರೂ (ಎರಡನೆಯ ಮದುವೆ) ಅಲ್ಲಿ ಅವರ ಕೌಟುಂಬಿಕ ಜೀವನ ಸುಖಮಯವಾಗುವುದಿಲ್ಲ. 'ಔದಾರ್ಯ' ಕಥೆಯನ್ನು ಎರಡು ಸ್ತರಗಳಲ್ಲಿ ಗ್ರಹಿಸಬೇಕು. ತನ್ನ ಕೈಹಿಡಿದ ಹೆಂಡತಿಯೇ ಅನ್ಯ ಪುರುಷನೊಬ್ಬರಲ್ಲಿ ಅನುರಕ್ತಳಾಗಿರುವುದನ್ನು

ತಿಳಿದು ಕ್ಷಮಿಸುವ ಔದಾರ್ಯ ಡೇವಿಡ್ ಮಾಸ್ತರಲ್ಲಿ ಕಂಡು ಬರುತ್ತದೆ. ಡೇವಿಡ್ ಮಾಸ್ತರ ಮರಂತ ಕಥೆಯನ್ನು ಕೇಳುವ ಮುನ್ನ ತೀರ್ಥಹಳ್ಳಿಯಲ್ಲಿ ರಾಮತೀರ್ಥ ಬಳಿ ಮಂಟಪದ ಬಂಡೆಯ ಮೇಲೆ ಕುಳಿತು ಹುಣ್ಣಿಮೆ ಚಂದ್ರನ ಸೊಬಗನ್ನು ಸವಿಯುತ್ತಾ ಭಾವಪೂರ್ಣವಾದ ವಿಚಾರ ತರಂಗಗಳಲ್ಲಿ ತೇಲುತ್ತಾ ಕುಳಿತಿದ್ದವರಿಗೆ, ಕೇಳಿದನಂತರ ಅದೇ ಸೌಂದರ್ಯ ಕಡಿದು ಓಡುವ ನಾಗರನಂತ ಭಯಂಕರವಾಗಿ ತೋರುತ್ತವೆ. ಅನಾದಿ ಕಾಲದಿಂದಲೂ ಇರುವುದು ಅದೇ ಪ್ರಕೃತಿಯಾದರೂ ಕೆಲವೊಮ್ಮೆ ನಮ್ಮ ಮನಸ್ಸಿಗೆ ಅನುಗುಣವಾಗಿ ಸೌಮ್ಯ ಸುಂದರಳಾಗಿ ಮಗುದೊಮ್ಮೆ ಭೀಷ್ಮ ಭಯಂಕರಳೂ ಆಗಿ ಪ್ರಕೃತಿ ಗೋಚರವಾಗುತ್ತಾಳೆ. ಕಥೆ ಉತ್ತವಾದುದೇನೂ ಅಲ್ಲ. 'ನೀರಿನಲ್ಲಿ ಮುಳುಗಿ ಸಾಯುವುದರ ಸುಖಾನುಭವದ ನಿರೂಪಣೆ' ಕಥೆಗೆ ಅನಗತ್ಯವಾಗಿತ್ತು ಮತ್ತು ಯಾವ ವಿಧದಲ್ಲಿಯೂ ಕಥೆಗ ಪೋಷಕನಲ್ಲ ಎನಿಸುತ್ತದೆ.

ಸಕಾಲದಲ್ಲಿ ವೈದ್ಯಕೀಯ ನೆರವೀಯದೆ ವಿಧವೆಯೊಬ್ಬಳ ಮಗನ ಮರಣಕ್ಕೆ ಕಾರಣನಾದ ಡಾಖಾನಗರದ ಸುಪ್ರಸಿದ್ಧ ವೈದ್ಯ ವಿಪಿನಚಂದ್ರ ಬಾಬುವನ್ನು ದೆವ್ವಗಳು ತಮ್ಮ ಬೀಡಾದ ದಕ್ಷಿಣ ಮೊಷಂಡಿಯಲ್ಲಿನ ಮನೆಗೆ ಕರೆದೊಯ್ದು ತಕ್ಕ ಶಿಕ್ಷೆಯನ್ನು ವಿಧಿಸುವ ಕಥೆ 'ಮಾಯದ ಮನೆ.' ಕುತೂಹಲ, ಭಯ, ಉದ್ವೇಗಗಳು ಓದುತ್ತಿದ್ದಂತೆ ಒಂದರಮೇಲೊಂದು ಪೈಪೋಟಿ ನಡೆಸುವಂತೆ ಕಥಾ ರಚನೆಯಿದೆ. ಕಥೆಯಲ್ಲಿ ಬರುವ ವರ್ಣನೆಗಳು ವಿವರಗಳು ಇದಕ್ಕೆ ಪೋಷಕವಾಗಿವೆ. ಕಥೆಗಾರರ ಮುಖ್ಯ ಉದ್ದೇಶ ಈ ರೋಮಾಂಚನದ ಅನುಭವವನ್ನು ಕೊಡುವುದಲ್ಲ. ಅದಕ್ಕಿಂತ ಹೆಚ್ಚಾಗಿ ವೈದ್ಯರು ಹಣದಾಸೆಗೆ ಪಕ್ಕಾಗಿ ತಮ್ಮ ಕರ್ತವ್ಯವನ್ನೇ ಮರೆತು ಎಷ್ಟೋ ಜೀವಿಗಳ ಅಕಾಲ ಮರಣಕ್ಕೆ ಕಾರಣರಾಗುತ್ತಿದ್ದಾರೆಂಬುದನ್ನು ಚಿತ್ರಿಸುವುದು. ಈ ಕಥೆ ಬಂದು ನಲವತ್ತು ವರ್ಷಗಳಿಗೂ ಮೇಲಾಗಿದೆ. ಈಗಿನ ಪರಿಸ್ಥಿತಿ ಆಗಿನದಕ್ಕಿಂತ ಉತ್ತಮವಾಗೇನಿಲ್ಲ. ಇನ್ನೂ ಕೆಟ್ಟದಾಗಿದೆ. ಸಾರಥಿತನದಿಂದ ಹಿಡಿದು ನರ್ಮ ಸಚಿವನಾಗಿ ಅಮಾತ್ಯ ಪದವಿಗೂ ಏರಿದ್ದ ಮುತ್ತಣ್ಣನು ನವಿಲೂರ ರಂಗರಾಯ ತೀರ್ಥಹಳ್ಳಿಯನ್ನು ತೊರೆದು ನವಿಲೂರಿಗೇ ವಾಸಕ್ಕೆ ಬಂದಾಗ ತನ್ನ ಏಕಚಕ್ರಾಧಿಪತ್ಯಕ್ಕೆ ಧಕ್ಕೆಯೊದಗಿದುದರಿಂದ ಮನೆಯ ಮೇಲೆ ಕಲ್ಲುಗಳನ್ನೆಸೆದು ದೆವ್ವದ ಕಾಟದ ಭ್ರಮೆ ಹುಟ್ಟಿಸಿ ರಂಗರಾಯರನ್ನು ನವಿಲೂರಿನಿಂದ ಓಡಿಸಲೆತ್ನಿಸಿದ ಕಥೆ 'ದೆವ್ವದ ಕಾಟ.' ಈ ಕಥೆಯು ಒಂದು ಪತ್ತೇದಾರಿ ಕಥೆಯಂತೆ ಮುಂದೇನು ಮುಂದೇನು ಎಂಬ ಕುತೂಹಲವನ್ನು ಕೆರಳಿಸಿಕಂಡು ಹೋಗುತ್ತದೆ. ಕೊನೆಗೆ ಮುತ್ತಣ್ಣನೇ ಈ ಸಂಚಿನ ಹಿಂದೆಯಿದ್ದವನೆಂದು ತಿಳಿದಾಗ ನಮಗಾಗುವ ಆಶ್ಚರ್ಯ ಅಷ್ಟಿಷ್ಟಲ್ಲ. ಆದರೆ ಕಥೆಗಾರರು ಅದನ್ನು ವಾಚ್ಯವಾಗಿಸಿ ಸ್ವಾರಸ್ಯವನ್ನು ಸ್ವಲ್ಪ ಕಡಿಮೆ ಮಾಡಿದ್ದಾರೆ. ರಂಗರಾಯರ ಮನೆಯ ಮೇಲೆ ಕಲ್ಲುಬೀಳುವ ವಿಚಾರವಾಗಿ, ದೆವ್ವಗಳ ಬಗೆಗಿನ ಜನತೆಯ ಮೌಢ್ಯವನ್ನು ಬಂಡವಾಳವಾಗಿಟ್ಟುಕೊಂಡು

ರಂಗರಾಯರನ್ನು ಸುಲಿಯುವ ಜನರೆಷ್ಟು! ಮಂತ್ರವಾದಿಗಳು, ಮಂಗನ ಹಳ್ಳಿಯ ಸಿಂಗಾಜೋಯಿಸರು ಮೊದಲಾದವರು ಮಂತ್ರ ತಂತ್ರಗಳು ಪೂಜೆ ಗೀಜೆಗಳು ವಿಫಲವಾದಾಗ ಬಹುಸುಲಭವಾಗಿ ಗೂಬೆಯನ್ನು ಬೇರೊಬ್ಬರಮೇಲೆ ಕೂರಿಸಿ ಓಡುತ್ತಾರೆ. ರಂಗರಾಯರು ತನ್ನ ಮೇಲಿಟ್ಟಿದ್ದ ನಂಬಿಕೆಯನ್ನು ದುರುಪಯೋಗ ಪಡಿಸಿಕೊಂಡ ಮುತ್ತಣ್ಣ. ಜನತೆಯಲ್ಲಿದ್ದ ಮೂಢನಂಬಿಕೆಯನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡರು ಪುರೋಹಿತರು. 'ಯಾರೂ ಅರಿಯದ ವೀರ' ಕಥೆಯ ಲಿಂಗನ ನಿಷ್ಠೆ, ಸ್ವಾಮಿ ಭಕ್ತಿಗೂ, ಮುತ್ತಣ್ಣನ ಸ್ವಾರ್ಥ, ದ್ರೋಹಕ್ಕೂ ಎಲ್ಲಿಗೆಲ್ಲಿಯ ಸಂಬಂಧ? ಪಾಪ ರಂಗರಾಯರೇನೊ ಮುತ್ತಣ್ಣನನ್ನು ವಾತ್ಸಲ್ಯದಿಂದಲೇ ಕಾಣುತ್ತಾರೆ. ಅವನ ಕಾಲಿನ ಮೂಳೆ ಮುರಿದಾಗ ಬೆಂಗಳೂರಿಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನೂ ಮಾಡಿಸಿಕೊಂಡು ಬರುತ್ತಾರೆ. ತಂತ್ರದ ದೃಷ್ಟಿಯಿಂದ ಮತ್ತು ವಸ್ತುವಿನ ದೃಷ್ಟಿಯಿಂದಲೂ ಇದೊಂದು ಒಳ್ಳೆಯ ಕಥೆ ಎನ್ನಿಸುತ್ತದೆ. 'ಗಂಟು ಅಥವಾ ಗುಪ್ತಧನ' ಮುಖ್ಯವಾಗಿ ಹಳ್ಳಿಗರ ಮೌಢ್ಯವನ್ನು ಕುರಿತದ್ದಾಗಿದೆ. ನಿಧಿ ಅದೃಷ್ಟವಿದ್ದವರಿಗೆ ಸಿಗುತ್ತದೆಂಬ ನಂಬಿಕೆಗೆ ಒಳಗಾಗಿ ತಮ್ಮ ಧನಕನಕಾದಿಗಳನ್ನೂ ಪ್ರಾಣವನ್ನೂ ಕಳೆದುಕೊಳ್ಳುವ ಮೂಢರಿಗೇನೂ ಕೊರತೆಯಿಲ್ಲ. ಅಂಥ ಮೂಢ ಅಥವಾ ದುರಾಶಾ ಪಿಶಾಚಿ ಮಂಜಣ್ಣನ ಕಥೆ ಗಂಟು ಅಥವಾ ಗುಪ್ತ ಧನ. ಕಥೆ ಗಂಟು, ಕೈ, ಕೀಳುವುದು ಮೊದಲಾದವುಗಳಿಗೆ ವಿವರಗಳನ್ನು ಕೊಡುತ್ತಾ ಹಳ್ಳಿಗರ ಮೌಢ್ಯವನ್ನು ವಿಡಂಬಿಸುತ್ತಾ, ಬೈರಾಗಿ ಸಂನ್ಯಾಸಿಗಳ ಕ್ರೂರ ವರ್ತನೆಯನ್ನು ಚಿತ್ರಿಸುತ್ತಾ ಕಥೆಗಿಂತ ಹೆಚ್ಚಾಗಿ ಹರಟೆಯ ಜಾಡನ್ನು ಹಿಡಿದಿದೆ. ಇದನ್ನು ಸರಿದೂಗಿಸಲೊ ಎಂಬಂತೆ 'ಕಾಸಿಗೆ ಕಾಸು ಗಂಟು ಹಾಕಿ, ಹೊಟ್ಟೆಗೆ ಬೆನ್ನು ಅಂಟು ಹಾಕಿ, ರೊಕ್ಕ ಚೊಕ್ಕವಾದುವೆ ಹೊರತು ಲೆಕ್ಕ ಹೆಚ್ಚಾಗಲಿಲ್ಲ' ಎನ್ನುವಂಥ ಪ್ರಾಸಬದ್ಧವಾದ ಶೈಲಿ ಕಾಣಿಸಿಕೊಳ್ಳುತ್ತದೆ. ಈ ಮೇಲಿನ ಮೂರು ಕಥೆಗಳಲ್ಲಿ ಮತ್ತು 'ಔದಾರ್ಯ' ಕಥೆಯಲ್ಲಿ ದೆವ್ವಗಳ ಪ್ರಸ್ತಾಪವಿದ್ದರೂ ಅವುಗಳ ಬಗೆಗೆ ಲೇಖಕರ ನಿಲುವೇನು ಎಂಬುದು ಗೊತ್ತಾಗುವುದಿಲ್ಲ. ಅವು ಇವೆಯೊ ಇಲ್ಲವೊ ತಿಳಿಯದು. ಆದರೆ ಅವು ಇವೆ ಎಂಬ ನಂಬಿಕೆಯನ್ನು ಬಂಡವಾಳ ಮಾಡಿಕೊಡು ಜನತೆಯನ್ನು ಶೋಷಿಸುತ್ತಿರುವ ಒಂದು ವರ್ಗವಂತೂ ಖಂಡಿತ ಇದೆ.

ಮೊನ್ನೆಮೊನ್ನೆಯವರೆಗೂ ಜೀವಂತವಾಗಿದ್ದ ಜೀತಪದ್ಧತಿಯನ್ನು ವಸ್ತುವಾಗುಳ್ಳ ಕಥೆ 'ಸಾಲನ ಮಗು'. ಎಂಟು ಹತ್ತು ವರ್ಷದ ಹುಡುಗ ಸುಬ್ಬ. ಅವನು ತಬ್ಬಲಿಯಾದದ್ದು ಎರಡು ವರ್ಷದವನಿದ್ದಾಗ. ತನ್ನ ತಂದೆ ರಂಗ ಗೌಡರಲ್ಲಿ ಮಾಡಿದ್ದ ಮುನ್ನೂರರ ಸಾಲಕ್ಕೆ ಗೌಡರು ಅವನನ್ನು ಜೀತಕ್ಕಿಟ್ಟುಕೊಂಡಿದ್ದರು. ತಂದೆ ತಾಯಿಯ ವಾತ್ಸಲ್ಯದಲ್ಲಿ ಬೆಳೆಯಬೇಕಾಗಿದ್ದ ಸುಬ್ಬ ಗೌಡರ ದಯಾಹೀನ ಕ್ರೌರ್ಯದ ಗಾಣಕ್ಕೆ

ಸಿಕ್ಕಿ ಸಿಪ್ಪೆಯಾಗಿ ಸ್ಮಶಾನಕ್ಕೆ ಹತ್ತಿರವಾಗುತ್ತಿದ್ದ. ಮಲೆನಾಡಿನ ಕಾರ್ಗಾಲದ ಭಯಂಕರ ಜಡಿಮಳೆಯಲ್ಲಿ ಗದ್ದೆಯಲ್ಲಿ ಹಾಕಿದ್ದ ಕೂಣೆಯನ್ನು ನೋಡಿಕಂಡು ಬರಲು ಗೌಡರು ಸುಬ್ಬನನ್ನು ಕಳುಹಿಸಿದರು. ಕೂಣೆಯಲ್ಲಿದ್ದ ಕೃಷ್ಣಸರ್ಪ ಸುಬ್ಬನನ್ನು ಈ ಲೋಕದ ಸಂಕಟದಿಂದ ಪಾರುಮಾಡಿತು. ಇಲ್ಲಿ ಗೌಡರ ಕ್ರೌರ್ಯ ಎದ್ದು ಕಾಣುವಂತಿದ್ದು ಸಹೃದಯರ ಸಹಾನುಭೂತಿ ಸುಬ್ಬನ ಕಡೆಗೆ ತಿರುಗುತ್ತದೆ. ಇದಕ್ಕಿಂತ ಹೆಚ್ಚಿನ ಪರಿಹಾರವನ್ನು ಲೇಖಕರು ಆ ಕಾಲಕ್ಕೆ ಸೂಚಿಸದಿದ್ದರೂ ಅವರು ಸುಬ್ಬನ ಪಕ್ಷಪಾತಿ ಎನ್ನುವುದನ್ನು ಗಮನಿಸಬೇಕು. 'ಯಾರೂ ಅರಿಯದ ವೀರ' ಕತೆಯನ್ನು ಕುರಿತು ಕತೆಗಾರರು ಕಲೆಗಾರಿಕೆಯಲ್ಲಿ ತುದಿ ಮುಟ್ಟಿದರು ಎಂಬ ವಿಮರ್ಶೆಯಿದೆ. ಇದು ಸ್ವಲ್ಪ ಉತ್ಪ್ರೇಕ್ಷೆಯ ಮಾತಾದರೂ ಕುವೆಂಪು ಅವರ ಶ್ರೇಷ್ಠ ಕತೆಗಳಲ್ಲಿ ಇದಕ್ಕೆ ಅಗ್ರಸ್ಥಾನ ದಕ್ಕಲೇಬೇಕು. ಮಲೆನಾಡಿನ ಮಾರಿ ಜಡಿ ಮಳೆಯಲ್ಲಿ ತುಂಗೆಯ ಪ್ರವಾಹ ಉಕ್ಕೇರಿ ಜಲಪ್ರಳಯವೇ ಆಗುತ್ತದೋ ಎನ್ನುವಂತಾದಾಗ ಶಿವನೂರಿನ ಸುಬ್ಬಣ್ಣ ಗೌಡರು ಮನೆಯನ್ನು ಬಿಟ್ಟು ಸಂಸಾರ ಸಮೇತರಾಗಿ ದೋಣಿ ಏರಿ ಹೊರಟಾಗ ನದಿಯ ಭರತದಲ್ಲಿ ದೋಣಿಯು ಮುಳುಗುವಂತಾದಾಗ ಲಿಂಗ ನದಿಗೆ ಹಾರಿಕೊಂಡು ತನ್ನ ಒಡೆಯರ ಕುಟುಂಬವನ್ನು ಕಾಪಾಡುತ್ತಾನೆ. ಲೋಕವೇ ಅವನನ್ನು ಕಳ್ಳ ಎಂದು ದೂರ ಮಾಡಿದ್ದಾಗ ಅನ್ನವಿಟ್ಟು ಆಶ್ರಯ ಕೊಟ್ಟ ಸುಬ್ಬಣ್ಣ ಗೌಡರ ಔದಾರ್ಯ ದೊಡ್ಡದು. ಆದರೆ ಅದಕ್ಕೆ ಪ್ರತಿಯಾಗಿ ತನ್ನ ಜೀವವನ್ನೇ ಅರ್ಪಿಸಲು ಸಿದ್ಧನಾದ ಲಿಂಗನ ತ್ಯಾಗ ಸಾಟಿಯಿಲ್ಲದುದು. ರಣರಂಗದಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದು ಶತ್ರುಗಳ ರುಂಡವನ್ನು ಚೆಂಡಾಡಿದ ವೀರನಲ್ಲ ನಮ್ಮ ಲಿಂಗ. ತನ್ನ ಪ್ರಾಣವನ್ನೇ ತೃಣಕ್ಕಿಂತಲೂ ಕಡೆಯಾಗಿ ಕಂಡು ಅನ್ನವಿಟ್ಟ ಧಣಿಯನ್ನು ಕಾಪಾಡಿದ ತ್ಯಾಗವೀರ. ಅವನ ತ್ಯಾಗದ ಅರಿವು ಸುಬ್ಬಣ್ಣಗೌಡರಿಗಿದೆ. "ಅಲ್ಲೋ ಹುಟ್ಟು ಹಾಕುತ್ತಿದ್ದವನು ಮುಗ್ಗರಿಸಿ ಬಿದ್ದರೆ ಹುಟ್ಟು ದೋಣಿಗೆ ಬರುವುದು ಹೇಗೋ!" ಎಂದರೆ "ಏನೋ ಅಯ್ಯಾ, ದೇವರಿಗೆ ಗೊತ್ತು!" ಎಂದು ತನ್ನ ತ್ಯಾಗವನ್ನು ಪ್ರಕಟ ಮಾಡಲೊಲ್ಲದ ವಿನಯಮೂರ್ತಿ ಅವನು. ಇದರಿಂದಾಗಿ ಅವನ ತ್ಯಾಗ ಅಮೌಲ್ಯವಾಗುತ್ತದೆ. ಈ ಕತೆಯ ಎಲ್ಲ ಪಾತ್ರಗಳಲ್ಲೂ ಮಾನವೀಯತೆ ಪ್ರಮುಖವಾಗಿ ಎದ್ದು ಕಾಣುತ್ತದೆ. ಲೋಕವೇ ತಿರಸ್ಕರಿಸಿದ್ದ ಲಿಂಗನಿಗೆ ಆಶ್ರಯಕೊಟ್ಟಿದ್ದಲ್ಲದೆ ಅವನಿಲ್ಲವೆಂದು ತಿಳಿದಾಗ ಸುಬ್ಬಣ್ಣಗೌಡರು "ನಮ್ಮ ಮನೆಯ ಒಂದು ಬೆಳಕೇ ಹೋಯ್ತು" ಎಂದು ದುಃಖಿಸುತ್ತಾರೆ. ಸಾಲದ ಮಗು ಕತೆಯ ಗೌಡರು ಸುಬ್ಬ ಸತ್ತು ಬಿದ್ದಿರುವುದನ್ನು ಕಂಡಾಗ "ಅಂತು ಮುನ್ನೂರು ರೂಪಾಯಿ ಮನೆಗೆ ಬಂತು!" ಎಂದು ನಿಡುಸುಯ್ಯುತ್ತಾರೆ. ಮಕ್ಕಳಾದ ತಿಮ್ಮು ಸೀತೆಯಲ್ಲೂ ಮಾನವೀಯತೆ ತುಂಬಿ ತುಳುಕುತ್ತದೆ. ಎಲ್ಲ ಅಂಗಗಳಲ್ಲೂ, ವಿವರಗಳಲ್ಲೂ ಪರಿಪೂರ್ಣವಾದ ಕತೆ ಇದು. 'ಶೈಲಿಯಲ್ಲಿ ಭಾವಗೀತದಂತಿದ್ದರೂ

ಮಹಾಕಾವ್ಯವೊಂದರ ಪ್ರಭಾವವೊಂದನ್ನು ಈ ಕತೆ ಬೀರುತ್ತದೆ' ಎಂಬ ಕೀರ್ತಿನಾಥ ಕುರ್ತಕೋಟಿಯವರ ಅಭಿಪ್ರಾಯ ಸಮಂಜಸವಾದುದು. ಪ್ರತಿಮಾ ವಿಧಾನದಿಂದ ರೈತನ ಶೋಷಣೆಯನ್ನು ಚಿತ್ರಿಸಿರುವ ಕತೆಯ 'ಧನ್ವಂತರಿಯ ಚಿಕಿತ್ಸೆ.' ಸದಾ ಅಮೋದ ಪ್ರಮೋದಗಳಲ್ಲಿ ತೊಡಗಿರುವ ನಗರದಲ್ಲಿನ, ಅಧಿಕಾರಿಗಳು, ನಾಗರಿಕರು ಆಡಳಿತದ ಹೊಣೆ ಹೊತ್ತವರು. ಅವರ ಅಮೋದ ಪ್ರಮೋದಗಳೆಲ್ಲಕ್ಕೂ ತಲೆಯೊಡ್ಡುತ್ತಿರುವವನು ರೈತ. ಅವನಿಗೆ ಅದು ಹೊರಲಾರದ ಹೊರೆ. ರೈತ ಆರೋಗ್ಯ ದೃಢಕಾಯನಾದರೆ ತಾನಾಗಿಯೆ ಈ ಎಲ್ಲ ಭಾರವನ್ನು ಸಂತೋಷದಿಂದ ಹೊರುತ್ತಾನೆ ಎಂಬ ಸೂಚನೆಯಿದೆ. ಪರಶುರಾಮ ಮತ್ತು ವಿಶ್ವಾಮಿತ್ರರನ್ನು ಕ್ರಾಂತಿ ಶಕ್ತಿಯ ಸಂಕೇತವಾಗಿ ತೆಗೆದುಕೊಂಡಿರುವುದು ಔಚಿತ್ಯ ಪೂರ್ಣವಾಗಿದೆ. ರೈತನ ರಕ್ತವನ್ನು ಹೀರುವ ಜಿಗಣೆಗಳು ಒಬ್ಬರೆ ಇಬ್ಬರೆ? ಎಲ್ಲರ ಹೊರೆಯು ಅವನ ಮೇಲೆ. ಶೋಷಣೆಯೆ ಮುಖ್ಯ ವೃತ್ತಿಯಾಗುಳ್ಳ ವೈದ್ಯರು, ರೆವಿನ್ಯೂ ಅಧಿಕಾರಿಗಳು, ಜನರ ಮೌಢ್ಯವನ್ನೇ ತಮ್ಮ ಬಂಡವಾಳ ಮಾಡಿಕೊಂಡಿರುವ ಪುರೋಹಿತರು, ಹರಿಕಥೆದಾಸರು ಮೊದಲಾದೆಲ್ಲರ ಹೆಣಭಾರ ರೈತರ ಎದೆಯಮೇಲೆ. ರೈತ ಶೋಷಿತ. ಅಧಿಕಾರಿಗಳು ಶೋಷಕರು. ಪ್ರತಿಮಾ ವಿಧಾನದಿಂದ ನಿರೂಪಿಸಲ್ಪಟ್ಟಿರುವ ಈ ಕತೆ ಕಥೆಗನುಗುಣವಾದ ಶೈಲಿಯನ್ನು ಹೊಂದಿದೆ.

'ಆರಾಣೆ ಮೂರು ಕಾಸು' ಕತೆಯಲ್ಲಿ ಕತೆಗಾರರು ಎರಡು ವಿಷಯಗಳ ಬಗೆಗೆ ಒತ್ತು ಕೊಟ್ಟಿದ್ದಾರೆ ಎನಿಸುತ್ತದೆ. ಮೊದಲನೆಯದಾಗಿ ಮನುಷ್ಯನಿಗೆ ಸಿರಿತನ ಬಡತನಗಳು ಶಾಶ್ವತವಲ್ಲ ಎನ್ನುವ ತತ್ವ ಇಲ್ಲಿದೆ. ಅವು ಚಕ್ರದ ಅರೆಕಾಲುಗಳಂತೆ ಕಾಲ ಉರುಳಿದಂತೆ ಮೇಲೆ ಕೆಳಗಾಗುತ್ತಿರುತ್ತವೆ. ಯಾರು ಏನೇ ಕಾರಣಗಳನ್ನು ಹೇಳಲಿ, ಲಕ್ಷಾಧಿಕಾರಿಯಾಗಿದ್ದವನು ಕಣ್ಣು ಮುಚ್ಚಿ ಬಿಡುವುದರಲ್ಲಿಯೆ ಭಿಕ್ಷಾಧಿಕಾರಿ -ಯಾಗಬಹುದು. ಹಾಗೆಯೆ ಹತ್ತಿಪ್ಪತ್ತು ವರ್ಷಗಳ ತಿರುಪೆ ಎತ್ತುತ್ತಿದ್ದವನು ಬೆಳಗಾಗುವುದರಲ್ಲಿಯೆ ಲಕ್ಷಾಧಿಪತಿಯಾಗಬಹುದು. ಈ ಕತೆಯ ನವಾಬ್‌ಸಿಂಗ್ ಎರಡನ್ನೂ ಅನುಭವಿಸಿದವನು. ಎರಡನೆಯದಾಗಿ ನಾವು ಮಾಡುವ ದಾನ ಧರ್ಮ ಅಥವಾ ಪರೋಪಕಾರ ಯಾವುದೇ ಕಾರಣದಿಂದಾಗಿರಲಿ ಅದಕ್ಕೆ ತಕ್ಕ ಪ್ರತಿಫಲ ಇದ್ದೇ ಇರುತ್ತದೆ. ಈ ಕತೆಯ ಮಾಧವರಾಯರು ಕೊಟ್ಟ ಹಣ ಹಿಂತಿರುಗಿ ಬರುವ ನಿರೀಕ್ಷೆಯಿಲ್ಲದಿದ್ದರೂ ಔದಾರ್ಯವನ್ನು ಮೆರೆಯಲೊ ಅಥವಾ ಇನ್ನಾವುದೋ ಕಾರಣದಿಂದ ನವಾಬ್‌ಸಿಂಗನಿಗೆ ಪ್ರೀವಿ ಕೌನ್ಸಿಲ್‌ಗೆ ಹೋಗಲು ಬೇಕಾಗುವ ಹಣ ಎಂಟುನೂರ ಐವತ್ತು ರೂಪಾಯಿಗಳನ್ನು ಕೊಡುತ್ತಾರೆ. ನವಾಬಸಿಂಗನು ತನಗೆ ಜಯ ದೊರೆತ ಮೇಲೆ ಮಾಧವರಾಯರ ಹಣವನ್ನು ಹಿಂತಿರುಗಿಸಿದ್ದಲ್ಲದೆ ಲೆಕ್ಕಪತ್ರವಿಲ್ಲದ ಮಾಧವರಾಯರ ತಂದೆಯ ಹತ್ತಿರ ಮಾಡಿದ್ದ ಸಾಲದ ಕಡೆಗೆ

ಹನ್ನೆರಡು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಪತ್ರವನ್ನು ಬರೆದುಕೊಡುತ್ತಾನೆ. ಅಸಲನ್ನು ಕೊಡುವವರೆಗೆ ಬಡ್ಡಿಯನ್ನು ಕೊಡುತ್ತಿರುವುದಾಗಿ ಹೇಳಿ ಅದರಂತೆ ನಡೆದುಕೊಳ್ಳುತ್ತಿರುತ್ತಾನೆ. ಇನ್ನೊಂದು ಗಮನಿಸಬೇಕಾದ ಅಂಶ ಈ ಕತೆಯಲ್ಲಿದೆ. ಈ ಕತೆಯ ಶೀರ್ಷಿಕೆಗೆ ಕಾರಣವಾದ ಘಟನೆ ಅದು. ಗುಂತಕಲ್ಲಿನಲ್ಲಿ ಮಾಧವರಾಯರು ಕೊಡಿಸಿದ್ದ ಊಟದ ಕಡೆಯ ಆರು ಆಣೆ ಮತ್ತು ತನ್ನ ಕುಟುಂಬದವರಿಗಾಗಿ ಕಡಲೆಪುರಿ ಕೊಳ್ಳಲು ಕೊಟ್ಟಿದ್ದ ಮೂರುಕಾಸು ಇದನ್ನೂ ನವಾಬ್‌ಸಿಂಗ್ ಹಿಂದಿರುಗಿಸುತ್ತಾನೆ. ಸಾರ್ವಜನಿಕ ಜೀವನದಲ್ಲಿ ಅಂಥ ನಡತೆ ಬೇಕೆಂದು ಕತೆಗಾರರು ಸೂಚಿಸುತ್ತಿರುವಂತಿದೆ. ಇಂಥ ಶಿಸ್ತನ್ನು ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಂಡ ವ್ಯಕ್ತಿಯೊಬ್ಬರ ಕತೆ 'ಹೋಳಿಗೆ ಪ್ರತಿಜ್ಞೆ' ತಮ್ಮ ಏಳೆಂಟನೆಯ ವರ್ಷದಲ್ಲಿ ಮಾಡಿದ ಹೋಳಿಗೆಯನ್ನು ತಿನ್ನುವುದಿಲ್ಲವೆಂಬ ಪ್ರತಿಜ್ಞೆಯನ್ನು ಎಪ್ಪತ್ತೈದನೆಯ ವಯಸ್ಸಿನವರೆಗೂ ಈ ಕಥಾನಾಯಕ ಪಾಲಿಸಿಕೊಂಡು ಬಂದಿದ್ದಾನೆ. ಹೋಳಿಗೆ ತಿನ್ನುವುದು ಅಥವಾ ಬಿಡುವುದರಲ್ಲಿ ಯಾವ ಮಹತ್ತೂ ಇಲ್ಲ ನಿಜ! ಆದರೆ ಆ ಪ್ರತಿಜ್ಞೆಯನ್ನು ಪರಿಪಾಲಿಸಿಕೊಂಡು ಬಂದುದರಿಂದ ನನ್ನ ಧರ್ಮಬುದ್ಧಿಗೆ ಬಲಬಂದಿದೆಯೆಂದು ಕಥಾನಾಯಕ ಹೇಳುತ್ತಾನೆ. ಮತ್ತು ಆತನ ನಿಲುವು ಇದು : "ದೊಡ್ಡ ಮನಸ್ಸಿನಿಂದ ಮಾಡಿದ ಸಣ್ಣ ಕಾರ್ಯಗಳು ಸಣ್ಣ ಮನಸ್ಸಿನಿಂದ ಮಾಡಿದ ದೊಡ್ಡಕಾರ್ಯಗಳಿಗಿಂತಲೂ ಎಷ್ಟೋ ಶ್ರೇಷ್ಠವಾದುವುಗಳೆಂದು ನನ್ನ ನಿಶ್ಚಲ ಅಭಿಪ್ರಾಯ. ಮಹಿಮೆ ಕಾರ್ಯಗಳಲ್ಲಿಲ್ಲ ; ಕಾರ್ಯಮಾಡಿಸುವ ಚಿತ್ತ ವೃತ್ತಿಯಲ್ಲಿದೆ!" ಈ ಕತೆ, ಕತೆಗಿಂತಲೂ ಹೆಚ್ಚಾಗಿ ಹರಟೆಯನ್ನು ಹೋಲುತ್ತದೆ. ಪಾಯಿಸ ಸುರಿಯುವುದರ ವರ್ಣನೆ, 'ಎಲ್ಲರೂ ಊಟ ಮಾಡಬಹುದು' ಎಂಬ ಸಂಪ್ರದಾಯದ ಅಪ್ಪಣೆಯ ಬಗೆಗಿನ ವ್ಯಾಖ್ಯಾನ, ಕಥಾತರಂಗದಲ್ಲಿ ಬರುವ ಮಕ್ಕಳ ಜೇಬಿನ ಮಹತ್ವ ಇವುಗಳು ಈ ಕಥೆಗೆ ಹರಟೆಯ ಸ್ವರೂಪವನ್ನು ಕೊಟ್ಟಿವೆ. ಈ ಕತೆಯಲ್ಲಿ ಗಮನಿಸಬೇಕಾದ ಆದರೆ ಗಮನಕ್ಕೆ ಬಾರದೆ ಹೋಗುವ ಒಂದು ಅಂಶ ಎಂದರೆ ಆ ಕಾಲಕ್ಕಾಗಲೆ ಜಾತಿಯ ವಿಷಬೀಜ ನಿರ್ಮಲವಾದ ಮಕ್ಕಳ ಮನಸ್ಸನ್ನು ಆವರಿಸಿ ಹೇಗೆ ಬಗ್ಗಡಗೊಳಿಸಿತ್ತು ಎಂಬುದು.

ಮೇಲು ನೋಟಕ್ಕೆ ಸಾಧಾರಣ ಕತೆಯಂತೆ ಕಾಣುತ್ತದೆ 'ಶ್ರೀ ಮನ್ನೂಕ್ರವಾಗಿತ್ತು!' ಮೇವಿನ ಆಸೆಯಿಂದಾಗಿ ಹೋಗಿ ನಾಲೂರ ನಾಗಣ್ಣಗೌಡರ ಮನೆಯಲ್ಲಿ ಬಂದಿಯಾಗಿದ್ದ ಸೊಟ್ಟಕೋಡಿನ ದಾಸ ಹಣೆಯ ಎಮ್ಮೆಯನ್ನು ಕೆರೆಯೂರ ಕಣಿವೆಯ ಹಳೆಪೈಕದ ರಂಗ ಹೋಗಿ ಬಿಡಿಸಿಕಂಡು ಬರುತ್ತಾನೆ. ಇತ್ತ ಸಾಯವುದರಲ್ಲಿದ್ದ ನಾಗಣ್ಣಗೌಡರ ಕಿರಿಮಗ ವಾಸುವಿಗೂ ಜ್ವರವಿಳಿಯುತ್ತದೆ. ಹೊರನೋಟಕ್ಕೆ ವಾಸುವಿಗೆ ಜ್ವರವಿಳಿದುದು ಕಿರಣಕೇರಿಯ ಶಂಕರಶಾಸ್ತ್ರಿಗಳ ವಿಭೂತಿಯ ಪ್ರಭಾವದಿಂದ ಆದರೆ ಸತ್ಯವೇ ಬೇರೆ. ವಾಸುವಿಗೆ ಜ್ವರವಿಳಿದದ್ದು 'ದೇವರೇ ಇವರನ್ನುಳಿಸು' ಎಂದು

ಹೃದಯಪೂರ್ವಕವಾಗಿ ಹಾರೈಸಿದ ಕಾಲ್ನಡೆಯೆ ತನ್ನ ಜೀವವಾಗಿದ್ದ ಅದಕ್ಕಾಗಿ ಜಡಿಮಳೆಯಲ್ಲಿ ಅದೂ ಕಾಡಿನಲ್ಲಿ ಊಟವನ್ನೂ ಮಾಡದೆ ಅಲೆದು ಬಂದಿದ್ದ ಹಳೆಪೈಕದ ರಂಗನ ಹಾರೈಕೆಯಿಂದ- ಅದಕ್ಕೂ ಮಿಗಿಲಾಗಿ ಮಾತನಾಡಲಾರದ ಸೊಟ್ಟಕೋಡಿನ ದಾಸ ಹಣೆಯ ಎಮ್ಮೆಯ ಮಾತೃಹೃದಯದ ಆನಂದದ ಆಶೀರ್ವಾದದಿಂದ![೧] ಈ ಕತೆ ಕುವೆಂಪು ಅವರ ಅತ್ಯುತ್ತಮ ಕತೆಗಳಲ್ಲಿ ಒಂದಾಗಿದ್ದು ದರ್ಶನಾನ್ವಿತವಾಗಿದೆ. ದಾರ್ಶನಿಕ ಕತೆಗಳು ಎಂಬ ಒಂದು ವರ್ಗವಿದ್ದರೆ ಅಥವಾ ಸೃಷ್ಟಿಸುವುದಾದರೆ ಖಂಡಿತ ಈ ಕತೆಯನ್ನು ಆ ಗುಂಪಿಗೆ ಸೇರಿಸಬಹುದು. ತಾಯಿಯಿಲ್ಲದ ತಬ್ಬಲಿ ವಾಸುವಿಗೆ ಎಳೆಗರುವಿನ ನೋವು ಗೊತ್ತಾಗುವಂತೆ ಉಳಿದವರಿಗೆ ಆಗುವುದಿಲ್ಲ. ಎಲ್ಲ ಕತೆಗಳ ಮಕ್ಕಳ ನಿರ್ಮಲ ಮನಸ್ಸಿನಂತೆಯೆ ವಾಸುವಿನ ಮನಸ್ಸು. ಕರುವಿನ ಗೋಳನ್ನು ಕೇಳಿ "ಪಾಪ ಎಳಗರು! ಎಮ್ಮೆ ಹೊಡೆದು ಕೊಂಡು ಹೋಗೋ ನೀನು, ರಂಗಾ" ಎನ್ನುತ್ತಾನೆ ವಾಸು. ಮಗನ ಸಾತ್ವಿಕ ಇಚ್ಛೆಗೆ ಅಡ್ಡಿಬಾರದಷ್ಟು ಸಹೃದಯರು ಪಟೇಲರೂ ಸಾಹುಕಾರರೂ ಆದ ನಾಗಣ್ಣ ಗೌಡರು. ಮತ್ತೆ ಉಳಿದಂತೆ ಜನರ ಮೌಢ್ಯವನ್ನೇ ಬಂಡವಾಳಮಾಡಿಕೊಂಡು ಶೋಷಿಸುವ ಪುರೋಹಿತ ವರ್ಗದ ಚಿತ್ರಣ ಸಮರ್ಥವಾಗಿಯೆ ಇಲ್ಲೂ ಬಂದಿದೆ. ವರ್ಗ ಪ್ರಸ್ತಾಪ ಬಂದಿದ್ದರೂ ಅದು ಪ್ರಮುಖವಾಗಿ ಕಣ್ಣಿಗೆ ಕಾಣುವುದಿಲ್ಲ. ನಾಲೂರಿನಲ್ಲಿ ತನ್ನ ಎಮ್ಮೆ ಹಾಲುಕೊಡದೆ ಒದೆಯುತ್ತಿದ್ದುದರಿಂದ ಕಾಲುಕಟ್ಟಿ ಹಾಲುಕರೆದರೆಂದು ರಂಗನಿಗೆ ಗೊತ್ತಾಗುತ್ತೆ. 'ನಾಗಣ್ಣಗೌಡರು ಸಾಹುಕಾರರು, ಪಟೇಲರು, ಆದ್ದರಿಂದ ಬಡರಂಗನು ಒಂದು ಪಡಿ ಮಾತನ್ನೂ ಆಡಲಿಲ್ಲ' ಎಂಬ ಒಂದು ವಾಕ್ಯದಲ್ಲಿ ಅದು ತೇಲಿಹೋಗುತ್ತದೆ.

"ಹೊಸಗನ್ನಡ ನವೋದಯ ಕಾಲದಲ್ಲಿ ಎಲ್ಲ ಲೇಖಕರೂ ಭಾವೋದ್ವೇಗದ ಕಾವಿನಲ್ಲಿಯೇ ಸಾಹಿತ್ಯವನ್ನು ಸೃಷ್ಟಿಸುತ್ತಿದ್ದಾಗ ಶ್ರೀನಿವಾಸರೊಬ್ಬರು ಮಾತ್ರ ಸ್ವಸ್ಥಚಿತ್ತದ ಲೇಖಕರಾಗಿ ಉಳಿದಿರುವುದು ಸೋಜಿಗದ ಮಾತಾಗಿದೆ. .....ಕುವೆಂಪುರವರ ಮೊದಮೊದಲಿನ ಕತೆಗಳು ರವೀಂದ್ರರ ಕಥೆಗಳನ್ನು ಅನುಸರಿಸಿ ಬರೆದವುಗಳಾಗಿವೆ. ಆದ್ದರಿಂದ ವಸ್ತು ಶೈಲಿಯಲ್ಲಿ ಕೃತ್ರಿಮತೆಯಿದೆ..." ಎಂಬ ಕುರ್ತಕೋಟಿಯವರ ಅಭಿಪ್ರಾಯ ಕುವೆಂಪು ಅವರ ಕಥೆಗಳನ್ನು ಓದದೆ ಮಾಡಿದ ಅಭಿಪ್ರಾಯ

---

೧. ಇಲ್ಲಿ ಕೆಲವು ವಿಮರ್ಶಕರು ಎಮ್ಮೆಗರು ಸತ್ತು ಹೋಯಿತು ಎಂದು ಹೇಳುತ್ತಾರೆ. ಆದರೆ ಅದು ತಪ್ಪು. "...ಕೆರೆಯೂರಿನಲ್ಲಿ ತನ್ನ ಮುದ್ದು ಕರುವನ್ನು ಮೂಸಿ ನೆಕ್ಕುತ್ತಿದ್ದ ಮೂಗು ಪ್ರಾಣಿಯ ಆನಂದದ ಆಶೀರ್ವಾದ ವಿಭೂತಿ ಅದನ್ನಾಲಿಸಿ ಶ್ರೀನ್ಮೂಕವಾಗಿತ್ತು!" ಎಂಬ ಭರತ ವಾಕ್ಯವನ್ನು ಅವರು ಅರ್ಥಮಾಡಿಕೊಂಡಿಲ್ಲ ಎಂದೇ ಹೇಳಬೇಕಾಗುತ್ತದೆ.

ಎನ್ನಬೇಕಾಗುತ್ತದೆ. ನವೋದಯದ ಕಾಲದ ಲೇಖಕರಿಗೆ ಅತ್ಯಂತ ಪ್ರಿಯವಾದ ರಾಷ್ಟ್ರಪ್ರೇಮವನ್ನು ವಸ್ತುವಾಗುಳ್ಳ ಕತೆಯೂ ಇಲ್ಲಿಲ್ಲ. ಸನ್ಯಾಸ, ಧರ್ಮಗಳನ್ನು ಕುರಿತ ಒಂದೆರಡು ಕಥೆಗಳಿವೆಯಾದರೂ ಅವುಗಳಿಂದ ರವೀಂದ್ರರ ಪ್ರಭಾವ ಅವರ ಕತೆಗಳಲ್ಲಿ ಕಂಡುಬರುತ್ತದೆಂದು ಹೇಳಲಾಗದು. ಆದರೆ ಹಿಂದೂ ಧರ್ಮದ, ರಾಮಕೃಷ್ಣ ಪರಮಹಂಸರ, ವಿವೇಕಾನಂದ ಮತ್ತು ಬಂಗಾಳಿ ಸಾಹಿತ್ಯದ ಪ್ರಭಾವವನ್ನು ಕೆಲವು ಕಥೆಗಳಲ್ಲಿ ಗುರುತಿಸಬಹುದು. ಅವರ ಎಲ್ಲ ಕಥೆಗಳೂ ಶ್ರೇಷ್ಠ ಎಂದು ಯಾರೂ ಹೇಳುವುದಿಲ್ಲ. ಕೆಲವು ಕತೆಗಳನ್ನು ಹರಟೆಯ ಗುಂಪಿಗೆ ಸೇರಿಸಬಹುದೇನೋ. ಆದರೆ ಅವರ ಬಹುತೇಕ ಕಥೆಗಳು ಕನ್ನಡ ಸಣ್ಣ ಕತೆಗಳ ಸಾಲಿನಲ್ಲಿ ಸದಾ ಕಾಲಕ್ಕೂ ನಿಲ್ಲಬಲ್ಲವು. ಆ ಎಲ್ಲ ಕತೆಗಳಲ್ಲಿ ಪ್ರಕೃತಿಯ ಚಿತ್ರಣ ಇದ್ದೇ ಇರುತ್ತದೆ. ಪ್ರಕೃತಿಯ ಚಿತ್ರಣ ಕತೆಗೆ ಭಾರವಾಗುವುದರ ಬದಲು ಕತೆಯ ಒಂದು ಅವಿಭಾಜ್ಯ ಅಂಗವಾಗಿಯೇ ಬರುತ್ತದೆ. ತಮ್ಮ ಕತೆಗಳಲ್ಲಿ ಹಳ್ಳಿಗರ ಮೌಢ್ಯವನ್ನಾಗಲಿ, ಜಾತೀಯತೆಯ ವಿಷಬೀಜವನ್ನಾಗಲಿ, ಪುರೋಹಿತ ಶಾಹಿಯ ಖಂಡನೆಯನ್ನಾಗಲಿ ಸಶಕ್ತವಾಗಿ ಚಿತ್ರಿಸಿದ್ದಾರೆ. ಒಟ್ಟಿನಲ್ಲಿ ಅವರು ತಮ್ಮ ಕತೆಗಳಲ್ಲಿ ತೆಗೆದುಕೊಂಡ ತಾತ್ವಿಕ ನಿಲುವುಗಳು, ಸಾಮಾಜಿಕ ಧೋರಣೆಗಳು ಪ್ರಗತಿಪರವಾದುವು ಎನ್ನುವುದನ್ನು ಗಮನಿಸಬೇಕು. ಆರ್ಥಿಕ ಅಸಮಾನತೆಯಿಂದಾದ ವರ್ಗ ಪ್ರಜ್ಞೆಯಿದ್ದರೂ ಅದಕ್ಕೊಂದು ಖಚಿತ ರೂಪು ಅವರ ಕತೆಗಳಲ್ಲಿ ದೊರೆತಿಲ್ಲ. ಶ್ರೇಷ್ಠ ವಿಮರ್ಶಕರೆಂದು ಖ್ಯಾತ ನಾಮರಾಗಿರುವ ಅನೇಕ ವಿಮರ್ಶಕ ವರೇಣ್ಯರು ಖಾಸಗಿ ಮಾತುಕತೆಗಳಲ್ಲಿ ಕುವೆಂಪುರವರ ಕತೆಗಾರಿಕೆಯ ಶ್ರೇಷ್ಠತೆಯನ್ನು, ನಯಗಾರಿಕೆಯನ್ನು ಮೆಚ್ಚಿಕೊಳ್ಳುತ್ತಾರೆ. ಆದರೆ ಬರವಣಿಗೆಯಲ್ಲಿ ಬರೆಯಲು ಸಿದ್ಧರಿಲ್ಲ! ನವೋದಯ ಕಾಲದಲ್ಲಿ ನಾಲ್ಕಾರು ಕತೆಗಳನ್ನು ಬರೆದವರಿಗೆ ಪುಟಗಟ್ಟಲೆ ಸ್ಥಾನ ಸಿಕ್ಕಿರುವಾಗ ಕುವೆಂಪು ಅವರಿಗೇಕೆ ಅಷ್ಟು ಸ್ಥಾನ ಸಿಕ್ಕಿಲ್ಲ ಎಂಬುದನ್ನು ವಿಚಾರವಂತರು ಯೋಚಿಸಬೇಕು. ಒಟ್ಟಿನಲ್ಲಿ ಗಹನವಾದ ವಿಷಯ, ಲಲಿತವಾದ ಶೈಲಿ, ಕವಿ ಸಹಜವಾದ ಭಾವಗೀತಾತ್ಮಕವಾದ ರಸ ನಿರೂಪಣೆ, ಜನ ಜೀವನದ ವಾಸ್ತವಿಕ ಚಿತ್ರಣ, ಇವುಗಳಿಗಿಂತ ಮಿಗಿಲಾಗಿ ಕವಿಯ ವಿಶಿಷ್ಟ ವ್ಯಕ್ತಿತ್ವವನ್ನೆತ್ತಿ ತೋರಿಸುವ ಗುಣ -ಇವು ಕುವೆಂಪು ಅವರ ಕತೆಗಳಲ್ಲಿ ಕಾಣಬರುವ ಸಾಮಾನ್ಯ ಲಕ್ಷಣಗಳೆಂಬ ಶ್ರೀ ದೇಜಗೌ ಅವರ ಅಭಿಪ್ರಾಯದೊಂದಿಗೆ ಕುವೆಂಪು ಅವರ ಸಣ್ಣ ಕತೆಗಳ ವಿವೇಚನೆಯನ್ನು ಮುಗಿಸಬಹುದು.

ಮಲೆನಾಡಿನ ಚಿತ್ರಗಳ ವಿವೇಚನೆಯನ್ನೂ ಇಲ್ಲಿಯೇ ತೆಗೆದುಕೊಳ್ಳಬಹುದೇನೊ. ಕುವೆಂಪುರವರು ಪ್ರಧಾನವಾಗಿ ಕಥೆಗಾರರಾದುದರಿಂದ ಮತ್ತು ಮಲೆನಾಡಿನ ಚಿತ್ರಗಳಲ್ಲಿ ಕೆಲವು ಚಿತ್ರಗಳನ್ನು ಕತೆಗಳ ಗುಂಪಿಗೆ ಸೇರಿಸಬಹುದಾದ್ದರಿಂದ ಮಲೆನಾಡಿನ ಚಿತ್ರಗಳ

ವಿವೇಚನೆ ಇಲ್ಲಿ ಅಪ್ರಸ್ತುತವಾಗಲಾರದು. ಅಲ್ಲದೆ ಅವರ ಇತರ ಸಾಹಿತ್ಯ ಪ್ರಕಾರಗಳಲ್ಲಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಚಿತ್ರಿತವಾಗಿರುವ ಕವಿಶೈಲ, ನವಿಲುಕಲ್ಲು, ಭೂತದ ಸಿಲೇಟು, ಸಿಬ್ಬಲು ಗುಡ್ಡೆ, ರಾಮ ತೀರ್ಥ ಮೊದಲಾದುವುಗಳ ಗಾಢವಾದ ಪರಿಚಯ 'ಮಲೆನಾಡಿನ ಚಿತ್ರಗಳಿಂದ' ನಮಗಾಗುತ್ತದೆ ಮತ್ತು ಕುವೆಂಪುವನ್ನು ರೂಪಿಸಿರುವ ಪ್ರಕೃತಿ ಮಾತೆಯ ದರ್ಶನವೂ ನಮಗಾಗುತ್ತದೆ.

'ಮಲೆನಾಡಿನ ಚಿತ್ರ'ಗಳಲ್ಲಿ ಹನ್ನೆರಡು 'ಚಿತ್ರ'ಗಳಿವೆ. ಈ ಚಿತ್ರಗಳಿಗೆ ಮೊದಲು ಐವತ್ತು ವರ್ಷದ ಹಿಂದೆ ರಚಿಸಿದ 'ಮಲೆನಾಡಿಗೆ ಬಾ' ಎಂಬ ಕವನವಿದೆ. ಈ ಕವನದಲ್ಲಿ ಮಲೆನಾಡು ಕವಿಗೆ ಏಕೆ ಪ್ರಿಯ ಎನ್ನುವುದು ತಿಳಿದು ಬರುತ್ತದೆ.

ಹಾಸ್ಯದ ಚಟಾಕಿ, ಕಾಡಿನಲ್ಲಿ ಕಳೆದ ಒಂದಿರುಳು, ಬಂದನಾ ಹುಲಿರಾಯನು, ಪುಟ್ಟಾಚಾರಿಯ ಕಾಡುಕೋಳಿ, ಜೇನುಬೇಟೆ ಮೊದಲಾದ ಚಿತ್ರಗಳಲ್ಲಿ ಮಲೆನಾಡಿಗೆ ವಿಶಿಷ್ಟವಾದ, ಸಹಜವಾದ, ಬೇಟೆಯ ಚಿತ್ರಗಳಿವೆ. ಸಾರಿಕೆ ಬೇಟೆ, ಮರಸುಬೇಟೆ ಮೊದಲಾದ ಬೇಟೆಯ ವೈವಿಧ್ಯಗಳು, ಬೇಟೆಯಲ್ಲಿ ಉಪಯೋಗಿಸುವ ಕೇಪಿನ ಕೋವಿ; ತೋಟಾ ಕೋವಿ, ಮೊದಲಾದ ಬಗೆ ಬಗೆಯ ಕೋವಿಗಳ ವರ್ಣನೆಗಳು ಮತ್ತು ಅವುಗಳ ಸಾಮರ್ಥ್ಯ, ಬೇಟೆನಾಯಿಗಳ ಗುಣ ಸ್ವಭಾವಗಳು, ಹುಲಿ, ಕಾಡುಹಂದಿ ಮೊದಲಾದ ಕಾಡು ಪ್ರಾಣಿಗಳ ಸ್ವಭಾವ ವೈಚಿತ್ರ್ಯಗಳನ್ನು ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಈ ಹಲವಾರು ಬೇಟೆಯ ಚಿತ್ರಗಳಲ್ಲಿ ಕುವೆಂಪು ಅವರ ಯವ್ವನದ ಕೆಲವು ಅನುಭವಗಳನ್ನು ಕಾಣಬಹುದು. ಈ ಚಿತ್ರಗಳು ಆತ್ಮವೃತ್ತಾತ್ಮಕವಾಗಿಯೂ ಇರುವುದರಿಂದ ಅವರ ಇತರ ಸಾಹಿತ್ಯಿಕ ಅಧ್ಯಯನಕ್ಕೂ ನೆರವಾಗುತ್ತದೆ. ಈ ಎಲ್ಲ ಬೇಟೆಯ ಪ್ರಸಂಗಗಳಲ್ಲಿ "ಬೇಟೆಗಾಗಿ ಬನಕ್ಕೆ ಹೋದವರು ಕಬ್ಬಿಗರಾಗಿ ಮನೆಗೆ ಬಂದೆವು" ಎಂದು ಹೇಳುತ್ತಾರೆ. 'ಹಾಸ್ಯದ ಚಟಾಕಿ'ಯಲ್ಲಿ ಬೆಳಗಿನ ಎಳಬಿಸಿಲಿನಲ್ಲಿ ಸಂತೋಷದಿಂದ ಆಡುತ್ತಿದ್ದ ರಾಜ ಸರ್ಪವೊಂದರ ಮೇಲೆ ಬೇಟೆನಾಯಿ 'ರೋಜಿ' ಎರಗಿದಾಗ ಅದನ್ನು ಸಾಹಸದಿಂದ ಮತ್ತೆ ಹಿಂದಕ್ಕೆ ಕರೆತಂದ ಚಿತ್ರಣವಿದೆ. 'ಕಾಡಿನಲ್ಲಿ ಕಳೆದ ಒಂದಿರುಳು' ಮರಸು ಬೇಟೆಯ ಒಂದು ಚಿತ್ರ. 'ಬಂದನಾ ಹುಲಿರಾಯನು' ಮತ್ತು 'ಪುಟ್ಟಾಚಾರಿಯ ಕಾಡುಕೋಳಿ' ಚಿತ್ರಗಳಲ್ಲಿ ಹುಲಿಯ ಗುಣ ಸ್ವಭಾವಗಳ ಚಿತ್ರಗಳಿವೆ. 'ಬಂದನಾ ಹುಲಿರಾಯನು' ಚಿತ್ರದಲ್ಲಿ ರಂಗಯ್ಯನೆಂಬ ಬೇಟೆಗಾರನು ಮರಸು ಬೇಟೆಗೆ ಕುಳಿತು ಕಾಲ ಕಳೆಯಲು ಎಲೆ ಅಡಿಕೆ ಹಾಕಲು ತಲೆ ಎತ್ತಿದರೆ ಎದುರಿನಲ್ಲಿಯೆ ಹೆಬ್ಬುಲಿಯೊಂದು ಕೂತಿರುತ್ತದೆ. ಈ ಪ್ರಾಣಸಂಕಟ ಸನ್ನಿವೇಶದಿಂದ ಅವನು ಪಾರಾದುದನ್ನು ಇಲ್ಲಿ ವಿವರಿಸಿದ್ದಾರೆ. ಹೀಗೆ 'ಪುಟ್ಟಾಚಾರಿಯ ಕಾಡುಕೋಳಿ'ಯಲ್ಲಿ ಪುಟ್ಟಾಚಾರಿ ಕಾಡುಕೋಳಿಯ ಆಸೆಗೆ ಹೋಗಿ ಈದ ಹುಲಿಯನ್ನು

ಎದುರುಗೊಂಡು ಯಮನ ಬಾಯಿಂದ ಜಗುಳಿ ಬಂದಂತೆ ಮತ್ತೆ ಹಿಂತಿರುಗಿದ ಪ್ರಸಂಗದ ಚಿತ್ರಣವಿದೆ. ಈದ ಹುಲಿಯ ಗುಣ ಸ್ವಭಾವಗಳು ಇಲ್ಲಿ ನಿರೂಪಿಸಲ್ಪಟ್ಟಿವೆ. ಬಗೆ ಬಗೆಯ ಜೇನನ್ನೂ ಅವುಗಳನ್ನು ಕೀಳುವ ಬಗೆಯನ್ನೂ ಜೇನಿನಂತೆ ರುಚಿಕಟ್ಟಾಗಿ ನಿರೂಪಿಸಲಾಗಿರುವ ಪ್ರಬಂಧ 'ಜೇನು ಬೇಟೆ'. ಈ ಪ್ರಬಂಧದಲ್ಲಿ ಮತ್ತು 'ತೋಟದಾಚೆಯ ಭೂತ' ಪ್ರಬಂಧದಲ್ಲಿ ಚಿತ್ರಿತನಾಗಿರುವ ಪುಟ್ಟಣ್ಣ ಕಾನೂರು ಹೆಗ್ಗಡಿತಿಯಲ್ಲಿನ ಪುಟ್ಟಣ್ಣನೇ ಇರಬಹುದು ಎನ್ನಿಸುತ್ತದೆ.

ಭೂತದ ಬಗೆಗಿನ ಕಲ್ಪನೆಗಳು, ನಂಬಿಕೆಗಳು ಅವು ಮೂಡುವ ಹಬ್ಬುವ ವಿಧಾನಗಳ ಚಿತ್ರಣವೇ 'ತೋಟದಾಚೆಯ ಭೂತ' ಪ್ರಬಂಧದ ವಸ್ತು.

"ಅಭ್ಯಂಜನದ ದಿನ ಯಾರು ಸಾಯುತ್ತಾರೆ! ಯಾರು ಉಳಿಯುತ್ತಾರೆ! ಯಾರು ಮೂರ್ಛೆ ಬೀಳುತ್ತಾರೆ! ಹೇಳುವುದೇ ಕಷ್ಟ. ಆ ದಿನ ಮನೆಯಲ್ಲಿ ಗಲಭೆಯೋ ಗಲಭೆ!" "ಅಭ್ಯಂಗ ಎಂದರೆ ನಮಗೆಲ್ಲ ಜನನ, ಮರಣ, ವಿವಾಹ ಪೋಲೀಸರ ಕಾಟ, ಜಮಾಬಂದಿ ಎಲ್ಲವೂ ಒಟ್ಟಿಗೆ ಬಂದಹಾಗೆ ಅನುಭವವಾಗುತ್ತಿತ್ತು" ಎಂದು ಕುವೆಂಪು ಹೇಳುತ್ತಾರೆ. ಮಲೆನಾಡಿನ ಅಭ್ಯಂಜನದ ಅಪೂರ್ವ ಚಿತ್ರ ಅಜ್ಜಯ್ಯನ ಆಭ್ಯಂಜನದಲ್ಲಿದೆ. ಮಕ್ಕಳ ಅಭ್ಯಂಜನದ ವಿಧ ಒಂದು ರೀತಿಯಾದರೆ ಅಜ್ಜಯ್ಯನದೊಂದು ಅಪೂರ್ವ ವಿಧ. ಕಳೆದ ತಲೆಮಾರಿನ ಒಂದು ಅಪೂರ್ವ ಚಿತ್ರ ಇಲ್ಲಿದೆ. ಇದನ್ನು ಓದಿಯೇ ಅನುಭವಿಸಬೇಕು. ಅಭ್ಯಂಜನದಂತೆಯೇ ಈಗ ಬಹುತೇಕ ಎಲ್ಲೂ ಕಂಡುಬಾರದ ಐಗಳ ಶಾಲೆಯ ಚಿತ್ರ ಸೊಗಸಾಗಿದೆ. ಒಬ್ಬ ಐಗಳು ಹೋಗಿ ಮತ್ತೊಬ್ಬ ಐಗಳು ಬರುವ ನಡುವಣ ಅವಧಿಯಲ್ಲಿ ಬಾಲಕರು ಮಾಡುತ್ತಿದ್ದ ಹಾವಳಿ ಮತ್ತೊಮ್ಮೆ ನಮ್ಮ ಬಾಲ್ಯವನ್ನು ನೆನಪಿಗೆ ತರುತ್ತದೆ. ನಾಗರಿಕತೆ ಹರಡುತ್ತಿದ್ದಾಗಿನ ಚಿತ್ರಣ ಇದಾಗಿದ್ದು ಇದಕ್ಕೆ ಸಾಮಾಜಿಕವಾದ ಬೆಲೆಯೂ ಇದೆ. 'ಕಥೆಗಾರ ಮಂಜಣ್ಣ'ನ ಚಿತ್ರವನ್ನು ಕೆಲವೇ ಗೆರೆಗಳಲ್ಲಿ ಚಿತ್ರಕಾರ ಚಿತ್ರವೊಂದನ್ನು ಬಿಡಿಸುವಂತೆ ಚಿತ್ರಿಸಿದ್ದಾರೆ. ಅರವತ್ತು ತುಂಬಿದ ಆ ಮಂಜಣ್ಣ ಮನೆಯ ಆಳು. ಮಕ್ಕಳ ಕಥೆಗಾರ. ಅವನ ಕಥೆಗಳು ದೊಡ್ಡವರಿಗೆ ಕಥೆಗಳೇ ಅಲ್ಲವಾದರೂ ಮಕ್ಕಳಿಗೆ ಬಲು ಪ್ರಿಯ. ಬಾಲ್ಯದ ಸವಿ ನೆನಪಿನ ಒಂದು ರಸ ಚಿತ್ರಣ ಇಲ್ಲಿದೆ. ಬಾಲ್ಯದ ಸವಿನೆನಪಿನ ಸೊಗಸಾದ ನಿರೂಪಣೆ 'ರಾಮರಾವಣರ ಯುದ್ಧ'ದಲ್ಲಿ ಬರುತ್ತದೆ. ಬಾಲಕರ ಈ ರಾಮರಾವಣರ ಯುದ್ಧದಲ್ಲಿ ಭೀಮ ಕಟ್ಟಿರುವೆ ಕೈಲಿ ಕಡಿಸಿ ಕೊಳ್ಳುತ್ತಾನೆ ಹನುಮಂತನು ಕೈಲಾಸದ ಕೆಳಗೆ ಕೈ ಚರ್ಮ ಸುಲಿಸಿಕೊಳ್ಳುತ್ತಾನೆ. ಎಲ್ಲಕ್ಕಿಂತ ಹೆಚ್ಚಾಗಿ ರಾಮರಾವಣರ ಯುದ್ಧದಲ್ಲಿ ರಾವಣನೇ ಗೆಲ್ಲುತ್ತಾನೆ. ಇದನ್ನೆಲ್ಲಾ ಓದಿದಾಗ "ಆ ಕಾಲವೊಂದಿತ್ತು! ದಿವ್ಯತಾನಾಗಿತ್ತು!

ಭಾಲ್ಯವಾಗಿತ್ತು!" ಎಂಬ ನುಡಿ ಎಷ್ಟು ಸತ್ಯ ಎನ್ನಿಸುತ್ತದೆ. ನಿರೂಪಣೆಗೆ ತಕ್ಕಂತೆ ಭಾಷೆ ಸರಳವಾಗಿದೆ.

ಈ ಚಿತ್ರಗಳಲ್ಲಿ ಮಲೆನಾಡಿನ ಶ್ರೀ ಸಾಮಾನ್ಯರೂ ಬರುತ್ತಾರೆ. 'ಬಂದನಾ ಹುಲಿರಾಯನು' ಚಿತ್ರದ ರಂಗಯ್ಯ, 'ಪುಟ್ಟಾಚಾರಿಯ ಕಾಡುಕೋಳಿ'ಯ ಪುಟ್ಟಾಚಾರಿ, 'ಅಣ್ಣಪ್ಪನ ರೇಷ್ಮೆಕ್ರಾಯಿಲೆ'ಯ ಅಣ್ಣಪ್ಪ, 'ಕಥೆಗಾರ ಮಂಜಣ್ಣ' ಚಿತ್ರದ ಮಂಜಣ್ಣ 'ಮಲೆನಾಡಿನ ಗೋಪಾಲಕರು' ಚಿತ್ರದ ಹಿರಗ ಇವರೆಲ್ಲರೂ ಶ್ರೀ ಸಾಮಾನ್ಯರೇ. 'ಅಣ್ಣಪ್ಪನ ರೇಷ್ಮೆಕ್ರಾಯಿಲೆ' 'ಧನ್ವಂತರಿಯ ಚಿಕಿತ್ಸೆ'ಯನ್ನು ನೆನಪಿಗೆ ತರುತ್ತದೆ.ಕಡು ಬಡತನದಲ್ಲಿದ್ದರೂ ಅಣ್ಣಪ್ಪನ ನಿಷ್ಠೆ ಗಮನಾರ್ಹವಾದುದು. ದಲಿತ ವರ್ಗದ ಪ್ರತಿನಿಧಿಯಂತೆ ಕಾಣುತ್ತಾನೆ ಅಣ್ಣಪ್ಪ. 'ಮಲೆನಾಡಿನ ಗೋಪಾಲಕರು' ಚಿತ್ರದಲ್ಲಿ ಅವರ ಜೀವನದ ಶುಕ್ಲಪಕ್ಷದ ಚಿತ್ರಣವಿರುವಂತೆಯೆ ಕೃಷ್ಣಪಕ್ಷದ ಚಿತ್ರಣವೂ ಇದೆ. ಅವರು ಸಂತಸದಿಂದಿರುವಂತೆ ಕಷ್ಟಗಳನ್ನೂ ಅನುಭವಿಸುತ್ತಾರೆ. ಅವರಲ್ಲಿ ಸಾತ್ವಿಕರಿರುವಂತೆ ಕಳ್ಳರೂ ಮೋಸಗಾರರೂ ಇದ್ದಾರೆ. ಮಲೆನಾಡಿನ ವಿವಿಧ ಚಿತ್ರಗಳನ್ನು ಕೊಟ್ಟಿರುವಂತೆಯೆ ಅಲ್ಲಿ ಮನೆಮಾಡಿರುವ ಬಡತನ, ಮೂಢ ನಂಬಿಕೆಗಳು, ರೋಗ ರುಜಿನಗಳು ಇವುಗಳನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವ ಪುರೋಹಿತಶಾಹಿ ಇವುಗಳ ಚಿತ್ರಣವನ್ನೂ ಕೊಟ್ಟಿದ್ದಾರೆ.

ಕುವೆಂಪುರವರ ಸಾಹಿತ್ಯದ ಯಾವುದೇ ಪ್ರಕಾರವನ್ನಾದರೂ ತೆಗೆದುಕೊಳ್ಳಿ. ಅಲ್ಲಿ ನಿಸರ್ಗಾರಾಧನೆ ಇದ್ದೇ ಇರುತ್ತದೆ. ಆ ನಿಸರ್ಗಾರಾಧನೆ ಕುವೆಂಪು ಅವರಿಗೆ ಹೊರ ಉಡುಪಲ್ಲ, ಮೈಯ ತೊಗಲು ಆದ್ದರಿಂದಲೆ ಪ್ರಕೃತಿಯ ಚಿತ್ರಣ ಅಷ್ಟೊಂದು ವಿಧ. ಪ್ರಕೃತಿ ಅಥವಾ ಮಲೆನಾಡು ಅವರಿಗೆ ತಾಯಿ ಮನೆ, ಬೆಳೆಸಿದ ತೊಟ್ಟಿಲು, ಮನಸೆಳೆದ ಮನದನ್ನೆ, ಕೈಹಿಡಿದ ಕಬ್ಬದಂಗನೆ, ಆತ್ಮ ಸಾಕ್ಷಾತ್ಕಾರವಾದ ತಾಣ. ಆ ಸೊಬಗಿನಲ್ಲಿ ಅವರಿಗೆ ಶಿವನಿದ್ದಾನೆ. ಶಿವನಿರುವೆಡೆಯೆಲ್ಲವೂ ಅವರಿಗೆ ಸೊಬಗಿನಿಂದ ಕೂಡಿದೆ. ಹೀಗೆ ಅವರ ಮಾತುಗಳಲ್ಲಿಯೆ ಅವರ ಪ್ರಕೃತಿಯ ಗಾಢಾನುರುಕ್ತಿಯನ್ನು ವಿವರಿಸಬಹುದು. ಆದಿಕವಿ ಪಂಪನಿಂದ ಹಿಡಿದು ಇಲ್ಲಿಯವರೆಗೆ ಪ್ರಕೃತಿಯನ್ನು ಇಷ್ಟೊಂದು ತೆರನಾಗಿ ಚಿತ್ರಿಸಿದವರಾರೂ ಇಲ್ಲ. ರಸೋತ್ಕಟವಾದ ಪ್ರಸಂಗಗಳಲ್ಲಿಯೂ ಅದನ್ನು ಬಿಟ್ಟು ಪ್ರಕೃತಿಯನ್ನು ವರ್ಣಿಸುವಷ್ಟು ಪ್ರಕೃತಿಪ್ರಿಯರು. ಪ್ರಕೃತಿ ಕವಿಯಾದ ವರ್ಡ್ಸ್‌ವರ್ತ್‌ನೊಡನೆ ಕುವೆಂಪು ಅವರನ್ನು ಹೋಲಿಸುವುದುಂಟು. ಆದರೆ ಪ್ರಕೃತಿ ಕುವೆಂಪು ಚೇತನವನ್ನು ತಿದ್ದಿ ತಾಡಿ ನೇರ್ಪುಗೊಳಿಸಿದಂತೆ ವರ್ಡ್ಸ್‌ವರ್ತ್‌ನನ್ನು ಒಲಿದಿದೆಯೊ ಏನೊ ಕಾಣೆ.

ಇಂತಹ ಹಿನ್ನೆಲೆಯುಳ್ಳ ಕುವೆಂಪು ಸಹಜವಾಗಿಯೆ 'ಮಲೆನಾಡಿನ ಚಿತ್ರ'ಗಳಲ್ಲಿ ಸೂರ್ಯೋದಯ, ಚಂದ್ರೋದಯಗಳ ವರ್ಣನೆಗೆ ತೊಡಗುತ್ತಾರೆ. ಆ ವರ್ಣನೆಗಳು ಎಷ್ಟೊಂದು ಸಾರಿ ಬರುತ್ತವೆ. ಆದರೆ ಒಂದೂ ಪುನರಾವರ್ತನೆ ಎನ್ನಿಸುವುದಿಲ್ಲ. ವಸ್ತುವಿಗೆ ತಕ್ಕಂತೆ ಸಂದರ್ಭಕ್ಕೆ ತಕ್ಕಂತೆ ಶೈಲಿ ಪ್ರೌಢವೂ ಸರಳವೂ ಆಗುತ್ತದೆ. ಅಂತಹ ಒಂದೆರಡು ಉದಾಹರಣೆಗಳನ್ನು ಇಲ್ಲಿ ನೋಡೋಣ. ಮುನ್ನುಡಿಯಲ್ಲಿಯ ದಿನಾಂತ ಸಮಯದ, ಸೂರ್ಯೋದಯದ ಭವ್ಯ ವರ್ಣನೆಗಳು ಬರುತ್ತವೆ. ಅದನ್ನು ಬಿಟ್ಟು 'ಮಲೆನಾಡಿನ ಚಿತ್ರ'ಗಳಲ್ಲಿ ಚಿತ್ರಿತವಾಗಿರುವ ಒಂದೆರಡು ಚಿತ್ರಗಳನ್ನು ನೋಡೋಣ.

"... ಆ ಗಿರಿಗಳಾಚೆಯಲ್ಲಿ ನೀಲಾಕಾಶವು ಪಾತಾಳದಲ್ಲಿ ನಿಂತು ಸ್ವರ್ಗವನ್ನು ಇಣಿಕಿ ನೋಡುವಂತೆ ಧೀರಗಂಭೀರವಾಗಿರುವುದು. ಆ ಗಿರಿಶಿಖರ ರೇಖೆಯಲ್ಲಿ ಇತರ ವೃಕ್ಷಗಳಿಗಿಂತ ಹಿರಿದಾಗಿ ಎತ್ತರವಾಗಿ ಬೆಳೆದ ಹೆಮ್ಮರಗಳು ಆಕಾಶ ಪಟದಲ್ಲಿ ಬರೆದು ಕೆತ್ತಿ ಮೆತ್ತಿದ ಸಜೀವ ಚಿತ್ರಗಳಂತೆ ತೋರಿ ವಿಶ್ವವರ್ಣಶಿಲ್ಪಿಯ ವರ್ಣನಾ ವೈಖರಿಯ ಕಲಾ ಕೌಶಲ್ಯವನ್ನು ಸಾರುವ ಗೆಲ್ಲಂಬಗಳ ಮೇಲೆ ಹಾರಾಡುವ ಶ್ಯಾಮಲ ಕೇತನಗಳಂತೆ ಕಂಗೊಳಿಸುವುವು. ಆ ದೃಶ್ಯ ದಿನದಿನವೂ ಹೊತ್ತಿಹೊತ್ತಿಗೂ ಬೇರೆ ಬೇರೆ ಸೌಂದರ್ಯದಿಂದ ನಲಿಯುವುದು! ಅದು ಅನಂತಕವಿ ಅನಂತಾನಂತ ಕವನಗಳನ್ನು ವಿರಚಿಸುವ ಕಾವ್ಯರಂಗದಂತೆ ಮೆರೆಯುವುದು. ಮಳೆಗಾಲದಲ್ಲಿ ಒಂದು ದೃಶ್ಯ; ಚಳಿಗಾಲದಲ್ಲಿ ಮತ್ತೊಂದು ದೃಶ್ಯ; ಬೇಸಗೆಯಲ್ಲಿ ಇನ್ನೊಂದು ದೃಶ್ಯ. ಬೆಳಗಿನಲ್ಲಿ ಒಂದು ದೃಶ್ಯ; ಬೈಗಿನಲ್ಲಿ ಇನ್ನೊದು ದೃಶ್ಯ; ಹಗಲಿನಲ್ಲಿ ಮತ್ತೊಂದು ದೃಶ್ಯ. ಬೆಳ್ದಿಂಗಳಲ್ಲಿ ಬೇರೊಂದು ಚೆಲುವು; ಕದ್ದಿಂಗಳಲ್ಲಿ ಮಗುದೊಂದು ನೋಟ." ಹೀಗೆ ಪ್ರಕೃತಿ ವರ್ಣನೆ ಬಂದಾಗ ಪ್ರೌಢವಾಗುವ ಕುವೆಂಪು ಶೈಲಿ ಕೆಲವು ವೇಳೆ ಸರಳವಾಗಿಯೂ ಇರುತ್ತದೆ. ಅವರ ಸಶಕ್ತವಾದ ಚಿತ್ರಕ ಶಕ್ತಿಗೆ ಒಂದು ಉದಾಹರಣೆಯನ್ನು ನೋಡೋಣ-

"...ರಾಜ ಸರ್ಪ! ಗೋಧಿಯ ಬಣ್ಣದ ಅದರ ತನುಕಾಂತಿ ಎಳೆ ಬಿಸಿಲಿನಲ್ಲಿ ಹೊಳೆಯುತ್ತಿತ್ತು. ಅದರ ಅರ್ಧದೇಹ ಪಸಲೆಯ ಮೇಲೆ ವಕ್ರಾಕಾರವಾಗಿ ಹೊರಳುತ್ತಿತ್ತು. ಅದರ ಹೆಡೆ ಮೂರು ನಾಲ್ಕು ಅಡಿಗಳಷ್ಟು ಎತ್ತರವಾಗಿ ನಿಂತು ಎಡಕ್ಕೂ ಬಲಕ್ಕೂ ಹಿಂದಕ್ಕೂ ಮುಂದಕ್ಕೂ ವಿಶ್ರಾಂತಿಯಿಲ್ಲದೆ ಒಲೆಯುತ್ತಿತ್ತು. ಫಣೆಯಲ್ಲಿ ಕಪ್ಪು 'ಳ' ಕಾರವು ತನ್ನದೇ ಠೀವಿಯಿಂದ, ತನ್ನದೇ ಒಂದು ಬಿಂಕದಿಂದ ಪ್ರಕಾಶಿಸುತ್ತಿತ್ತು..."

ಇಂತಹ ದೀರ್ಘ ವರ್ಣನೆಗಳಲ್ಲದೆ ಸಂದರ್ಭಕ್ಕೆ ತಕ್ಕಂತೆ ಕೊಡುವ ಉಪಮೆಗಳೂ, ಹೋಲಿಕೆಗಳಲ್ಲಿ, ಹೇಳಿಕೆಗಳೂ ಎಷ್ಟೊಂದು ಉಚಿತವೂ, ಸುಂದರವೂ ಆಗಿವೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನಿಲ್ಲಿ ನೋಡೋಣ.

"ಮೌನ ಸರೋವರಕ್ಕೆ ಸ್ವನ ಮಹಿಷವು ಧುಮುಕ್ಕಿದಂತಾಯಿತು", "ಘನೀಭೂತವಾದ ಘೋರಾಂಧಕಾರ ಕಾಳಪಾಷಣಭಿತ್ತಿಯೋಪಾದಿಯಲ್ಲಿ ನನ್ನೆದುರು ನಿಂತಿತ್ತು", "ಅಲ್ಲಿರುವುದು ಕೇವಲ ಶಾಂತಿ; ವನ್ಯವಾದರೂ ಅನಾಗರಿಕವಲ್ಲದ ಶಾಂತಿ.", "ಅಲ್ಲಿ ಮೌನವನ್ನೇ ಮಲಗಿಸುವ ಜೋಗುಳದಂತಿರುವ ಹಕ್ಕಿಗಳ ಸವಿ ದನಿ." "ಸಿಂಹ ಗರ್ಜನೆಗೆ ಬೆದರಿದ ಗರ್ಭಿಣಿ ಜಿಂಕೆಯ ಬಸಿರಿನಿಂದ ಅರೆ ಬೆಳೆದ ಭ್ರೂಣ ಜಗುಳಿ ಬೀಳುವಂತೆ...", "ಅದಕ್ಕೆ ಪ್ರಹಸನ; ಇವನಿಗೆ ಪ್ರಾಣ ಸಂಕಟ", "ಹೋದವರೆಲ್ಲ ಕಂಡಿರುವ, ಇರುವವರಾರೂ ಕಾಣದ, ಹೋಗುವವರೆಲ್ಲ ಕಾಣುವ, ಮೇರೆಯನ್ನೇ ಕಾಣದ, ಮಾಯೆಯ ಕಡಲಿಗೆ ತೃಣದಂತೆ ತೇಲಿ ಹೋದನು." "ಅನೇಕರು ಶಾಸ್ತ್ರಕ್ಕಾಗಿ ಶೋಕವನ್ನು ನಟಿಸಿದರು. ಒಬ್ಬರೂ ಕಣ್ಣೀರು ಸುರಿಸಲಿಲ್ಲ. ಜಡಿಮಳೆ ಮಾತ್ರ ಹೋ ಎಂದು ಸುರಿಯುತ್ತಿತ್ತು". "ಹೆಣ್ಣು ಹೆಬ್ಬುಲಿ ತನ್ನ ಮರಿಗಳೊಡನೆ ತನ್ನ ಹುಲಿತನವನ್ನು ಬಿಟ್ಟು ಬರಿಯ ತಾಯಿ ಮಾತ್ರವಾಗಿ ಆಡಿಸುತ್ತಿತ್ತು." "ಅವನನ್ನು ನೋಡಿದರೆ ಸ್ಮಶಾನಕ್ಕೆ ತಾನೆ ಹೊರಡಲು ಸಿದ್ಧನಾಗಿ ಕುಳಿತಂತೆ ತೋರುತ್ತಿತ್ತು" "ದೇವರ ರಾಜ್ಯದವರಾದ ಮಕ್ಕಳು ಸೈತಾನನ ಅನುಯಾಯಿಗಳಾದ ದೊಡ್ಡವರ ಮತಭೇದವನ್ನೇನು ಬಲ್ಲರು! ಮಕ್ಕಳಿಗೆ ಪ್ರೇಮವೆ ಜಾತಿಯನ್ನು ನಿರ್ಣಯಿಸುವ ಸಾಧನ." "ಆ ಕಾಲವೊಂದಿತ್ತು! ದಿವ್ಯ ತಾನಾಗಿತ್ತು! ಬಾಲ್ಯವಾಗಿತ್ತು", "ಕುಶಾಲುಹೋಗಿ ಅಸಾಲಾಯಿತು! ಆಟಕ್ಕೆ ಬದಲು ಅಟ ಮಟವಾಯಿತು!" ಇಂತಹ ನುಡಿಮುತ್ತುಗಳು ಹೆಕ್ಕಿದಷ್ಟೂ ಸಿಗುತ್ತವೆ. ಅವು ಅರ್ಥವತ್ತಾಗಿವೆ, ಸಂಪದ್ಭರಿತವಾಗಿವೆ, ಗೀತಾತ್ಮಕವಾಗಿವೆ, ದೀರ್ಘಕಾಲದ ಸೂಕ್ಷ್ಮ ನಿರೀಕ್ಷಣೆಯ ಫಲವಾಗಿ ಅವು ಹುಟ್ಟಿವೆ. ಮುಕ್ತಕಗಳಂತಿವೆ.

"ಮಲೆನಾಡಿನ ಚಿತ್ರ"ದ ಗದ್ಯದ ವೈವಿಧ್ಯವನ್ನು ನಿರೂಪಿಸಲಿಕ್ಕೇ ಒಂದು ಪ್ರಬಂಧ ಬರೆಯಬೇಕಾಗುತ್ತದೆ. ನಿಸರ್ಗ ಚಿತ್ರಣದಲ್ಲಿ ಪ್ರೌಢವಾಗುವ ಕುವೆಂಪು ಶೈಲಿ ಉಳಿದೆಡೆಯಲ್ಲಿ ಸರಳವಾಗುತ್ತವೆ.

'ಮಲೆನಾಡಿನ ಚಿತ್ರಗಳ'ನ್ನು 'ಚಿತ್ರ'ಗಳೆಂದು ಕರೆದಿದ್ದಾರೆ. ಚಿತ್ರಗಳೆಂದಿದ್ದರೂ ಅವು ಪ್ರಬಂಧ ಅಥವಾ ಹರಟೆಯ ಗುಂಪಿಗೆ ಸೇರುತ್ತವೆ. ಇವು ಹರಟೆಗಳಾದರೂ ಅವರ ನೆನಪಿನ ಸ್ಮೃತಿ ಚಿತ್ರಗಳು. ಆದ್ದರಿಂದಲೇ 'ಚಿತ್ರ'ಗಳೆಂದು ಹೆಸರಿಟ್ಟಿರುವುದು. ಅದೂ ಮಲೆನಾಡಿನ ಚಿತ್ರಗಳು. ಮಲೆನಾಡಿನ ಚಿತ್ರಗಳಲ್ಲಿ ಮಲೆನಾಡಿನ ರಮ್ಯ ಭಯಾನಕ ಪ್ರಕೃತಿಯ ಚಿತ್ರಣದಂತೆಯೆ ಅದರ ಇನ್ನೊಂದು ಮುಖವಾದ ಬಡತನ, ಮೌಢ್ಯ, ರೋಗ, ಶೋಷಣೆ ಇವುಗಳ ಚಿತ್ರಣವೂ ಇಲ್ಲಿದೆ. ಲೇಖಕರ ಅನುಕಂಪ ದಲಿತರ, ಶೋಷಿತರ ಕಡೆಗಿದೆ ಎಂಬುದು ಗಮನಿಸಬೇಕಾದ ಅಂಶ. ತಮ್ಮ ಬಾಲ್ಯದ

ಸ್ಮೃತಿಗಳನ್ನು ಸಶಕ್ತವಾಗಿ ಜೀವಂತವಾಗಿ ನೋಡಬಲ್ಲ ಕಾಣಬಲ್ಲ ಶಕ್ತಿ ಲೇಖಕರಿಗಿದೆ. ಚಿತ್ರಿಸಬಲ್ಲ ಚಿತ್ರಕಶಕ್ತಿ ಅವರಿಗಿದೆ. "ಕುವೆಂಪು ಅವರ "ಮಲೆನಾಡಿನ ಚಿತ್ರಗಳ"ಲ್ಲಿ ಮಲೆನಾಡಿನ ನಿಸರ್ಗ ರಮ್ಯತೆ, ಕಾಡುಪ್ರಾಣಿಗಳ ಚರ್ಯೆಯ ವಿಮರ್ಶೆ, ಬಾಲಕರ ಕೇಳಿಗಳು, ಮಲೆನಾಡಿಗೇ ವಿಶಿಷ್ಟವಾದ ಬೇಟೆ, ಭೂತ, ಹರಕೆ, ರೋಗಗಳು, ಅಭ್ಯಂಜನದ ಯಮಹಿಂಸೆ ಇಂಥ ಹತ್ತಾರು ಸುಂದರ ಚಿತ್ರಗಳ ವರ್ಣಶೋಭೆಯನ್ನು ಈ ಚಿತ್ರಗಳು ರೂಪಿಸುತ್ತವೆ." ಕುವೆಂಪು ಅವರ "ಸಾಮಾಜಿಕ ಚಿಂತನದೊಂದಿಗೆ ಆತ್ಮವೃತ್ತದ ಮಧುರ ಸ್ಮೃತಿಗಳನ್ನು ಬೆರಸುವ ಬಗ್ಗೆ ಕೆಲವರು ವಿಮರ್ಶಕರ ಮನಸ್ಸನ್ನು ಸೆಳೆದಿದೆ."

ಸಾರಸ್ವತ ಋಣ

೧. ಎಸ್.ವಿ. ಪರಮೇಶ್ವರ ಭಟ್ಟ : ನನ್ನ ದೇವರು ಮತ್ತು ಇತರ ಕಥೆಗಳು : ಪ್ರ.ಕ. ಸಂ. ೨೨, ಸಂ.೨.

೨. ಎಸ್.ವಿ. ಪರಮೇಶ್ವರ ಭಟ್ಟ : ಸಂನ್ಯಾಸಿ ಮತ್ತು ಇತರ ಕಥೆಗಳು : ಉಡುಗೊರೆ (ಸಂ : ಪ.ವಿ. ಚಂದ್ರಶೇಖರಮೂರ್ತಿ, ಜಿ.ಶಿ. ಪರಶಿವಮೂರ್ತಿ)

೩. ಕೀರ್ತಿನಾಥ ಕುರ್ತುಕೋಟಿ : ಸಣ್ಣ ಕಥೆ : ಯುಗಧರ್ಮ ಹಾಗೂ ಸಾಹಿತ್ಯದರ್ಶನ.

೪. ಎಚ್.ಜೆ. ಲಕ್ಕಪ್ಪಗೌಡ : ಕವಿಯ ಕುಂಚದ ಕಥಾಚಿತ್ರಗಳು : ಗಂಗೋತ್ರಿ (ಸಂ.ದೇ.ಜ.ಗೌ)

೫. ಹ.ಕ. ರಾಜೇಗೌಡ : ಕುವೆಂಪು ಅವರ ಸಣ್ಣ ಕಥೆಗಳು : ವಿವೇಚನೆ.

೬. ದೇಜಗೌ : ಋಷಿಕವಿ ಕುವೆಂಪು : ಸಾಹಿತಿಗಳ ಸಂಗದಲ್ಲಿ.

೭. ಡಾ.ಹಾ.ಮಾ. ನಾಯಕ್ : ಗದ್ಯ ಪದ್ಯಗಳೆರಡರಲ್ಲೂ ಪ್ರಜ್ವಲಿಸುವ ಪ್ರತಿಭಾವಂತ : ಪ್ರಜಾವಾಣಿ ವಿಶೇಷಾಂಕ ೧೯೭೮.

೮. ಅ.ರಾ. ಮಿತ್ರ : ವ್ಯಕ್ತಿಚಿತ್ರ, ಪ್ರಬಂಧ, ಹರಟೆ : ಸುವರ್ಣ ಸಂಚಯ (ಸಂ : ಎಂ.ವಿ. ಸೀತಾರಾಮಯ್ಯ)

೯. ಎಲ್.ಎಸ್. ಶೇಷಗಿರಿರಾವ್ : ಕನ್ನಡ ಕತಾ ಸಾಹಿತ್ಯ : ಸುವರ್ಣ ಸಂಚಯ (ಸಂ : ಎಂ.ವಿ. ಸೀತಾರಾಮಯ್ಯ)

೧೦. ಗಿರಡ್ಡಿ ಗೋವಿಂದರಾಜ : ಸಣ್ಣ ಕಥೆಯ ಹೊಸ ಒಲವುಗಳು

೧೧. ಜಿ.ಎಸ್. ಶಿವರುದ್ರಪ್ಪ : ವಿಮರ್ಶೆಯ ಪೂರ್ವಪಶ್ಚಿಮ

೧೨. ದೊ.ನಾ. ರಾಮೇಗೌಡ : ಕುವೆಂಪು ಕೃತಿಗಳಲ್ಲಿ ಮಣ್ಣಿನ ವಾಸನೆ : ಸಹ್ಯಾದ್ರಿ

೧೩. ಎಲ್.ಎಸ್. ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ.

❑

ಕುವೆಂಪು ಅವರ ಜನಪ್ರಿಯ ವಾಲ್ಮೀಕಿ ರಾಮಾಯಣ

ರಾಮಾಯಣ ಮತ್ತು ಮಹಾಭಾರತ ಕಥೆ ಗೊತ್ತಿಲ್ಲದ ಭಾರತೀಯನಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಈ ಎರಡೂ ಕಾವ್ಯಗಳು ನಮ್ಮ ದೇಶದ ಸಂಸ್ಕೃತಿಯ ಪ್ರತೀಕಗಳು ಪ್ರಪಂಚದ ಮಹಾಕಾವ್ಯಗಳ ಸಾಲಿನಲ್ಲಿ ನಿಲ್ಲಬಲ್ಲ ಕೃತಿಗಳು. ಎಲ್ಲಿಯವರೆಗೆ ನಾಡು ನುಡಿ ಇರುತ್ತದೋ ಅಲ್ಲಿಯವರೆಗೆ ಉಳಿಯುವ ಕೃತಿಗಳು. ಇವುಗಳ ಕಥೆ ಭಾರತೀಯರಿಗೆ ಅವರ ಹುಟ್ಟಿನೊಂದಿಗೆ ಅವರ ಭಾವಕೋಶದೊಂದಿಗೆ ಬೆಳೆಯುತ್ತಾ ಬರುತ್ತದೆ. ಸೀತಾ ಶ್ರೀರಾಮ ಲಕ್ಷ್ಮಣರು ವನವಾಸಮಾಡಿದ ಸ್ಥಳಗಳನ್ನೂ ಸೀತಾದೇವಿ ಮಿಂದ ಮಡುಗಳನ್ನೂ ನಾಡಿನ ನಾನಾ ಭಾಗಗಳಲ್ಲಿ ಜನರು ತೋರುತ್ತಾರೆ. ಶ್ರೀರಾಮನ ದೇವಾಲಯವಿಲ್ಲದ ಊರಿರಬಹುದು ಆದರೆ ಹನುಮನ ಗುಡಿಯಿಲ್ಲದ ಊರಿಲ್ಲ! ಹಾಗೆಯೆ ಪಾಂಡವರು ವನವಾಸ ಮಾಡಿದ ಸ್ಥಳಗಳನ್ನೂ ಜನರು ತೋರುತ್ತಾರೆ. ವಾಸ್ತವವಾಗಿ ಸೀತಾ ರಾಮ ಲಕ್ಷ್ಮಣರಾಗಲಿ ಪಾಂಡವರಾಗಲಿ ಜನ ಗುರುತಿಸುವ ಸ್ಥಳಗಳಲ್ಲಿ ಇದ್ದರೊ ಇಲ್ಲವೊ ಅದು ಅಪ್ರಕೃತ. ಆದರೆ ಆ ಭಾವನೆ ಭಾರತವನ್ನು ಸಾಂಸ್ಕೃತಿಕವಾಗಿ ಒಂದಾಗಿ ಬೆಸೆದಿರುವುದನ್ನು ಅಲ್ಲಗಳೆಯಲಾಗದು. ಜನತೆ ಪೂಜ್ಯಭಾವದಿಂದ ಕಾಣುವ ದೇವಭಾಷೆಯಲ್ಲಿರುವ ಈ ಎರಡೂ ಕಾವ್ಯಗಳನ್ನು ದೇಶದ ನಾನಾ ಭಾಷೆಗಳವರು ತಮ್ಮ ತಮ್ಮ ಭಾಷೆಗಳಿಗೆ ಅನುವಾದ ಮಾಡಿಕೊಂಡಿದ್ದಾರೆ. ಒಂದಲ್ಲ ಅನೇಕ ಅನುವಾದಗಳು ರೂಪಾಂತರಗಳು ಜನತೆಯ ಮೇಲಿನ ಅವುಗಳ ಪ್ರಭಾವಕ್ಕೆ ಸಾಕ್ಷಿ. ಅಂತೆಯೆ ಇಂದಿನವರೆಗೂ ನಮ್ಮ ಕವಿಗಳಿಗೆ ಅವು ಬತ್ತದ ಸೆಲೆ. "ಅವುಗಳ ಒಂದೊಂದು ಪ್ರಸಂಗಗಳನ್ನೇ ಆಧರಿಸಿ ಅನೇಕ ಲೇಖಕರು ತಮ್ಮದೇ ಉಜ್ವಲ ಕೃತಿಗಳನ್ನು ಸೃಷ್ಟಿಸಿದ್ದಾರೆ."[೧]

ಪಂಪನ 'ವಿಕ್ರಮಾರ್ಜುನ ವಿಜಯ', ರನ್ನನ 'ಗದಾಯುದ್ಧ' ಮತ್ತು ಕುಮಾರವ್ಯಾಸನ 'ಕರ್ನಾಟ ಭಾರತ ಕಥಾಮಂಜರಿ' ಹಳಗನ್ನಡ ಮತ್ತು ನಡುಗನ್ನಡದ ಶ್ರೇಷ್ಠ ಕೃತಿಗಳು. ಪಂಪ ಮತ್ತು ರನ್ನರ ಕಾವ್ಯ ಕಲಿತವರಿಗೆ ಕಾಮಧೇನುವಾದರೆ ಕುಮಾರವ್ಯಾಸನ ಕಾವ್ಯ ಕಲಿತವರು ಮತ್ತು ಕಲಿಯದವರಿಬ್ಬರಿಗೂ ಕಾಮಧೇನುವಾಗಿ ನಾಡಿನ ಮನೆಮನೆಗಳಲ್ಲಿ ಪಾರಾಯಣಗೊಳ್ಳುತ್ತಿದೆ.

ಇದೇ ಮಾತನ್ನ ರಾಮಾಯಾಣದ ಬಗೆಗೆ ಹೇಳಲಾಗುವುದಿಲ್ಲ. ಕನ್ನಡದಲ್ಲೇನೂ ಅನೇಕ ರಾಮಾಯಾಣಗಳು ಬಂದಿವೆ. ಆದರೆ ಪ್ರಾಚೀನ ಸಾಹಿತ್ಯವನ್ನು ಅವಲೋಕಿಸಿದಾಗ ಶ್ರೇಷ್ಠ ರಾಮಾಯಣ ಕೃತಿಗಳು ಬಂದಿಲ್ಲ ಅಥವಾ ಬಂದಿದ್ದರೂ ಉಪಲಬ್ಧವಿಲ್ಲ ಎಂದೇ ಹೇಳಬೇಕಾಗುತ್ತದೆ. ಆ ಕೊರತೆಯನ್ನ ಈ ಶತಮಾನದಲ್ಲಿ ರಚನೆಯಾದ ಪೂರ್ಣದೃಷ್ಟಿಯ 'ಶ್ರೀ ರಾಮಾಯಣದರ್ಶನಂ' ತುಂಬಿಕೊಡುತ್ತದೆ.

ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡದಲ್ಲಿ ರಾಮಾಯಣ ಕೃತಿಗಳಿಗೇನೂ ಕೊರತೆಯಿಲ್ಲ. ಕ್ರಿ.ಶ. ೮೫೦ರ ಕವಿರಾಜಮಾರ್ಗದಲ್ಲೇ ಅದಕ್ಕಿಂತ ಪೂರ್ವದಲ್ಲಿದ್ದಿರ-ಬಹುದಾದ ರಾಮಾಯಣದ ಪದ್ಯಗಳನ್ನು ಲಕ್ಷ್ಯವಾಗಿ ಕೊಟ್ಟಿದೆ. ಪೊನ್ನ ರನ್ನರು ಕ್ರಮವಾಗಿ 'ಭುವನೈಕ ರಾಮಾಭ್ಯುದಯ' ಮತ್ತು 'ಪರಶುರಾಮ ಚರಿತೆ' ಎಂಬ ಕೃತಿಗಳನ್ನು ರಚಿಸಿದ್ದರೂ ನಮ್ಮ ದುರಾದೃಷ್ಟದಿಂದ ಅವು ಉಪಲಬ್ಧವಿಲ್ಲ. ನಮಗೆ ಸಿಗುವ ಮೊದಲನೆ ರಾಮಾಯಣವೆಂದರೆ ಅಭಿನವ ಪಂಪನೆಂದು ಹೆಸರಾದ ನಾಗಚಂದ್ರ ಹನ್ನೆರಡನೆ ಶತಮಾನದಲ್ಲಿ ರಚಿಸಿದ 'ರಾಮಚಂದ್ರ ಚರಿತ ಪುರಾಣ' ಇದು ವಿಮಲಸೂರಿಯ ಪಉಮ ಚರಿಯ ಸಂಪ್ರದಾಯದಲ್ಲಿ ರಚನೆಯಾಗಿರುವ ಜೈನರಾಮಾಯಣ. ಅನಂತರ ಜೈನ ಸಂಪ್ರದಾಯದಲ್ಲಿ ಗುರುತಿಸಬಹುದಾದ ಮತ್ತೊಂದು ಕೃತಿ ಎಂದರೆ ಹದಿಮೂರನೆಯ ಶತಮಾನದಲ್ಲಿ ಷಟ್ಪದಿಯಲ್ಲಿ ರಚನೆಯಾದ ಕುಮುದೇಂದು ಕವಿಯ 'ಕುಮುದೇಂದು ರಾಮಾಯಣ'. ವೈದಿಕ ಸಂಪ್ರದಾಯದ ರಾಮಾಯಣ ನಮಗೆ ದೊರಕುವುದು ಹದಿನೈದನೆ ಶತಮಾನದ ಕೊನೆ ಅಥವಾ ಹದಿನಾರನೆಯ ಶತಮಾನದ ಆದಿ ಭಾಗದಲ್ಲಿ. ಅದೇ ನರಹರಿ ಕವಿಯ 'ತೊರವೆ ರಾಮಾಯಣ'. ಜನಸಾಮಾನ್ಯರಿಗೆ ರಾಮಾಯಣವನ್ನು ಮುಟ್ಟಿಸುವಲ್ಲಿ ಈ ಕೃತಿ ಯಶಸ್ವಿಯಾಗಿದೆ. ಈ ಕೃತಿಗಳಲ್ಲದೆ 'ತಿಣಿಕಿದನು ಫಣಿರಾಯ ರಾಮಾಯಣದ ಭಾರದಲಿ' ಎಂಬಂತೆ ಅನೇಕ ರಾಮಾಯಣಗಳು ಹುಟ್ಟಿಕೊಂಡಿವೆ. ಯಕ್ಷಗಾನ, ಜಾನಪದಗಳೂ ಜನತೆಗೆ ರಾಮಾಯಣವನ್ನು ಮುಟ್ಟಿಸುವಲ್ಲಿ ತಮ್ಮ ಪಾಲಿನ ಕರ್ತವ್ಯವನ್ನು ನೆರವೇರಿಸಿವೆ. ಆದರೆ ಶ್ರೇಷ್ಠ ಎನ್ನುವಂಥ ಕಾವ್ಯ ರಾಮಾಯಣದಲ್ಲಿ ಬರಲಿಲ್ಲ. ಹಾಗೆ ಬಂದದ್ದು ಇಪ್ಪತ್ತನೆಯ ಶತಮಾನದಲ್ಲಿ. ೧೯೪೯ರಲ್ಲಿ ವಿಶ್ವವಾಣಿಯ ಮುಡಿಗೆ ಮಣಿಯಾಗುವಂತಹ ಮಹಾಛಂದಸ್ಸಿನ ಜಗದ್ಭವ್ಯ 'ಶ್ರೀ ರಾಮಾಯಣದರ್ಶನಂ' ಕಾವ್ಯವನ್ನಿತ್ತ ಕವಿಪುಂಗವ 'ಕುವೆಂಪು' ಅವರಿಂದಲೆ ಮರುವರ್ಷದಲ್ಲೇ ಜನಪ್ರಿಯ ವಾಲ್ಮೀಕಿರಾಮಾಯಣ ರಚನೆಯಾಯಿ-ತೆನ್ನುವುದು ಆಶ್ಚರ್ಯಕರ!

ಹೌದು ನಿಜಕ್ಕೂ ಆಶ್ಚರ್ಯಕರ! 'ಶ್ರೀ ರಾಮಾಯಣದರ್ಶನಂ' ಕಾವ್ಯದಲ್ಲಿ ವಾಲ್ಮೀಕಿ ಕಾವ್ವದ ಓರೆಕೋರೆಗಳನ್ನು ತಿದ್ದಿ, 'ಪಾಪಿಗುಂ ಉದ್ಧಾರಮಿಹುದೌ ಸೃಷ್ಟಿಯ

ಮಹದ್ವ್ಯೂಹ ರಚನೆಯೊಳ್' ಎಂಬ ತತ್ವಕ್ಕನುಗುಣವಾಗಿ ರಾವಣ ಮಂಥರೆಯರನ್ನು ಉದ್ಧರಿಸಿ, ಊರ್ಮಿಳೆಗೊಂದು ಸ್ಥಾನ ಕಲ್ಪಿಸಿ, ವಾಲಿ ವಧಾ ಪ್ರಸಂಗಕ್ಕೊಂದು ಔಚಿತ್ಯವನ್ನಿತ್ತು ಹೈಮಾಚಲ ಉತ್ತುಂಗ ಶಿಖರದಲ್ಲಿ ವಿಹರಿಸುತ್ತಿದ್ದ ಕವಿಯ ವ್ಯಕ್ತಿತ್ವ ತಟಕ್ಕನೆ ಇಳಿದದ್ದು ಆಶ್ಚರ್ಯಕರ! ಆಶ್ಚರ್ಯಕರ ಅಷ್ಟೆ, ಅಸಾಧ್ಯವೇನಲ್ಲ. ಅಸಾಧ್ಯವೇನಲ್ಲವೆಂಬುದನ್ನು 'ಶ್ರೀ ರಾಮಾಯಣದರ್ಶನಂ' ಕಾವ್ಯವನ್ನು ರಚಿಸಿದ ಕವಿಯೆ ಹಲವಾರು ವರ್ಷಗಳಾದ ಮೇಲೆ 'ಮಲೆಗಳಲ್ಲಿ ಮದುಮಗಳು' ಮಣ್ಣಿನ ವಾಸನೆಯಿಂದ ಕೂಡಿದ ಮಹಾಕಾದಂಬರಿಯನ್ನ ಕೊಟ್ಟು ತೋರಿದ್ದಾರೆ. ಆದರೂ ಅನುಮಾನಕ್ಕೆ "ಹಲವು ಗೆಳೆಯರ ಹಲವು ತೆರನಾದ ನೆರವಿನಿಂದಾಗಿ ಅದು 'ಜನಪ್ರಿಯ ವಾಲ್ಮೀಕಿ ರಾಮಾಯಣ'ವಾಗಿ ಈಗ ಸಿದ್ಧವಾಗಿದೆ. ಹೆಸರು ನನ್ನೊಬ್ಬನದೆ ಇದ್ದರೂ ಅವರೆಲ್ಲರ ಉಸಿರು ನನ್ನುಸಿರಿಗೆ ಬೆಂಬಲವಾಗಿರುವುದನ್ನು ನಾನು ಮರೆಯಲಾರೆ..." ಎಂಬ ಅವರ ಮಾತುಗಳೇ ಬೀಜವಾಗುತ್ತವೆ. ಅಲ್ಲದೆ ಈಗ್ಗೆ ೩-೪ ವರ್ಷಗಳ ಕೆಳಗೆ ಕುವೆಂಪು ಅವರ ಉಸಿರಿನೊಂದಿಗೆ ತಮ್ಮ ಉಸಿರನ್ನೂ ಸೇರಿಸಿರಬಹುದಾದ ಪ್ರಸಿದ್ಧಲೇಖಕರೊಬ್ಬರು ಜನಪ್ರಿಯ ದೈನಿಕವೊಂದರಲ್ಲಿ ಈ ವಿಷಯವನ್ನೆತ್ತಿದ್ದರಂತೆ. ಸಾಮಾನ್ಯವಾಗಿ ವಿಮರ್ಶಕರ ಬಗ್ಗೆ ಮತ್ತು ತಮ್ಮ ಟೀಕಾಕಾರರ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನು ತೋರುವ ಕುವೆಂಪು ಅವರಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ವಿಷಯ ಅಲ್ಲಿಗೇ ನಿಂತಿತು. ಈ ವಿಷಯದ ಬಗೆಗೆ ಕುವೆಂಪು ಅವರ ಅಂತರಂಗದ ಶಿಷ್ಯಬಳಗ ಬೆಳಕನ್ನು ಬೀರಬೇಕೆಂದು ಕೋರುತ್ತೇನೆ. ಅವರ ಮಾತುಗಳನ್ನ ನಾನು ಹೀಗೆ ಗ್ರಹಿಸುತ್ತೇನೆ : ಸ್ಥಪತಿಯೊಬ್ಬ ವಾಸ್ತುಶಿಲ್ಪದ ಮೇಲ್ವಿಚಾರಕನೂ ಸೂತ್ರಧಾರನೂ ಆಗಿರುವಂತೆ 'ಜನಪ್ರಿಯ ವಾಲ್ಮೀಕಿ ರಾಮಾಯಣ'ದ ರಚನೆಯಲ್ಲಿ ಕುವೆಂಪು ಇದ್ದಿರಬಹುದು. ಅದೇನೆ ಇದ್ದರೂ 'ಜನಪ್ರಿಯ ವಾಲ್ಮೀಕಿ ರಾಮಾಯಣ' ಕುವೆಂಪು ಕೃತ ಎಂಬ ಗ್ರಹಿಕೆಯಿಂದಲೇ ನನ್ನ ಲೇಖನವನ್ನು ಮುಂದುವರಿಸುತ್ತೇನೆ.

'ಜನಪ್ರಿಯ ವಾಲ್ಮೀಕಿ ರಾಮಾಯಣ' ಸಂಗ್ರಹತೆಯೊಂದನ್ನು ಬಿಟ್ಟು ಮೂಲಕ್ಕೆ ಅತಿನಿಷ್ಠವಾಗಿರುವುದರಿಂದ 'ವಾಲ್ಮೀಕಿ ರಾಮಾಯಣ'ದ ಬಗ್ಗೆ ಹೇಳುವ ಮಾತುಗಳೆಲ್ಲಾ 'ಜನಪ್ರಿಯ ವಾಲ್ಮೀಕಿ ರಾಮಾಯ'ಕ್ಕೂ ಅನ್ವಯವಾಗುತ್ತವೆ. "ವಾಲ್ಮೀಕಿ ರಾಮಾಯಣ'ದ ಸಂಸ್ಕೃತ ಶೈಲಿ ಸರಳ ಸುಂದರ ಮತ್ತು ಮಧುರ."[೨] ಅಂದಮೇಲೆ 'ಜನಪ್ರಿಯ ವಾಲ್ಮೀಕಿ ರಾಮಾಯಣ'ದ ಭಾಷೆ ಪೆಡಸಾಗುವ ಮಾತು ದೂರ ಉಳಿಯಿತು. 'ಜನಪ್ರಿಯ ವಾಲ್ಮೀಕಿ ರಾಮಾಯಣ'ದ ಬಗ್ಗೆ ಮಾತನಾಡುವ ಮೊದಲು ವಾಲ್ಮೀಕಿ ಮತ್ತು 'ವಾಲ್ಮೀಕಿ ರಾಮಾಯಣ'ದ ಬಗ್ಗೆ ಎರಡು ಮಾತು ಹೇಳಿದರೆ ಅನುಚಿತವಾಗಲಾರದು.

ಬೇಡನಾಗಿದ್ದ ವಾಲ್ಮೀಕಿ ತಪಸ್ಸಿನಿಂದ ಮಹರ್ಷಿ ಪದವಿಗೇರಿ ಅದುವರೆಗೆ ಜನಪದದಲ್ಲಿ ಕರ್ಣ ಪರಂಪರೆಯಿದ ಹರಿದು ಬರುತ್ತಿದ್ದ ರಾಮಾಯಣ ಕಥೆಗೆ ಕಾವ್ಯ ರೂಪವನ್ನಿತ್ತನು. 'ಮಾನಿಯರ್ ವಿಲಿಯಮ್ಸ್ ಮತ್ತು ವಿಂಟರ್ ನಿಟ್ಸ್ ರಾಮಾಯಣ ಮಹಾಕಾವ್ಯದ ರಚನೆಯ ಕಾಲ ಸುಮಾರು ಕ್ರಿ.ಪೂ. ಮೂರನೆಯ ಶತಮಾನವೆಂದು ಅಭಿಪ್ರಾಯಪಡುತ್ತಾರೆ. ಮ್ಯಾಕ್ಡಾನೆಲ್ ಮೊದಲಾದ ವಿದ್ವಾಂಸರು ರಾಮಾಯಣವು ಸುಮಾರು ಕ್ರಿ.ಪೂ. ೪೦೦-೨೦೦ ಈ ಕಾಲದಲ್ಲಿ ರಚಿತವಾಗಿರಬೇಕೆಂದು ಅಭಿಪ್ರಾಯಪಡುತ್ತಾರೆ..."[೩] ಡಾ. ಸುನೀತಿಕುಮಾರ ಚಟರ್ಜಿಯವರ ಪ್ರಕಾರ "ರಾಮಾಯಣ ಒಂದು ಕಲ್ಪಿತ ಕಥೆ, ಯಾವುದೇ ಕಾಲದ ಐತಿಹಾಸಿಕ ಘಟನೆಯಲ್ಲ. ರಾಮನು ವಿಷ್ಣುವಿನ ಅವತಾರವಲ್ಲ. ವಾಲ್ಮೀಕಿಯ ಕಾಲದಲ್ಲಿ ಇನ್ನೂ ವಿಷ್ಣುವಿನ ಪರಿಕಲ್ಪನೆ ಬಹುವಾಗಿ ಬೆಳೆದಿರಲಿಲ್ಲ. ರಾಮ ಪಾತ್ರಕ್ಕೆ ದೈವತ್ವ ಆರೋಪವಾದದ್ದು ಬಹಳ ಕಾಲದ ನಂತರ. ಕ್ರಿ.ಪೂ. ೫೦೦ರ ವೇಳೆಗೆ ರಾಮಾಯಣ ರಚನೆಗೊಂಡಿರಬೇಕು. ಅಲ್ಲದೆ ರಾಮಾಯಣ ಕಥೆ ವಾಲ್ಮೀಕಿಯದೇ ಅಲ್ಲ. ಬೌದ್ಧ ಸಾಹಿತ್ಯದ 'ದಶರಥ ಜಾತಕ'ದಿಂದ ಅದನ್ನು ಎತ್ತಿಕೊಳ್ಳಲಾಗಿದೆ. ಸೀತಾಪಹರಣಕ್ಕೆ ಸ್ಫೂರ್ತಿ ಬಂದದ್ದು ಹೋಮರನ ಕೃತಿಗಳಿಂದ."[೪]

ರಾಮಾಯಣದ ಕಾಲ ಮತ್ತು ವಸ್ತುವಿನ ಮೂಲಚೂಲಗಳ ಬಗ್ಗೆ ವಿದ್ವತ್ ಪ್ರಪಂಚದಲ್ಲಿ ನಡೆಯುತ್ತಿರುವ ವಾದ ವಿವಾದಗಳಿಂದ ಶ್ರೀರಾಮನ ಅವತಾರದ ಬಗ್ಗೆ ಮತ್ತು ರಾಮಾಯಣದ ಬಗ್ಗೆ ಭಾರತೀಯ ಜನಸಾಮಾನ್ಯರಲ್ಲಿ ನಂಬಿಕೆ ತಿಲ ಮಾತ್ರವೂ ನಷ್ಟವಾಗಿಲ್ಲ. ಇಂತಹ ಜನ ಮನೋಭೂಮಿಕೆಯಲ್ಲಿ ನಿತ್ಯ ಹಸುರಾಗಿರುವ ಕಥೆಯನ್ನು ಜನಸಾಮಾನ್ಯರಿಗಾಗಿ ಜನಪ್ರಿಯ ರೂಪದಲ್ಲಿ ಕೊಡುವ ಕೆಲಸವನ್ನು ಕುವೆಂಪು ಕೈಗೊಂಡರು. ಒಂದು ಕೃತಿ ಜನಪ್ರಿಯವಾಗಬೇಕಾದರೆ ಮೊದಲನೆಯದಾಗಿ ಅದರಲ್ಲಿ ಕಥೆಯಿರಬೇಕು, ನವರಸಗಳಿಂದ (ವಿಶೇಷವಾಗಿ ವೀರ, ಶೃಂಗಾರ, ಕರುಣ.....) ಕೂಡಿರಬೇಕು, ಶೈಲಿ ಕದಳಿಪಾಕ ಅಥವಾ ದ್ರಾಕ್ಷಾಪಾಕದಂತಿರಬೇಕು. ಅಂದರೆ ಕೃತಿಯನ್ನ ಅರ್ಥಮಾಡಿಕೊಳ್ಳಲು ಸಹೃದಯರಿಗೆ ವಿಶೇಷವಾಗಿ ಶ್ರಮವುಂಟಾಗಬಾರದು. ಈ ಎಲ್ಲವೂ ರಾಮಾಯಣದಲ್ಲಿದೆ. "ಈ ರಾಮಾಯಣವೆಂಬುದು ಲೌಕಿಕರಿಗೆ ತಕ್ಕಂತೆ ಲೋಕ ನ್ಯಾಯಗಳನ್ನೂ, ವಿರಕ್ತರಿಗೆ ತಕ್ಕಂತೆ ವೇದಾಂತಗಳನ್ನೂ, ರಸಿಕರಿಗೆ ತಕ್ಕಂತೆ ರಸವಿಶೇಷಗಳನ್ನೂ ಹೆಂಗಸರಿಗೂ ಬಾಲಕರಿಗೂ ತಕ್ಕಂತೆ ವಿಚಿತ್ರ ಕಥೆಗಳನ್ನೂ ತಿಳಿಸುವುದು....."[೫] ಇಂತಹ ರಾಮಾಯಣವನ್ನು ಜನಪ್ರಿಯ ರೂಪದಲ್ಲಿ ಕೊಡಬೇಕಾದಾಗ ಎಷ್ಟನ್ನು ಕೊಡಬೇಕೆಂಬ ಪ್ರಶ್ನೆ ಕುವೆಂಪು ಅವರಿಗೆ ಎದುರಾಗಿರಬೇಕು. ಏಕೆಂದರೆ "ಬಾಲಕಾಂಡದ ಬಹು

ಭಾಗವೂ ಉತ್ತರ ಕಾಂಡವೂ ಪ್ರಕ್ಷಿಪ್ತವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ."[೬] ಅದ್ದರಿಂದ "ಜನಪ್ರಿಯವಾಗುವಂತೆಯೂ ವಾಲ್ಮೀಕಿ ರಾಮಾಯಣದ ಕಥೆಯ ಮೈ ಒಂದಿನಿತೂ ಅತ್ತ ಇತ್ತ ಆಗಿ ಕೆಡದಂತೆಯೂ ಸಾಧ್ಯವಾದ ಮಟ್ಟಿಗೆ ಸುಲಭವಾದ ಗದ್ಯದಲ್ಲಿ ರಾಮಾಯಣವನ್ನು..."[೭] ಕುವೆಂಪು ಅವರು ರಚಿಸಿದರು. ಕಥೆಯ ಮೈ ಒಂದಿನಿತೂ ಅತ್ತ ಇತ್ತ ಆಗಿ ಕೆಡದಂತೆ ಹೇಗೆ ನಿರೂಪಿಸಿದ್ದಾರೆ ಎಂಬುದನ್ನು ಗ್ರಹಿಸಬೇಕಾದರೆ ಅವರು ಬಿಟ್ಟಿರುವ ಭಾಗಗಳನ್ನು ಗಮನಿಸಿದರೆ ಸಾಕು. ಉತ್ತರಕಾಂಡದ ಅನೇಕ ಭಾಗಗಳನ್ನು ಸಂಕ್ಷೇಪವಾಗಿ ಸಂಗ್ರಹಿಸಿ ನಿರೂಪಿಸಿದ್ದಾರೆ. ಬಾಲಕಾಂಡದಲ್ಲಿ ಅವರು ಬಿಟ್ಟಿರುವ ಭಾಗಗಳು ಇವು;- ಸಂಕ್ಷೇಪ ರಾಮಾಯಣ, ಕುಶಲವರು ರಾಮಾಯಣವನ್ನು ಗಾನಮಾಡಿದುದು, ಋಷ್ಯಶೃಂಗ ಚರಿತ್ರ, ವಿಷ್ಣುವಿನಲ್ಲಿ ದೇವತೆಗಳ ಮೊರೆ, ವಾನರ ಸೃಷ್ಟಿ, ತಾಟಕಾ ವೃತ್ತಾಂತ, ಗಂಗಾ ಪಾರ್ವತಿಯರ ವೃತ್ತಾಂತ, ಪಾರ್ವತೀ ವೃತ್ತಾಂತ, ಸಗರ ವೃತ್ತಾಂತ, ಭಗೀರಥನು ಗಂಗೆಯನ್ನ ತಂದುದು, ವಿಶ್ವಾಮಿತ್ರ ಚರಿತ್ರೆ, ತ್ರಿಶಂಕು, ಶುನಶ್ಯೇಫ, ಶಿವ ಧನುಸ್ಸಿನ ವೃತ್ತಾಂತ, ಇಕ್ಷ್ವಾಕುವಂಶದ ವರ್ಣನೆ, ಜನಕ ವಂಶದ ವರ್ಣನೆ, ಪರಶುರಾಮ ಗರ್ವಭಂಗ ಮೊದಲಾದುವು. ಈ ಮೇಲೆ ಹೇಳಿದ ಭಾಗಗಳು 'ಜನಪ್ರಿಯ ವಾಲ್ಮೀಕಿ ರಾಮಾಯಣ'ದಲ್ಲಿದ್ದಿದ್ದರೆ ಕಥೆಯ ಏಕಮುಖತೆಗೆ ಭಂಗ ಬರುತ್ತಿತ್ತು. ಆದರೆ ಪರಶುರಾಮ ಗರ್ವಭಂಗ ಪ್ರಸಂಗವನ್ನ ಬಿಟ್ಟದ್ದು ಅಷ್ಟಾಗಿ ಔಚಿತ್ಯಪೂರ್ಣವಾಗಿ ತೋರುವುದಿಲ್ಲ.

ಹೀಗೆ ಎಷ್ಟು ಕಥೆಯನ್ನು ಹೇಳಬೇಕೆಂದು ನಿರ್ಧರಿಸಿಕೊಂಡಮೇಲೆ ಹೇಗೆ ಹೇಳಬೇಕೆಂಬುದನ್ನು ಪರ್ಯಾಲೋಚಿಸಿರಬೇಕು, ಕುವೆಂಪು. ಏಕೆಂದರೆ 'ಜನಪ್ರಿಯ ವಾಲ್ಮೀಕಿ ರಾಮಾಯಣ'ವನ್ನು ಅವರು ಬರೆಯಲು ಹೊರಟಿದ್ದು ಹೊಸದಾಗಿ ಓದಲು ಕಲಿತ ವಯಸ್ಕರಿಗಾಗಿ. "ಕೇವಲ ಸಾಕ್ಷರತೆಯಿಂದ ಮಹತ್ತಾದ ಪ್ರಯೋಜನವೇನೂ ಲಭಿಸದು. ಸಾಕ್ಷರತೆ ಬೇರೊಂದು ಸಿದ್ಧಿಗಾಗಿ ಸಾಧನವೇ ಹೊರತು ಅದೇ ಪರಮಗುರಿಯಲ್ಲ; ಜ್ಞಾನ ಸಂಪಾದನೆಯೆ ಅದರ ಪರಮಗುರಿ."[೮] ಎಂದು ಕೊಂಡು "...ಅತಿ ಸರಳತೆಯ ಸೌಲಭ್ಯವೂ ಅತಿ ಪಾಂಡಿತ್ಯದ ಕ್ಲಿಷ್ಟತೆಯಂತೆಯೇ ಅವಜ್ಞೆಗೆ ಗುರಿಯಾಗುತ್ತದೆಂದು ಎಣಿಸಿ ಅಲ್ಲಲ್ಲಿ ಮೂಲ ರಾಮಾಯಣದ ರಸವತ್ತಾದ ಪದ ಮತ್ತು ಪದಪುಂಜ ಪ್ರಯೋಗಗಳನ್ನು ಹೆಚ್ಚು ಬದಲಾಯಿಸದೆ..."[೯] "ಅಧ್ಯಾಯ ವಿಭಾಗಗಳನ್ನು ಆದಷ್ಟು ಸಣ್ಣವಾಗಿರುವಂತೆ ನೋಡಿಕೊಂಡು"[೧೦] ಜನಪ್ರಿಯ ರಾಮಾಯಣವನ್ನು ರಚಿಸಿದ್ದಾರೆ.

'ವಾಲ್ಮೀಕಿ ರಾಮಾಯಣ'ದ ಬಗ್ಗೆ ಹೇಳುವ ವಿಮರ್ಶೆಯ ಮಾತುಗಳೇ 'ಜನಪ್ರಿಯ ವಾಲ್ಮೀಕಿ ರಾಮಾಯಣ'ಕ್ಕೂ ಅನ್ವಯಿಸುತ್ತವೆ. "ವಾಲ್ಮೀಕಿ ಮಹರ್ಷಿ

ಮಹಾಕೃತಿಯಲ್ಲಿ ಮೂಡಿಸಿರುವ ಪಾತ್ರಗಳು ಮಾನವ ಕುಲದ ಆದರ್ಶ ಪ್ರತಿನಿಧಿಗಳಾಗಿ ಚಿರತ್ವವನ್ನು ಪಡೆದಿವೆ. ತತ್ವವನ್ನಾಗಲಿ ಹೃದಯದ ಸೂಕ್ಷ್ಮ ಭಾವವನ್ನಾಗಲಿ ಚಿತ್ರಿಸುವಲ್ಲಿ ವಾಲ್ಮೀಕಿಗೆ ಅದ್ಭುತ ಸಾಮರ್ಥ್ಯವಿದೆ"[೧೧] "ಪ್ರಕೃತಿಯ ಸೌಂದರ್ಯವನ್ನಾಗಲಿ ಮಾನವ ಸ್ವಭಾವವನ್ನಾಗಲಿ ವರ್ಣಿಸುವುದರಲ್ಲಿ ವಾಲ್ಮೀಕಿ ತನ್ನ ಅದ್ಭುತವಾದ ಕೌಶಲವನ್ನು ಮೆರೆದಿದ್ದಾನೆ. ಅವನ ಮಹಾಪ್ರತಿಭೆಯಲ್ಲಿ ಸೃಷ್ಟಿಯ ಸಕಲ ವ್ಯಾಪಾರಗಳೂ ಪ್ರತಿಬಿಂಬಿತವಾಗುತ್ತವೆ. ಅವನ ವರ್ಣನೆ ಅವನ ರಸಹೃದಯವನ್ನು ತೋರುವ ಕೇಂದ್ರಗಳು."[೧೨] ಯಾವ ವರ್ಣನೆಯಲ್ಲಾಗಲಿ ಕವಿ ಪ್ರತಿಭೆ ಮುಗಿಲು ಮುಟ್ಟುತ್ತದೆ.[೧೩] "ವಾಲ್ಮೀಕಿ ಎಲ್ಲಿಯೂ ಧರ್ಮಬೋಧೆಯನ್ನು ನೇರವಾಗಿ ಮಾಡತೊಡಗುವುದಿಲ್ಲ. ಅಲ್ಲೊಮ್ಮೆ ಇಲ್ಲೊಮ್ಮೆ ಸಂದರ್ಭೋಚಿತವಾಗಿ ನಾಲ್ಕು ಮಾತುಗಳಲ್ಲಿ ಜೀವನದ ಅಶಾಶ್ವತೆಯನ್ನು ಹೇಳುವುದುಂಟು."[೧೪] "ವಾಲ್ಮೀಕಿ ಜೀವನವನ್ನು ತಿರಸ್ಕರಿಸಿ ನಿರಾಶೆಯನ್ನುಂಟುಮಾಡುವುದಿಲ್ಲ. ಎಲ್ಲ ಕರ್ಮಗಳ ಹಿಂದೆ ನಿಸ್ಸಂಗತೆ ಇರಬೇಕೆಂಬುದು ವಾಲ್ಮೀಕಿಯ ದರ್ಶನ. ವಾಲ್ಮೀಕಿ ಪ್ರಚಂಡ ಆಶಾವಾದಿ. ಎಲ್ಲರೂ ಕರ್ಮದಲ್ಲಿ ನಿರತರಾಗಬೇಕೆಂಬುದು ಅವನ ಸಂದೇಶ."[೧೫]

"ರಾಮನು ಮಾನವನೆಂಬುದನ್ನು ವಾಲ್ಮೀಕಿ ಮರೆಯಲಿಲ್ಲ. ರಾಮನಿಗೂ ಸಾಮಾನ್ಯರಿಗಿರುವ ಕೋಪತಾಪಗಳು ಬರಬಹುದು. ಆದರೆ ಸಾಮಾನ್ಯರಂತೆ ಉದ್ವೇಗಕ್ಕೆ ಒಳಗಾಗದೆ ಸಂಯಮದಿಂದಲೂ ವಿವೇಕದಿಂದಲೂ ಧರ್ಮಮಾರ್ಗದಲ್ಲಿ ನಡೆಯುವುದು ಅವನ ಸ್ವಭಾವ."[೧೬] "ಅಯೋಧ್ಯಾಕಾಂಡದಲ್ಲಿ ಬರುವ ರಾಮನ ಪಿತೃಭಕ್ತಿ, ಮಾತೃಪ್ರೇಮ, ಭ್ರಾತೃಪ್ರೇಮ, ದಾಂಪತ್ಯ ಜೀವನದ ಮಧುರ ಬಂಧನ ಮೊದಲಾದ ಜೀವನ ಚಿತ್ರಗಳು ಹೃದಯದ ಮೇಲೆ ಚಿರಮುದ್ರಿತವಾಗುತ್ತವೆ."[೧೭]

"ಸೌಂದರ್ಯ, ಮಾಧುರ್ಯ, ಸಹನೆ, ಕ್ಷಮಾಗುಣ, ವಿವೇಕ, ಧೈರ್ಯ ಪತಿಭಕ್ತಿ -ಇಂತಹ ಮಹಾಗುಣಗಳಿಂದ ಶೋಭಿಸುವ ಸೀತೆ ಭಾರತೀಯ ಸಂಸ್ಕೃತಿ ಇರುವವರೆಗೂ ಚಿರವಾಗಿರುವ ಆದರ್ಶ ಮಹಿಳೆ."[೧೮]

'ಜನಪ್ರಿಯ ವಾಲ್ಮೀಕಿ ರಾಮಾಯಣ' ಎಲ್ಲದರಲ್ಲಿಯೂ ವಾಲ್ಮೀಕಿ ರಾಮಾಯಣದ ಪಡಿನೆಳಲಾದ ಮೇಲೆ ಇದರ ಹೆಗ್ಗಳಿಕೆ ಏನು ಎಂಬ ಪ್ರಶ್ನೆ ಏಳುತ್ತದೆ. ಮೊದಲನೆಯ ಹೆಗ್ಗಳಿಕೆ ಎಂದರೆ ಜನಸಾಮಾನ್ಯ ದೂರವಾದ ದೇವಭಾಷೆಯಾದ ಸಂಸ್ಕೃತದಲ್ಲಿದ್ದ ಕಾವ್ಯವನ್ನು ಸರಳ ಸುಂದರ ಕನ್ನಡ ಭಾಷೆಯಲ್ಲಿ ಗದ್ಯದಲ್ಲಿ ಕೊಟ್ಟದ್ದು. ಜನಪ್ರಿಯ ವಾಲ್ಮೀಕಿ ರಾಮಾಯಣ'ವನ್ನು ಮೂಲ ವಾಲ್ಮೀಕಿ ರಾಮಾಯಣದೊಂದಿಗೆ ತೂಗಿ ನೋಡುವ ವೈದೃಷ್ಯ ನನಗಿಲ್ಲ. ಆದ್ದರಿಂದ ಇಲ್ಲಿ ನಾನು ಗುರುತಿಸುವ ಇತರ ಹೆಗ್ಗಳಿಕೆ ಅಥವಾ ಅಂಶಗಳು ಮೂಲದಲ್ಲಿಯೆ ಇರಬಹುದಾದರೂ ಅದರಿಂದ ಈ

ಕೃತಿಗೇನೂ ಕುಂದಿಲ್ಲ. ಮೊದಲನೆಯದಾಗಿ 'ಜನಪ್ರಿಯ ವಾಲ್ಮೀಕಿ ರಾಮಾಯಣದ'ಲ್ಲಿನ ಕನ್ನಡದ ಜಾಯಮಾನಕ್ಕೊಗ್ಗುವ ಹೊಸ ಹೊಸ ಪದ ಸೃಷ್ಟಿಗಳನ್ನು ಗಮನಿಸೋಣ:

ಎದೆಗುದಿಗ, ಅರೆಚಣ, ಕೊಡೆನೆಳಲು, ಅರಸೂರು, ಉರಿಗಂಬನಿ ...ಇಂತಹ ಅನೇಕ ಪದಗಳು ತದ್ಭವಗಳಾಗಿರಬಹುದು ಅಥವಾ ನೂತನ ಪದ ಸೃಷ್ಟಿಗಳಾಗಿರ-ಬಹುದು. ಪಂಡಿತನಿಗಾಗಲಿ ಸಾಮಾನ್ಯನಿಗಾಗಲಿ ಅರ್ಥವ್ಯಂಜನ ಮಾಡುವಲ್ಲಿ ಈ ಪದಗಳು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ಮೇಲೆ ಕೊಟ್ಟಿರುವ ಉದಾಹರಣೆಗಳೆಲ್ಲಾ ಅಚ್ಚ ಕನ್ನಡದ ಪದಗಳು. ಕೊಡೆನೆಳಲು ದಟ್ಟವಾದ ತಣ್ಣನೆಯ ನೆಳಲನ್ನು ಸೂಚಿಸುತ್ತದೆ. ಎದೆಯುರಿ, ಹೊಟ್ಟೆಯುರಿಯಂತೆ ಉರಿಗಂಬನಿ ಎಂಬ ಪದವಿದೆ. ದುಃಖಾಶ್ರು ಗೊತ್ತೇ ಹೊರತು ಉರಿಗಂಬನಿಯನ್ನು ಬಹುಶಃ ಯಾರೂ ಕಲ್ಪಿಸಲಾರರು. ಇಲ್ಲಿ ಉರಿಗಂಬನಿ ದುಃಖದ ಜೊತೆಗೆ ದ್ವೇಷ, ಅಸಹನೆ ಪ್ರಿಯರ ಅಗಲುವಿಕೆಯ ನೋವು ಮೊದಲಾದ ಅರ್ಥವನ್ನೂ ವ್ಯಂಜಿಸುತ್ತದೆ.

ಉಪಮಾನಗಳನ್ನು ಗ್ರಹಿಸುವಲ್ಲಿ ಆಗಬೇಕಾದ ಮಾನಸಿಕ ಕಾರ್ಯವನ್ನು ತಪ್ಪಿಸಿ ತಟಕ್ಕನೆ ಮನಸ್ಸಿಗೆ ಅರ್ಥವಿಶೇಷವನ್ನು ಹೊಳೆಯಿಸುವುದು ರೂಪಕದ ಕೆಲಸ. ಅಂತಹ ಕೆಲಸವನ್ನು ಇಲ್ಲಿ ಮೊಗದಾವರೆ, ಮಂಥರಧೀರ ಮೊದಲಾ ರೂಪಕಗಳು ಮಾಡುತ್ತವೆ. ಈ ರೂಪಕಗಳು ಯಾವುದೋ ಚಿತ್ರವನ್ನೊ ವ್ಯಕ್ತಿತ್ವವನ್ನೋ ಸಹೃದಯನ ಮುಂದೆ ತಟಕ್ಕನೆ ಸೃಷ್ಟಿಸುತ್ತವೆ. ಈ ರೂಪಕಗಳು ಬಹು ಸರಳವಾದ ರೂಪಕಗಳೆಂಬುದರಲ್ಲಿ ಅನುಮಾನವಿಲ್ಲ. ಆದರೆ ಈ ಕೃತಿ ಜನಸಾಮಾನ್ಯರಿಗೆ ಎಂಬುದನ್ನು ನಾವು ಮರೆಯುವಂತಿಲ್ಲ ಮತ್ತು ಇಂತಹ ರೂಪಕಗಳೇ ಉದ್ದಿಷ್ಟ ಕಾರ್ಯವನ್ನು ನೆರವೇರಿಸುವಲ್ಲಿ ಯಶಸ್ವಿಯಾಗಿವೆ.

ಅರ್ಥ ವ್ಯಂಜನಕ್ಕಾಗಿ ಗಾದೆಗಳು, ನಾಣ್ಣುಡಿಗಳು ಮತ್ತು ಲೋಕೋಕ್ತಿಗಳನ್ನು ಕವಿ ತಂದಿದ್ದಾನೆ. ಅವು ಕವಿಯ ವಿಸ್ತಾರವಾದ ಅನುಭವಕ್ಕೂ, ಸಮಾಜ ಪ್ರೇಮಕ್ಕೂ ಹಿಡಿದ ಕೈಗನ್ನಡಿಯಾಗಿವೆ.

ಗಾದೆಗಳು, ನಾಣ್ಣುಡಿಗಳು ಮತ್ತು ಲೋಕೋಕ್ತಿಗಳು :-

ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು. ಬೇವಿನ ಮರಕ್ಕೆ ಹಾಲು ಹೊಯ್ದರೆ ಅದರ ಕಹಿ ಹೋದೀತೆ? ಎತ್ತು ಹೊರುವ ಭಾರವನ್ನು ಕರು ಹೊರಬಲ್ಲುದೆ? ಕುದುರೆಗೆ ಸಮಾನವಾಗಿ ಕತ್ತೆ ಓಡಬಲ್ಲುದೆ? ಕಳಿತ ಹಣ್ಣು ಕೆಳಕ್ಕೆ ಬಿದ್ದುಹೋಗುವಂತೆ ಗಳಿತವಾದ ಶರೀರ ಬಿದ್ದು ಹೋಗಲೇಬೇಕು. ಸ್ಮಶಾನದ ಅಗ್ನಿಯನ್ನೆಂತೂ ಅಂತು ಅಲ್ಪವಾದ ಭೋಗಗಳಲ್ಲಿ ಮುಳುಗಿ ಹೋಗಿರುವ ರಾಜನನ್ನು

ಪ್ರಜೆಗಳು ಮನ್ನಿಸರು. ಸಾಯುವವನಿಗೆ ಔಷಧಿ ಸೇರದು. ವಿನಾಶಕಾಲದಲ್ಲಿ ಹಿತವಾದ ಮಾತು ಯಾರಿಗೂ ರುಚಿಸುವುದಿಲ್ಲ. ಪರಸ್ತ್ರೀಯರನ್ನು ಸತ್ಪುರುಷರು ಮಿತ್ರಭಾವದಿಂದ ಕಾಣುವುದರಲ್ಲಿ ದೋಷವಿಲ್ಲ. ಮಾಡಿದ ಉಪಕಾರವನ್ನು ಮರೆತ ಪಾಪಕ್ಕೆ ಯಾವ ಪ್ರಾಯಶ್ಚಿತ್ತವೂ ಇರದು. ಅಪರಾಧಿಗಳು ಸ್ವಾಮಿಯ ಬಳಿಗೆ ಹೋಗುವುದು ಉಚಿತವಲ್ಲ. ಬಲಿಷ್ಠರೊಡನೆ ಬಲಹೀನರು ವೈರವನ್ನು ಕಟ್ಟಿಕೊಳ್ಳಕೂಡದು. ದೈವವೇ ಪ್ರಾಣಿಗಳ ಕ್ಷೇಮವನ್ನು ವಿಚಾರಿಸುವುದು. ಚಿಂತೆ ಮನುಷ್ಯನನ್ನು ಹಾಳುಮಾಡುತ್ತದೆ. ಯೌವನ ಜಲಪ್ರವಾಹದಂತೆ, ಒಮ್ಮೆ ಕಳೆದುಹೋದರೆ ಮತ್ತೆ ಬಂದೀತೆ? ಹಿತನುಡಿಗಳನ್ನು ಹೇಳಿದಷ್ಟೂ ತಿರಸ್ಕರಿಸುತ್ತಾ ಹೋಗುವುದು ಸ್ತ್ರೀಯರ ಸ್ವಭಾವ. ಕಾಮ ಹುಟ್ಟಿದ ಕಡೆ ದಯಾ ಪ್ರೇಮಗಳು ಹುಟ್ಟುತ್ತವೆ. ನರಿಗಳು ಬಳ್ಳಿಕ್ಕಿದರೆ ದೇವಲೋಕ ಹಾಳೆ. ಕುಂಬಾರನಿಗೆ ಒಂದು ವರ್ಷ ದೊಣ್ಣೆಗೆ ಒಂದು ನಿಮಿಷ. ಹಾವಿನ ಹೆಜ್ಜೆಯನ್ನು ಹಾವೇ ಬಲ್ಲುದು. ದೂತನಿಗೆ ಸ್ವಂತ ಮಾತೆಲ್ಲಿ ಬಂತು? ಮೃತ್ಯುಮುಖರಾದವರು ಮಿತ್ರರ ಹಿತವಚನವನ್ನು ಕೇಳರು. ಆಪತ್ಕಾಲದಲ್ಲಿ ಆದವನೆ ನೆಂಟನಷ್ಟೆ! ಮಾತಿನ ಮಲ್ಲರು ಮಹನೀಯರಾಗುತ್ತಾರೆಯೆ? ಲೋಕದಲ್ಲಿ ಹೆಂಡತಿ ಹೋದರೆ ಮತ್ತೊಬ್ಬ ಹೆಂಡತಿ ದೊರೆತಾಳು, ಆದರೆ ತಮ್ಮ ಹೋದರೆ ಪುನಃ ತಮ್ಮ ದೊರೆತಾನೆ? ವೃಷಭ ಹೊರುವ ಭಾರವನ್ನು ಎಳಗರು ಹೇಗೆ ಹೊರಬಲ್ಲುದು?

ಇಂತಹ ಗಾದೆಗಳು, ನಾಣ್ಣುಡಿಗಳು ಮತ್ತು ಲೋಕೋಕ್ತಿಗಳು ಕಾವ್ಯದ ಉದ್ದಗಲಕ್ಕೂ ಹರಿದು ಕಾವ್ಯದ ರಸಗ್ರಹಣಕ್ಕೆ ನೆರವಾಗಿವೆ. ಇವುಗಳಲ್ಲಿ ಅನುಭವಾಮೃತವಿದೆ. ಸಮಾಜ ಪರಿವೀಕ್ಷಣೆಯಿಂದ ಬಂದ ಅನುಭವದ ಮಾತಿದೆ, ನಿಷ್ಠುರ ಸತ್ಯವಿದೆ.

ಕಾವ್ಯದಲ್ಲಿ ನೀತಿಗಾಗಿ ನೀತಿ ಎಲ್ಲಿಯೂ ಬಂದಿಲ್ಲ. ಔಚಿತ್ಯಪೂರ್ಣವಾಗಿ ರಾಮಾಯಣ ಕಥೆಯಲ್ಲಿ ಬಂದಿರುವ ನೀತಿಯನ್ನು ಅಲ್ಲಿಂದ ತೆಗೆದು ಪ್ರತ್ಯೇಕಿಸಿಟ್ಟರೂ ಅದು ಸ್ವಯಂಪೂರ್ಣವಾಗಿ, ಅರ್ಥಪೂರ್ಣವಾಗಿ, ಸಾರ್ವಕಾಲಿಕವಾಗಿ ಕಂಡುಬರುತ್ತದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸುತ್ತೇನೆ.

ಉತ್ಸಾಹವೇ ಸಮಸ್ತ ಸಂಪತ್ತಿಗೆ ಮೂಲ. ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆಳೆಯದೆ ಮುನ್ನುಗ್ಗಿ ಕೆಲಸಮಾಡುವುದೀಗ (ದೇ) ಧೀರನ ಲಕ್ಷಣ. ಆತ್ಮಹತ್ಯೆ ಹೇಡಿತನ. ಜೀವನವೊಂದಿದ್ದರೆ ಇಂದಲ್ಲ ನಾಳೆ ಶುಭವನ್ನು ಕಂಡೇನು!

ಪರಸ್ತ್ರೀಯನ್ನು ಕಾಮಿಸಿದವನು ಇಹಪರಗಳೆರಡರಲ್ಲಿಯೂ ಅಧೋಗತಿಗೆ ಇಳಿದು ಹೋಗಬೇಕಾಗುತ್ತದೆ.

ಕಾಮಿಸದವಳೊಡನೆ ಭೋಗ ಸುಖವನ್ನು ಅಪೇಕ್ಷಿಸುವುದು ವ್ಯಥಾಶ್ರಮ. ತಾನಾಗಿಯೆ ಬಯಸಿ ಬಂದವಳೊಡನೆ ಅನುಭವಿಸುವ ಭೋಗ ಸುಖವೆ ಅತ್ಯಂತ ಶ್ರೇಯಷ್ಕರವಾದುದು.

ಅತಿಯಾಗಿ ಯಾವುದನ್ನೂ ಮಾಡುವುದು ಅವಿವೇಕ.

ಯೌವನ ಅಸ್ಥಿರವಾದುದು. ಅದು ಕಳೆದು ಹೋಗುವುದಕ್ಕೆ ಮೊದಲೇ ಸಮಸ್ತ ಸುಖಗಳನ್ನು ಅನುಭವಿಸುವುದು ವಿವೇಕಿಯ ಲಕ್ಷಣ.

ಪ್ರಿಯವಸ್ತುವಿರುವವರೆಗೆ ದುಃಖ ತಪ್ಪುವುದಿಲ್ಲ; ಭಯವೂ ಅಧಿಕ. ಪ್ರಿಯಾ ಪ್ರಿಯಗಳನ್ನು ತೊರೆದ ಮಹಾತ್ಮರೇ ಧನ್ಯರು.

ಮನುಷ್ಯ ಬದುಕಿದ್ದರೆ ನೂರುವರ್ಷಕ್ಕಾದರೂ ಒಮ್ಮೆ ಸುಖಸಮಾಚಾರವನ್ನು ಕೇಳುತ್ತಾನೆ.

ಯಾವುದಕ್ಕೂ ಕಾಲಬರಬೇಕು.

ಬಲವದ್ವಿರೋಧ ಬೇಡ.

ಉದ್ಯೋಗ ಹೀನರಾಗಿ ಕ್ಷತ್ರಿಯರು ಕುಳಿತುಬಿಡುವುದು ಯೋಗ್ಯವಲ್ಲ.

ಕೋಪವಿಲ್ಲದಿರುವಿಕೆ, ಸಹನೆ, ಒಳ್ಳೆಯ ಮಾತುಗಳನಾಡುವುದು ಇವೇ ಮೊದಲಾದ ಸತ್ಪುರುಷರ ಲಕ್ಷಣಗಳನ್ನು ದುಷ್ಟರಾದವರು ಶಕ್ತಿಹೀನತೆಯೆಂದು ತಿಳಿಯುತ್ತಾರೆ. ದುಷ್ಟನೂ ದಯಾ ಶೂನ್ಯನೂ ಆದವನನ್ನೇ ಸತ್ಪುರುಷನೆಂದು ಲೋಕ ಗೌರವಿಸುತ್ತದೆ. ಯಶಸ್ಸು, ರಣದಲ್ಲಿ ಜಯ ಇವುಗಳನ್ನು ಒಳ್ಳೆಯತನದಿಂದ ಹೊಂದಲು ಈ ಲೋಕದಲ್ಲಿ ಸಾಧ್ಯವಿಲ್ಲ.

ಭಯಪಟ್ಟವರನ್ನೂ, ಆಯುಧರಹಿತರನ್ನೂ ದೂರತನ್ನೂ ಬಂಧನಕ್ಕೊಳ -ಗಾದವರನ್ನೂ ಕೊಲ್ಲುವುದು ಧರ್ಮವಲ್ಲ.

ಬಲಹೀನನಾದವನು ಬಲವಂತನೊಡನೆ ಸಂಧಿಮಾಡಿಕೊಳ್ಳುವುದು ಉತ್ತಮ-ವಾದ ಮಾರ್ಗ.

ಸತ್ಯವಂತರಿಗೆ ಅಪಮೃತ್ಯುವಿನ ಭಯವಿಲ್ಲ.

ಯುದ್ಧಕಾಲದಲ್ಲಿ ಮರಣವುಂಟಾದರೆ ಅದಕ್ಕಿಂತಲೂ ಮಿಗಿಲಾದ ಶ್ರೇಯಸ್ಸು ಮತ್ತೇನಿದೆ.

ಹಗೆತನವೇನಿದ್ದರೂ ಶತ್ರು ಮಡಿಯುವವರೆಗೆ.

ಸ್ತ್ರೀಯರಿಗೆ ನಡತೆಯೆಂಬುದೆ ಆಭರಣವೆ ಹೊರತು ಬೇರೆಯ ಹೊದಿಕೆಗಳೂ ಆಭರಣಗಳೂ ಅರ್ಥವಿಲ್ಲದವು.

ದುಃಸ್ಥಿತಿಯಲ್ಲಿರುವಾಗ ಸ್ತ್ರೀಯರನ್ನು ಪರರು ನೋಡುವುದರಿಂದ ದೋಷವೇನೂ ಇಲ್ಲ.

ಈ ಎಲ್ಲ ನೀತಿಗಳೂ ಸಾರ್ವಕಾಲಿಕವಾಗಿ ಇಂದಿಗೂ ಸಲ್ಲುತ್ತವೆಂಬುದರಲ್ಲಿ ಸಂದೇಹವಿಲ್ಲ. ಈ ನೀತಿ ಕಾವ್ಯದಲ್ಲಿ ನೀತಿಗಾಗಿಯೆ ಬರದೆ ಹೂವಿನೊಡನೆ ಪರಿಮಳವಿರುವಂತೆ ಕಾವ್ಯಭಾಗದಲ್ಲಿ ಔಚಿತ್ಯಪೂರ್ಣವಾಗಿ ಬಂದು ಕಾವ್ಯದ ಸೊಗಸನ್ನು ಮತ್ತಷ್ಟು ಹೆಚ್ಚಿಸಿವೆ.

ಜನಪ್ರಿಯ ವಾಲ್ಮೀಕಿ ರಾಮಾಯಣದಲ್ಲಿ ಬರುವ ಉಪಮೆಗಳು ತುಂಬ ಚಿಕ್ಕವಾಗಿದ್ದು ಅರ್ಥಪೂರ್ಣವಾಗಿವೆ. ಈ ಉಪಮೆಗಳಿಗೆ ಹೊರತಾದ ವಿಷಯ ಯಾವುದೂ ಇಲ್ಲವಾದರೂ ಉಪಮಾನ ಉಪಮೇಯಗಳಲ್ಲಿ ಪ್ರಕೃತಿಯದೇ ಮೇಲುಗೈ. ಅವುಗಳ ಸೊಗಸನ್ನು ಓದಿಯೇ ಸವಿಯಬೇಕು. ಕೆಲವು ಉಪಮೆಗಳನ್ನು ಇಲ್ಲಿ ಉದಾಹರಿಸಿದ್ದೇನೆ.

ಉಪಮೆಗಳು :

ಪುಣ್ಯಕ್ಷೀಣೆಸಿ ಸ್ವರ್ಗಚ್ಯುತಳಾದ ಕಿನ್ನರಿಯಂತೆ, ಮುರಿದು ಬಿಸುಟ ಎಳೆವಳ್ಳಿಯಂತೆ, ಚಿತ್ತಾರ ನಕ್ಷತ್ರದೊಡಗೂಡಿದ ಚಂದ್ರನಂತೆ, ಹೆಣ್ಣು ಕುದುರೆ ಮರಿಯ ಬಳಿಗೆ ಧಾವಿಸುವಂತೆ, ಬುಡ ಕಡಿದ ಬಾಳೆಯ ಮರದಂತೆ, ಊಷರ ಕ್ಷೇತ್ರದಲ್ಲಿ ಬಿತ್ತಿದ ಬೀಜದಂತೆ, ಕರುವಿನ ಮೇಲಿನ ವಾತ್ಸಲ್ಯದಿಂದ ಹಸು ಅದನ್ನು ಅನುಸರಿಸುವಂತೆ, ಬುಡಕಡಿದ ಮರದಂತೆ, ಪೊರೆಬಿಟ್ಟ ಹಾವಿನಂತೆ, ಮೇಘವು ಪರ್ವತದ ಮೇಲೆ ಮಳೆಗರೆಯುವಂತೆ, ಹೆದರುವವನ ಮೇಲೆ ಕಪ್ಪೆಯನ್ನೆಸೆದಂತೆ, ಸುಟ್ಟ ಹುಣ್ಣಿನ ಮೇಲೆ ಉಪ್ಪು ಇಟ್ಟಂತೆ, ಗಾಯದ ಮೇಲೆ ಸೂಜಿಯಿಂದ ಚುಚ್ಚಿದಂತೆ, ಹಗ್ಗಗಳಿಂದ ಬಂಧಿತಳಾದ ಹೆಣ್ಣು ಕೋತಿಯಂತೆ, ಬಿಸಿಲಿನ ಬೇಗೆಯಿಂದ ಬಾಡಿದ ಕಮಲದಂತೆ, ಮುಗಿಲ ಮುಚ್ಚಿದ ಚಂದ್ರನಂತೆ, ಕೊಟ್ಟಸಾಲದ ಹಣವನ್ನು ಹಿಂಪಡೆಯಲೆಳಸುವ ಬ್ರಾಹ್ಮಣನಂತೆ, ಸೂರ್ಯನಿಲ್ಲದ ಹಗಲಿನಂತೆ, ಗರ್ಭದಲ್ಲಿರುವ ಮಗುವನ್ನು ತಾಯಿ ಕಾಪಾಡುವಂತೆ, ಸರ್ಪವು ಪೊರೆಯನ್ನು ಬಿಡುವಂತೆ, ಮೇರು ಪರ್ವತವನ್ನು ಸೂರ್ಯನ ಕಾಂತಿ ಸೇವಿಸುವಂತೆ, ಮಳೆಗಾಲದ ಮೇಘದಂತೆ, ಬೇರುಸಹಿತ ಕತ್ತರಿಸಿ ಹೋದ ಮರದಂತೆ, ಉಕ್ಕಿದ್ದ ಸಾಗರದಂತೆ, ಪ್ರಳಯ ಕಾಲದ

ರುದ್ರನಂತೆ, ತಾರಾಗಣದ ನಡುವೆ ಇರುವ ಅಂಗಾರಕನಂತೆ, ಸಾಗರವು ನದಿಗಳನ್ನು ತಡೆಯುವಂತೆ, ಬಿರುಗಾಳಿಗೆ ಸಿಲುಕಿದ ಬಾಳೆಯ ಮರದಂತೆ, ಕಡಿವಡದ ಮದಗಜದಂತೆ, ಹುಲಿಗೆ ಹೆದರಿದ ಹುಲ್ಲೆಗಳಂತೆ, ಚಂದ್ರನನ್ನು ಅಟ್ಟಿಬರುವ ರಾಹುವಿನಂತೆ, ಹುತ್ತದಿಂದ ಬರುವ ಕೃಷ್ಣಸರ್ಪದಂತೆ, ಉರಿಯುವ ದರ್ಭೆಯ ಕಾಂತಿ ತನ್ನನ್ನೇ ತಾನು ನಾಶಮಾಡಿಕೊಳ್ಳುವಂತೆ, ರುದ್ರನಿಂದ ದಹಿಸಲ್ಪಟ್ಟ ಅಂಧಕಾಸುರನಂತೆ, ದೇವತೆಗಳಿಂದ ಸುತ್ತುವರಿದ ಇಂದ್ರನಂತೆ, ನದಿಯ ಕೆಸರನ್ನು ಕಂಡು ಓಡಿಬರುವ ಆನೆಗಳಂತೆ, ಮಿಂಚುಗಳಿಂದ ಕೂಡಿದ ಮೇಘದಂತೆ, ರಾಹು ಚಂದ್ರನ ಕಾಂತಿಯನ್ನು ಅಪಹರಿಸುವಂತೆ, ಬಂಜರು ಭೂಮಿಯಲ್ಲಿ ನೆಟ್ಟ ಬೀಜದಂತೆ, ಸಿಂಹಗಳಿಗೆ ಸ್ವಾಧೀನವಾದ ಮದಿಸಿದ ಎತ್ತಿನಂತೆ, ಚಂದ್ರ ಸೂರ್ಯರಿಲ್ಲದ ಸಂಧ್ಯೆಯ ಬಳಿಗೆ ಕತ್ತಲು ಬರುವಂತೆ, ನರಿ ಸಿಂಹಿಣಿಯನ್ನು ಬಯಸಿದಂತೆ, ಬಿರುಗಾಳಿಗೆ ಸಿಲುಕಿದ ಬಾಳೆಯಂತೆ, ಬೀಸಣಿಗೆಯಿಂದ ಹಣ್ಣನ್ನು ಕೆಡಹುವಂತೆ, ಬೆಂಕಿಯಲ್ಲಿ ಸುಟ್ಟ ಹಕ್ಕಿಯಂತೆ, ರಾಹುಗ್ರಸ್ಥ ಚಂದ್ರನಂತೆ, ಮಂಜುಮುಸುಕಿದ ಚಂದ್ರನಂತೆ, ಉದಯಾಚಲದಿಂದ ಹೊರಬರುವ ಸೂರ್ಯನಂತೆ, ತಾರೆಗಳ ಹಾರದಿಂದ ಅಲಂಕೃತನಾದ ಚಂದ್ರನಂತೆ, ಹುಲ್ಲುಮುಚ್ಚಿದ ಬಾವಿಯಂತೆ, ಬೂಟಮುಚ್ಚಿದ ಕೆಂಡದಂತೆ, ಆಕಾಶದಿಂದ ಬಿದ್ದ ನಕ್ಷತ್ರದಂತೆ, ರಾಹುಹಿಡಿದ ಚಂದ್ರನಂತೆ, ಸಿಂಹದಿಂದ ಕೆಳಗೆ ಬೀಳಿಸಲ್ಪಟ್ಟ ಗೂಳಿಯಂತೆ, ಕಡಿದು ಹಾಕಿದ ದೊಡ್ಡ ವೃಕ್ಷವನ್ನು ಆಶ್ರಯಿಸಿದ ಲತೆಯಂತೆ, ಗುಹೆಯಲ್ಲಿ ಅಡಗಿರುವ ಸರ್ಪವನ್ನು ಹೊರಗೆಳೆಯುವಂತೆ, ತಾವರೆಯ ಮೊಗ್ಗುಗಳಿಂದ ಕಿಕ್ಕಿರಿದ ಕೊಳದಂತೆ, ಕೋಪಗೊಂಡ ಹಾವು ಎಳೆಯ ಮಗುವನ್ನು ಕಚ್ಚುವಂತೆ, ಮಹಾ ಧನುಸ್ಸಿನಿಂದ ಹೊರಡುವ ದಿವ್ಯ ಮಾರ್ಗಣದಂತೆ, ಎದಿರುಗಾಳಿಯಿಂದ ತೊಂದರೆಗೊಳಗಾದ ಹಡಗಿನಂತೆ, ಹೂವರಳಿವ ಬಳ್ಳಿಗಳನ್ನು ಕಾಡಾನೆ ಕಿತ್ತೆಸೆದಂತೆ, ಮಿಂಚಿನೊಡಗೂಡಿ ಸಂಜೆಗೆಂಪಿನಿಂದ ಹೊಳೆಯುವ ಮುಗಿಲಿನಂತೆ, ತಾವರೆ ಬಳ್ಳಿಯೊಂದು ತಪ್ಪವನ್ನು ಆಶ್ರಯಿಸುವಂತೆ, ಗೂಳಿಯ ಸುತ್ತಲೂ ಮಲಗಿರುವ ಗೋವುಗಳಂತೆ, ಮುಗಿಲಿನಿಂದ ಮುಗಿಲಿಗೆ ನೆಗೆಯುವ ಮಿಂಚುಬಳ್ಳಿಯಂತೆ, ಬಿಲ್ಲಿಗೆ ಹೂಡಿದ ಅಂಬು ಹಾರಿಬರುವಂತೆ, ಜೂಜಲ್ಲಿ ಸರ್ವಸ್ವವನ್ನೂ ಸೋತು ನಿರ್ಧನಿಕನಾಗಿ ನಿಂತ ಜೂಜಾಳಿನಂತೆ, ಕಿತ್ತು ಬಿಸಲಿಗೆಳೆದ ಕಮಲದಂತೆ, ನಾಯಿಗಳು ಮುತ್ತಿಕೊಂಡಿರುವ ಹುಲ್ಲೆಯಂತೆ, ಪೂರ್ಣ ಪ್ರಮಾಣದಿಂದ ಕೂಡಿದ ಗಂಗಾನದಿಯಂತೆ, ಕ್ಷೀಣ ಪುಣ್ಯದಿಂದ ನೆಲಕ್ಕುದುರಿದ ನಕ್ಷತ್ರದಂತೆ, ಕುಸುಮ ಚಾಪವನ್ನು ತೊರೆದು ಬಂದಿರುವ ಮದನನಂತೆ, ಬಿರುಗಾಳಿಗೆ ಸಿಕ್ಕ ಬಾಳೆಯ ಗಿಡದಂತೆ, ಬತ್ತಿದ ತೊರೆಯಂತೆ, ಗರುಡನು ಹಾವನ್ನು ಸೆಳೆದೊಯ್ಯುವಂತೆ, ಕಾಸಿದ ಸೀಸವನ್ನು ಕಿವಿಗೆಹೊಯ್ದಂತೆ, ಪಾಪಿ ಮುಕ್ತಿಯನ್ನು ಬಯಸಿದಂತೆ, ಜ್ಞಾನಿಗೆ ವಿದ್ಯೆ

ಹೇಗೋ ಹಾಗೆ, ಹೆಬ್ಬುಲಿಯ ವಾಸನೆಯನ್ನು ಕಂಡ ನಾಯಿಯಂತೆ, ಮರವೆಷ್ಟು ದೊಡ್ಡದಾದರೂ ಸಿಡಿಲಿಗೆ ಸಿಕ್ಕಿ ಹೇಗೆ ಬದುಕಲಾರದೋ ಹಾಗೆ, ಸಾರಥಿ ಹದ್ದುಮೀರಿದ ಕುದುರೆಗಳನ್ನು ಬಿಗಿಹಿಡಿದಂತೆ, ಮದಗಜವನ್ನು ಕೆಣಕಿದ ಮೊಲದಂತೆ, ಸ್ಮಶಾನದಲ್ಲಿನ ಮಹಾವೃಕ್ಷದಂತೆ, ಸೂರ್ಯನ ಸಂಧ್ಯಾ ಕಾಲದ ರೂಪಳಿಸುವಂತೆ, ಹಿಂಡುತಪ್ಪಿ ತೋಳಗಳ ಗುಂಪಿಗೆ ಸಿಕ್ಕಿ ಬಿದ್ದಿದ್ದ ಜಿಂಕೆಯ ಮರಿಯಂತೆ, ಗಂಡ ಸತ್ತ ವಿಧವೆಯಂತೆ, ಸೂರ್ಯನೊಡನೆ ಬೆಳಕು ಸೇರುವಂತೆ, ಮೀನು ಕದಲಿಸಿದ ಕಮಲದಂತೆ, ರಾಹು ಮುಕ್ತವಾದ ಚಂದ್ರನಂತೆ, ಉದಯ ಪರ್ವತದಲ್ಲಿನ ಸೂರ್ಯನಂತೆ, ಮಿಂಚಿನ ಬಳ್ಳಿಯಂತೆ, ಕಮಲದಳದಲ್ಲಿ ಬಿದ್ದ ಜಲಬಿಂದು ಗಾಳಿಯಿಂದ ಚಲಿಸಿ ಕೆಳಗೆ ಬೀಳುವಂತೆ, ಕಾಳ್ಗಿಚ್ಚಿನ ಮೇಲೆ ಮಿಡತೆಗಳು ಬಂದು ಬಿದ್ದಂತೆ, ಉದಿಸುವ ಸೂರ್ಯನಂತೆ, ಪ್ರಜಾಕ್ಷಯಕ್ಕಾಗಿ ಹೊರಟ ಪ್ರಳಯ ರುದ್ರನಂತೆ, ಮೇಘವು ಬೆಟ್ಟದಮೇಲೆ ಮಳೆಸುರಿಸುವಂತೆ, ಹುಲ್ಲುಮುಚ್ಚಿದ ಹಳೆಯ ಬಾವಿಯ ಮೇಲೆ ಅವಿವೇಕದಿಂದ ಕಾಡಾನೆ ನುಗ್ಗುವಂತೆ, ತಪೋಮಹಿಮೆಯಿಂದ ದೇವಲೋಕವನ್ನು ಅದರುವ ಮಹರ್ಷಿಯಂತೆ, ಗರುಡನು ಮಹಾಸರ್ಪವನ್ನು ಎಳೆಯುವಂತೆ, ಮಧ್ಯಾಹ್ನದ ಸೂರ್ಯನಂತೆ, ಮಂದರಗಿರಿ ಶಿಖರದಮೇಲೆ ಮಂಡಿಸಿರುವ ಮೇಘದಂತೆ, ಕಡ್ಡಿ ಮುರಿದು ಕೈಗೆ ಕೊಟ್ಟಂತೆ, ಪುಣ್ಯವು ಕ್ಷಯಿಸಿದ ಮೇಲೆ ಭೂಮಿಗುರುಳುವ ಸಿದ್ಧಪುರುಷರ ವಿಮಾನದಂತೆ, ಮೇಘದಿಂದ ಬೀಳುವ ಮಿಂಚಂತೆ, ಹೆಣ್ಣು ಜಿಂಕೆಯನ್ನು ಮುತ್ತಿದ ಹುಲಿಗಳ ತಂಡದಂತೆ, ಕರುವನ್ನು ಕಂಡೊಡನೆಯ ಆಕಳಿಗೆ ಕ್ಷೀರ ಪ್ರವಿಸುವಂತೆ, ಮಾಡಿದ ಉಪಕಾರವನ್ನು ಮರೆತವನು ಸ್ನೇಹವನ್ನು ತೊರೆಯುವಂತೆ, ಐರಾವತವನ್ನೇರಿದ ಇಂದ್ರನಂತೆ, ಶುಕ್ರಬೃಹಸ್ಪತಿಗಳಿಂದ ಕೂಡಿದ ಸೂರ್ಯಚಂದ್ರನಂತೆ, ಕರುವಿಲ್ಲದ ತಾಯಿಯಂತೆ, ಹೂ ಬಿಟ್ಟಿರುವ ಮುತ್ತುಗದ ಮರದಂತೆ, ಈಶ್ವರನೊಡನೆ ಯುದ್ಧಮಾಡುವ ಯಮನಂತೆ, ಬೆಂಕಿಯಲ್ಲಿ ಬೀಳುವ ಹುಳುಗಳಂತೆ, ಧ್ವಜವಿಲ್ಲದ ನಾವೆಯಂತೆ, ಕೋಪಗೊಂಡ ಹಾವಿನಂತೆ, ಪ್ರಳಯ ಕಾಲದಲ್ಲಿ ಪಾಶವನ್ನು ಧರಿಸಿದ ಯಮನಂತೆ, ವಾಯುವಿನಿಂದ ಚೆದರಿಸಲ್ಪಟ್ಟ ಮೇಘದಂತೆ, ದೇವೇಂದ್ರನು ವಜ್ರಾಯುಧದಿಂದ ವೃತಾಸುರನನ್ನು ಹೊಡೆದಂತೆ, ಸಿಂಹವನ್ನು ಕಂಡ ಆನೆಗಳಂತೆ, ವೃತಾಸುರ ದೇವೇಂದ್ರರಂತೆ, ಭೂತಗಳಿಂದ ಸುತ್ತುವರಿದ ರುದ್ರನಂತೆ, ಮೋಡವನ್ನು ಹೊದ್ದ ಪರ್ವತದಂತೆ, ಅಗ್ನಿದೇವನು ವನವನ್ನು ಸುಡುವಂತೆ, ಪ್ರಳಯಕಾಲದ ಮೃತ್ಯುವಿನಂತೆ, ಚಂದ್ರನನ್ನು ನುಂಗಬರುವ ರಾಹುವಿನಂತೆ, ಮುಗಿಲ ಮಧ್ಯದಿಂದ ಹೊರಬಂದ ಸೂರ್ಯನಂತೆ, ಬಿರುಗಾಳಿಗೆ ಇದಿರಾದ ಮೋಡಗಳಂತೆ, ಕಳಿತ ತಾಳೆಯ ಹಣ್ಣನ್ನು ತೊಟ್ಟಿನಿಂದ ಕೆಡವುವಂತೆ, ನೆಲ ಬೆಸಲಾದಂತೆ, ಮಾರಿಯ ಇದಿರಿನ ಕುರಿಗಳಂತೆ, ಉರಿಯುಡುಗಿದ ಬೆಂಕಿಯಂತೆ,

ಮೋಡಮುಚ್ಚಿದ ದಿನಕರನಂತೆ, ಹತ್ತಿರಾಶಿಯನ್ನು ಸುಡುವ ಅಗ್ನಿಯಂತೆ, ಮೇಘಗಳಿಂದ ಸುರಿವ ಮಳೆಯಂತೆ, ಅಂತರಿಕ್ಷದಿಂದ ಉದುರುವ ನಕ್ಷತ್ರಗಳಂತೆ, ಕಾಳ್ಗಿಚ್ಚಿಗೆ ಸಿಕ್ಕಿದ ಕಾಡಾನೆಗಳಂತೆ, ಬೆಂಕಿಯನ್ನು ಬಯಸಿ ಬರುವ ಪತಂಗದಂತೆ, ಬರೆದಿಟ್ಟ ಚಿತ್ರದಂತೆ, ನೀರು ತುಂಬಿದ ಮೋಡಗಳಂತೆ, "ಗಗನಕೆಣೆ ಗಗನವೆ, ಕಡಲಿಗೆ ಹೋಲಿಕೆ ಕಡಲೆ", ಮುರಿದ ಬಳ್ಳಿಗಳಂತೆ, ಶಚೀದೇವಿ ದೇವೇಂದ್ರನನ್ನು ಕಾಣುವಂತೆ, ಆನೆಯ ಸೊಂಡಿಲಿಗೆ ಸಿಕ್ಕ ಸಲಕೀ ವೃಕ್ಷದಂತೆ, ಸೂರ್ಯನಿಗೆ ಪ್ರಭಾದೇವಿಯಂತೆ, ನಕ್ಷತ್ರಗಳೊಡಗೂಡಿದ ಪೂರ್ಣ ಚಂದ್ರನಂತೆ,...

ಮೇಲೆ ಉದಾಹರಿಸಿರುವ ಉಪಮಾನಗಳು ಪುಟ್ಟ ಪುಟ್ಟವು. ಅನೇಕ ಉಪಮಾನಗಳು ಪುನಃ ಪುನಃ ಉಪಯೋಗಿಸಿದಂತೆ ಮೇಲುನೋಟಕ್ಕೆ ತೋರುತ್ತದೆ. ಆದರೆ ಸೂಕ್ಷ್ಮಸಂವೇದನಾಶೀಲನಾದ ಸಹೃದಯನಿಗೆ ಒಂದೇ ತೆರನಾದ ಆ ಉಪಮಾನಗಳಲ್ಲಿರುವ ವ್ಯತ್ಯಾಸ ಕಾಣಬರದೆ ಇಲ್ಲ. ಈ ಉಪಮಾನಗಳು ಆಯಾ ಪ್ರಸಂಗಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತವೆ ಅಷ್ಟೇ ಅಲ್ಲ ಆ ಉಪಮಾನ ಉಪಮೇಯಗಳು ತಾವು ಪ್ರತಿನಿಧಿಸುವ ವಸ್ತು ಅಥವಾ ವ್ಯಕ್ತಿಯ ಉತ್ಕರ್ಷ ಅಥವಾ ಅವನತಿಯನ್ನು ಸಮರ್ಥವಾಗಿ ಧ್ವನಿಸುತ್ತವೆ.

"ಜನಪ್ರಿಯ ವಾಲ್ಮೀಕಿ ರಾಮಾಯಣ... ಮೂಲ ವಾಲ್ಮೀಕಿ ರಾಮಾಯಣದ ಸರಳ ಸುಂದರ ನಿರೂಪಣೆ. ಇದರಲ್ಲಿ ಕುವೆಂಪು ಅವರ ಗದ್ಯ ಒಂದು ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಹೊಸದಾಗಿ ಓದುಕಲಿತವರ ಉಪಯೋಗಕ್ಕೆಂದು ಮೂಲತಃ ಇದನ್ನು ಪ್ರಕಟಿಸಲಾಗಿದ್ದರೂ ಇದು ರಾಮಾಯಣ ಪ್ರಿಯರೆಲ್ಲರ ಮೆಚ್ಚುಗೆಗೆ ಪಾತ್ರವಾಗಿ ಅನೇಕ ಮುದ್ರಣಗಳನ್ನು ಕಂಡಿದೆ. ಎ.ಆರ್. ಕೃಷ್ಣಶಾಸ್ತ್ರಿಗಳ 'ವಚನ ಭಾರತ' ಮತ್ತು ಕುವೆಂಪು ಅವರ 'ಜನಪ್ರಿಯ ವಾಲ್ಮೀಕಿ ರಾಮಾಯಣ' ಆಧುನಿಕ ಸಾಹಿತ್ಯದ ಎರಡು ಚಿರಕೃತಿಗಳಾಗಿವೆ"[೧೯] ಎಂಬ ಡಾ. ಹಾ.ಮಾ. ನಾಯಕರ ಅಭಿಪ್ರಾಯ ಸರ್ವಸಮ್ಮತವಾದುದು. 'ಜನಪ್ರಿಯ ವಾಲ್ಮೀಕಿ ರಾಮಾಯಣ'ದ ಗದ್ಯದ ಒಂದು ತುಣಕನ್ನು ಇಲ್ಲಿ ಸವಿಯೋಣ-

"ಶಬರಿ ದಿವ್ಯವಾದ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೋದಮೇಲೆ ರಾಮ ಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಸುಗ್ರೀವನೆಂಬ ಕಪಿಶ್ರೇಷ್ಠನಿದ್ದ ಋಷ್ಯಮೂಕ ಪರ್ವತದ ಸಮೀಪಕ್ಕೆ ಬಂದರು. ಆ ಪರ್ವತದ ಸಮೀಪದಲ್ಲಿಯೆ ತಾವರೆಗಳಿಂದಲೂ ಕನ್ನೈದಿಲೆಗಳಿಂದಲೂ ಮೀನುಗಳಿಂದಲೂ ಕೂಡಿ ಶೋಭಿಸುತ್ತಿದ್ದ ಪಂಪಾಸರೋವರ -ವನ್ನು ಆ ಅಣ್ಣತಂಮದಿರು ನೋಡಿದರು. ನಿರ್ಮಲವಾದ ಆ ಸರೋವರವನ್ನು ನೋಡಿದೊಡನೆಯೆ ರಾಮನ ಮನಸ್ಸು ಸೀತೆಯನ್ನು ನೆನೆದು ಚಂಚಲವಾಯಿತು.

ಲಕ್ಷ್ಮಣನನ್ನು ಕುರಿತು ರಾಮನು "ವತ್ಸ, ಲಕ್ಷ್ಮಣ, ಈ ಸರೋವರದ ನೀರು ವೈಢೂರ್ಯದ ಮಣಿಯಂತೆ ನಿರ್ಮಲವಾಗಿದೆ. ಈ ಸರೋವರದ ಸುತ್ತಲೂ ಇರುವ ಕಾಡು ರಮಣೀಯವಾಗಿದೆ. ಈ ಕಾಡಿನಲ್ಲಿರುವ ಮರಗಳಾದರೊ ಎತ್ತರವಾದ ಶಿಖರಗಳಿಂದ ಒಪ್ಪುವ ಪರ್ವತಗಳಂತೆ ಶೋಭಿಸುತ್ತಿವೆ. ಈಗ ತಾನೆ ಮೂಡಿಬಂದಿರುವ ವಸಂತಕಾಲವೂ ಭರತನ ಮತ್ತು ಸೀತೆಯ ದುಃಖದಿಂದ ಪೀಡಿತನಾದ ನನ್ನನ್ನು ಇನ್ನಷ್ಟು ಪೀಡಿಸುವುದಕ್ಕಾಗಿಯೆ ಬಂದಂತಿದೆ. ಈ ಸರೋವರದ ಮೇಲೆ ಬೀಸುತ್ತಿರುವ ತಂಗಾಳಿಯಿಂದ ನನ್ನ ಮನಸ್ಸೆಲ್ಲವೂ ಸೀತೆಯನ್ನು ನೆನೆದೇ ವಿಕಾರಗೊಂಡಿದೆ. ಇಲ್ಲಿಯ ಮರಗಳೆಲ್ಲವೂ ಗಾಳಿಯ ಉಯ್ಯಾಲೆಗೆ ಸಿಲುಕಿ, ಶಿಲಾತಲಗಳ ಮೇಲೆ ಹೂವನ್ನು ಎರಚಿವೆ. ದುಂಬಿಗಳು ಜೇನುಂಡು ಮದಿಸಿಹೋಗಿ ಹೂವುಗಳಲ್ಲಿ ಮೊರೆಯುತ್ತಿವೆ. ಸೀತೆಯ ವಿರಹದಿಂದ ನನಗೆ ಇಲ್ಲಿರುವ ನಾನಾವಿಧವಾದ ಪಕ್ಷಿಗಳ ಧ್ವನಿ ದುಃಖವನ್ನುಂಟುಮಾಡುತ್ತಿದೆ. ಹರ್ಷಗೊಂಡ ಕೋಗಿಲೆ ದುಃಖಿತನಾದ ನನ್ನನ್ನು ಮೂದಲಿಸಿ ಕರೆಯುವಂತಿದೆ. ಈ ಕಾಡಿನ ಝುರಿಗಳಲ್ಲಿ ಹರ್ಷದಿಂದ ನಲಿಯುತ್ತ ಕೂಗುತ್ತಿರುವ ಕಾಡುಕೋಳಿ ನನ್ನ ದುಃಖವನ್ನು ಹೆಚ್ಚಿಸುತ್ತಿದೆ. ಹಿಂದೆ ಕಾಡುಕೋಳಿಯ ಧ್ವನಿಯನ್ನು ಕೇಳಿ ಹರ್ಷಗೊಂಡ ಸೀತೆ ನನ್ನನ್ನು ಕರೆದು ಸಂತೋಷಗೊಂಡದ್ದು ಈಗ ನೆನಪಾಗುತ್ತಿದೆ. ಈ ವಿರಹಾಗ್ನಿಯಿಂದ ನಾನು ಬಹುಬೇಗ ಸುಟ್ಟುಹೋಗುವಂತೆ ತೋರುತ್ತದೆ. ಗಾಳಿ ವೇಗವಾಗಿ ಬೀಸುವುದರಿಂದ ಸ್ಫಟಿಕ ಮಣಿಗಳಿಂದ ಮಾಡಿದ ಕಿಟಕಿಗಳಂತಿರುವ ತಮ್ಮ ಗರಿಗೆದರಿ, ಹೆಣ್ಣು ನವಿಲುಗಳಿಂದ ಸುತ್ತುವರಿದು ಕುಣಿಯುತ್ತಿರುವ ಈ ಗಂಡುನವಿಲುಗಳು ನನ್ನ ಕಾಮವನ್ನು ಹೆಚ್ಚಿಸುತ್ತಿವೆ. ಹೆಣ್ಣು ನವಿಲಿನ ಒಡನಾಟದಲ್ಲಿರುವ ಈ ಗಂಡು ನವಿಲಿನ ಕುಣಿತ ನನ್ನನ್ನು ನೋಡಿ ಹಾಸ್ಯಮಾಡುವಂತಿದೆ. ಅಯ್ಯೋ! ಈ ಹೆಣ್ಣು ನವಿಲು ರಾಕ್ಷಸರಿಂದ ಅಪಹೃತಳಾಗದ ಕಾರಣ ಈ ಗಂಡು ನವಿಲು ಇಷ್ಟು ಸಂತೋಷದಿಂದಿರುವುದಲ್ಲವೆ? ಈಗ ಸೀತೆಯಿರುವ ಕಡೆಯೂ ಬಂದಿರುವ ಈ ವಸಂತವನ್ನು ನನ್ನನ್ನು ಅಗಲಿರುವ ಆಕೆ ಹೇಗೆ ಸಹಿಸುತ್ತಾಳೆ? ನನ್ನನ್ನು ಅಗಲಿದ ವಿಶಾಲಾಕ್ಷಿಯೂ ಯುವತಿಯೂ ಆದ ಆಕೆ ನಿಜವಾಗಿಯೂ ಮರಣಹೊಂದುವುದರಲ್ಲಿ ಸಂದೇಹವೆ ಇಲ್ಲ. ಈ ಪ್ರದೇಶದಲ್ಲಿ ತಮ್ಮ ನಲ್ಲೆಯರೊಂದಿಗೆ ಸಂಚರಿಸುತ್ತಿರುವ ಕಿನ್ನರರನ್ನು ನೋಡಿದೊಡನೆಯ ನನಗೆ ಸೀತೆಯ ನೆನಪಾಗುತ್ತದೆ. ಹಂಸಕಾಂಡಗಳಿಂದಲೂ ತಾವರೆಗಳಿಂಗದಲೂ ಈ ಸರೋವರ ಶೋಭಿಸುತ್ತಿದೆ. ಕಮಲಗಳೆಂದರೆ ಸೀತೆಗೆ ತುಂಬ ಆಸೆ. ಈ ಕಮಲಗಳನ್ನು ನೋಡಿ, ಸೀತೆಯಿಲ್ಲದ ನಾನು ಹೇಗೆತಾನೆ ಬದುಕಲಿ? ಸೀತೆ ನನ್ನೊಡನಿದ್ದಾಗ ಪ್ರಿಯವಾದ ವಸ್ತುಗಳು ಈಗ ನನಗೆ ಪ್ರೀತಿಯನ್ನುಂಟುಮಾಂತಿಲ್ಲ. ಈ ತಾವರೆಯ ದಳಗಳನ್ನು ಕಂಡೊಡನೆ ನನಗೆ ಸೀತೆಯ ಕಣ್ಣುಗಳು ನೆನಪಾಗುತ್ತವೆ. ತಾವರೆಯಲ್ಲಿರುವ

ಧೂಳನ್ನು ಸೋಂಕಿಬರುವ ನರುಗಂಪಿನಿದ ಕೂಡಿದ ಈ ತಂಗಾಳಿ ನನ್ನ ಪ್ರಿಯೆಯ ವಿಶ್ವಾಸವಂತೆ ಹಿತಕರವಾಗಿದೆ. ಅಲ್ಲದೆ ಈ ಭೂಭಾಗವೆಲ್ಲ ಉದುರಿರುವ ಹೂವುಗಳಿಂದ ಕೂಡಿ, ಮಲಗಲು ಅನುಕೂಲವಾದ ಹಾಸಗೆಯಂತೆ ತೋರುತ್ತಿದೆ. ಈ ಪ್ರದೇಶದಲ್ಲಿ ಸೀತೆ ನನಗೆ ದೊರಕುವುದಾದರೆ, ನನಗೆ ಅಯೋಧ್ಯೆಯೂ ಬೇಡ, ಇಂದ್ರಪದವಿಯೂ ಬೇಡ. ಸುಂದರವಾದ ಈ ಪ್ರದೇಶದಲ್ಲಿ ನಾವಿಬ್ಬರೂ ವಾಸಮಾಡುತ್ತೇವೆ. ಆದರೆ ಈಗ ಸೀತೆಯಿಲ್ಲದ ನಾನು ಅಯೋಧ್ಯೆಯನ್ನು ಹೇಗೆ ಹೊಗಲಿ? ಕೌಸಲ್ಯೆ ಬಂದು 'ನನ್ನ ಸೊಸೆಯೆಲ್ಲಿ?' ಎಂದು ಕೇಳಿದರೆ ತಾಯಿಗೆ ಏನೆಂದು ಉತ್ತರ ಕೊಡಲಿ? ವತ್ಸ, ನೀನೊಬ್ಬನೆ ಅಯೋಧ್ಯೆಗೆ ಹಿಂದಿರುಗಿ ಭರತನೊಂದಿಗೆ ಸುಖವಾಗಿರು. ಸೀತೆಯಿಲ್ಲದೆ ನಾನು ಬದುಕಲಾರೆ" ಎಂದು ದೀನನಂತೆ ಪ್ರಲಾಪಿಸಿದನು.

ಕಿಷ್ಕಿಂಧಾಕಾಂಡದ ಸುಗ್ರೀವಸಖ್ಯ ಎಂಬ ಅಧ್ಯಾಯದಿಂದ ಆರಿಸಿಕೊಟ್ಟಿರುವ ಮೇಲಿನ ವಾಕ್ಯವೃಂದ ಶ್ರೀರಾಮನ ವಿರಹತಾಪವನ್ನು ಅವನ ಮಾತುಗಳಲ್ಲಿಯೆ ಚಿತ್ರಿಸುತ್ತವೆ. ಇಲ್ಲಿನ ವಾಕ್ಯಗಳು ತೀರ ಹ್ರಸ್ವವಾಗಿಯೂ ಇರದೆ ತೀರ ದೀರ್ಘವಾಗಿಯೂ ಇರದೆ ಶ್ರೀರಾಮನ ವಿರಹ ತೀವ್ರತೆಯನ್ನು ಸ್ಫುಟವಾಗಿ ಚಿತ್ರಿಸುತ್ತಿವೆ. ತೀರ ಸರಳವೂ ಅಲ್ಲದ ತೀರ ಪ್ರೌಢವೂ ಅಲ್ಲದ ಈ ಗದ್ಯ ಆಡುನುಡಿಯಂತೆಯೆ ಇದೆ. ಅಲ್ಲದೆ ಈ ಭಾಗದಲ್ಲಿ ಶ್ರೀರಾಮ ವಿರಹ ವ್ಯಥೆಯಿಂದ ಸಾಧಾರಣ ಮನುಷ್ಯರಂತೆಯೆ ಪ್ರಲಾಪಿಸುತ್ತ ಆ ಶಾಂತಕ್ಷೇತ್ರದಲ್ಲಿ, ಸೀತೆ ದೊರಕುವುದಾದರೆ ಅಲ್ಲಿಯೆ ವಾಸಮಾಡಲು ಬಯಸುವುದಾಗಿ ಹೇಳುವ ಮಾತುಗಳಲ್ಲಿ ಅವನ ಪ್ರೀತಿಯ ಆಳವನ್ನು ಗುರುತಿಸಬಹುದು.

ಮೇಲೆ ಉದಾಹರಿಸಿರುವಂತಹ ಗದ್ಯವೇ ಇಡೀ 'ಜನಪ್ರಿಯ ವಾಲ್ಮೀಕಿ ರಾಮಾಯಣ'ದ ತುಂಬ ಇವೆ. ಇಂತಹ ಗದ್ಯದಲ್ಲಿ ಕಠಿಣ ಶಬ್ದಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಹುಡುಕಬೇಕು. ಹಾಗೆ ಹುಡುಕಿದರೆ 'ಊರಷರಕ್ಷೇತ್ರ', 'ಸರ್ವಾವಧ್ಯತ್ವ', 'ಸಲ್ಲಕೀ ವೃಕ್ಷ' '(ಹಂಸ) ಕಾರಂಡ'ದಂತಹ ಪದಗಳು ಸಿಕ್ಕಾವು. ಇನ್ನುಳಿದಂತೆ ಸಂಸ್ಕೃತ ಪದಗಳಿಂದ ಕೂಡಿದ್ದರೂ ದ್ರಾಕ್ಷಾಪಾಕದಂತೆ ಕೇಳಿದ ಅಥವಾ ಓದಿದ ಕೂಡಲೆ ಅರ್ಥವನ್ನು ಸ್ರವಿಸುವ ಈ ಗದ್ಯ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾಗಿ ತನ್ನದೇ ಆದ ಸ್ಥಾನವನ್ನು ಗಳಿಸಿಕೊಂಡಿದೆ.

"ನಮ್ಮ ಜನದ ಬಾಳು ಮೇಲೆ ಮೇಲೆ ಎಷ್ಟು ಕೆಟ್ಟಂತೆ ಕಾಣುತ್ತಿದ್ದರೂ ಅದರ ಅಂತರಾಳದಲ್ಲಿ ಪೂರ್ವಿಕರ ಪುಣ್ಯದ ತಪಃ ಪ್ರಭಾವ ನಂದಾದೀಪ ನಂದದೆ ಮಿನುಗುತ್ತಿದೆ..."[೨೦] ಆದ್ದರಿಂದಲೆ ಸುಮಾರು ಮುವ್ವತ್ತೆರಡು (೩೨) ವರ್ಷಗಳ ಹಿಂದೆಯೆ ಅಕ್ಷರ ಕಲಿತ ವಯಸ್ಕರು ಯಾವುಯಾವುದೋ ಕಗ್ಗವನ್ನು ಓದುವ ಬದಲು

ವಿದ್ಯಾವಂತರು ಕಗ್ಗವೆಂದು ತಿರಸ್ಕರಿಸುವ ರಾಮಾಯಣ ಮಹಾಭಾರತ ಕಥೆಗಳನ್ನು ಓದಲು ಅಪೇಕ್ಷೆಪಟ್ಟದ್ದು. ಆ ಜನಸಾಮಾನ್ಯ ಮನದ ಅಭೀಪ್ಸೆಯೆ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಮತ್ತು ಜನಪ್ರಿಯ ವಾಲ್ಮೀಕಿ ರಾಮಾಯಣವನ್ನು ಕನ್ನಡ ಸಾರಸ್ವತ ಲೋಕಕ್ಕೆ ಎಳೆದು ತಂದದ್ದು. 'ಶ್ರೀ ರಾಮಾಯಣ ದರ್ಶನಂ' ಕಲಿತವರಿಗೆ ಕಲ್ಪವೃಕ್ಷವಾದರೆ 'ಜನಪ್ರಿಯ ವಾಲ್ಮೀಕಿ ರಾಮಾಯಣ' ಕಲಿತ ಮತ್ತು ಕಲಿಯದ ಇಬ್ಬರಿಗೂ ಕಾಮಧೇನುವಾಗಿದೆ. "ಅದರ (ರಾಮಾಯಣ) ಬಗ್ಗೆ ಅವರ (ಜನತೆಯ) ಆಸಕ್ತಿ ಕುಂದಿಲ್ಲ; ಉತ್ಸಾಹ ತಗ್ಗಿಲ್ಲ. ಎಲ್ಲಿಯವರೆಗೆ ಅವರು ಮಾನವೀಯ ಮೌಲ್ಯಗಳಿಗೆ ಬೆಲೆಕೊಡುತ್ತಾರೊ ಅಲ್ಲಿಯವರೆಗೆ ಈ ಆಸಕ್ತಿ ಉತ್ಸಾಹಗಳು ಇದ್ದೇ ಇರುತ್ತವೆ."[೧೦] "ಪೃಥ್ವಿಯಲ್ಲಿ ಎಲ್ಲಿಯವರೆಗೆ ಗಿರಿ ನದಿಗಳಿರುತ್ತವೆಯೋ ಆವರೆಗೆ ಲೋಕ ಲೋಕಗಳಲ್ಲಿ ರಾಮಾಯಣ ಕಥೆ ಪ್ರಚುರವಾಗಿರುತ್ತದೆ."[೨೨] ಎಂದು ಬ್ರಹ್ಮ ವಾಲ್ಮೀಕಿಗೆ ಹೇಳಿದನಂತೆ. ಅಂತೇ ಎಲ್ಲಿಯವರೆಗೆ ಕನ್ನಡನಾಡು ನುಡಿಗಳಿರುತ್ತದೋ ಅಲ್ಲಿಯವರೆಗೆ ತನ್ನದೇ ಆದ ವಿಶಿಷ್ಟ ಗದ್ಯ ಶೈಲಿಯನ್ನು ಪಡೆದುಕೊಂಡಿರುವ ಕುವೆಂಪು ಅವರ 'ಜನಪ್ರಿಯ ವಾಲ್ಮೀಕಿ ರಾಮಾಯಣ' ಇರುತ್ತದೆ. ಇದಕ್ಕೆ 'ಜನಪ್ರಿಯ ವಾಲ್ಮೀಕಿ ರಾಮಾಯಣ'ದ ಹಲವಾರು ಪುನರ್ ಮುದ್ರಣಗಳೇ ಸಾಕ್ಷಿ.

ಅಡಿಟಿಪ್ಪಣಿ

೧. ಕನ್ನಡದಲ್ಲಿ ರಾಮಾಯಣ ಸಾಹಿತ್ಯ, ಉದಯವಾಣಿ, ದೀಪಾವಳಿ, ೧೯೮೧, ೪೨-೫೨, ಡಾ. ಹಾ.ಮಾ. ನಾ.

೨. ವಾಲ್ಮೀಕಿ ರಾಮಾಯಣ ; ಉ.ಕಾ.ಸು. ; ಪು, ೫೬.

೩. ವಾಲ್ಮೀಕಿ ರಾಮಾಯಣ ; ಉ.ಕಾ.ಸು. ; ಪು, ೨.

೪. ಕನ್ನಡದಲ್ಲಿ ರಾಮಾಯಣ ಸಾಹಿತ್ಯ ; ಡಾ.ಹಾ.ಮಾ.ನಾ ; ಉದಯವಾಣಿ. ದೀಪಾವಳಿ ; ೧೯೮೧ ; ಪು. ೪೨-೫೨.

೫. ಶ್ರೀಮದ್ರಾಮಾಯಣವು ; ದೇವಶಿಖಾಮಣಿ ಅಳಸಿಂಗರಾಚಾರ್ಯ ; ಉಪೋದ್ಘಾತ.

೬. ವಾಲ್ಮೀಕಿ ರಾಮಾಯಣ ; ಉ.ಕಾ. ಸು. ; ಪು ೧.

೭. ಜನಪ್ರಿಯ ವಾಲ್ಮೀಕಿ ರಾಮಾಯಣ ; ಶ್ರೀ ರಾಮಾಯಣ ದಿವ್ಯಶಿಲ್ಪ ; ಕುವೆಂಪು ; ಪು ೧೬.

೮. ವಾಲ್ಮೀಕಿ ರಾಮಾಯಣ ; ಮುನ್ನುಡಿ (ಕುವೆಂಪು) ; ಉ.ಕಾ.ಸು.

೯. ಜನಪ್ರಿಯ ವಾಲ್ಮೀಕಿ ರಾಮಾಯಣ ; ಅರಿಕೆ ; ಪು, ೬.

೧೦. ಜನಪ್ರಿಯ ವಾಲ್ಮೀಕಿ ರಾಮಾಯಣ ; ಅರಿಕೆ ; ಪು, ೭.

೧೧. ವಾಲ್ಮೀಕಿ ರಾಮಾಯಣ ; ಉ.ಕಾ. ಸು. ; ಪು ೭.

೧೨. ವಾಲ್ಮೀಕಿ ರಾಮಾಯಣ ; ಉ.ಕಾ. ಸು. ; ಪು ೪೧.

೧೩. ವಾಲ್ಮೀಕಿ ರಾಮಾಯಣ ; ಉ.ಕಾ. ಸು. ; ಪು ೪೬.

೧೪. ವಾಲ್ಮೀಕಿ ರಾಮಾಯಣ ; ಉ.ಕಾ. ಸು. ; ಪು ೫೩.

೧೫. ವಾಲ್ಮೀಕಿ ರಾಮಾಯಣ ; ಉ.ಕಾ. ಸು. ; ಪು ೫೫.

೧೬. ವಾಲ್ಮೀಕಿ ರಾಮಾಯಣ ; ಉ.ಕಾ. ಸು. ; ಪು ೧೧.

೧೭. ವಾಲ್ಮೀಕಿ ರಾಮಾಯಣ ; ಉ.ಕಾ. ಸು. ; ಪು ೧೧.

೧೮. ವಾಲ್ಮೀಕಿ ರಾಮಾಯಣ ; ಉ.ಕಾ. ಸು. ; ಪು ೨೪.

೧೯. ಕನ್ನಡದಲ್ಲಿ ರಾಮಾಯಣ ಸಾಹಿತ್ಯ ; ಉದಯವಾಣಿ, ದೀಪಾವಳಿ ; ಡಾ. ಹಾ.ಮಾ.ನಾ ; ಪು ೪೨-೫೨.

೨೦. ಜನಪ್ರಿಯ ವಾಲ್ಮೀಕಿ ರಾಮಾಯಣ ; ಶ್ರೀ ರಾಮಾಯಣ ದಿವ್ಯಶಿಲ್ಪಿ ; ಕುವೆಂಪು ; ಪು. ೧೬.

೨೧. ಕನ್ನಡದಲ್ಲಿ ರಾಮಾಯಣ ಸಾಹಿತ್ಯ ; ಉದಯವಾಣಿ, ದೀಪಾವಳಿ ; ಡಾ. ಹಾ.ಮಾ.ನಾಯಕ್ ; ಪು. ೪೨-೫೨.

೨೨. ಜನಪ್ರಿಯ ವಾಲ್ಮೀಕಿ ರಾಮಾಯಣ ; ಶ್ರೀ ರಾಮಾಯಣ ದಿವ್ಯಶಿಲ್ಪಿ ; ಕುವೆಂಪು ; ಪು. ೨೨.

❑

ಮ್ಯಾಥ್ಯೂ ಆರ್ನಾಲ್ಡನ ದುರಂತ ಸೊಹ್ರಾಬ್*

ಮಾಥ್ಯೂ ಆರ್ನಾಲ್ಡ್ ೧೯ನೆ **ಶ.ದ ಪೂರ್ವಾರ್ಧ** ಮತ್ತು ಉತ್ತರಾರ್ಧಗಳಲ್ಲಿ ಇದ್ದ ಆಂಗ್ಲ ಕವಿ. ೧೮೫೩ರಲ್ಲಿ ಮೊದಲ ಬಾರಿಗೆ ಸೊಹ್ರಾಬ್ ಮತ್ತು ರುಸ್ತುಂ ಪ್ರಕಟಿತವಾಯಿತು.

ಸೊಹ್ರಾಬ್ ಮತ್ತು ರುಸ್ತುಂ **ಪರ್ಷಿಯನ್ನರ ಪೌರಾಣಿಕ ಕಥೆ** ೧೦ನೆ.ಶ.ದ ಪರ್ಷಿಯಾ ದೇಶದ ಸುಪ್ರಸಿದ್ಧ ಕವಿಯಾದ **ಫಿರ್ದೌಸಿ (Firdousi)** ಯಿಂದ ರಚಿತವಾದ **ಶಾನಾಮ್ಹೆ (Shah Nameh)** ಯಲ್ಲಿ ಸೊಹ್ರಾಬ್ ಮತ್ತು ರುಸ್ತುಂ ಒಂದು ಉಪಾಖ್ಯಾಯಿಕೆ.

ಆರ್ನಾಲ್ಡ್ **ಕೆಲವೆಡೆಯನ್ನುಳಿದು** ಮೂಲವನ್ನು ನಿಷ್ಠೆಯಿಂದ **ಅನುಸರಿಸಿದ್ದಾನೆ.** ಹೀಗೆ ಕೆಲವು ಕಡೆ **ಸ್ವಲ್ಪ ವ್ಯತ್ಯಾಸ ಮಾಡಿರುವುದೂ ಕಥೆಯ ಏಕ ಮುಖಥೆಗೆ ಸಹಾಯಕವಾಗಿದೆ.**

ಈ ಪ್ರಬಂಧದಲ್ಲಿ ನಾನು ಸೊಹ್ರಾಬನನ್ನು ದುರಂತ ವ್ಯಕ್ತಿಯಾಗಿ ನೋಡುತ್ತಿರುವುದು ಪೌರ್ವಾತ್ಯರೀತಿಯಿಂದ ಅಂದರೆ ಭಾರತೀಯ ರೀತಿಯಿಂದ ಫಿರ್ದೌಶಿಯ ಸೊಹ್ರಾಬ್ ದುರಂತ ವ್ಯಕ್ತಿ ಆರ್ನಾಲ್ಡನ ಸೊಹ್ರಾಬನೂ ದುರಂತ ವ್ಯಕ್ತಿ. ಎಂದರೆ ತುದಿಯಲ್ಲಿ ಅನ್ಯಾಯದಿಂದ ಅಕಾಲ ಮೃತ್ಯುವಿಗೆ ತುತ್ತಾದ ಜೀವವಾತನದು; ಅಷ್ಟೆ ಹೊರತು ಅಕಲ್ಯಾಣದಿಂದ ಕೊನೆಗೊಂಡ ಜೀವನವಲ್ಲ. ತಾನು ವಹಿಸಿದ ಪಕ್ಷದ ಶ್ರೇಯಸ್ಸಿಗಾಗಿ ಎರಡು ಪಕ್ಷಗಳೂ ಮೆಚ್ಚುವಂತೆ, ಪರ್ಷಿಯನ್ ವೀರರೆಲ್ಲ ನಡುಗುವಂತೆ ವೀರ್ಯದಿಂದ ಹೋರಾಡಿ **ವಿಧಿಯ ಕೈತವದಿಂದಲೂ** ಮತ್ತು ರುಸ್ತುಮನ **ಅನಾಗರೀಕ ವರ್ತನೆ**ಯಿಂದಲೂ ಮೃತ್ಯುವಿಗೆ ಗುರಿಯಾದ ಜೀವವಾತನದು.

ಸೊಹ್ರಾಬನ ದುರಂತತೆಗೆ ಏನು ಕಾರಣವಿರಬಹುದು? ಯಾರ ತಪ್ಪು ಅವನು ದುರಂತ ಸಾವಿಗೀಡಾಗುವಂತೆ ಮಾಡಿತು? ರುಸ್ತುಂಮನ ಅನಾರ್ಯ ನೀತಿಯೆ?

---

* 'ಕುಮಾರವ್ಯಾಸನ ದುರಂತ ಕರ್ಣ' ಎಂಬ 'ಕುವೆಂಪು'ರವರ ಲೇಖನದ ರೀತಿಯಲ್ಲಿ ರಚಿತವಾಗಿದೆ.

ಇರಬಹುದು ಸೊಹ್ರಾಬನ ಸಮರೌದಾರ್ಯವೆ? ಇರಬಹುದು. ಸೊಹ್ರಾಬನು ತನ್ನ ತಂದೆಯ ಅನ್ವೇಷಣೆಗಾಗಿ ಕೈಕೊಂಡ ವಿಚಿತ್ರ ಅನ್ವೇಷಣೆಯೆ? ಇರಬಹುದು. ರುಸ್ತುಮನ ಹಮ್ಮೂ ಕಾರಣವೆ? ಇರಬಹುದು. ಆದರೆ ಇದೆಲ್ಲಕ್ಕಿಂತ ಮುಖ್ಯವಾಗಿ ಪ್ರಧಾನವಾಗಿ ಆತನ ದುರಂತತೆ ನಾವು ಕರ್ಣನ ದುರಂತತೆಯನ್ನು ಕುಂತಿಯ ತಪ್ಪಿನಲ್ಲಿ ಕಾಣುವಂತೆ, ಸೊಹ್ರಾಬನ ತಾಯಿ ತಾಹಮಿನಿಯ ತಪ್ಪಿನಲ್ಲಿ ಇದೆ. ಆಕೆ ಎಸಗಿದ ತಪ್ಪು ಗೌಣವಾಗಿರಬಹುದು. ಮೇಲು ನೋಟಕ್ಕೆ ಅದು ಸೊಹ್ರಾಬನ ಒಳಿತಿಗೇ ಆಗಿರಬಹುದು. ಆದರೂ ಸೊಹ್ರಾಬನ ದುರಂತತೆಯಿರುವುದು ತಾಹಮಿನಿಯ ತಪ್ಪಿನಲ್ಲಿ.

ರುಸ್ತುಂ ತನ್ನ ಯವ್ವನದ ಕಾಲದಲ್ಲಿ ದೇಶ ಪರ್ಯಟನೆಯಲ್ಲಿದ್ದಾಗ **ಅಡರ್ ಬೈಜಾನ್** ನಗರದಲ್ಲಿ ಸೊಹ್ರಾಬನ ತಾಯಿ **ತಾಹಮಿನಿಯಳನ್ನು** ಕಾಣುತ್ತಾನೆ. ಕಂಡೊಡನೆಯೇ ಇಬ್ಬರಲ್ಲೂ ಪ್ರೇಮಾಂಕುರವಾಗುತ್ತದೆ. ತಾಹಮಿನಿಯಳ ತಂದೆ ಅವಳನ್ನು ರುಸ್ತುಮನಿಗೆ ಮದುವೆ ಮಾಡಿಕೊಡುತ್ತಾನೆ. ರುಸ್ತುಂ ಕೆಲಕಾಲ ಅಲ್ಲಿದ್ದು ಪುನಃ ಪರ್ಷಿಯಕ್ಕೆ ಮರಳುತ್ತಾನೆ. ಹಾಗೆ ಹಿಂದಿರುಗುವಾಗ ತನ್ನ ಹೆಮ್ಮೆಯ ಕುರುಹನ್ನು ಮುದ್ರೆಯನ್ನಾಗಿಕೊಟ್ಟು ಹೆಣ್ಣು ಮಗುವಾದರೆ ತಲೆಯಲ್ಲಿ ಧರಿಸುವಂತೆಯೂ ಗಂಡು ಮಗುವಾದರೆ ಆ ಮುದ್ರೆಯನ್ನು ತೋಳಿನ ಮೇಲೆ ಧರಿಸುವಂತೆಯೂ ಹೇಳುತ್ತಾನೆ. ಗಂಡುಮಗು ಸೊಹ್ರಾಬ್ ಹುಟ್ಟುತ್ತಾನೆ. ಆದರೆ ತಾಯಿ ತಾಹಮಿನಿಯಳು ಆ ವೇಳೆಗಾಗಲೇ ಲೋಕವಿಖ್ಯಾತನಾಗಿದ್ದ ರುಸ್ತುಂ ಎಲ್ಲಿ ತನ್ನ ಮಗನನ್ನು ರಣವಿದ್ಯಾ ಪಾರಂಗತನನ್ನಾಗಿ ಮಾಡುವುದಕ್ಕಾಗಿ ಕರೆದುಕೊಂಡು ಹೋಗುತ್ತಾನೋ ಎಂದು ಅಳುಕಿ ಹೆಣ್ಣು ಮಗು ಹುಟ್ಟಿತೆಂದು ಸುದ್ದಿಯನ್ನು ಕಳುಹಿಸುತ್ತಾಳೆ. ಸ್ತ್ರೀ ಸಹಜವಾದ ಅಳುಕಿನಿಂದ ಅವಳು ಈ ತಪ್ಪನ್ನು ಮಾಡದಿದ್ದರೆ ಮುಂದೆ ನಡೆಯುತ್ತಿದ್ದ ಈ ದುರಂತ ತಪ್ಪುತ್ತಿದ್ದಿತು. ಹದಿನಾರು ಹದಿನೆಂಟು ವರ್ಷಗಳುರುಳಿದರೂ ರುಸ್ತುಂ ಅಡರ್ ಬೈಜಾನಿಗೆ ಬರುವುದಿಲ್ಲ. ಆದ್ದರಿಂದ ತನ್ನ ತಂದೆಯನ್ನು ಹುಡುಕಿಕೊಂಡು ಬರಲು ಸೊಹ್ರಾಬನೇ ಹೊರಡುತ್ತಾನೆ. ಅವನನ್ನು ಯಾರೂ ತಡೆಯಲಾಗುವುದಿಲ್ಲ. ಹೇಗೆ ಸಿಂಹದಮರಿಯನ್ನು ತಡೆದಾರು?

ಇನ್ನು ಮುಂದೆ ವಿಧಿ ಹೇಗೆ ತನ್ನ ಜಾಲವನ್ನು ಸೊಹ್ರಾಬನ ದುರಂತತೆಗೆ ಹೆಣೆಯುತ್ತಿದೆಯೆಂಬುದನ್ನು ಕಾಣಬಹುದು. ಈ ವೇಳೆಗಾಗಲೇ ಸೊಹ್ರಾಬ್ **ತಂದೆಯಷ್ಟೇ** ವೀರನಾಗಿದ್ದಾನೆ. ಆದರೆ **ಅನನುಭವಿ**. ಅವನು ತನ್ನ ತಂದೆಯನ್ನು ಹುಡುಕಲು ಕೈಕೊಳ್ಳುವ ಮಾರ್ಗ **ಅಪಾಯಕರವಾದದ್ದು**. ಅದು ಯುದ್ಧದ ಮೂಲಕ ತನ್ನ ತಂದೆಯನ್ನು ಗುರುತು ಹಚ್ಚಬೇಕೆಂಬ ಅವನ ಬಯಕೆ **ವಿಲಕ್ಷಣವಾದದ್ದು**

ಆ ವೇಳೆಗಾಗಲೆ **ಟಾರ್ಟಾರರಿಗೂ ಪರ್ಷಿಯನ್ನರಿಗೂ** ಯುದ್ಧ ಶುರುವಾಗಿರುತ್ತದೆ. ಸೊಹ್ರಾಬ್ ಏಕೋ ಏನೋ ರುಸ್ತುಮನ ಶತ್ರು ಪಕ್ಷವಾದ ಟಾರ್ಟಾರರನ್ನು ಕೂಡಿಕೊಳ್ಳುತ್ತಾನೆ. ಇಲ್ಲಿ ವಿಧಿಯು ಕೈವಾಡವನ್ನು ಕಾಣಬಹುದೋ ಏನೋ.

ಪರ್ಷಿಯನ್ನರಿಗೂ ಟಾರ್ಟಾರರಿಗೂ ಹಲವಾರು ದಿನಗಳು ಯುದ್ಧ ನಡೆದರೂ ರುಸ್ತುಂ ಮಾತ್ರ ಸೊಹ್ರಾಬನಿಗೆ ಸಿಗುವುದಿಲ್ಲ. ಇಷ್ಟು ದಿನವೂ ತನ್ನ ಶೌರ್ಯದಿಂದ ಟಾರ್ಟರರಿಗೆ ವಿಜಯವನ್ನು ಸಂಪಾದಿಸಿಕೊಟ್ಟ ಸೊಹ್ರಾಬ್ ತನ್ನ ತಂದೆಯ ಅನ್ವೇಷಣೆಗೆ ಇನ್ನೂ ತೀವ್ರತರವಾದ ಪ್ರಯತ್ನವನ್ನು ಮಾಡಲು ಯೋಚಿಸುತ್ತಾನೆ. ಅದೇನೆಂದರೆ ಎರಡು ಪಕ್ಷದ ಕಡೆಯಿಂದಲೂ ಒಬ್ಬೊಬ್ಬ ವೀರರು ಹೋರಾಡುವುದು ಉಳಿದ ಸೈನಿಕರು ಸುಮ್ಮನಿರುವುದು. ಈ ಹಂಚಿಕೆಯಿಂದ ರುಸ್ತು ಇದ್ದಿರೆ ಖಂಡಿತ ಯುದ್ಧ ರಂಗದಲ್ಲಿ ಕಾಣಿಸಿಕೊಳ್ಳುತ್ತಾನೆ. ಇಲ್ಲವೇ ತನ್ನ ಶೌರ್ಯದ ಸುದ್ದಿಯನ್ನು ಕೇಳಿ ನಂತರವಾದರೂ ಯುದ್ಧ ಭೂಮಿಗೆ ಬರಬಹುದು. ಈ ವಿಷಯವನ್ನು ಟಾರ್ಟಾರರ ಮುಖ್ಯ ಸೇನಾನಾಯಕನಾದ ಪೆರಾನ್ ವಿಷ (Peran wise)ನಿಗೆ ತಿಳುಸುತ್ತಾನೆ. ಪೆರಾನ್ ವಿಷ ಇದು ಪ್ರಾಣಪಾಯವಳ್ಳ ಮಾರ್ಗವೆಂದೂ, ಇಂತಹ ಕಡುತರವಾದ ಮಾರ್ಗ ರುಸ್ತುಮನನ್ನು ಹುಡುಕಲು ಬೇಡವೆಂದರೂ ಸೊಹ್ರಾಬನನ್ನು ಈ ನಿರ್ಧಾರದಿಂದ ವಿಮುಖವನ್ನಾಗಿ ಮಾಡಲು ವಿಶೇಷ ಪ್ರಯತ್ನವನ್ನು ಮಾಡುವುದಿಲ್ಲ. "Who can keep the lions cub from ravening? and who govern rustumis son?" ಎಂದು ಹೇಳಿ ಸೊಹ್ರಾಬನ ಆಹ್ವಾನವನ್ನು ಪರ್ಷಿಯನ್ನರಿಗೆ ತಿಳಿಸುತ್ತಾನೆ.

ಸೊಹ್ರಾಬನ ಆಹ್ವಾನವನ್ನು ಸ್ವೀಕರಿಸುವ ಧೈರ್ಯ ಪರ್ಷಿಯನ್ನರಿಗಿಲ್ಲ. ಆದರೂ ನಿನ್ನೆ ತಾನೆ ಬಂದು ರಾಜ ಕೈ ಖುಸ್ರೂ (Kai Khosroo) ತನ್ನನ್ನು ಸರಿಯಾಗಿ ಆಧರಿಸಲಿಲ್ಲವೆಂಬ ಕಾರಣದ ಮೇಲೆ ಪರ್ಷಿಯನ್ನರ ಪಾಳೆಯದಿಂದ ದೂರದಲ್ಲಿ ಒಂಟಿಯಾಗಿ ಗುಡಾರ ಹಾಕಿಕೊಂಡಿರುವ ರುಸ್ತುಮನನ್ನು ಒಪ್ಪಿಸಬಹುದೆಂಬ ನಂಬಿಕೆಯ ಮೇಲೆ ಗುಡುರ್ಜ್ಸ್ ಟಾರ್ಟಾರ ಆಹ್ವಾನವನ್ನು ಒಪ್ಪಿಕೊಳ್ಳುವಂತೆ ಪರ್ಷಿಯನ್ನರ ಸೇನಾನಾಯಕ ಫೆರೂದನಿಗೆ (ferood) ಹೇಳಿ ರುಸ್ತುಮನನ್ನು ಒಪ್ಪಿಸಲು ತಾನು ಹೊರಡುತ್ತಾನೆ.

ಗುಡುರ್ಜ್ಸ್ ರುಸ್ತುಮನ ಮುಂದೆ ಸೊಹ್ರಾಬನ ಬನಶೌರ್ಯವನ್ನು "He has the wild stags foot, the lions heart" ಎಂದು ಹೇಳಿ ಈ ಆಹ್ವಾನವನ್ನು

ರುಸ್ತುಮನಲ್ಲದೆ ಬೇರಾರಿಂದಲೂ ಸ್ವೀಕರಿಸಲು ಸಾಧ್ಯವಿಲ್ಲವೆಂದು ಹೇಳುತ್ತಾನೆ. ರುಸ್ತುಂ ಈ ಯಾವ ಮಾತಿಗೂ ಒಪ್ಪುವುದಿಲ್ಲ. ಆಗ ಗುಡುರ್ಜ್ "Like some old miser, Rustim hoards his fame, and shuns to peril it with young men" ಎಂದು ಹೇಳಿ ರುಸ್ತುಮನ ಅಹಂಕಾರವನ್ನು ಕೆಣಕುತ್ತಾನೆ. ತನ್ನ ಅಹಂಕಾರಕ್ಕೆ ಚ್ಯುತಿ ಬಂದ ರುಸ್ತಂ ವೇಶ ಮರೆಸಿಕೊಂಡು ಸಾಮಾನ್ಯ ಸೈನಿಕನಂತೆ ಯುದ್ಧಮಾಡಲು ಒಪ್ಪುತ್ತಾನೆ. ಈ ರೀತಿ ರುಸ್ತುಂ ವೇಶ ಮರೆಸಿಕೊಳ್ಳದಿದ್ದರೆ ಸೊಹ್ರಾಬ್ ದುರಂತ ಮರಣವನ್ನಪ್ಪಬೇಕಾಗಿರಲಿಲ್ಲ. ಇಲ್ಲಿ ವಿಧಿಯ ಕೈವಾಡವನ್ನು ಕಾಣುತ್ತೇವೆ. ಲೋಕ ವಿಖ್ಯಾತ ವೀರರಾದ ತಂದೆ ಮಕ್ಕಳನ್ನು ಪರಸ್ಪರ ತಂದೆ ಮಕ್ಕಳೆಂಬ ಅರಿವಿಲ್ಲದಂತೆ ಶತ್ರುಗಳನ್ನಾಗಿಸಿದುದು ವಿಧಿಯ ಕೈವಾಡವಲ್ಲದೆ ಮತ್ತೇನು?

ರಣಾಂಗಣದಲ್ಲಿ ಎದುರಾದ ರುಸ್ತುಂ ಮತ್ತು ಸೊಹ್ರಾಬರಿಗೆ ಪರಸ್ಪರ ಶತ್ರುಗಳೆಂಬ ಭಾವನೆ ಸಹಜವಾಗಿ ಮೂಡುವುದಿಲ್ಲ. 'ಕಣ್ಣರಿಯದೊಡಂ ಕರುಳರಿಯದೆ?' ಎಂಬಂತೆ ರುಸ್ತುಮನಿಗೆ ಸೊಹ್ರಾಬನ ಮೇಲೆ ಪುತ್ರ ವಾತ್ಸಲ್ಯ ಭಾವ ಉಂಟಾಗುತ್ತದೆ. ಸೊಹ್ರಾಬನ ಕಿರಿವಯಸ್ಸನ್ನೂ ಕೋಮಲತೆಯನ್ನೂ ಕಂಡು ಅನ್ಯಾಯವಾಗಿ ತನ್ನಿಂದ ಹತವಾಗುವನಲ್ಲಾ ಎಂದು ಸೊಹ್ರಾಬನನ್ನು ತನ್ನ ಪಕ್ಷಕ್ಕೆ ಬಂದು ತನ್ನ ಮಗನಂತೆ ತನ್ನೊಡನಿರಲು ಆಹ್ವಾನಿಸುತ್ತಾನೆ. ಸೊಹ್ರಾಬನಿಗೂ ಅವನ ಅಂತರಾತ್ಮದಲ್ಲಿ ಎಲ್ಲೊ ಅವನೇ ರುಸ್ತುಂ ಎಂದು ಭಾಸವಾಗುತ್ತಿದೆ. ಆ ಭಾವನೆಯಿಂದಲೇ ಅವನು ಓಡಿ ಬಂದು ರುಸ್ತುಮನ ಕಾಲುಗಳನ್ನು ತಬ್ಬಿ ನಂತರ ಕೈಜೋಡಿಸಿಕೊಂಡು "Art thon not rushtim? speak! Art thon not he?" ಎಂದು ಬೇಡಿಕೊಳ್ಳುತ್ತಾನೆ. ಆದರೆ ಈ ಮಾತುಗಳು ರುಸ್ತುಂಮನಲ್ಲಿ ಬೇರೆ ಭಾವನೆಗಳು ಮೂಡುವುದಕ್ಕೆ ಕಾರಣವಾಯಿತು. ಸೊಹ್ರಾಬನ ಶೌರ್ಯದಲ್ಲಿಯೇ ಅಪನಂಬಿಕೆ ಬಂದಿತು. ಆಗ ಅವನು ತಾನು ರುಸ್ತುಮನಲ್ಲವೆಂದು ತಿರಸ್ಕರಿಸಿ ಯುದ್ಧ ಮಾಡಲು ಹೇಳುವನು.

ಸೊಹ್ರಾಬ್ ಜಯಾಪಜಯಗಳ ಅನಿಶ್ಚತೆಯನ್ನು ಕುರಿತು ಹೇಳುತ್ತಿರುವಾಗಲೇ ರುಸ್ತುಂ ಮಾತಿಲ್ಲದೆ ತನ್ನ ಭರ್ಜಿಯನ್ನು ಸೊಹ್ರಾಬನೆಡೆಗೆ ಬೀಸುತ್ತಾನೆ. ಸೊಹ್ರಾಬ್ ಅದನ್ನು ತಪ್ಪಿಸಿಕೊಳ್ಳುತ್ತಾನೆ. ನಂತರ ರುಸ್ತುಂ ತಾನಲ್ಲದೆ ಬೇರಾರಿಂದಲೂ ಉಪಯೋಗಿಸಲಾಗದ ತನ್ನ ಗದೆಯನ್ನು ಎತ್ತಿ ಸೊಹ್ರಾಬನನ್ನು ಗುರಿಯಿಟ್ಟು ಹೊಡೆಯುತ್ತಾನೆ. ಪುನಃ ಸೊಹ್ರಾಬ್ ಹಾವಿನಂತೆ ನುಣುಚಿಕೊಳ್ಳುತ್ತಾನೆ. ರುಸ್ತುಂ ತಾನೇ ತನ್ನ ಗದೆಯ ವೇಗಕ್ಕೆ ಮುಗ್ಗರಿಸಿ ಮರಳಮೇಲೆ ಬೀಳುತ್ತಾನೆ. ಈಗ ಸೊಹ್ರಾಬನ ಸರದಿ. ಅವನು ರುಸ್ತುಮನನ್ನು ಮುಗಿಸಿಬಿಡಬಹುದಿತ್ತು. ಆದರೆ ಅವನಲ್ಲಿ ಇನ್ನೂ

ರುಸ್ತುಮನನ್ನು ಕಂಡರೆ ಶತ್ರು ಭಾವನೆ ಹುಟ್ಟಿಲ್ಲ. ಆದ್ದರಿಂದಲೇ ತಮ್ಮವರಿಗೂ ಯುದ್ಧಬೇಡವೆಂದೂ, ಸೋಲಿಗಾಗಿ ಕೋಪಮಾಡಿಕೊಳ್ಳಬೇಡವೆಂದೂ ಸೊಹ್ರಾಬ್ ಹೇಳುತ್ತಾನೆ.

ಆದರೆ ರುಸ್ತುಂ ಎರಡು ಪಕ್ಷಗಳಿದಿರಿಗೂ ಎರಡು ಬಾರಿ ಅವಮಾನ ಹೊಂದಿ ಕಣ್ಣಿನಿಂದ ಕಿಡಿಯನ್ನು ಸುರಿಸುತ್ತಾ ನಡುಗುತ್ತಿರುವ ಧ್ವನಿಯಿಂದ ಸೊಹ್ರಾಬನನ್ನು ಕುರಿತು ಮಾರ್ಮಿಕವಾದ ಮಾತುಗಳನ್ನಾಡಿ ಕತ್ತಿ ಹಿಡಿದು ನುಗ್ಗುತ್ತಾನೆ. ರುಸ್ತುಮನ ಮಾತುಗಳಿಂದ ಕೋಪಗೊಂಡ ಸೊಹ್ರಾಬನೂ ಕತ್ತಿ ಹಿಡಿದು ಹೋರಾಡುತ್ತಾನೆ. ಪರ್ವತೋಪಮವಾದ ಎರಡು ಹದ್ದುಗಳು ಪೂರ್ವ ಪಶ್ಚಿಮ ದಿಕ್ಕುಗಳಿಂದ ಬಂದು ಒಂದರೊಡನೊಂದು ಹೋರಾಡುವಂತೆ ಹೋರಾಡುತ್ತಾರೆ. ರುಸ್ತುಮ ತನ್ನ ಗುರಾಣಿಗೆ ಹೊಡೆದ ಪೆಟ್ಟಿಗೆ ಪ್ರತಿಯಾಗಿ ಸೊಹ್ರಾಬ್ ರುಸ್ತುಮನ ಶಿರಸ್ತ್ರಾಣಕ್ಕೆ ಹೊಡೆಯುತ್ತಾನೆ. ಉಕ್ಕಿನ ಶಿರಸ್ತ್ರಾಣಕ್ಕೆ ಬಿದ್ದ ಪೆಟ್ಟಿನಿಂದ ರುಸ್ತುಂ ತಲೆಗುಂದುತ್ತಾನೆ. ತನ್ನ ಸ್ವಾಮಿಗೆ ಬಿದ್ದ ಪೆಟ್ಟಿನಿಂದ ಆತನ ಮೆಚ್ಚಿನ ಕುದುರೆ **ರುಕ್ಷ್ (Ruksh)** ಮರಣೋನ್ಮುಖವಾದ ಸಿಂಹ ಕೂಗುವಂತೆ ಕೆನೆಯುತ್ತದೆ. ಎರಡು ಪಕ್ಷದ ಸೈನಿಕರೂ ಹೆದರುತ್ತಾರೆ. ಆದರೆ ಸೊಹ್ರಾಬ್ ಮಾತ್ರ ಇದಾವುದರ ಗಮನವಿಲ್ಲದೆ ಪುನಃ ರುಸ್ತುಮನ ಶಿರಸ್ತ್ರಾಣಕ್ಕೆ ಹೊಡೆಯುತ್ತಾನೆ. ಈ ಸಾರಿ ಕತ್ತಿ ಗಾಜಿನಂತೆ ಸಾವಿರಾರು ಚೂರುಗಳಾಗಿ ಕೈನಲ್ಲಿ ಹಿಡಿಮಾತ್ರ ಉಳಿಯುತ್ತಿದೆ. ಪುನಃ ರುಸ್ತುಮ್ ತಲೆ ಎತ್ತುತ್ತಾನೆ. ಕಣ್ಣಿನಿಂದ ಬೆಂಕಿ ಕಾರುತ್ತಾ ಭಲ್ಲೆಯನ್ನು ಎತ್ತಿ "ರುಸ್ತುಂ" ಎಂಬ ತನ್ನ ಪ್ರಿಯವಾದ ರಣಘೋಷವನ್ನು ಮಾಡುತ್ತಾನೆ. "ರುಸ್ತುಂ" ಎಂಬ ಪದ ಕಿವಿಗೆ ಬೀಳುತ್ತಿದ್ದಂತೆಯೇ ಸೊಹ್ರಾಬ್ ಆಶ್ಚರ್ಯ ಚಕಿತನಾಗಿ **ರಕ್ಷಣೆಯ ಗುರಾಣಿ**ಯನ್ನು ಕೆಳಗೆ ಹಾಕಿಬಿಡುತ್ತಾನೆ. ಆದರೆ ಇದಾವುದನ್ನೂ ಗಮನಿಸುವುದಿಲ್ಲ ರುಸ್ತುಂ. ಆಯುಧವಿಹೀನನೂ ರಕ್ಷಣೆಯಿಲ್ಲದವನೂ ಆದ ತನ್ನ ಪ್ರತಿಸ್ಪರ್ಧಿಯನ್ನು, ಎಮರಾಳಿ ಬಾಲಕನೆಂಬುದನ್ನೂ ಅವನು ತನ್ನನ್ನು ಇಂತಹದೇ ಸಂದರ್ಭದಲ್ಲಿ ವೀರಧರ್ಮಕ್ಕೆ ತಕ್ಕಂತೆ ಉಳಿಸಿದ್ದನೆಂಬುದನ್ನೂ ಮರೆತು ಅನಾರ್ಯ ರೀತಿಯಿಂದ ಭಲ್ಲೆಯಿಂದ ಹೊಡೆಯುತ್ತಾನೆ. ಭಲ್ಲೆ ರಕ್ಷಣಾ ವಿಹೀನನಾದ ಸೊಹ್ರಾಬನ ಪಕ್ಕೆಗೆ ನಾಟಿಕೊಳ್ಳುತ್ತದೆ. ಸೊಹ್ರಾಬ್ ಕೆಳಕ್ಕೆ ಬೀಳುತ್ತಾನೆ. ನಂತರ ಇಬ್ಬರಿಗೂ ತಾವು ತಂದೆ ಮಕ್ಕಳೆಂಬ ಅರಿವಾಗುತ್ತದೆ. ಅದು ಹೇಗಾದರೂ ಇರಲಿ.

ಸೊಹ್ರಾಬನ ದುರಂತಕ್ಕೆ ಅವನ ತನ್ನ ತಂದೆಯ ಅನ್ವೇಷಣೆಗಾಗಿ ಕೈಕೊಂಡ ಅವ್ಯವಹಾರಿಕ ರೀತಿ ಕಾರಣವಿರಬಹುದು, ಅವನ ಸಮರೌದಾರ್ಯ ಕಾರಣವಿರ

-ಬಹುದು, ರುಸ್ತುಮನ ಅನಾರ್ಯ ರೀತಿಯ ಯುದ್ಧ ಕಾರಣವಿರಬಹುದು, ಇವೆಲ್ಲಕ್ಕಿನ್ನ ಮಿಗಿಲಾಗಿ ರುಸ್ತುಂ ಮತ್ತು ಸೊಹ್ರಾಬ್‌ರಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳು ಹುಟ್ಟಿ ತಾವು ತಂದೆ ಮಕ್ಕಳೆಂದು ಅರಿಯುವ ಕ್ಷಣದಲ್ಲಿ ಅದನ್ನು ತಪ್ಪಿಸಿದ ವಿಧಿಯ ಕೈವಾಡ ಕಾರಣವಿರಬಹುದು. ಆದರೆ ಇವೆಲ್ಲವುಗಳಿಗಿನ್ನ ಸೊಹ್ರಾಬ್ ದುರಂತಕ್ಕೆ ಅವನ ತಾಯಿ ಮಾಡಿದ ಅಲ್ಪವೂ ಗೌಣವೂ ಆದ ತಪ್ಪೇ ಕಾರಣವೆಂದರೆ ಹೆಚ್ಚು ಸಮಂಜಸವಾದೀತು.

❑

ಕಥಾ ವಿಮರ್ಶೆ

ಕಥಾಭಾರತಿ

ಕಥಾಭಾರತಿ ಭಾರತದ ಹದಿನಾಲ್ಕು ಭಾಷೆಗಳಿಂದಲೂ ಒಂದೊಂದು ಕಥೆಯನ್ನು ಒಳಗೊಂಡ ಸಂಕಲನ. ಬೇರೆ ಭಾಷೆಯ ಕಥಗಳ ಒಬ್ಬರೇ ಲೇಖಕರ ಕಥೆಗಳ ಸಂಕಲನ ಕನ್ನಡಕ್ಕೆ ಹೊಸದಲ್ಲವಾದರೂ ಭಾರತ ರಾಜ್ಯಾಂಗ ಮಾನ್ಯ ಮಾಡಿರುವ ಹದಿನಾಲ್ಕು ಭಾಷೆಗಳ ಉತ್ತಮ ಕಥೆಗಳ ಸಂಕಲನ ಹೊರಬರುತ್ತಿರುವುದು ಇದೇ ಮೊದಲೆಂದು ಹೇಳಬಹುದು. ಈ ಸಂಕಲನಕ್ಕೆ ಇಟ್ಟಿರುವ ಶೀರ್ಷಿಕೆ 'ಕಥಾಭಾರತಿ' ಅನ್ವರ್ಥವಾದುದು. ಬಹುಶಃ 'ಕಥಾಭಾರತಿ' ಎಂಬ ಹೆಸರು ಈ ಸಂಕಲನದಿಂದ ಕನ್ನಡದಲ್ಲಿ ಮೊದಲಬಾರಿಗೆ ಪ್ರಯೋಗದಲ್ಲಿ ಬಂದಿತೆನ್ನಬಹುದು. ಈ ಸಂಕಲನದ ಕಥೆಗಳ ಅನುವಾದಕರು ಮತ್ತು ಸಂಪಾದಕರು ಹ.ಕ. ರಾಜೇಗೌಡ ಅವರು. ಇಲ್ಲಿನ ಕಥೆಗಳನ್ನು ಅನುವಾದಿತ ಕಥೆಗಳೆಂದು ಹೇಳದೆ ಹೋದರೆ ಅವು ಬೇರೆ ಭಾಷೆಯ ಕಥೆಗಳೆಂದು ಓದುಗರಿಗೆ ತಿಳಿಯುವುದೇ ಇಲ್ಲ ಎಂದರೆ ಒಂದು ಮಾತಿನಲ್ಲಿ ಈ ಕಥಾಸಂಕಲನದ ವಿಮರ್ಶೆ ಮಾಡಿದಂತೆ ಆಗುತ್ತದೆ. ಆದರೆ ಇಷ್ಟನ್ನೇ ಹೇಳಿ ನಿಲ್ಲಿಸಿದರೆ ಕೃತಿಗೆ ಅಪಚಾರ ಮಾಡಿದಂತಾಗುವುದರಿಂದ ಕೆಲವು ಕಥೆಗಳನ್ನಾದರೂ ವಿವರವಾಗಿ ನೋಡಬೇಕಾಗುತ್ತದೆ. ಮೊದಲ ಕಥೆ 'ಹೂವಿನ ಬೆಲೆ' ನಡೆಯುವುದು ವಿದೇಶದಲ್ಲಿ. ಅಲ್ಲಿಯ ಜನರ ನಡೆನುಡಿ, ಮೂಢನಂಬಿಕೆ, ಸಂಪ್ರದಾಯಗಳು ನಮ್ಮಿಂದ ಏನೂ ಬೇರೆ ಅಲ್ಲ ಎಂಬುದನ್ನು ತೋರಿಸಿಕೊಡುತ್ತದೆ. 'ಟಾಂಗಾವಾಲ' ಕಥೆಯಲ್ಲಿ ಟಾಂಗಾವಾಲ ಗುಲಾಮುದ್ದೀನನ ಹೆಂಗಸರ ಬಗೆಗಿನ ನಿಲುವನ್ನು ನಾವು ಒಪ್ಪದಿದ್ದರೂ ಆಶಾಳ ಬಗೆಗಿನ ಅವನ ತೀವ್ರವೂ ಅನಿಂದಿತವೂ ಆದ ಪ್ರೇಮವನ್ನು ಪ್ರಶ್ನಿಸುವಂತಿಲ್ಲ. ಟಾಂಗಾ ಓಡುತ್ತಿರುವಂತೆಯೆ ಕಥೆ ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತದೆ. ಕಥಾತಂತ್ರ ತುಂಬಾ ಮೆಚ್ಚುವಂಥದು. 'ಖೋಟಾ ನಾಣ್ಯ'ದಲ್ಲಿ ಪ್ರೇಮ ಮತ್ತು ವಿವಾಹ ಬೇರೆ ಬೇರೆ ಎಂದು ವಾದಿಸಿದ್ದ ಮಿನಿ ಆಂಡ್ರ್ಯೂಸ್ ತನ್ನ ಬಾಲ್ಯದ ಗೆಳತಿ ಲತಿಕಾಳ ಪತಿ ಬರುವಾನನ್ನೇ ತಾನು ಪ್ರೀತಿಸಿರುವುದಾಗಿ ತಿಳಿದು ಗೆಳತಿಯ ಬಾಳಿನಲ್ಲಿ ಪ್ರವೇಶಿಸಲಿಚ್ಛಿಸದೆ ದೂರ ಹೋಗುತ್ತಾಳೆ. ಪ್ರೇಮ ಮತ್ತು ವಿವಾಹ ಬೇರೆ ಬೇರೆ

ಎಂದು ವಾದಿಸಿದ್ದ ಮಿನಿ ಆಂಡ್ರ್ಯೂಸಳೇ ತನ್ನ ವಾದದಂತೆ ನಡೆಯಲಾರದೆ ಪ್ರೀತಿಸಿದ ಬರುವಾನನ್ನು ಬಿಟ್ಟು ದೂರ ಹೋಗಬೇಕಾಗಿ ಬಂದುದು ದುರಂತ ವ್ಯಂಗ್ಯ. ಅವಳ ಮತ್ತು ಬರುವ ಅವರ ಪ್ರೀತಿ ಚಲಾವಣೆ ಇಲ್ಲದ ಖೋಟಾನಾಣ್ಯದಂತೆ ಉಳಿದುಹೋಗುತ್ತದೆ. 'ಮಗು' ಕಥೆಯಲ್ಲಿ ಗಂಗು ಆಗಲೆ ಮೂರುಬಾರಿ ವಿವಾಹವಾಗಿದ್ದವಳೂ ಪ್ರಣಯಪಾತ ಕಲಿಯಲಾಶಿಸುವ ಯುವಕರ ತೀವ್ರಾಸಕ್ತಿಯ ಕೇಂದ್ರವಾಗಿದ್ದವಳೂ ಆದ ಗೋಮತೀದೇವಿಯನ್ನು ವಿವಾಹವಾಗುತ್ತಾನೆ. ಮದುವೆಯಾದ ಆರು ತಿಂಗಳಿಗೆ ಮಗು ಹುಟ್ಟಿದಾಗ ತನ್ನನ್ನು ಹಂಗಿಸಲು ಬಂದ ತನ್ನ ಹಿಂದಿನ ಯಜಮಾನನಿಗೆ "ಬೆಳೆಯಿಂದ ತುಂಬಿದ ಹೊಲವನ್ನು ಕೊಂಡ ಯಾರೂ ಆ ಬೆಳೆ ಬೇರೆ ಯಾರೊ ಬಿತ್ತಿದ್ದು ಎಂಬ ಕಾರಣದಿಂದ ತಿರಸ್ಕರಿಸುವುದಿಲ್ಲ" ಎಂದು ಗಂಗು ಹೇಳುವ ಮಾತುಗಳು ಅವನ ವಿನಯ ಪ್ರಾಮಾಣಿಕತೆಗಳನ್ನು ಸೂಚಿಸುವಂತೆಯೆ ಸಮಾಜ ಸುಧಾರಕರು ನಾಚಿ ತಲೆ ತಗ್ಗಿಸುವಂತೆ ಮಾಡುತ್ತವೆ.

ಪಾಕಿಸ್ತಾನ ಭಾರತದಿಂದ ಬೇರೆಯಾದಾಗ ದೇಶಮಾತ್ರ ಇಬ್ಭಾಗವಾಗಲಿಲ್ಲ, ವ್ಯಕ್ತಿಗಳ ಮನಸ್ಸೂ ಇಬ್ಭಾಗವಾದುವು. ಈ ಪ್ರಸಂಗದಲ್ಲಿ ಪರಿಸ್ಥಿತಿಗೆ ವಶರಾಗಿ ತಮ್ಮ ಬಾಳನ್ನು ಹಾಳುಮಾಡಿಕೊಂಡವರೆಷ್ಟು ಮಂದಿ. ಅಂಥವರಲ್ಲಿ ಲಾಜವಂತಿಯೂ ಒಬ್ಬಳು. ಲಾಜವಂತಿಯ ಗಂಡ ಸುಂದರಲಾಲ ಬಲತ್ಕಾರದಿಂದ ಪರಮತೀಯರ ಬಳಿ ಇರಬೇಕಾಗಿ ಬಂದ ಹೆಂಗಸರನ್ನು ಮರಳಿ ಜನರು ತಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಬೇಕೆಂದು ತೀವ್ರವಾಗಿ ಪ್ರಚಾರ ಮಾಡಿದರವಲ್ಲಿ ಒಬ್ಬ. ಆದರೆ ತನ್ನ ಹೆಂಡತಿ ಲಾಜವಂತಿಯೆ ಹಿಂತಿರುಗಿ ಬಂದಾಗ ಅವಳನ್ನು ಸ್ವೀಕರಿಸಿದರೂ ಹಿಂದಿನಂತೆ ಪ್ರೀತಿಸಲಾರದೆ ಅವಳನ್ನು ಕರುಣೆಯಿಂದ ನೋಡತೊಡಗುತ್ತಾನೆ. ಲಾಜವಂತಿಗೆ ಬೇಕಾಗಿದ್ದುದು ಹಿಂದಿನಂತೆ ಹೊಡೆದು ಬಡಿದು ಗೋಳುಗುಟ್ಟಿಸುತ್ತಿದ್ದ ಗಂಡನೇ ಹೊರತು ಕರುಣೆ ತೋರುವವನಲ್ಲ. ಹೀಗಾಗಿ ಲಾಜವಂತಿ ಗಂಡನ ಕರುಣೆಯ ಮಡಿಲಲ್ಲಿ ಜೀವಚ್ಛವದಂತೆ ಬಾಳುತ್ತಾಳೆ. ಈ ದುರಂತ ಕಥೆ 'ಲಾಜವಂತಿ' ಕಥೆಯಲ್ಲಿ ಬಹು ಸುಂದರವಾಗಿ ನಿರೂಪಿತವಾಗಿದೆ.

'ಮದುವಣಗಿತ್ತಿಯ ಕಿರೀಟ'ದಲ್ಲಿ ಮದುವೆಯ ಸಂದರ್ಭದಲ್ಲಿ ನಡೆಯುವ ಅರ್ಥ ಹೀನ ಸಂಪ್ರದಾಯಗಳ, ಶಾಸ್ತ್ರಗಳ ವಿಡಂಬನೆಯಿರುವಂತೆಯೆ ವರದಕ್ಷಿಣೆಯಿಂದ ಒದಗಬಹುದಾದ ಅನಾಹುತಗಳ ಮುನ್ಸೂಚನೆಯೂ, ಕ್ಷಣ ಮಾತ್ರದಲ್ಲಿ ತೌರಿನ ತನ್ನ ಎಲ್ಲ ಸಂಬಂಧಗಳನ್ನು ಕಿತ್ತೊಗೆದು ಪತಿಯ ಹಿತಚಿಂತನೆಯಲ್ಲಿ ಮಗ್ನಳಾಗುವ ವಧುವಿನ, ಸೀಮಾತೀತವಾದ ಮಾತೃಹೃದಯದ ಸುಂದರ ಚಿತ್ರಣವೂ ಇದೆ.

ಎರಡು ಕೋಳಿಗಳ ಸೆಪದಲ್ಲಿ ಇಬ್ಬರು ಹೆಂಗಸರ ಮನಸ್ಸಿನ ಈರ್ಷ್ಯಾಸೂಯೆಗಳನ್ನು, ಸ್ಪರ್ಧಾಭಾವನೆಗಳನ್ನು ಕುತೂಹಲಕಾರಿಯಾಗಿ ಚಿತ್ರಿಸುವ ಕಥೆ 'ಕೋಳಿಯ ಜಗಳ'. ದೇಸಿಯ ಸೊಗಡು ಉದ್ದಕ್ಕೂ ಕತೆಗೆ ಸಹಜತೆಯನ್ನಿತ್ತಿದೆ. ಅನುವಾದದಲ್ಲೂ ಅದು ವ್ಯಕ್ತವಾಗಿದೆ. ಕೋಳಿಗಳ ವರ್ತನೆ, ಮಾನವನ ಚಿತ್ತದ ವ್ಯಾಪಾರಗಳು ಒಟ್ಟೊಟ್ಟಿಗೆ ಸೊಗಸಾಗಿ ಒಡಮೂಡಿವೆ.

'ಗುಲಾಬಿಯ ಅತ್ತರು' ಕಥೆಯಲ್ಲಿ ಹೇಗ ಅಧಿಕಾರಶಾಹಿ ನಿರ್ದಯರಾಗಿ ವರ್ತಿಸಿ ಕೈಕೆಳಗಿನವರಿಗೆ ಹಿಂಸೆಯನ್ನು ಕೊಡಬಹುದೆಂಬುದು ನಿರೂಪಿತವಾಗಿದೆ. ಉಳಿದ ಕಥೆಗಳಲ್ಲಿ ಗಮನಿಸಬೇಕಾದಂಥ ಅಂಶಗಳೇನೂ ಇಲ್ಲ. ಆದರೆ ಕನ್ನಡದ ಕಥೆಯಾದ 'ಧನ್ವಂತರಿಯ ಚಿಕಿತ್ಸೆ' ನಿರೂಪಣಾ ವಿಧಾನದಿಂದ, ಸಂಕೇತಾರ್ಥಗಳ ಮೂಲಕ ಕತೆಗಿಂತ ಹೆಚ್ಚಾಗಿ ಕವಿತೆಯಾಗಿದೆ. ಮೂಲ ಕಥೆಗಾರರಾದ ಶ್ರೀ ಕುವೆಂಪು ಅವರೂ ಈ ಸಂಕಲನದ ಸಂಪಾದಕರಾದ ಶ್ರೀ ಹ.ಕ. ರಾಜೇಗೌಡರೂ ಈ ಕಥೆಯನ್ನು ಮೆಚ್ಚಿಕೊಂಡಿದ್ದಾರೆ. ಶ್ರೀ ಕುವೆಂಪುರವರ ಕಥೆಗಳಲ್ಲೇ ಈ ಕಥೆಗಿನ್ನ ಉತ್ತಮವಾದ ಕಥೆಗಳಿದ್ದುವು ಎಂದು ಹೇಳಿದರೆ ತಪ್ಪಾಗಲಾರದು.

ಈ ಕಥಾಸಂಕಲನದ ಕಥೆಗಳ ಒಂದು ಗುಣ ನೇರವಾಗಿ ಸರಳವಾಗಿರುವುದು. ಅಂದರೆ ಯಾವುದೇ ನಾವೀನ್ಯತೆ ಇಲ್ಲವೆಂದಲ್ಲ. ಕಥಾತಂತ್ರ, ಪಾತ್ರಪೋಷಣೆ, ಸನ್ನಿವೇಶ ಚಿತ್ರಣ ಈ ಯಾವ ದೃಷ್ಟಿಯಿಂದ ನೋಡಿದರೂ ಈ ಕಥೆಗಳು ಮೆಚ್ಚಿಕೆಯಾಗುತ್ತವೆ. ಈ ಕಥೆಗಳನ್ನು ಓದಿದಾಗ ಮಾನಸಿಕವಾಗಿ ಭಾರತ ಪ್ರವಾಸ ಮಾಡಿದ ಅನುಭವವಾಗುತ್ತದೆ. ಇಂಥ ಭಾಷಾಂತರಗಳಿಂದ ನಮ್ಮ ಸೋದರ ಭಾಷೆಗಳಲ್ಲಿ ನಡೆಯುತ್ತಿರುವ ಚಟುವಟಿಕೆ ಗೊತ್ತಾಗುವುದಲ್ಲದೆ ನಮ್ಮ ಸಾಹಿತ್ಯವನ್ನೂ ಅದರೊಡನೆ ವಿಮರ್ಶಾತ್ಮಕವಾಗಿ ಹೋಲಿಸಿ ನೋಡಿಕೊಳ್ಳಬಹುದು. ಇಂಥ ಅನುವಾದ ಸಾಹಿತ್ಯ ಹೆಚ್ಚುಹೆಚ್ಚಾಗಿ ಬಂದಂತೆಲ್ಲಾ ಕನ್ನಡ ಸಾರಸ್ವತ ಲೋಕಕ್ಕೆ ಹೆಚ್ಚುಹೆಚ್ಚು ಉಪಯೋಗವಾಗುತ್ತದೆ.

'ಪಂಚವಟಿ', 'ಕಥಾಭಾರತಿ ಹಿಂದೀ ಕಥೆಗಳು', 'ಕಥಾಭಾರತಿ ತಮಿಳು ಕಥೆಗಳು' ಮತ್ತು 'ಕಥಾಭಾರತಿ' ಈ ನಾಲ್ಕು ಅನುವಾದಿತ ಕೃತಿಗಳು. ಮೊದಲಿನದು ತೆಲುಗಿನಿಂದಲೂ ಎರಡನೆಯದು ಮತ್ತು ಮೂರನೆಯದು ಹಿಂದಿ ಮತ್ತು ತಮಿಳು ಭಾಷೆಗಳಿಂದಲೂ ನಾಲ್ಕನೆಯದು ಭಾರತರಾಜ್ಯಾಂಗ ಮಾನ್ಯಮಾಡಿರುವ ಹದಿನಾಲ್ಕು ಭಾಷೆಗಳಿಂದಲೂ ಅನುವಾದಿತವಾದುವು. ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಅವರು ಅಂತರ ಭಾರತೀಯ ಪುಸ್ತಕಮಾಲೆಯಲ್ಲಿ ಭಾರತದ ಪ್ರಾಂತೀಯ ಭಾಷೆಗಳ

ಉತ್ತಮ ಕಥಾಸಂಕಲನವನ್ನು ತರುವ ಒಂದು ಯೋಜನೆ ಹಾಕಿಕೊಂಡಿದ್ದಾರೆ. ಆ ಯೋಜನೆಯ ಪ್ರಕಾರ ಪ್ರಕಟವಾದ ಕೃತಿಗಳು 'ಕಥಾಭಾರತಿ ಹಿಂದೀ ಕಥೆಗಳು' ಮತ್ತು 'ಕಥಾಭಾರತಿ ತಮಿಳು ಕಥೆಗಳು' ಇವುಗಳ ಸಂಪಾದಕರಿಗೆ ಒಂದು ಮಿತಿಯನ್ನು ಹಾಕಿರುವುದರಿಂದ ಅವರ ಕೈಗಳನ್ನು ಕಟ್ಟಿದಂತಾಗಿದೆ. ಆದರೂ ಈ ಸಂಕಲನಗಳಲ್ಲಿ ಬಂದಿರುವ ಕಥೆಗಳಿಗಿಂತ ಇನ್ನೂ ಉತ್ತಮವಾದ ಕಥೆಗಳನ್ನು ಆರಿಸಬಹುದಿತ್ತೇನೋ ಎನ್ನಿಸುತ್ತದೆ. 'ಪಂಚವಟಿ'ಯ ಸಂಪಾದಕರಿಗೆ ಯಾವುದೇ ರೀತಿಯ ಕಟ್ಟುಪಾಡುಗಳು ಇದ್ದಂತೆ ಇಲ್ಲ. ಹಾಗಿದ್ದೂ ಅವರ ಆಯ್ಕೆ ಉತ್ತಮವಾಗಿಲ್ಲ. ಇಂತಹ ಕಥೆಗಳನ್ನು ಅನುವಾದ ಮಾಡುವುದರಿಂದ ಅನುವಾದಗೊಳ್ಳುವ ಭಾಷೆಯ ಸಾಹಿತ್ಯದ ಬಗ್ಗೆ ನಮ್ಮಲ್ಲಿ ಲಘುಭಾವನೆ ಉಂಟಾಗುತ್ತದೆ. ಅಲ್ಲದೆ ಇಂತಹ ಕಥೆಗಳಿಂದ ನಮ್ಮ ಭಾಷೆಯ ಸಾಹಿತ್ಯದ ಹಿರಿಮೆ ಗರಿಮೆಗಳೇನೂ ಹೆಚ್ಚಾಗುವುದಿಲ್ಲ. ಇಂತಹ ಅನುವಾದ ವ್ಯರ್ಥಶ್ರಮ ಎನ್ನದೆ ವಿಧಿಯಿಲ್ಲ. ಅನುವಾದಕ್ಕೆ ಕಥೆಗಳನ್ನು ಆರಿಸುವಾಗ ವಸ್ತು, ಶೈಲಿ, ಭಾಷೆ, ತಂತ್ರ ಈ ದೃಷ್ಟಿಗಳಿಂದ ಉತ್ತಮವಾದ ಕಥೆಗಳನ್ನು ಆರಿಸುವುದು ಒಳ್ಳೆಯದು. 'ಕಥಾಭಾರತಿ'ಯ ಸಂಪಾದಕರು ಒಳ್ಳೆಯ ಅಭಿರುಚಿಯನ್ನು ಕಥೆಗಳ ಆಯ್ಕೆಯಲ್ಲಿ ತೋರಿದ್ದಾರೆ. ಅವರ ಶ್ರಮ ಸಾರ್ಥಕ. ಭಾರತದ ಗ್ರಾಮ್ಯಜೀವನಕ್ಕೆ ಸಂಬಂಧಿಸಿದ ಕಥಾಸಂಕಲನ ಮತ್ತು ವಿಶ್ವಜಾನಪದ ಕಥಾಸಂಕಲನ ಹೊರತರುವ ಅವರ ಯೋಜನೆ ಯಶಸ್ವಿಯಾಗಲಿ ಎಂದು ಹಾರೈಸಬಹುದು. ಬೇರೆ ಭಾಷೆಗಳಿಂದ ನಮ್ಮ ಭಾಷೆಗೆ ಕಥೆಗಳು ಅನುವಾದಗೊಳ್ಳುತ್ತಿವೆ, ನಿಜ. ಆದರೆ ನಮ್ಮ ಭಾಷೆಯ ಕಥೆಗಳು ಬೇರೆ ಭಾಷೆಗಳಿಗೆ ಎಷ್ಟೆಷ್ಟು ಭಾಷಾಂತರವಾಗಿವೆ ಎಂದು ನಮ್ಮ ಲೇಖಕರನ್ನು ಪ್ರಶ್ನೆ ಮಾಡಿದರೆ ತಪ್ಪಾಗಲಿಕ್ಕಿಲ್ಲ.

ಮೃಗಶಿರ

ಮೃಗಶಿರ ಹನ್ನೊಂದು ಕಥೆಗಳನ್ನೊಳಗೊಂಡ ರಾ.ಶಿ. ಅವರ ಕಥಾಸಂಕಲನ. ಪ್ರಾಣಿಗಳ ಸ್ವಭಾವ ಇಂದಿಗೂ ಮಾನವರಲ್ಲಿ ಹೇಗೆ ಕಂಡುಬರುತ್ತದೆ ಎಂಬುದನ್ನು ಕಥೆಗಳ ಮೂಲಕ ರಾ.ಶಿ. ಅವರು ಹೃದಯಂಗಮವಾಗಿ ತೋರಿಸಿಕೊಟ್ಟಿದ್ದಾರೆ. ಈಸೋಪನ ಕಥೆಗಳಂತೆ, ಪಂಚತಂತ್ರದ ಕಥೆಗಳಂತೆ ಹೊರನೋಟಕ್ಕೆ ಕಂಡರೂ ಅವುಗಳಿಗಿನ್ನ ಭಿನ್ನವಾದ ಕಥೆಗಳು ಓದುಗರ ಮನಸ್ಸನ್ನು ಸೆರೆಹಿಡಿಯುವುದರಲ್ಲಿ ಆಶ್ಚರ್ಯವಿಲ್ಲ. ಕಥೆಗಳ ಕೊನೆಯಲ್ಲಿ ಬರುವ ಮಾನವನ ನಡತೆಯೊಡನೆ ಮೃಗೀಯ ಸ್ವಭಾವದ ಹೋಲಿಕೆ ಕಥೆಯೊಡನೆ ಹಾಸುಹೊಕ್ಕಾಗಿ ಕಥೆಯ ಅಂಗವೇ ಎಂಬಂತೆ ಕಾಣುತ್ತದೆ. ಮನೋ ವಿಶ್ಲೇಷಣಾತ್ಮಕ ಕಥೆಗಳಿಂದಾಗಬಹುದು ಪರಿಣಾಮವೇ ಈ ಕಥೆಗಳಿಂದಲೂ ಆಗುತ್ತದೆ. ಕಥಾಸಂಕಲನ ಕೊನೆಯಲ್ಲಿ ಮೃಗಗಳ ಸ್ವಭಾವ, ಅವುಗಳಲ್ಲಿ

ಕಾಮ, ಇವುಗಳ ಮತ್ತು ಮನುಷ್ಯ ನೈಸರ್ಗಿಕವಾಗಿ ಸಂತಾನಾಭಿವೃದ್ಧಿಗಾಗಿ ರತಿಕ್ರೀಡೆಯಲ್ಲಿ ತೊಡಗದೆ ಮನೋರಂಜನೆಗಾಗಿ ಅನೈಸರ್ಗಿಕವಾಗಿ ಹೇಗೆ ರತಿಕ್ರೀಡೆಯಲ್ಲಿ ತೊಡಗಿದ್ದಾನೆ ಎಂಬ ದೀರ್ಘವೂ ವಿವರಣಾತ್ಮಕವೂ ಆದ ಪ್ರಸ್ತಾವನೆ ತುಂಬ ಉಪಯುಕ್ತವಾಗಿರುವುದಲ್ಲದೆ ಈ ಕಥಾಸಂಕಲನ ಬೆಲೆಯನ್ನು ಹೆಚ್ಚಿಸಿದೆ.

ಅಶ್ವತ್ಥರ ಕಥೆಗಳು

ಸೊಸೆಗೊಂದು ಉಡುಗೊರೆ ಅಶ್ವತ್ಥರ ಹದಿನಾರು ಕಥೆಗಳ ಸಂಕಲನ. ಮೊದಲ ಕಥೆ 'ಕಾನೂನಿನಂತೆ'. ಮರಣದಂಡನೆಗೆ ಒಳಗಾದ ವ್ಯಕ್ತಿಯೊಬ್ಬ ಅದರ ನಿರೀಕ್ಷೆಯ ಯಾತನೆಯನ್ನು ಅನುಭವಿಸಲಾರದೆ ಆತ್ಮಹತ್ಯೆಗೆ ಪ್ರಯತ್ನಿಸಿದಾಗ ಅವನನ್ನು ಬಹು ಕಷ್ಟದಿಂದ ಉಳಿಸಿ ನಂತರ ಕಾನೂನಿನಂತೆ ಗಲ್ಲಿಗೇರಿಸುತ್ತಾರೆ! ಈ ಕಥೆಯಲ್ಲಿ ಕುರುಡು ಕಾನೂನನ್ನು ಕುರಿತ ವ್ಯಂಗ್ಯವಿದೆ. ಈ ಕಥೆಯನ್ನೋದಿದಾಗ ಪರ್ವತ ವಾಣಿಯವರ ನಾಟಕವೊಂದು ನೆನಪಿಗೆ ಬರುತ್ತದೆ. 'ಒಂದು ಸಾಹಸ' ಮೆಣಸಿನಪುಡಿ ಮಾಡಲು ಹೆದರುತ್ತಿದ್ದ ಲಲಿತ ಮೊದಲು ತೌರಿನಿಂದ ಅದನ್ನು ತರಿಸಿಕೊಳ್ಳುತ್ತಿದ್ದು, ಒಂದು ಸಾರಿ ತಾನೆ ಅದನ್ನು ತಯಾರು ಮಾಡಲು ಹೊರಟು ಪಟ್ಟ ಬವಣೆಯ ಕಥೆ. ಕಥೆಯ ಉದ್ದಕ್ಕೂ ತಿಳಿನವಿರಾದ ಹಾಸ್ಯವಿದೆ. ಈ ಕಥೆ ಆನಂದರ ಕಥೆಗಳನ್ನು ನೆನಪಿಗೆ ತರುತ್ತದೆ. ತಿಂದ ಊಟವನ್ನು ಅರಗಿಸಲಾರದೆ ಒದ್ದಾಡುತ್ತಿದ್ದವನು ಸಂಗದಪಳ್ಳಿಯ ಸಂಗಮೇಶ್ವರನನ್ನು ನೋಡಲು ಹೋಗಿ ಅಲ್ಲಿಯ ಕಾಳಿಲಿಂಗವನ್ನೂ, ಗರ್ಭಗುಡಿಯ ಹಿಂದೆ ತೀರ್ಥಕೊಳದ ಬಳಿ ಅಲುಗಾಡಿದ ಚಪ್ಪಡಿಯನ್ನೂ ಕಂಡು, ಅನಂತರ ಆಯಾಸದಿಂದ ನಿದ್ರೆಹೋದಾಗ - ಮಾಸ್ತಿ ಅವರ 'ಸೋಜಿಗದ ಹೊನಲು'ವಿನ ಪ್ರಭಾವದಿಂದಲೊ, ರೋಮನ್ನರ ಐಸಿಸ್ ಗುಡಿಯ ಕಥೆಯ ನೆನಪಿನಿಂದಲೊ - ಕಾಳಿಲಿಂಗಕ್ಕೂ ದೇವಾಲಯಕ್ಕೂ ಸಂಬಂಧವುಂಟಾಗಿ ಕಲ್ಪಿತ ಕಥೆಯೊಂದು ಕನಸಿನ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ - 'ಪೂಜಾರಿಯ ಕಥೆ'ಯಲ್ಲಿ. 'ಉತ್ಸವ' ಕಥೆಯಲ್ಲಿ ಬುದ್ಧಿಜೀವಿಗಳೆನ್ನಿಸಿ ಕೊಂಡವರು ಯಾವ ನಿಯಮಗಳೂ ತಮಗೆ ಅನ್ವಯಿಸುವುದಿಲ್ಲ ಎಂಬುದನ್ನು ಕಾರ್ಯತಃ ತೋರಿಸಿಕೊಡುತ್ತಾರೆ. ಪ್ರೊಫೆಸರುಗಳೂ ಪ್ರಿನ್ಸಿಪಾಲರುಗಳೂ ಆಗಿರುವ ವಿದ್ಯಾವಂತರ ಗುಂಪುಗಾರಿಕೆಯನ್ನೂ ಸ್ವಾರ್ಥಪರತೆಯನ್ನೂ ಎತ್ತಿ -ತೋರಿಸಲೋಸುಗವೇ ಈ ಕಥೆಯನ್ನು ಬರೆದಂತಿದೆ. 'ಸಂಕಟ ವಿಮೋಚನೆ' ಕಥೆಯಲ್ಲಿ ಜ್ಯೋತಿಷ್ಯವನ್ನು ನಂಬಿ ತನ್ನ ಬಾಳನ್ನು ಹಾಳುಮಾಡಿಕೊಂಡ ವಿಶ್ವನಾಥ ಮತ್ತು ಮಂಗಳೆಯರ ಕಥೆ ಬರುತ್ತದೆ. ವಿಶ್ವನಾಥನೇ ತನ್ನ ಕಥೆಯನ್ನು ಹೇಳಿಕೊಳ್ಳುತ್ತಾನೆ. 'ಸೀರೆಯ ವ್ಯಾಪಾರ' ಕಥೆಯ ಗೋಪಾಲ ಮತ್ತು ರಾಧೆಯರ ಸ್ಥಿತಿಗತಿಗಳು ಬೆಲೆಬಾಳುವ ಸೀರೆಯನ್ನು ಕೊಳ್ಳುವಂತಿರಲಿಲ್ಲ. ಅಂಗಡಿಯ ಮಾಲೀಕ ರಾಧಳ ಆಸೆಯನ್ನು ಗಮನಿಸಿ

ಸೀರೆಯನ್ನು ಅವಳಿಗೆ ತಿಳಿಯದಂತೆ ಉಡುಗೊರೆಯಾಗಿ ಕೊಡುತ್ತಾನೆ. ರಾಧಳ ಆಸೆ, ಸೇಠಜಿಯ ವ್ಯವಹಾರ ಚಾತುರ್ಯ, ಮಾನವೀಯ ದೃಷ್ಟಿಗಳು ಓದುಗರ ಮನಸ್ಸನ್ನು ಸೆಳೆಯುತ್ತವೆ. 'ಧರ್ಮ ಕೊಂಡದ ಕಥೆ'ಯಲ್ಲಿ ಹಿಂಧೂಧರ್ಮ (ಬ್ರಾಹ್ಮಣ ಸಮಾಜ) ಹೊರ ಆಚಾರಗಳಿಗೇ ಕಟ್ಟುಬಿದ್ದು ಶೂನ್ಯವೂ, ಶುಷ್ಕವೂ, ದಯಾರಹಿತವೂ ಆಗಿರುವುದನ್ನು, ಆದರಿಂದ ಹೇಗೆ ಅನೇಕ ಜೀವಿಗಳು ಬಲಿಯಾಗುತ್ತಿದ್ದಾರೆಂಬುದನ್ನು ತೋರಿಸುತ್ತದೆ. ಈ ಕಥೆ ಎಂ.ಆರ್.ಶ್ರೀ. ಅವರ 'ಧರ್ಮದುರಂತ'ವನ್ನು ನೆನಪಿಗೆ ತರುತ್ತದೆ. ಸೂರಪ್ಪ ಗಂಗಮ್ಮರಲ್ಲಿ ಅನುಕಂಪ, ದಯಾಗುಣಗಳಿದ್ದರೂ ಹೇಗೆ ಅವು ಸಮಾಜಕ್ಕೆ ಹೆದರಿ ಕ್ರಿಯಾ ಹೀನವಾಗಬೇಕಾಗುತ್ತದೆಂಬುದು, ಹೊರ ಆಚಾರವನ್ನೇ ಶ್ರೇಷ್ಠವೆಂದು ನಂಬಿರುವ ಗುಂಡಮ್ಮ, ಕಾಳಪ್ಪ ಶಾಸ್ತ್ರಿಗಳು, ಅನುಕಂಪೆಗೆ ಪಾತ್ರಳಾಗುವ ದೇವು (ದೇವಮ್ಮ) ಇವರ ಪಾತ್ರಗಳು ಕಥೆಯಲ್ಲಿ ಚೆನ್ನಾಗಿ ಮೂಡಿಬಂದಿವೆ. 'ಯೋಗಾಭ್ಯಾಸ'ದಲ್ಲಿ ಪ್ರಕೃತಿಗೆ ವಿರುದ್ಧವಾದ ಬ್ರಹ್ಮಚರ್ಯವನ್ನು ಕೈಗೊಳ್ಳುತ್ತೇನೆ ಎಂದು 'ಯೋಗಾಭ್ಯಾಸ' ಪ್ರಾರಂಭಮಾಡಿದ ಆರುಮಕ್ಕಳ ತಂದೆ ಮೋತಾಬಾಯಿಯ ಸಂಸಾರಕ್ಕೆ ಹೊಸ ಎರಡು ಜೀವಿಗಳು ಬಂದು ಸೇರಿಕೊಳ್ಳುತ್ತವೆ. ಹೀಗೆ ಅವನ ವ್ಯರ್ಥಸಾಹಸ ನಗೆಬರಿಸುತ್ತದೆ. 'ಆಗಮನ' ಸಿಮ್ಲಾದಲ್ಲಿ ಉದ್ಯೋಗದಲ್ಲಿರುವ ಲೇಖಕ, ರಂಗಪ್ಪ ಮತ್ತು ರಾಯರು ತಮ್ಮ ತಮ್ಮ ಮಡದಿಯರನ್ನು ನಿರೀಕ್ಷಿಸುವ ಕಥೆ. ಈ ಕಥೆ ಮಾಸ್ತಿ ಅವರ 'ರಂಗಪ್ಪನ ದೀಪಾವಳಿ' ಮತ್ತು 'ರಂಗಪ್ಪನ ಕೋರ್ಟ್‌ಶಿಪ್' ಕಥೆಗಳನ್ನು ನೆನಪಿಗೆ ತರುತ್ತದೆ. ಕಥೆಯ ಉದ್ದಕ್ಕೂ ನವಿರಾದ ಹಾಸ್ಯದ ಲೇಪನವಿದೆ. 'ಮೇಲೆಲ್ಲ ತಳಕು ಒಳಗಲ್ಲ ಹುಳುಕು' ಎಂಬ ಮಾತನ್ನು ನೆನಪಿಗೆ ತರುವ ಸೋಗಿನ ಶ್ರೀಮಂತಿಕೆಯ, ದೊಡ್ಡಸ್ತಿಕೆಯ ಕಥೆ 'ಸೊಸೆಗೊಂದು ಉಡುಗೊರೆ' ವ್ಯಂಗ್ಯದಿಂದ ಕೂಡಿದೆ. 'ಹವಾಲ್ದಾರ' ಕರ್ತವ್ಯನಿಷ್ಠ ಹವಾಲ್ದಾರನೊಬ್ಬನ ಮಾನವೀಯ ಕಥೆ. 'ಭಯ್ಯಾನ ಗಣಪತಿ'ಯಲ್ಲಿ ಮುಗ್ಧ ಮನಸ್ಸಿನ ಅವಿನಾಶನ (ಮೂರು ವರ್ಷದ ಮಗು) ಗಣಪತಿ ವಿಗ್ರಹದ ಬಗ್ಗೆ ಇರುವ ಮೋಹವನ್ನು (ಅದನ್ನು ಭಕ್ತಿ ಎಂದು ಕರೆಯಲಾಗದು) ಕಾಣುತ್ತೇವೆ. ಇದು ಒಂದು ಸುಂದರವಾದ ಕಥೆ. 'ವ್ಯಭಿಚಾರ' ಕಥೆಯಲ್ಲಿ ಹೊಟ್ಟೆಯ ಪಾಡಿಗಾಗಿಯೊ, ಸನ್ನಿವೇಶ ಫಲದಿಂದಲೊ ವ್ಯಭಿಚಾರಕ್ಕಿಳಿದಿದ್ದ ಹುಡುಗಿ ತಕ್ಕ ಅವಕಾಶ ದೊರೆತ ಕೂಡಲೆ ವ್ಯಭಿಚಾರ ವೃತ್ತಿಯಿಂದ ದೂರವಾಗಲು ಯತ್ನಿಸುತ್ತಾಳೆ. ಈ ಕಥೆಯಲ್ಲಿ ಉದ್ದಕ್ಕೂ ವ್ಯಭಿಚಾರದ ನಾನಾ ಮುಖಗಳನ್ನು ಪರಿಚಯಿಸಿದ್ದಾರೆ. ಕಥೆಯ ಕೊನೆಯಲ್ಲಿ ಬರುವ ವ್ಯಭಿಚಾರದ ವ್ಯಾಖ್ಯಾನ ತೀರ ವಾಚ್ಯವಾದಂತೆನಿಸುತ್ತೆ. ಹೊರ ಆಚಾರವನ್ನೇ ಭಕ್ತಿ ಎಂದು ಭ್ರಮಿಸಿ ಬಾಳನ್ನು ಹಾಳುಮಾಡಿಕೊಳ್ಳುವ 'ದೇವಿಯರ' ಬಗ್ಗೆ ಕಥೆಯ ಉದ್ದಕ್ಕೂ ನವಿರಾದ ವ್ಯಂಗ್ಯವೂ, ತಿರಸ್ಕಾರವೂ ಇದೆ. ಪ್ರೊಫೆಸರರ ಮರೆವಿನ ಬಗ್ಗೆ ಹಾಸ್ಯ ಚಟಾಕಿಗಳನ್ನು ಹಾರಿಸುವ ಕಥೆ 'ನಾಚಿಗೇಡು'. ಮರೆವಿಗೆ

ತಾವು ಆಕ್ಷೇಪವೆಂದು ಹೇಳಿಕೊಂಡ ಪ್ರೊ|| ಮರವಾಡರು (ಹೆಸರಿನಲ್ಲಿರುವ ವ್ಯಂಗ್ಯವನ್ನು ಗಮನಿಸಿ) ತಾವು ರೈಲಿನಲ್ಲಿ ತಮ್ಮ ಹ್ಯಾಟನ್ನು ಮರೆತು ಪ್ರೊಫೆಸರ ಮರೆವಿಗೆ ಜೀವಂತ ಸಾಕ್ಷಿಯಾಗುವುದು ಹಾಸ್ಯ ಚಟಾಕಿಗಳ ಮಾಲೆಗೆ ಸೇರಿದ ಮತ್ತೊಂದು ಚಟಾಕಿ. 'ಖುಷಿ ಮಹಮ್ಮ'ದ ಹಾಸ್ಯಪ್ರಧಾನವಾದ ಕಥೆ. ಓದಿ ನಗಬಹುದು. ಖುಷಿ -ಮಹಮ್ಮದನಿಗೂ ಅವನ ಹೆಂಡತಿ ಮೆಹರ ಉನ್ನೀಸಳಿಗೂ ನಡೆಯುವ ಸಂಭಾಷಣೆಯಲ್ಲಿ ಕಮ್ಯೂನಿಸ್ಟ್ ತತ್ವ ಇಣಿಕಿ ನೋಡುತ್ತೋ ಏನೊ ಅನ್ನಿಸುತ್ತೆ.

ಅಶ್ವತ್ಥರಿಗೆ ಕಥೆಗಾರಿಕೆ ನೀರು ಕುಡಿದಂತೆ. ಯಾವ ಕಥೆಯನ್ನಾದರೂ ಬೇಸರ ಬರದಂತೆ ಹೇಳಬಲ್ಲರು. ಅದಕ್ಕೆ ತಕ್ಕಂತಹ ನುಡಿಗಟ್ಟು. ಇವರ ಕಥೆಗಳು ಮಾಸ್ತಿ, ಆನಂದರ ಕಥೆಗಳನ್ನು ನೆನಪಿಗೆ ತರುತ್ತವೆ. ಕಥೆಗಳಲ್ಲಿ ನವಿರಾದ ಹಾಸ್ಯ, ವ್ಯಂಗ್ಯ, ಸಮಾಜ ಸುಧಾರಣೆಯ ಬಗ್ಗೆ ಕಳಕಳಿ, ಮೂಢ ನಂಬಿಕೆಗಳು ಆಚಾರಗಳ ಬಗ್ಗೆ ಆಕ್ರೋಶ ಇವು ಕಂಡುಬರುತ್ತವೆ. ಕಥೆಗಳೆಲ್ಲವೂ ಸಾಮಾನ್ಯವಾಗಿ ಸುಸಂಸ್ಕೃತ ವರ್ಗಕ್ಕೆ ಅದರಲ್ಲೂ ಪ್ರೊಫೆಸರುಗಳಿಗೆ ಸಂಬಂಧಿಸಿದ್ದು. ಇತರ ಕಥೆಗಳೂ ಇಲ್ಲದಿಲ್ಲ. ಉದಾಹರಣೆಗೆ 'ಹವಾಲ್ದಾರ', 'ಸೊಸೆಗೊಂದು ಉಡುಗೊರೆ', 'ಸೀರೆಯ ವ್ಯಾಪಾರ', 'ಧರ್ಮಕೊಂಡದ ಕತೆ'... ಇತ್ಯಾದಿ ರಮ್ಯ ಸಂಪ್ರದಾಯದ ಕಥೆಗಳು ಇವರಲ್ಲಿ ಮುಂದುವರಿಯುತ್ತಿವೆ. ನವ್ಯ ಕಥೆಗಳನ್ನು ಓದಿ ಅರ್ಥಮಾಡಿಕೊಳ್ಳಲಾರದ ಅಥವಾ ಯೋಚಿಸಲಾರದ ಓದುಗರಿಗೆ ಅಶ್ವತ್ಥರ ಕಥೆಗಳು ಸೊಗಸುತ್ತವೆ. ಹೀಗೆಂದರೆ ಅಶ್ವತ್ಥರಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲ. ಈ ಸಂಕಲನದಲ್ಲಿ ಬೇರೆಬೇರೆಯ ಕಾಲದಲ್ಲಿ ಬರೆದ ಕಥೆಗಳು ಸೇರಿವೆ. ಅವುಗಳ ಕಾಲವನ್ನು ಸೂಚಿಸಿದ್ದರೆ ಚೆನ್ನಾಗಿರುತ್ತಿತ್ತು.

ಗುಂಪಿನಲ್ಲಿ ಕಂಡ ಮುಖ

ಗುಂಪಿನಲ್ಲಿ ಕಂಡ ಮುಖ ಈಶ್ವರಚಂದ್ರರ ಎರಡನೆಯ ಕಥಾಸಂಕಲನ. ಇದರಲ್ಲಿ ಹದಿಮೂರು ಕಥೆಗಳಿವೆ. ಈ ಸಂಕಲನದ ಮೊದಲನೆಯ ಕಥೆ 'ಗುಂಪಿನಲ್ಲಿ ಕಂಡ ಮುಖ'. ಕಥಾನಾಯಕನಿಗೆ ತನ್ನ ಜಮೀನನ್ನು ಜೀವನಕ್ಕೆ ಅವಲಂಬಿಸಿಕೊಂಡಿದ್ದ ಕೆಂಪಯ್ಯನನ್ನು ಗುತ್ತಿಗೆಯಿಂದ ಬಿಡಿಸಿದಾಗ ಅವನ ಹೆಂಡತಿಯ ಗೋಳು ಕಣ್ಣಿಗೆ ಕಟ್ಟಿದಂತಾಗುತ್ತದೆ. ಕಥಾನಾಯಕನಿಗೆ ತಾನು ಮಾಡಿದ್ದು ಅನ್ಯಾಯ ಎನಿಸುತ್ತದೆ. ಆ ಪಾಪಪ್ರಜ್ಞೆ ಸದಾ ಅವನನ್ನು ಕಾಡುತ್ತದೆ. ಎಲ್ಲೆಲ್ಲಿಯೂ ಕೆಂಪಯ್ಯನ ಹೆಂಡತಿಯ ದುಃಖಪೂರಿತ ಕಣ್ಣುಗಳು ತನ್ನನ್ನು ಹಿಂಬಾಲಿಸುತ್ತಿವೆ ಎಂಬ ಭ್ರಾಂತಿ ಉಂಟಾಗುತ್ತದೆ.ಈ ಪಾಪಪ್ರಜ್ಞೆಯ ಸೋಂಕು ಇಲ್ಲದ ಕಥಾನಾಯಕನ ಮಗಳಿಗೆ ಕೆಂಪಯ್ಯನ ಹೆಂಡತಿ ಮನೆಯ ಬಳಿ ಮತ್ತು ಕಡಲೆಕಾಯಿ ಪರಿಷೆಯಲ್ಲಿ ಕಾಣಿಸಿಕೊಂಡದ್ದು ಆಶ್ಚರ್ಯ. ಅದಕ್ಕೆ ಲೇಖಕರೇ ಸಮಾಧಾನ ಹೇಳಬೇಕು. ಅದನ್ನು ಬಿಟ್ಟರೆ ಕಥೆ ಸುಂದರವಾಗಿದೆ.

'ಉಸುಬು ತುಂಬಿದ ಬಾವಿ'ಯ ಉಸುಬು ತುಂಬಿದ ಬಾವಿ ಸಾಹುಕಾರರು ಒಡ್ಡುವ ಆಸೆ ಆಮಿಷಗಳಿಗೆ, ನಯವಾದ ಮಾತುಗಾರಿಕೆಗೆ ಸಂಕೇತವಾದರೆ, ಉಸುಬಿಗೆ ಹುಲ್ಲುಕಡ್ಡಿಯ ಆಸೆಗಾಗಿ ಹೋಗಿ ಉಸುಬಿನಲ್ಲಿ ಸಿಕ್ಕುವ ಹಸು 'ದೇವಿ' ಮುಗ್ಧರಿಗೆ ಸಂಕೇತವಾಗುತ್ತದೆ. ಉಸುಬಿನಲ್ಲಿ ಸಿಕ್ಕಿಬಿದ್ದ ಹಸು 'ನಿಮಗೆ ಹಾಲು ಕೊಡಬೇಕೆಂದೇ ಹುಲ್ಲು ತಿನ್ನಲು ಬಂದು ತಾನು ಉಸುಬಿನಲ್ಲಿ ಹೂತುಹೋದದ್ದಲ್ಲವೇ' ಎಂದು ಕೇಳುತ್ತಿರುವ ಹಾಗಾಗಿ ಈ ಆಲೋಚನೆ ಸಾಹುಕಾರನ ಹತ್ತಿರ ಸಾಲಮಾಡಿರುವ ತಂದೆ ಹೇಳಿದಂತೆ ಅನ್ನಿಸಿ, 'ಹಲ್ಲದಂಥ ಅರೆಘನ ಉಸುಬು ಅಗೆದಷ್ಟೂ ಜರುಗಿ, ಜರುಗಿ ಬರುವಾಗ ಮೂಡುವುದು' ಎಂಬ ವಿವರಣೆ ಸಾಹುಕಾರನ ಹಿಡಿತಕ್ಕೆ ಸಮನಾದ ಅರ್ಥವನ್ನು ಧ್ವನಿಸಿ ಕಥೆಯ ಸ್ವಾರಸ್ಯವನ್ನು ಹೆಚ್ಚಿಸುತ್ತದೆ. ಉತ್ತಮವಾದ ಕಥೆ ಇದು. 'ಬಿಳಲುಗಳು' ಕಥೆಯಲ್ಲಿ ಶುಭಾಶುಭಕ್ಕೆ ಸಾಕ್ಷಿಯಾಗಿರುವ ಆಲದ ಮರ ವಯಸ್ಸಾಗಿ ಈಗಲೋ ಆಗಲೋ ಅನ್ನುತ್ತಿರುವ ಅಜ್ಜಿಗೆ ಸಂಕೇತವಾಗುತ್ತದೆ. ಆ ಆಲದ ಮರದ ಕೆಳಗೆ ಹೇಗೆ ಗರಿಕೆ ಕೂಡ ಹುಟ್ಟುವುದಿಲ್ಲವೊ ಹಾಗೆ ಅಜ್ಜಿ ಇರುವವರೆಗೂ ಹೊಸ ಅಭಿಪ್ರಾಯಗಳು, ಆಚರಣೆಗಳು ಮನೆಯನ್ನು ಪ್ರವೇಶಿಸಲಾರವೆಂದು ರಾಜನಿಗೆ ಅನ್ನಿಸುತ್ತದೆ. 'ಮೇಲೆ ರೆಂಬೆಯ ಆಧಾರವನ್ನೂ ಕಳೆದುಕೊಳ್ಳುತ್ತಾ ಕೆಳಗೆ ಭೂಮಿಯಲ್ಲಿ ಸರಿಯಾಗಿ ಇಳಿಯಲಾರದೆ ಬಿಳಲುಗಳು ಅಗೀಗಿನಲ್ಲಿ ಕೆಳಗೆ ಬೀಳುವಂತಿದ್ದುವು, ಬಿದ್ದು ಮಣ್ಣಿನೊಡನೆ ಮಣ್ಣಾಗುವುದರಲ್ಲಿದ್ದುವು' ಎಂಬ ಬಿಳಲುಗಳ ವರ್ಣನೆ ಆದರ್ಶವನ್ನೂ ಹಿಡಿಯಲಾರದೆ ಸಮಕಾಲೀನ ವಾಸ್ತವವನ್ನೂ ಒಪ್ಪಿಕೊಳ್ಳಲಾರದೆ ಉದುರಿಹೋಗುವ ಎಲೆಯಂತಿರುವ ಅಜ್ಜಿಗೆ ಅನ್ವಯಿಸುತ್ತದೆ. ಹೀಗೆ ಮನೆಯ ಹಿಂದಿನ ಆಲದಮರದ ಬಗ್ಗೆ ರಾಜನಲ್ಲಿ ಮೂಡುವ ಆಲೋಚನೆಗಳು ಅಜ್ಜಿಗೆ ಅನ್ವಯವಾಗಿ ಕಥೆ ಹೆಚ್ಚು ಸ್ವಾರಸ್ಯಪೂರ್ಣವಾಗಿದೆ. 'ನಗಲಾರದವ' ಕಥೆಯಲ್ಲಿ ವಿಶೇಷವೇನೂ ಇಲ್ಲ. ಅಲ್ಲಿ ಬರುವ 'ಬಕಾಸುರ' ನಾಟಕದ ವರ್ಣನೆ 'ಲಂಚಾವತಾರ' ನಾಟಕವನ್ನು ಕುರಿತದ್ದು ಎನಿಸುತ್ತದೆ. 'ಯಾರೊ ಬಂದರು' ಕಥೆಯಲ್ಲಿ ಬರುವ ಕುರುಡ ಅಜ್ಜ, ಕಿವುಡಿ ಅಜ್ಜಿಯ ಚಿತ್ರಗಳು ಚೆನ್ನಾಗಿವೆ. ಕಥೆಯ ಕೊನೆಯಲ್ಲಿ ಮನೆಯ ಗೇಟನ್ನು ಬಾಗಿಲನ್ನು ತೆರೆದು ಯಾರೊ ಬಂದಂತೆ ನಂತರ ಹೋದಂತೆ ಅಜ್ಜನಿಗೆ ಆಗುವ ಅನುಭವ ಸಾವು ಬಂದು ಹೋದುದನ್ನು ಸೂಚಿಸುತ್ತದೆ. ಈ ಕಥೆ 'ಪಯಣ' ಕಥೆಯನ್ನು ನೆನಪಿಗೆ ತರುತ್ತಾದರೂ ಅದರಷ್ಟು ಪರಿಣಾಮಕಾರಿಯಾಗಿಲ್ಲ. 'ದಾರಿಯಲ್ಲಿ ಸಿಕ್ಕಿದ ಚಿತ್ರಗಳು' ಕಥೆಯಲ್ಲಿ ದಾರಿಯಲ್ಲಿ ಸಿಕ್ಕಿದ ಚಿತ್ರಗಳನ್ನು - ಸುಂದರಿಯೊಬ್ಬಳ ಚಿತ್ರವೂ ಸೇರಿ - ಮುಂದಿಟ್ಟುಕೊಂಡು ಕಟ್ಟುವ ಕಲ್ಪನೆ, ಕಾಣುವ ಕನಸು ಮನೋಹರವಾದುದು. ಕೇಶವಯ್ಯನಿಂದ ತಪ್ಪಿಸಿಕೊಳ್ಳಲು ಕುಶಲವಸ್ತು ಸಂಗ್ರಹಾಲಯಕ್ಕೆ ನುಗ್ಗಿ ರಾಧಾಕೃಷ್ಣರ ವಿಗ್ರಹಕ್ಕೆ ಮರುಳಾಗಿ ಅದನ್ನು ಕದಿಯುವ ಆಮಿಷಕ್ಕೆ ಒಳಗಾಗಿ ರಾಧಾಕೃಷ್ಣರ

ವಿಗ್ರಹವೆಂದು ಕುಂಕುಮದ ಭರಣಿಯನ್ನು ಕದ್ದು, ಒಂದು ದಿನವೆಲ್ಲಾ ಕಳ್ಳತನದ ಪ್ರಜ್ಞೆಯಿಂದ ಕ್ಲೇಶಪಟ್ಟು ಮಾರನೆಯ ದಿನ ಅದನ್ನು ಹಿಂದಿರುಗಿಸಲು ಬಂದರೆ ಅಂಗಡಿಯಲ್ಲಿ ನಿನ್ನೆ ನಮ್ಮ ಗಿರಾಕಿಗಳಿಗೆಲ್ಲಾ ಕುಂಕುಮದ ಭರಣಿಯನ್ನು ಮುಫತ್ತಾಗಿ ಕೊಟ್ಟೆವಲ್ಲಾ ಎನ್ನೋಣವೆ ನಟರಾಜನಿಗೆ 'ಆಮಿಷ' ಕಥೆಯಲ್ಲಿ. ನಿನ್ನೆ ಟೇಪುಕೊಂಡಿದ್ದ ನಟರಾಜನಿಗೆ ಏಕೆ ಕುಂಕುಮದ ಭರಣಿ ಮುಫತ್ತಾಗಿ ದೊರಕಲಿಲ್ಲವೆಂಬ ಒಂದು 'ಚುಲ್ಲಾರಿ' ಸಮಸ್ಯೆಯನ್ನು ಬಿಟ್ಟರೆ ಕಥೆಯ ಅನಿರೀಕ್ಷಿತ ಅಂತ್ಯ ಓದುಗರ ಮೇಲೆ ನಿರೀಕ್ಷಿತ ಪರಿಣಾಮವನ್ನೇ ಉಂಟುಮಾಡುತ್ತದೆ. ನಿರುದ್ಯೋಗಿಯೊಬ್ಬನ ಮನಸ್ಸಿನ ತಳಮಳವನ್ನೂ ಚಡಪಡಿಕೆಯನ್ನೂ ನಿರೂಪಿಸುವ ಕಥೆ 'ಗೋಡೆ'. ಹೆಂಡತಿ ಗಿರಿಜಳನ್ನು ಕಳೆದುಕೊಂಡು ಅವಳ ಆತ್ಮಶಾಂತಿಗಾಗಿ ಕೇರಿಗೆ ಅನ್ನ ಹಾಕಿಸಲಾರದೆ ಅದಕ್ಕಾಗಿ ತನ್ನ ಒಡೆಯರ ಬಳಿ ಸಾಲಕ್ಕಾಗಿ ಬಂದು ಯಾವ ಉತ್ತರವನ್ನೂ ಪಡೆಯದ ಲಿಂಗ ದೀನನೊ ಅಥವಾ ಗಿರಿಜಳ ಸಂಬಂಧ ಹೊಂದಿದ್ದು ಅದರ ಅನುಮಾನ ಲಿಂಗನಿಗೆ ಬಂದಿರಬೇಕೆಂದೂ ಹಣಕೊಟ್ಟರೆ ತನ್ನ ಅವಳ ಸಂಬಂಧ ನಿಜವೆಂದು ಲಿಂಗ ಮತ್ತು ಇತರರು ಭಾವಿಸಬಹುದೆಂದೂ ಹಣ ಕೊಡದಿದ್ದರೆ ಗಿರಿಜಳಿಗೆ ಮೋಸಪಡಿಸಿದಂತೆ ಆಗುವುದೆಂದೂ ಚಡಪಡಿಸುವ, ಲಿಂಗನಿಗೆ ಮುಖತೋರಿಸಲೂ ಅಂಜುವ ಲಿಂಗನ ಒಡೆಯನು ದೀನನೊ ಎಂಬ ಭಾವನೆ 'ದೀನ' ಕಥೆಯನ್ನು ಓದಿದಾಗ ಉಂಟಾಗುತ್ತದೆ. 'ಸುಳಿವು' ಕಥೆಯಲ್ಲಿ ಖಾಯಿಲೆ ಮಲಗಿದ್ದ ರಾಯರಿಗೆ ಸಾವಿನ ಸುಳಿವು ತಿಳಿದುಹೋಗಿತ್ತೋ ಏನೊ ಎನ್ನಿಸುತ್ತದೆ. ಅವರು ತಮ್ಮ ವಯಸ್ಸಿಗೆ ಬಂದ ಮಗ ರಮೇಶನನ್ನು ಮತ್ತೆ ಮತ್ತೆ ಕರೆಯುವ, ಅವನಿಂದ ಆಗಬೇಕಾದ ಕೆಲಸಗಳನ್ನು ಮಾಡಿಸುವ, ಅವನನ್ನು ಮುಂಡಾಡುವ ರೀತಿಯನ್ನು ಕಂಡರೆ ಈ ಭಾವನೆ ಖಚಿತವಾದ ಓದುಗರಿಗೆ ರಾಯರು ಕಂಡದ್ದು ತಮ್ಮ ಮಗ ರಮೇಶನ ಸಾವಿನ ಸುಳಿವು ಎಂದು ಕಥೆ ಪೂರೈಸಿದ ಮೇಲೆ ಗೊತ್ತಾಗುತ್ತದೆ. ಇದು ಕೂಡ ಅನಿರೀಕ್ಷಿತ ಮುಕ್ತಾಯವನ್ನೇ ಹೊಂದಿದೆ. 'ಬಂದಿ' ಕಥೆಯಲ್ಲಿ ರಾಜ ತಾನು ಬಳಪ ಕೊಟ್ಟು ಕೊಂಡಿದ್ದ ಜೀರುಂಡೆಗೆ ದಾರ ಕಟ್ಟಿ ಆಡಿಸುತ್ತಿದ್ದ. ಜೀರುಂಡೆ ಆ ದಾರದ ಪರಿಧಿಯೊಳಗೇ ಸುತ್ತಬೇಕು. ಹೀಗೆ ಅದು ಸ್ವಾತಂತ್ರ್ಯ ಕಳೆದುಕೊಂಡ ಬಂದಿ. ರಾಜನ ಅಕ್ಕ ಹೇಮ ತಂದೆ ತಾಯಿಗೆ ಹೆದರಿ ಕಾಲೇಜು-ಮನೆ, ಮನೆ-ಕಾಲೇಜು ತಪ್ಪಿದರೆ ಹತ್ತಿರದ ಒಂದಿಬ್ಬರು ಗೆಳತಿಯರ ಮನೆ ಹೀಗೆ ಮನಸ್ಸಿನ ಆಸೆ ಆಕಾಂಕ್ಷೆಗಳನ್ನು ಅದುಮಿ ಮತ್ತೊಂದು ರೀತಿಯ ಬಂದಿಯಾಗಿದ್ದಳು. ಕಥೆಯ ಉದ್ದಕ್ಕೂ ಈ ಸಾದೃಶ್ಯ ಬಂದು ಇದು ತೀರ ವಾಚ್ಯವಾಯಿತೇನೊ ಎನಿಸುತ್ತದೆ. 'ಒಂದೇ ಕೊಡೆಯ ಕೆಳಗೆ' ಕಥೆಯನ್ನು ಓದಿದಾಗ ಜನ್ನನ ಅನಂತನಾಥಪುರಾಣದ ಚಂಡಶಾಸನ ಕಥೆಯಲ್ಲಿ ಅವನ ಹೆಂಡತಿಯರು ಹೇಳುವ ಮಾತುಗಳು ನೆನಪಿಗೆ ಬರುತ್ತವೆ. ಇಲ್ಲಿಯೂ ಹಾಗೇ ಹೇಮಂತ ತನ್ನ

ಅಕ್ಕನ ಮಗಳು ಮನುವನ್ನು ಅಪೇಕ್ಷೆ ಪಟ್ಟರೆ ಅವಳ ಬಯಕೆಯ ವ್ಯಕ್ತಿ ಮತ್ತೆ ಯಾರೊ, ಹಾಗೆ ಕುಮುದ ಹೇಮಂತನನ್ನು ಅಪೇಕ್ಷಿಸಿದರೆ ಹೇಮಂತ ಅವಳಿಂದ ದೂರವಾಗಲು ಯತ್ನಿಸುತ್ತಾನೆ. ಪ್ರೇಮದ ಬಗೆಯೆ ಅಂತಹುದು. ಬಯಸಿದವರು ಬಯಸಿದವರಿಗೆ ಸಿಗುವುದಿಲ್ಲ. ಹೇಮಂತ ಮನುವಿಗೆ ಹೇಳಿದ-ಕೇಳಿದ-ಮಾತುಗಳನ್ನೇ ಹೇಳಿ-ಕೇಳಿ-ಕುಮುದ ಹೇಮಂತನನ್ನು ಪೇಚಿಗೆ ಸಿಕ್ಕಿಸುವುದು, ಕಥೆಯ ಸೊಗಸನ್ನು ಹೆಚ್ಚಿಸಿದೆ. 'ಕಣ್ಣೊತ್ತು' ಕಥೆಯಲ್ಲಿ ಮಮತಳನ್ನು ಯಾವ ಕಾರಣವೂ ಕೊಡದೆ ನಿರಾಕರಿಸಿದ ಶಶಿಧರ, ತನಗೆ ಕಣ್ಣಿನಲ್ಲಿ ಕಸಬಿದ್ದು ಕಣ್ಣೊತ್ತಾದಾಗ ಅದನ್ನು ನಿವಾರಿಸಲು ಅಯಾಚಿತವಾಗಿ ಆಗಲೆ ತಾಯಿಯಾಗಿದ್ದ ಮಮತಾ ಬಂದು ಎದೆ ಹಾಲನ್ನು ಕರೆದಾಗ ಅವಳ ಮಮತೆಯ ಸೋನೆಯಲ್ಲಿ ಕರಗಿಹೋಗುತ್ತಾನೆ. ಶಶಿಧರನ ಕಣ್ಣೊತ್ತು ಮಮತಳ ಬಗೆಗಿನ, ನೆನಪಿನ ಕಣ್ಣೊತ್ತಾಗಿ ಸಂಕೇತವಾಗಿದೆ ಕಥೆಯಲ್ಲಿ.

ಕಥೆಗಾರ ಈಶ್ವರಚಂದ್ರ ಅವರಿಗೆ ಕಥೆ ಹೇಳುವ ಕಲೆಗಾರಿಕೆ ವಶವಾಗಿದೆ. ಕಥೆಗಳಲ್ಲಿ ಸಾದೃಶ್ಯವನ್ನೋ ಸಂಕೇತವನ್ನೋ ಸಮರ್ಥವಾಗಿ ಬಳಸಬಲ್ಲರು. ವಸ್ತುವಿನ ಆಯ್ಕೆಯಲ್ಲಿಯೂ ಅದನ್ನು ನಿರ್ವಹಿಸುವಲ್ಲಿಯೂ ಅವರು ತೋರಿರುವ ಕೌಶಲ ಮೆಚ್ಚುವಂಥದು. ಅವರಿಂದ ಹೆಚ್ಚಿನ ಉತ್ತಮ ಕಥೆಗಳನ್ನು ನಿರೀಕ್ಷಿಸಬಹುದು. ನವ್ಯವೂ ಅಲ್ಲದ ರಮ್ಯವೂ ಅಲ್ಲದ ತಮ್ಮದೇ ಆದ ರೀತಿಯನ್ನು ಕಂಡುಕೊಂಡು ಅದರಲ್ಲಿ ಸಾಫಲ್ಯವನ್ನು ಪಡೆಡಿದ್ದಾರೆ ಕಥೆಗಾರ ಈಶ್ವರಚಂದ್ರ ಅವರು.

ಮೊದಲ ಮೊಗ್ಗು

ಮೊದಲ ಮೊಗ್ಗು ಸಂತೋಷಕುಮಾರ ಗುಲ್ವಾಡಿ ಅವರ ಎಂಟು ಕಥೆಗಳ ಮೊದಲ ಕಥಾಸಂಕಲನ, ಇನ್‌ಕಂ ಟ್ಯಾಕ್ಸ್ ಆಫೀಸರ್ ರಾಜಾರಾಯರ ಮತ್ತು ಸೀತಮ್ಮನವರ ಏಕಮಾತ್ರ ಪ್ರೀತಿಯ ಪುತ್ರಿ ಸುಶೀಲ. ಹೆಸರಿಗೆ ತಕ್ಕಂತೆ ಶೀಲಸಂಪನ್ನಳೂ ಸುಂದರಿಯೂ ಆದ ಅವಳು ದುರಾಚಾರಿಯ ಬಲಾತ್ಕಾರಕ್ಕೆ ಸಿಕ್ಕಿ ಶೀಲಚ್ಯುತಳಾಗಿ ಆ ಆಘಾತದಿಂದಲೇ ಸ್ಮೃತಿಯನ್ನು ಕಳೆದುಕೊಂಡ ಕರುಣಾಜನಕ ಕಥೆ 'ಕೆಂಪು ಚುಕ್ಕಿಯ ನೀಲಿಸೀರೆ'. '...ಆ ಕೆಂಪು ಬೊಟ್ಟುಗಳು ಸೌಮ್ಯವಾದ ನೀಲಿಸೀರೆಯಂತಿದ್ದ ಆಕೆಯ ಜೀವನದ ಮೇಲಿನ ದುಷ್ಟ ಕೃತ್ಯದ ಸಂಕೇತವೂ...' ಎಂದು ಕಥೆ ಹೇಳುವ ಹಿರಿಯರು ಹೇಳುವ ಮಾತು ಸಂಕೇತವಾಗದೆ ನಿರೂಪಣಾ ಓಘದಲ್ಲಿ ಬಂದ ಮಾತಾಗಿದೆ. ಇದು ಸರಳವಾದ ನೇರವಾದ ಸುಂದರ ಕಥೆ. ಬೊಂಬಾಯಿಯ ವೈವಿಧ್ಯಮಯ ಜೀವನದ ಒಂದು ನಾಟಕೀಯವಾದಂತಹ ಕಥೆ 'ಅಂಕ ೧ - ದೃಶ್ಯ ೨'. ಬೊಂಬಾಯಿ 'ಚಾಳ್' ಒಂದರಲ್ಲಿ ನೆಮ್ಮದಿಯಿಂದ ಸಂಸಾರ ಮಾಡುತ್ತಿದ್ದ ಮಧುಕರ ನಾಯಕ ಬೆಳಗ್ಗೆ ಕಾರಖಾನೆಗೆ ಕೆಲಸಕ್ಕೆ ಹೋದವನು ರೈಲಿಗೆ ಸಿಕ್ಕಿ ಸತ್ತನೆಂದು ಹೆಂಡತಿ ಮಾಯಾ

ಮೊದಲುಗೊಂಡು ಚಾಳಿನ ಎಲ್ಲರೂ ವ್ಯಥಿತರಾಗಿದ್ದಾಗ ಮಧುಕರನೇ ಸಿನಿಮಾದಲ್ಲಂಬಂತೆ ಪ್ರತ್ಯಕ್ಷವಾಗಬೇಕೆ! ಹೀಗೆ ಮಾಯಾಳಿಗೆ ಕವಿದುಬಂದಿದ್ದ ದುಃಖ ಮಂಜಿನಂತೆ ಕರಗಿ ಹೋದುದೇ ಈ ಕಥೆ. ಬಡತನದ ಸಂಸಾರವಾದರೂ ನೆಮ್ಮದಿಯಿಂದ, ಸಂತೋಷದಿಂದ ಬಾಳುವ ಅವರ ಸಂಸಾರ ಚಿತ್ರವೂ ಸುಂದರವೂ, ಮನೋಜ್ಞವೂ ಆಗಿದೆ. 'ಮರೆಯಾದ ಸುಖ' ಸಾಧಾರಣವಾದ ಕಥೆ. ಮುಂಬಯಿಯ ಪತ್ರಿಕೋದ್ಯೋಗಿ ಮೂರ್ತಿ ತನ್ನ ಆರನೆಯ ಇಂದ್ರಿಯದ ಶಕ್ತಿಯಿಂದ ಒಮ್ಮೆ ನೋಡಿದ ಮುಖವನ್ನು, ಕೇಳಿದ ಧ್ವನಿಯನ್ನು ಮರೆಯುವುದಿಲ್ಲ ಎನ್ನುತ್ತಿದ್ದನು, ಪೋಲೀಸರಿಗೆ ಬೇಕಾಗಿದ್ದ, ತಾನು ಹತ್ತಾರುಬಾರಿ ಫೋಟೋ ನೋಡಿ ನೆನಪಿದ್ದ ಕೇಡಿಯೊಡನೆ ರೈಲಿನಲ್ಲಿ ಪ್ರಯಾಣ ಮಾಡಿ ಅವನನ್ನು ಗುರುತುಹಿಡಿಯಲಾರದೆ ಬೇಸ್ತು ಬಿದ್ದ ಕಥೆ. 'ಪುನರ್ಜನ್ಮ' ಕಥೆಯ ವಸ್ತು ಸಣ್ಣಕಥೆಯ ಹರವಿಗೆ ವಿಸ್ತಾರವಾದುದು ಎನಿಸುತ್ತದೆ. 'ಸಹ ಪ್ರಯಾಣಿಕರು' ಕಥೆ ಉಳಿದ ಕಥೆಗಳಿಗಿಂತ ಭಿನ್ನವಾಗಿದೆ. ಇದು ಒಂದು ಪತ್ತೇದಾರಿ ಕಥೆ. ಕಥೆ ಚೆನ್ನಾಗಿದ್ದರೂ ಈ ಸಂಗ್ರಹಕ್ಕೆ ಈ ಕಥೆ ಒಪ್ಪುವುದಿಲ್ಲ ಎಂದು ಹೇಳಬಹುದು. 'ಹೆಣ್ಣಿನ ಜೀವನ ಪೂರ್ಣವಾಗಬೇಕಾದರೆ, ಅದರ ಮಹತ್ವಪೂರ್ಣ ಉದ್ದೇಶ ಈಡೇರಬೇಕಾದರೆ ಆಕೆ ತಾಯಿಯಾದಾಗಲೇ...' ಈ ಅಭಿಪ್ರಾಯವನ್ನು ನಿರೂಪಿಸುವಂತಹ ಕಥೆ 'ಫಲ-ಪುಷ್ಪ'. ಅನುರಾಗ ಹೊಸರೀತಿಯ ಕಥಾತಂತ್ರವನ್ನು ಹೊಂದಿರುವ ಕಥೆ. ಕಥೆಯೆಲ್ಲವೂ ಗೆಳೆಯರ ನಡುವಿನ ಪತ್ರ ವ್ಯವಹಾರದಲ್ಲೇ ಮುಕ್ತಾಯವಾಗುತ್ತದೆ. ಸೈನಿಕ ವೃತ್ತಿಯ ಗಿರೀಶ ವರ್ಷಾನುಗಟ್ಟಲೆ ಊರಿನಲ್ಲಿರುವುದು ಸಾಧ್ಯವೆ ಎಂಬ ಪ್ರಶ್ನೆ ಈ ಕಥೆಯಲ್ಲಿ ಏಳುತ್ತದೆ. ಅದನ್ನು ಬಿಟ್ಟರೆ ಕಥೆ ಚೆನ್ನಾಗಿದೆ. ತಂತ್ರ ನವೀನವಾಗಿದೆ. ಅರ್ಥಪೂರ್ಣವಾದ ಶೀರ್ಷಿಕೆಯನ್ನು ಹೊಂದಿರುವ ಕಥೆ 'ಗಂಡ ಕಳೆದು ಗಂಡ ದೊರೆತ'. ಬಂದಿದ್ದ ಗಂಡ-ಅವಘಡ-ಸಾವಿತ್ರಿಯಿಂದಾಗಿ ಕಳೆದು ಹೋದುದರಿಂದ ಡಾ|| ಮಧುಸೂದನ ಅವರು ಸಾವಿತ್ರಿಗೆ ತಾವು ಗಂಡನಾಗಲು ನಿರ್ಧರಿಸುತ್ತಾರೆ. ಇಲ್ಲಿ ಸಾವಿತ್ರಿಯ ಹೆಸರೂ ಅರ್ಥಪೂರ್ಣ.

ಸಂತೋಷಕುಮಾರ ಗುಲ್ವಾಡಿ ಅವರ ಕಥೆಗಳು ಮನೋಜ್ಞವಾಗಿವೆ. ಆತ್ಮೀಯವಾಗಿವೆ, ವೈವಿಧ್ಯಮಯವಾಗಿವೆ. ಇಲ್ಲಿಯ ಬಹುತೇಕ ಕಥೆಗಳ ಭೂಮಿಕೆ ಮುಂಬಯಿ. ಕಥೆಗಳಲ್ಲಿ ಅಂತಃಕರಣ ಕರಗಿಸುವ ವಸ್ತುವಿಗೇನೂ ಕೊರತೆಯಿಲ್ಲ. 'ಸಹ ಪ್ರಯಾಣಿಕರು' ಮಾತ್ರ ಬೇರೆ ರೀತಿಯ ಕಥೆ. ಕಥೆಗಳು ನೇರ. ನಿರೂಪಣೆ ಸರಳ. ಓದುಗನನ್ನು ಎಲ್ಲಿಯೂ ಗೊಂದಲಕ್ಕೀಡು ಮಾಡುವುದಿಲ್ಲ. ಕೆಂಪು ಚುಕ್ಕಿಯ ನೀಲಿ ಸೀರೆ', 'ಅಂಕ ೧ - ದೃಶ್ಯ ೨', 'ಗಂಡ ಕಳೆದು ಗಂಡ ದೊರೆತ' ಈ ಸಂಕಲನದ ಅತ್ಯುತ್ತಮ ಕಥೆಗಳೆನ್ನಬಹುದು. ಇದು ಕಥೆಗಾರರ ಪ್ರಥಮ ಸಂಕಲನ. ಆದ್ದರಿಂದಲೇ

ಅದರ ಹೆಸರು 'ಮೊದಲ ಮೊಗ್ಗು'. ಮೊಗ್ಗು ಅರಳುವ ಕಾಲ ಮುಂದೆ ಬಂದೀತು ಎಂದು ಕಥೆಗಾರರೇ ಹೇಳಿಕೊಂಡಿದ್ದಾರೆ. ಅವರ ಭರವಸೆ, ನಿರೀಕ್ಷೆ ಸುಳ್ಳಾಗಲಾರವು ಎಂಬುದನ್ನು ಇಲ್ಲಿನ ಕತೆಗಳು ಹೇಳುತ್ತವೆ.

ಅಪರಿಚಿತರು

ಅಪರಿಚಿತರು ಸದಾಶಿವಾರವರ ಹತ್ತು ಕಥೆಗಳ ಸಂಕಲನ. ಇದು ಎರಡನೆಯ ಕಥಾಸಂಕಲನ. ಯು.ಆರ್. ಅನಂತಮೂರ್ತಿ ಅವರ ಮುನ್ನುಡಿ ಸದಾಶಿವರ ಬೆಳವಣಿಗೆಯನ್ನೂ ಕಲಾವಂತಿಕೆಯನ್ನು ತಿಳಿಸುತ್ತದೆ. 'ನೋಡಿದೆಯಾ ಅಮ್ಮ ಅವಳ ಧಿಮಾಕು' ಕಥೆಯಲ್ಲಿ ಮುರಿದುಹೋದ ತನ್ನ ಬಾಳು ಸರಿಹೋಗಬಹುದೆಂದು ಪದ್ಮಳಿಗೆ ಒಂದು ಗಳಿಗೆ ಅನ್ನಿಸಿತ್ತು. ಆದರೆ ಬದಲಾಗದ ತನ್ನ ಅತ್ತೆಯನ್ನೂ ಗಂಡನನ್ನೂ ಕಂಡಾಗ ಅವರನ್ನು ತೊರೆದು ಮತ್ತು ಮೊದಲಿನ ಒಂಟಿಬಾಳಿಗೆ ಹೊರಡುತ್ತಾಳೆ. 'ನೋಡಿದೆಯಾ ಅಮ್ಮ ಅವಳ ಧಿಮಾಕು' ಎಂಬ ಗಂಡನ ನುಡಿಯಿಂದ ಪದ್ಮಳಿಗೆ ದುಃಖವಾಗುವ ಬದಲು ನಗುಬರುತ್ತದೆ. ಅದು ಅವಳ ಅತ್ತೆ, ಗಂಡನ ಬಗೆಗಿನ ತಿರಸ್ಕಾರವನ್ನು ತೋರಿಸುವಂತೆಯೆ ಸರಳವಾಗಬಹುದಾಗಿದ್ದ ಕಥೆಯನ್ನು ಸಂಕೀರ್ಣಗೊಳಿಸುತ್ತದೆ. 'ಹುಲಿಯ ಕರೆ', 'ಸರಳುಗಳ ನಡುವೆ' ಮತ್ತು 'ಮಗು ಮಲಗಿತ್ತು' ಸಾಧಾರಣವಾದ ಕಥೆಗಳು. 'ಮಗು ಮಲಗಿತ್ತು' ಕಥೆಯಲ್ಲಿ ಜಾರಿಣಿಯೊಬ್ಬಳು ವೇಶ್ಯಾವೃತ್ತಿ-ಯಲ್ಲಿರುವವರನ್ನು ಕಂಡು ಅಪಹಾಸ್ಯ ಮಾಡುವ ವ್ಯಂಗ್ಯವಿದೆ. 'ಮತ್ತೆ ಮಳೆ ಹೊಯ್ಯುತಿದೆ... ಎಲ್ಲ ನೆನಪಾಗುತಿದೆ' ಕಥೆಯಲ್ಲಿ ಸುಧಾಳನ್ನು ಪ್ರೀತಿಸುವ ನರಹರಿಯನ್ನು ವಿಚಾರಿಸುವ ಪ್ರೊಫೆಸರ್ ರಂಗನಾಥರ ಆತ್ಮಕಥೆ ಸುರಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತದೆ. ಕಥೆ ಹೇಳುವ ರೀತಿಗೆ ಈ ಕಥೆಯನ್ನು ಮೆಚ್ಚಿಕೊಳ್ಳಬೇಕು. 'ಹಳವನು ಮೇಲೆ ಕುರುಡ ಕುಳಿತಿದ್ದಾನೆ' ಒಂದು ವಿಫಲ ಕಥೆ ಎನಿಸುತ್ತದೆ. ಯಮುನೆಯಿಂದ ಯಾವ ಉತ್ತರವನ್ನೂ ಪಡೆಯದ ಶ್ರೀನಾಥ ಗೋಪಾಲನ ಮನೆಗೆ ಬಂದು, ಸಂವೇದನೆಯನ್ನೆ ಕಳೆದುಕೊಂಡಿರುವ ಅವನಿಂದ ಯಾವುದೇ ರೀತಿಯ ಮಾರ್ಗದರ್ಶನವನ್ನು ಪಡೆಯಲಾರದೆ ಹಿಂತಿರುಗುತ್ತಾನೆ. ಈ ಮಧ್ಯೆ ಶ್ರೀನಾಥನ ಎದುರಿಗೇ ನಡೆಯುವ ಅವನಿಗೆ ಅಪರಿಚಿತರಾದ ಉಮಾ ಮತ್ತು ರಾಮದಾಸರ ಪ್ರಣಯಕಥೆ ಅವನಿಗೆ ಯಾವುದೇ ರೀತಿಯ ಬೆಳಕನ್ನೂ ತೋರುವುದಿಲ್ಲ. 'ನೆರಳು ಬೆಳಕಿನಾಟದಲ್ಲಿ ಕಂಡದ್ದೇನು' ಕಥೆ ವಾಚ್ಯಾರ್ಥವನ್ನೂ, ಅದಕ್ಕಿಂತ ಭಿನ್ನವಾದ ವ್ಯಂಗ್ಯಾರ್ಥವನ್ನೂ ಕೊಡುತ್ತದೆ. ಶಿವರಾಮ ತನ್ನ ಹೆಂಡತಿ ಪೈಲೂರನೊಂದಿಗೆ ಓಡಿಹೋದಾಗ ಸಿಟ್ಟಿಗೇಳುವುದಿಲ್ಲ, ಚಡಪಡಿಸುವುದಿಲ್ಲ. ಇದು ಅವನ ಪುರುಷತ್ವಕ್ಕೆ ಸವಾಲು, ಹಾಗೆಂದು ಮುರಿದ ಮನಸ್ಸಿನವಳನ್ನು ಮತ್ತೆ ಕರೆತಂದು ಬಾಳುವ

ಮಾಡಲಾಗುತ್ತದೆಯೆ? ಇದನ್ನು ಬಾಯಿ ಬಿಟ್ಟು ಹೇಳದಿದ್ದರೂ ತನ್ನ ಅಕ್ಕ ಸೀತೆಯ ವೃತ್ತಾಂತವನ್ನು ಹೇಳುವಾಗ ಸೂಚ್ಯವಾಗಿ ಹೇಳುತ್ತಾನೆ. ಕಾಮತರನ್ನು ಅನೀತಿಯುತವಾಗಿ ಕೂಡುವ ಮುನ್ನ ಸೀತೆ ದೀಪದ ಬೆಳಕಿನಲ್ಲಿ 'ಆ ನೆರಳು ಬೆಳಕಿನಾಟದಲ್ಲಿ ಅವಳು ನನ್ನನ್ನು ನೋಡುವಾಗ ಅವಳ ಮುಖ ವಿಚಿತ್ರವಾಗಿ, ವಿಕಾರವಾಗಿ ಕಂಡುಬಂದಿತು. ಆದರೆ ಮತ್ತೊಮ್ಮೆ ದೀಪದ ಕಡೆಯೇ ಅವಳ ಕಣ್ಣು ನಟ್ಟಾಗ ದೇವತೆಯಂತೆ ಕಂಡಳು.' ಹೀಗೆ ತನ್ನ ಬಾಲ್ಯದ ನೆನಪನ್ನು ತಂದುಕೊಂಡು ಅದರಿಂದ ಪಾಠ ಕಲಿತು, ಆದರೆ ಅದನ್ನು ತನ್ನ ಚಿಕ್ಕಪ್ಪನಿಗೆ ಹೇಳಲಾಗದೆ ಶಿವರಾಮು ತೊಳಲಾಡುತ್ತಾನೆ. ನೆರಳು ಬೆಳಕು ಅಜ್ಞಾನಕ್ಕೂ ಜ್ಞಾನಕ್ಕೂ ಸಂಕೇತವಾಗಿದೆ. ಹೆಂಡತಿಯಾದವಳು ಕೂಡ ಹೇಗೆ ಅಪರಿಚಿತಳಾಗಿಯೆ ಉಳಿಯುತ್ತಾಳೆ ಎಂಬುದು 'ಅಪರಿಚಿತರು' ಕಥೆಯಲ್ಲಿ ನಿರೂಪಿತವಾಗಿದೆ. 'ರಾಮನ ಸವಾರಿ ಸಂತೆಗೆ ಹೋದದ್ದು' ಈ ಸಂಕಲನದ ಅತ್ಯುತ್ತಮ ಕಥೆ. ರಾಮ ಸಂತೆಗೆ ಹೊರಡುವಾಗಿನ ಬಾಲಸಹಜ ಉತ್ಸಾಹ ನೈಜವಾಗಿ ಚಿತ್ರಿತವಾಗಿದೆ. ಮಂಜಯ್ಯನ ಮಗಳು ಪಾರ್ವತಿ ಮತ್ತು ಅವಳ ಗಂಡ ಶಿವರಾಮಯ್ಯನ ಸಂಸಾರ ಚಿತ್ರವನ್ನು ರಾಮನ ದೃಷ್ಟಿಯಲ್ಲಿ ಚಿತ್ರಿಸಿದ್ದಾರೆ. ಒಡೆದುಹೋದ ಸಂಸಾರದ ಸುಂದರ ಚಿತ್ರ ಈ ಕಥೆಯಲ್ಲಿ ಸಿಗುತ್ತದೆ. ಜೀವನದ ದುಃಖ, ಕಹಿಗಳನ್ನು ರಾಮನ ಮುಗ್ಧ ಉತ್ಸಾಹ ಮರೆಸಿ ಕಥೆಗೆ ಒಂದು ಮೆರುಗನ್ನು ಕೊಡುತ್ತದೆ. 'ಹಾವು' ಕಥೆ ಸದಾಶಿವರ ಬೆಳವಣಿಗಯನ್ನು ತೋರುವ ಕಥೆ. ಕಥೆಯಲ್ಲಿ ಬರುವ ಹಾವು ಕಾಮಕ್ಕೆ ಸಂಕೇತವಾಗಿದ್ದರೂ ಕಥಯಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡು ಕಥೆಯ ಒಂದು ಪಾತ್ರವೇ ಆಗಿರುವುದರಿಂದ ಅದು ಸಂಕೇತವೆಂದೇ ಅನಿಸುವುದಿಲ್ಲ. ನಿತ್ಯ ತಿರುಗಾಡುವ, ಕುಳಿತುಕೊಳ್ಳುವ, ಹೊಸಿಲ ಬಳಿಯ ಹಾವು ಗೂಡು ಮಾಡಿಕೊಂಡಿದ್ದಿತೆ ಎನ್ನುವುದು ನಿತ್ಯ ಮನೆಗೆ ಬಂದು ಕೆಲಸ ಮಾಡಿ ಹೋಗುತ್ತಿದ್ದವಳ ಮೇಲೆ ಕಥಾನಾಯಕನ ಕಾಮದೃಷ್ಟಿ ಇದ್ದುದನ್ನೂ, ಚಿಮಟದಲ್ಲಿ ಸಿಕ್ಕು ವಿಲವಿಲ ಒದ್ದಾಡುವ ಹಾವಿನಂತೆಯೆ ಬಜಾರಿ ತಾಯಿ ಹೆಂಡತಿಯರ ರಂಪದಲ್ಲಿ ಸಿಕ್ಕ ದುರ್ಬಲ ವ್ಯಕ್ತಿ ಒದ್ದಾಡುವುದನ್ನೂ, ಚಿತ್ರಿಸುತ್ತದೆ. ತಾಯಿ ಹೆಂಡತಿಯರಿಲ್ಲದಾಗ ಅವನು ಗಂಗಿಯೊಡನೆ ಬೆಳೆಸುವ ಸಂಬಂಧದ ಸಂಕೇತವಾಗಿ ಹಾವು ಬಂದಿದೆ.

ಈ ಸಂಕಲನದ ಎಲ್ಲ ಕಥೆಗಳೂ ಕೊನೆಯ ಎರಡು ಕಥೆಗಳಂತೆ ಸಫಲವಾಗಿವೆ ಎನ್ನುವಂತಿಲ್ಲವಾದರೂ ಈ ಕಥೆಗಳಲ್ಲಿ ಸದಾಶಿವರ ಆರೋಗ್ಯಕರವಾದ ಬೆಳವಣಿಗೆಯ್ನು ಕಾಣಬಹುದು. 'ಮತ್ತೆ ಮಳೆ ಹೊಯ್ಯುತಿದೆ... ಎಲ್ಲ ನೆನಪಾಗುತಿದೆ', 'ನೆರಳು ಬೆಳಕಿನಾಟದಲ್ಲಿ ಕಂಡದ್ದೇನು', 'ಅಪರಿಚಿತರು', 'ನೋಡಿದೆಯಾ ಅಮ್ಮ ಅವಳ ಧಿಮಾಕು', 'ರಾಮನ ಸವಾರಿ ಸಂತೆಗೆ ಹೋದದ್ದು' ಮತ್ತು 'ಹಾವು' ಈ ಸಂಕಲನದ ಉತ್ತಮ ಕಥೆಗಳು.

ದಂಡೆ

'ಮಂಜುಗಡ್ಡೆ' ಮತ್ತು 'ಕ್ಷಿತಿಜ'ಗಳ ನಂತರ ಬರುತ್ತಿರುವ **ದಂಡೆ** ಶಾಂತಿನಾಥ ದೇಸಾಯರ ಏಳು ಕಥೆಗಳ ಸಂಕಲನ. 'ದಂಡೆ' ಮತ್ತು 'ಏಕಾಂಗಿ' ಕಥೆಗಳಲ್ಲಿ ಕಥಾನಾಯಕನ ಬೇಸರ ಕಂಡುಬರುತ್ತದೆ. ಆದರೆ ಅವೆರಡರಲ್ಲೂ ಸೂಕ್ಷ್ಮ ವ್ಯತ್ಯಾಸವಿದೆ. ಒಂದು ಬಾಳನ್ನು ತೊರೆಯಲು ಹಂಬಲಿಸಿದರೆ ಮತ್ತೊಂದು ಬಾಳನ್ನು ಹಚ್ಚಿಕೊಳ್ಳಲು ಹಂಬಲಿಸುತ್ತದೆ. ಎರಡರಲ್ಲೂ ನಾಗರಿಕತೆಯ, ವೈಚಾರಿಕತೆಯ ಪ್ರಭಾವ ಗಾಢವಾಗಿದೆ. 'ಅವರು, ಕಾರು ಮತ್ತು ನಗೆ' ಮತ್ತು 'ತೃಪ್ತ' ವೈವಾಹಿಕ ಜೀವನದ ಚಿತ್ರಗಳು. ಶಕುಂತಲೆ, ಪ್ರಭು ಮತ್ತು ಮಾಧವರಾಯರ ಗತಬಾಳನ್ನು ತೆರೆದು ತೋರಿಸುತ್ತಾಳೆ. 'ಅವರು, ಕಾರು ಮತ್ತು ನಗೆ' ಕಥೆಯಲ್ಲಿ, ಒಬ್ಬೊಬ್ಬರಿಗೂ ಒಬ್ಬೊಬ್ಬರ ಜೀವನದಲ್ಲಿ ಹುಳುಕು ಕಂಡುಬಂದರೂ ತಮ್ಮ ಇತಿಹಾಸವೂ ಅಂತಹುದೇ ಎಂದು, ಮುಂದೆ ಎಲ್ಲವೂ ಸರಿ ಇದ್ದರೆ ಸರಿ ಎಂದು ಸುಮ್ಮನಾಗುತ್ತಾರೆ. 'ತೃಪ್ತ' ಕಥೆಯ ವಿಶ್ವನಾಥನಿಗೂ ಪದ್ಮಿನಿಗೂ, 'ಅವರು, ಕಾರು ಮತ್ತು ನಗೆ'ಯ ಮಾಧವರಾಯನಿಗೂ ಮತ್ತು ಶಕುಂತಲೆಗೂ ವ್ಯತ್ಯಾಸವಿಲ್ಲ. 'ನಿರ್ಣಯ' ಕಥೆ ಕೂಡ ವೈವಾಹಿಕ ಜೀವನದ ಕಥೆಯಾದರೂ ಮೇಲಿನ ಎರಡಕ್ಕಿಂತಲೂ ಭಿನ್ನವಾದುದು. ಇನ್ನೂ ಹನ್ನೊಂದು ವರ್ಷದ ಬಾಲಕ ರಘುವಿನ ದೃಷ್ಟಿಯಲ್ಲಿ ಅದನ್ನು ಚಿತ್ರಿಸಿರುವುದು ವೈಶಿಷ್ಟ್ಯ. ಮಲ್ಲೇಶಿ, ನಿಂಗಿಯರ ಬಗ್ಗೆ ರಘುವಿಗೆ ಉಂಟಾಗುವ ವಿಚಿತ್ರ ಕುತೂಹಲ, ಆಸಕ್ತಿ, ಅವುಗಳಿಗೆ ತನ್ನ ದೃಷ್ಟಿಯ ಮೂಲಕ ಕೊಡುವ ವ್ಯಾಖ್ಯಾನ ಇವು ಕಥೆಯ ಸ್ವಾರಸ್ಯವನ್ನು ಹೆಚ್ಚಿಸಿವೆ. ಈ ಕಥೆ ಸದಾಶಿವರ 'ರಾಮನ ಸವಾರಿ ಸಂತೆಗೆ ಹೋದದ್ದ'ನ್ನು ನೆನಪಿಗೆ ತರುತ್ತದೆ. 'ನೀಚ' ಸ್ವತಂತ್ರನಾಗಿ ಬಾಳಲಾರದೆ ಇನ್ನೊಬ್ಬರ ಮೂಲಕ ತನ್ನ ಅನಿಸಿಕೆಗಳನ್ನು ಆಗುಮಾಡಿಕೊಳ್ಳುವ ಆದರೆ ಅದರ ಫಲಕ್ಕೆ ಜವಾಬ್ದಾರನಾಗುವ ಅರುಣನ ದುರ್ಬಲ ವ್ಯಕ್ತಿತ್ವದ ಕಥೆ. ಅರುಣನ ವ್ಯಕ್ತಿತ್ವಕ್ಕೆ ವಿರುದ್ಧವಾದುದು ಕರೀಮನ ವ್ಯಕ್ತಿತ್ವ. ವಿಧಿಯಿಲ್ಲದೆ ಸಂದರ್ಭಕ್ಕೆ ಮೀನ ಹೊಂದಿಕೊಳ್ಳುವುದನ್ನು ನೋಡಿದರೆ ಕಥೆಗಾರರು ಸಂಕೀರ್ಣವಾಗಬಹುದಾಗಿದ್ದ ಕಥೆಯನ್ನು ಬೇಕೆಂದೇ ಸರಳಗೊಳಿಸಿದ್ದಾರೆ ಎನಿಸುತ್ತದೆ. 'ನಾನಾನ ತೀರ್ಥಯಾತ್ರೆ' ಉಳಿದ ಕಥೆಗಳಿಗಿಂತ ಭಿನ್ನವಾದದ್ದು. ಆದರೆ ಶಿಲ್ಪದಲ್ಲಿ, ಶೈಲಿಯಲ್ಲಿ ನಾನಾನಿಗೂ 'ದಂಡೆ'ಯ ನಾಯಕನಿಗೂ ವ್ಯತ್ಯಾಸವಿಲ್ಲ.

ಶಾಂತಿನಾಥ ದೇಸಾಯರಿಂದ ಇನ್ನೂ ಉತ್ತಮ ಕಥೆಗಳನ್ನು ನಿರೀಕ್ಷಿಸಬಹುದು. ನಮ್ಮ ನಿರೀಕ್ಷೆ ವ್ಯರ್ಥವಾಗುವುದಿಲ್ಲ.

ಮಲೆಯಾಳಂ ಕಥೆಗಳು

ಮಲೆಯಾಳಂ ಕಥೆಗಳು ಹನ್ನೆರಡು ಕಥೆಗಳ ಸಂಕಲನ. ಮಲೆಯಾಳಿ ಭಾಷೆಯಿಂದ ಕನ್ನಡಕ್ಕೆ ಕಥೆಗಳನ್ನು ಅನುವಾದ ಮಾಡಿರುವವರು

ಕೆ.ಎಸ್. ಕರುಣಾಕರನ್ ಅವರು. ಊರೂಟ್‌ರ 'ಸರ್ವೇಕಲ್ಲು' ಕಥೆಯಲ್ಲಿ ಸರ್ವೇಕಲ್ಲಿನಿಂದಾಗಿ ಕುಟ್ಟಪ್ಪ ಪಣಿಕ್ಕರ್ ಮತ್ತು ಕುಞಿತ್ತೇಯಿಯಮ್ಮನಿಗೆ ಮದುವೆಯಾಗುತ್ತದೆ. ಕಥೆಯಲ್ಲಿ ಬರುವ ಕೆಲವು ಮಾತುಗಳು ಅರ್ಥವತ್ತಾಗಿವೆ. ಮಲೆಯಾಳಿ ಕುಟುಂಬವೊಂದರ ಚಿತ್ರ ಈ ಕಥೆಯಿಂದ ನಮಗೆ ಸಿಗುತ್ತದೆ. ಅಸಾಧ್ಯವಾದುದನ್ನು ಬಯಸಿ ಗಂಡನನ್ನು ಪೇಚಿಗೆ ಸಿಕ್ಕಿಸುವ ಹೆಂಡತಿಯನ್ನು ದಾರಿಗೆ ತರುವ ವೈಕ್ಕಂ ಮಹಮ್ಮದ್ ಬಷೀರ್ ಅವರ 'ರಸಬಾಳೆ ಹಣ್ಣು' ಕಥೆ ಸ್ವಾರಸ್ಯಪೂರ್ಣವಾಗಿದೆ. ಬಡ ರೈತನಾದ ಔಸೇಪಣ್ಣನಿಗೂ ಅವನ ಪ್ರೀತಿಪಾತ್ರ ಎತ್ತಾದ ಕಣ್ಣನಿಗೂ ಇದ್ದ ಮಾನವೀಯ ಸಂಬಂಧ ಪೊನ್ ಕುನ್ನಂ ವರ್ಕಿಯವರ 'ದನಿಗೈಯುವ ನೇಗಿಲು' ಕಥೆಯಲ್ಲಿ ಚಿತ್ರಿತವಾಗಿದೆ. ಕಣ್ಣನ ದುರಂತಮರಣ ಮತ್ತು ಔಸೇಪಣ್ಣನ ನಿಸ್ಸಹಾಯಕ ಬಡತನ ಓದುಗರ ಕರುಳನ್ನು ಮಿಡಿಯುತ್ತದೆ. ಪೊಟ್ಟೆಕಾಡ್ ಅವರ 'ಕ್ಲಿಯೋಪಾತ್ರಳ ಮುತ್ತುಗಳು' ಕಥೆಯ ಕಥಾನಾಯಕ ಕ್ಲಿಯೋ ಪಾತ್ರಾಳ ಅಭಿಮಾನಿ. ಅವಳ ಸೌಂದರ್ಯವನ್ನು ಮೆಚ್ಚಿಕೊಂಡ ಅವನು ಅವಳ ಅನೇಕ ಅಕೃತ್ಯಗಳನ್ನು ಮನ್ನಿಸಲೂ ಸಿದ್ಧ. ಇಂತಹ ಮನೋಭೂಮಿಕೆವುಳ್ಳ ಕಥಾನಾಯಕ ಅವಳಿಗೆ ಸಂಬಂಧಿಸಿದ ಐತಿಹಾಸಿಕ ಘಟನೆಗಳನ್ನು ನೆನೆಸಿಕೊಳ್ಳುವಾಗ, ಕನಸಿನಲ್ಲಿ ಕಂಡ ಸುಂದರ ದೃಶ್ಯವೊಂದನ್ನು ನೆನೆಸಿಕೊಳ್ಳುವಂತೆ ಇಂಗ್ಲೆಂಡಿನಲ್ಲಿ ಆಗಿಹೋದ ಘಟನೆಯನ್ನು ನೆನೆಸಿಕೊಳ್ಳುವ ರಮ್ಯಕಥೆ ಇದು. ಶ್ರೀಮತಿ ಲಲಿತಾಂಬಿಕಾ ಅಂತರ್ಜನಂ ಅವರ 'ಒಂದು ಪುರಾವೃತ್ತ' ವಿಧಿಯನ್ನು ಗೆಲ್ಲಲು ಹೊರಟ ವರರುಚಿಯ ಮತ್ತು ಅವನ ಪ್ರಯೋಗಕ್ಕೆ ಉಪಕರಣಳಾದ ಪಂಚಮಿಯ ಕಥೆ. ಐತಿಹಾಸಿಕವೂ, ಪೌರಾಣಿಕಾಂಶವೂ ಇರುವಂತಹ ಸುಂದರವಾದ ಕಥೆ ಇದು. ಎನ್.ಪಿ. ಮಹಮ್ಮದ್‌ರ 'ಪ್ರೆಸಿಡೆಂಟರ ಮೊದಲನೆಯ ಮರಣ' ಕಥೆಯಲ್ಲಿ ಪತ್ರಿಕಾರಂಗದ ಒಂದು ವಿಶೇಷ ಸನ್ನಿವೇಶದ ಚಿತ್ರ ಇದೆ. ಎಲ್ಲರೂ ನಿದ್ರಾದೇವಿಯ ಬಿಸಿಯಪ್ಪುಗೆಯಲ್ಲಿರುವಾಗ ರಾಷ್ಟ್ರಪ್ರಮುಖನೋರ್ವನ ಮರಣೋನ್ಮುಖ ಸುದ್ದಿ ತಿಳಿದಾಗ ಪತ್ರಿಕಾ ಕಾರ್ಯಾಲಯದಲ್ಲಿ ಕಾಣುವ ಜೇನುಹುಳುಗಳಂತಹ ಕಾರ್ಯ ಚಟುವಟಿಕೆ. ಆ ರಾಷ್ಟ್ರಪ್ರಮುಖ ಸಾಯುವನೆಂಬ ಖಚಿತ ನಂಬುಗೆಯಿಂದ ಪತ್ರಿಕೆಯನ್ನು ಮುದ್ರಿಸಿದ ಕೊನೆ ಘಳಿಗೆಯಲ್ಲಿ ಆ ವ್ಯಕ್ತಿ ಸತ್ತಿಲ್ಲದೇ ಇರುವುದು ತಿಳಿದಾಗ ಆ ಸನ್ನಿವೇಶ ಒಂದು ರೀತಿಯ 'ಗಗ್ಗಯ್ಯನ ಗಡಿಬಿಡಿ'ಯಂತಹ ಪ್ರಹಸನದಂತೆ ಕಾಣುತ್ತದೆ. ಎಂ. ಮುಕುಂದನ್ ಅವರ 'ಬಚ್ಚಲು ಮನೆ' ಒಂದು ವಿಡಂಬನಾತ್ಮಕ ಕಥೆ. ವಸಂತಳನ್ನು ಸ್ನಾನದಮನೆಯಲ್ಲಿ ಕಾಣಲು ಬಯಸಿದ ಪುರುಷೋತ್ತಮ ದೇವ ದೇವನಲ್ಲಿ ಪ್ರಾರ್ಥಿಸಿ ನೊಣವಾಗಿ ಬಚ್ಚಲು ಮನೆಯ ಗೋಡೆಯ ಮೇಲೆ ಕುಳಿತರೂ ವಸಂತಳ 'ಎಲ್ಲ'ವನ್ನೂ ಕಾಣಲಾಗದೆ ನಿರಾಶನಾಗಿದ್ದಾಗ ಹಲ್ಲಿಯೊಂದಕ್ಕೆ ತುತ್ತಾಗುತ್ತಾನೆ! ಬಯಸಬಾರದ್ದನ್ನು

ಬಯಸಿದರೆ ಆಗಬಾರದ್ದು ಆಗುತ್ತದೆ ಎಂಬ ನೀತಿಯನ್ನು ಸಾರುತ್ತದಲ್ಲವೆ ಈ ಕಥೆ? ಟಿ.ಎನ್. ಕೃಷ್ಣಪಿಳ್ಳೆ ಅವರ 'ಮಾಂಸ' ಸರ್ಕಸ್ ಜೀವನವನ್ನು ಕುರಿತ ಕಥೆ. ಸರ್ಕಸ್ ಕಲಾವಿಧೆ ಭಾಮ ತನ್ನ ಇಚ್ಛೆಗೆ ವಿರುದ್ಧವಾಗಿ ತನ್ನನ್ನು ಚುಂಬಿಸಿದ ಮೃಗಶಿಕ್ಷಕ ದಾಮುವನ್ನು ಕೊಲ್ಲಲು ರಣಚಂಡಿಯಂತೆ ಪ್ರಯತ್ನಿಸುತ್ತಾಳೆ. ಅವಳ ತಂತ್ರದಂತೆ ಹಸಿದ ಸಿಂಹ ಮೇಲೆರಗಿದಾಗಲೂ ಸಾವಿನ ದವಡೆಯಿಂದ ಪಾರಾಗಿ ಬಂದ ಅಪ್ರತಿಮ ಸಾಹಸಿ ಭೀಮಬಲದ ದಾಮುವಿಗೆ ತನ್ನನ್ನೇ ಅರ್ಪಿಸಿಕೊಳ್ಳುತ್ತಾಳೆ. ದಾಮುವನ್ನು ದ್ವೇಷಿಸುತ್ತಿದ್ದ ಭಾಮ ಅವನನ್ನು ಪ್ರೀತಿಸುವುದನ್ನು ಕಂಡಾಗ ಪ್ರೀತಿ, ದ್ವೇಷ ಎರಡೂ ಒಂದೇ ಭಾವದ ಎರಡು ಮುಖಗಳೇ ಎಂಬ ಸಂಶಯ ಉಂಟಾಗುತ್ತದೆ. ಅಲ್ಲದೆ ಈ ಕಥೆ ಸರ್ಕಸ್ ಜೀವನದ ಒಂದು ನಿಕಟ ಪರಿಚಯವನ್ನು ಮಾಡಿಕೊಡುತ್ತದೆ. ಪಿ. ಕೇಶವದೇವನ್ ಅವರ 'ಬಾಗಿಲು ತೆರೆಯುತ್ತೇನೆ' ಕಥೆ ಪ್ರೇಮಿಗಳ ನಡುವಣ ಸಂಭಾಷಣಾ ರೂಪದಲ್ಲಿದ್ದು ಹೊರನೋಟಕ್ಕೆ ಲಘುವಾಗಿ ಕಂಡುಬಂದರೂ ಅರ್ಥವತ್ತಾದ ಕಥೆ. ಪ್ರೇಮಿಗಳ ನಡುವೆ ನಾನಾ ಕಾರಣಗಳಿಂದ ಅಡ್ಡಿಯಾಗುವ ಸಮಾಜ, ಸಂಪ್ರದಾಯಗಳನ್ನು, ಮೂಢನಂಬಿಕೆಗಳನ್ನು ಮುರಿಯಲು ಹೊರಟಾಗ ಅವೆಲ್ಲವೂ ತನಗೆ ತಾನೆ ಸುಮ್ಮನಾಗುತ್ತವೆ ಎಂಬ ಧ್ವನಿ ಈ ಕಥೆಯಿಂದ ಹೊರಡುತ್ತದೆ. ಎಂ.ಟಿ. ವಾಸುದೇವನ್‌ನಾಯರ್ ಅವರ 'ನಡುದಾರಿಯಲ್ಲಿ ನೆನಪಿನ ನೆರಳು' ಮುರಿದ ಸಂಸಾರದ ಕಥೆ. ಡಾಕ್ಟರ್ ರಾಜ ಮತ್ತು ಮಿಸೆಸ್ ರಾಜರ ನಡುವಿನ ವಿರಸಕ್ಕೆ ಕಾರಣವೇನೆಂಬುದು ಸ್ಪಷ್ಟವಾಗುವುದಿಲ್ಲ. ಕಥಾನಿರೂಪಣೆ ಅನವಶ್ಯಕವಾಗಿ ತೊಡಕಿನದಾಗಿ ಕಾಣುತ್ತದೆ. ವಿ.ಕೆ. ಎನ್. ರವರ 'ಹರ್ ಹೈನೆಸ್' ಕೂಡ ಮುರಿದ ದಾಂಪತ್ಯಕ್ಕೆ ಸಂಬಂಧಿಸಿದ ಕಥೆ. ಮಾಜಿ ರಾಜನೊಬ್ಬನ ಪತ್ನಿಯಾದ ಭಾಭಾದ ರಾಜಕುಮಾರಿ ಕಿರಣ್‌ಗೆ ತನ್ನ ಗಂಡ ತನ್ನನ್ನು ತ್ಯಜಿಸಿದ್ದಾನೆ ಎಂಬ ಅರಿವಿಲ್ಲದಿರುವುದು (ಒಂದು ರೀತಿಯ ಮನೋರೋಗದಿಂದಾಗಿ) ಒಂದು ವಿಶೇಷ. ಕೆ.ವಿ. ಜೋಸಫ್ ಅವರ 'ಶ್ವೇತ ಪತಾಕೆ' ಮಾರ್ಮಿಕವಾದ ಕಥೆ. ತಾತ್ವಿಕವಾಗಿ ವಿಭಿನ್ನವಾದ ರಾಜಕೀಯ ಪಕ್ಷಗಳೇ ಸಮಯ ಸಾಧಕತನದ ಸಂಧಿ, ಒಪ್ಪಂದಗಳನ್ನು ಮಾಡಿಕೊಳ್ಳಬಹುದಾದರೆ ಜಗಳವಾಡಿದ್ದ ಬಸ್ಸಿನ ಕಂಡಕ್ಟರ್ ಮತ್ತು ಡ್ರೈವರ್ ಜೊತೆ ಪ್ರಯಾಣಿಕ ಸಂಧಿಮಾಡಿಕೊಳ್ಳುವುದು ತಪ್ಪಾದೀತೆ? ಈ ಕಥೆಯ ಮೂಲಕ ರಾಜಕೀಯ ಪಕ್ಷಗಳ ಸಮಯಸಾಧಕ ತನವನ್ನು ಕಥೆಗಾರರು ಬಯಲಿಗೆಳೆದಿದ್ದಾರೆ. **ಮಲೆಯಾಳಂ ಕಥೆಗಳು** ಸಂಕಲನದಲ್ಲಿರುವ ಹನ್ನೆರಡು ಕಥೆಗಳನ್ನು ಕೆ.ಎಸ್. ಕರುಣಾಕರನ್ ಅವರು ಸೊಗಸಾಗಿ ಅನುವಾದಿಸಿ ಕೊಟ್ಟಿದ್ದಾರೆ. ಗ್ರಂಥದ ಕೊನೆಯಲ್ಲಿರುವ 'ಮಲೆಯಾಳಂನಲ್ಲಿ ಸಣ್ಣಕಥೆಗಳು' ಎಂಬ ಭಾಗ ಅಲ್ಲಿಯ ಸಣ್ಣಕಥೆಯ ಬೆಳವಣಿಗೆಯನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುತ್ತದೆ. ಈ ಸಂಗ್ರಹದಲ್ಲಿ ಕಥೆಗಾರರ ಪರಿಚಯವೂ ಇಲ್ಲವೆ.

ಅನುವಾದಕರು ತಮ್ಮ 'ಎರಡು ಮಾತಿ'ನಲ್ಲಿ ಹೇಳಿರುವ ಅಂಶ ಬಹುಮಟ್ಟಿಗೆ ಸಾಧಿತವಾಗಿದೆ. ಈ ಕಥೆಗಳ ಮೂಲಕ ಕೇರಳದ ಜನಜೀವನದ (ಸರ್ಪೇಕಲ್ಲು, ರಸಬಾಳೆಹಣ್ಣು, ದನಿಗೈಯುವ ನೇಗಿಲು...) ಪರಿಚಯವಾಗುವುದರ ಜೊತೆಗೆ ಅಲ್ಲಿಯ ಕೆಲವು ಉತ್ತಮ ಕಥೆಗಳ ಅನುವಾದವೂ ನಮಗೆ ದೊರಕಿದೆ. ಕೇರಳದ ಜನಜೀವನಕ್ಕೆ ಸಂಬಂಧಿಸಿದ ಕಥೆಗಳೂ ಇವೆ (ಕ್ಲಿಯೋಪಾತ್ರಾಳ ಮುತ್ತುಗಳು, ಒಂದು ಪುರಾವೃತ್ತ...). ಈ ಅನುವಾದವನ್ನು ಹೊರತರಲು ಪ್ರಯತ್ನಿಸಿದ ಕನ್ನಡಸಾಹಿತ್ಯ ಪರಿಷತ್ತಿನವರ ಕಾರ್ಯ ಸ್ತುತ್ಯಾರ್ಹವಾದುದು.

ಕೊನೆಯ ದಾರಿ

ಶ್ರೀಮತಿ ವೀಣಾ ಅವರ **ಕೊನೆಯ ದಾರಿ** ಅದೇ ಹೆಸರಿನ ಕತೆಯನ್ನೊಳಗೊಂಡ ಆರು ಕತೆಗಳ ಸಂಕಲನ. ಮೊದಲಿನ ಕತೆಯೆ 'ಕೊನೆಯ ದಾರಿ'. ಈ ಕತೆಯ ಲಿಲಿ (ಲೀಲಾ) ಗಂಡನ ಪಶು ರೀತಿಯ ನಡತೆಯಿಂದ ಬೇಸರಪಟ್ಟು ಅವನಿಂದ ದೂರವಾದಳು. ಮಕ್ಕಳನ್ನು ಕಂಡರೆ ಅತಿಯಾದ ಪ್ರೀತಿಯುಳ್ಳ ಲಿಲಿ ಅಂತಹ ಮಕ್ಕಳನ್ನು ಪಡೆಯಲಿಕ್ಕಾಗಿ ಗೋವಿಂದ ಮೂರ್ತಿ, ವಿನಯ ಸಾಳಕರ್, ವಿಲಿಯಮ್ಸ್, ಗಡ್ಡದ ಸಾಹೇಬರ ಸಹವಾಸವನ್ನು ಮಾಡಿಯೂ ವಿಫಲಳಾಗುತ್ತಾಳೆ. ಇಲ್ಲಿ ಅವರೆಲ್ಲರೂ ಸಮಾಜಕ್ಕೆ ಹೆದರಿ ದೂರವಾಗುತ್ತಾರೆ. ಮುದ್ದುಮಕ್ಕಳ ಬಯಕೆ ತೀವ್ರವಾದಾಗ, ತಂದೆಯ ಸ್ಥಾನದಲ್ಲಿದ್ದ ಶಂಕರಗೌಡರು "ಎಲ್ಲಾ ಗಂಡಸ್ರೂ ಕೆಟ್ಟವರಿರೋದಿಲ್ಲ ಲೀಲಾ, ನೀ ಸಣ್ಣ ಹುಡುಗಿ, ಒಬ್ಬಾಕಿನೇ ಇರಬಾರದು- ಮತ್ತ ಬ್ಯಾರೆ ಲಗ್ನ ಆಗು. ನೀ ಹ್ಞೂ ಅಂದರ ನಾ ಅದರ ವ್ಯವಸ್ಥೆ ಮಾಡ್ತೀನಿ" ಎಂದುದೂ "ನಿನ್ನ ಜೀವನ ಸುಖಾ ಆಗಲಿಕ್ಕೆ ನನ್ನ ಜೀವ ಕೊಟ್ಟೇನು" ಎಂದುದೂ ನೆನಪಿಗೆ ಬರುತ್ತದೆ. ತನ್ನ ತಂದೆಯ ಸ್ಥಾನದಲ್ಲಿದ್ದವರೂ ತನ್ನ ಹಿತಚಿಂತಕರೂ ಆದ, ಆರಡಿ ಎತ್ತರದ, ಅಗಲವಾದ ಎದೆಯ, ಗಿರಿಜಾ ಮೀಸೆಯ ಶಂಕರಗೌಡರ ಬಗ್ಗೆ - ಮನಸ್ಸು ಹರಿದು, ಎಲ್ಲ ದಾರಿಗಳೂ ಮುಗಿದ ಮೇಲೆ ಶಂಕರಗೌಡರನ್ನು ಆರಿಸಿಕೊಳ್ಳುತ್ತಾಳೆ. ಕತೆ ದಿನಚರಿಯ ಪುಟಗಳಿಂದ ತನ್ನಿಂದ ತಾನೆ ಸುರುಳಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಈ ಕತೆ ಕೊನೆಯವರೆಗೂ ಓದುಗರಲ್ಲಿ ಆಸಕ್ತಿಯನ್ನು ಹಿಡಿದಿಡುತ್ತದೆ. ಕಾಲೇಜು ದಿನಗಳಲ್ಲಿ ಲೀಲಾಜಾಲವಾಗಿ ಕವನ ರಚಿಸುತ್ತಿದ್ದ ಶಶಿ, ಶ್ರೀನಿವಾಸನನ್ನು ಮದುವೆಯಾದ ಮೇಲೆ ತನ್ನ ಕವನ ಸೃಷ್ಟಿಯ ಕಾರ್ಯವನ್ನು ಮರೆತ ಕಥೆ 'ಹೆಣ'. ಇಲ್ಲಿ ಹೆಣ ಅವಳಲ್ಲಿ ಸತ್ತುಹೋಗಿದ್ದು ಸೃಜನಶೀಲ ಶಕ್ತಿಗೆ ಸಂಕೇತವಾಗಿ ಬರುತ್ತದೆ. 'ಮಳೆ ಬಂದಾಗ' ಕತೆ ಕೆ. ಸದಾಶಿವರ 'ಮತ್ತೆ ಮಳೆ ಹೊಯ್ಯುತಿದೆ... ಎಲ್ಲ ನೆನಪಾಗುತಿದೆ' ಕತೆಯನ್ನು ನೆನಪಿಗೆ ತಂದರೂ ಅದರಿಂದ ಇದು ಪ್ರಭಾವಿತವಾದುದಲ್ಲ. ಸಹನಾ ತಾನು ಹಿಂದೆ

ಬರೆದಿದ್ದ ಚಿತ್ರಕ್ಕೆ ಹೊಸ ಹಿನ್ನೆಲೆಯನ್ನು ಕೊಡಲು ಬಹಳವಾಗಿ ಶ್ರಮಿಸುತ್ತಾಳೆ. ಅವಳ ಈ ಕೆಲಸದ ಜೊತೆಗೇ ಆ ಚಿತ್ರದಲ್ಲಿದ್ದ ವ್ಯಕ್ತಿಯ ಕತೆಯೂ ಬೆಳೆಯುತ್ತಾ ಬರುತ್ತದೆ. ಮಳೆ ಬಂದಾಗ ಎಲ್ಲವನ್ನೂ ಮರೆತು ಮಳೆಯಲ್ಲಿ ನೆನೆಯುತ್ತಾ ಹೋಗುವ ಸ್ವಭಾವದ ವ್ಯಕ್ತಿ ಅವನು. ಈ ಮಾನಸಿಕ ರೋಗಕ್ಕೆ ಇವಳ ಕಾಕ ಡಾಕ್ಟರ್ ದೇಶಮುಖರು ಮತ್ತು ಇವಳು ಬಹುವಾಗಿ ಶ್ರಮಿಸಿ ಗುಣಪಡಿಸಿದೆವು ಎಂದುಕೊಳ್ಳುತ್ತಾರೆ. ಆದರೆ ಕೊನೆಯಲ್ಲಿ ಅದು ತಾತ್ಕಾಲಿಕವಾದುದು ಎಂದು ಗೊತ್ತಾಗುತ್ತದೆ. ಹಾಗೇ ತಾನು ಹೊಸ ಹಿನ್ನೆಲೆಯನ್ನು ಕೊಟ್ಟ ಹಳೆಯ ಚಿತ್ರ ಸಹಜವಾಗಿಲ್ಲ ಎಂದು ಅವಳಿಗೂ ಅನ್ನಿಸುತ್ತದೆ. ಈ ಎರಡರಲ್ಲೂ ಇರುವ ಸಾಮ್ಯ ಮತ್ತು ಕತೆಯನ್ನು ಹೇಳಿರುವ ರೀತಿ ಮೆಚ್ಚುವಂಥದು. 'ನೆರಳು' ಕತೆಯ ಮಾಲತಿಯ ತಾಯಿ ಚಿಕ್ಕಂದಿನಿಂದಲೂ ತನಗೆ ಇಂಗ್ಲೀಷ್ ಕಲಿಸುತ್ತಿದ್ದ ಸದಾಶಿವರಾಯರನ್ನು ಮೆಚ್ಚಿದ್ದವಳು. ಪ್ರೀತಿಸಿದ್ದವಳು. ಆದರೆ ತನ್ನ ಸೋದರಮಾವನನ್ನು ಮದುವೆಯಾಗಿ ಬಾಳುವೆ ನಡೆಸಬೇಕಾಗಿ ಬಂದು, ಬಾಳಿನುದ್ದಕ್ಕೂ ಆ ಪ್ರೀತಿಯನ್ನು ಹತ್ತಿಕ್ಕಲು ಪ್ರಯತ್ನಿಸಿ ಸೋತು ಹೈರಾಣಾಗುತ್ತಾಳೆ. 'ನೆರಳು', ಅವಳ ಭೂತಕ್ಕೆ (ಹಿಂದಿನದಕ್ಕೆ) ಸಂಕೇತವಾಗಿ ಬರುತ್ತದೆ. 'ಮುಕ್ತಿ' ಕತೆಯಲ್ಲಿ ಶಂಕರರಾವ್ ತನ್ನ ಸ್ವಾರ್ಥಕ್ಕಾಗಿ ಚಂದೂಲಾಲ ಮತ್ತು ತನ್ನ ನಾದಿನಿ ಕಲಾರ ಪ್ರೀತಿಗೆ ಹುಳಿ ಹಿಂಡುತ್ತಾನೆ. ಕಲಾ ಆತ್ಮಹತ್ಯೆಯನ್ನು ಮಾಡಿಕೊಂಡರೆ ಚಂದೂಲಾಲ ದೂರದೂರಿಗೆ ವರ್ಗ ಮಾಡಿಸಿಕೊಂಡು ಹೋಗುತ್ತಾನೆ. ಆದರೆ ಈ ಕುಟಿಲ ಕಾರ್ಯವನ್ನೆಸಗಿದ ಶಂಕರ ರಾಯನಿಗೆಲ್ಲಿ ಮುಕ್ತಿ? 'ಹೊರಟು ಹೋದವನು', ಒಂದು ರೀತಿಯಲ್ಲಿ ಮನೋವಿಶ್ಲೇಷಣಾತ್ಮಕ ಕತೆ ಎನ್ನಬಹುದು. ತನಗೆ ಕಾಲೇಜಿನ ದಿನಗಳಲ್ಲಿ ಶೆಲ್ಲಿಯನ್ನು ಕಲಿಸುತ್ತಿದ್ದ ಇಂಗ್ಲೀಷ್ ಪ್ರೊಫೆಸರರನ್ನು ಮೆಚ್ಚಿಕೊಂಡಿದ್ದವಳು ಅಪ್ಪಅಮ್ಮರ ಜುಲುಮೆಯಿಂದಾಗಿ ಸತೀಶನನ್ನು ಮದುವೆಯಾಗಿ ತನಗಾದ ನಿರಾಶೆಯ ಸೇಡನ್ನು ತಂದೆ, ತಾಯಿ, ಗಂಡ ಎಲ್ಲರ ಮೇಲೂ ವಿಚಿತ್ರವಾಗಿ ತೀರಿಸಿಕೊಳ್ಳುತ್ತಿರುತ್ತಾಳೆ. ತಂದೆ ತಾಯಿ ಸತ್ತ ಮೇಲೂ ತೌರಿನಲ್ಲಿ ತನಗೆ ಆದರವಿಲ್ಲವೆಂದು ತಿಳಿದೂ ತಿಳಿದೂ ಲೋಂಡಾ ಸ್ಟೇಷನ್ನಿನಲ್ಲಿ ಪ್ರೊಫೆಸರನ ಕಣ್ಣುಗಳನ್ನು ಹೋಲುವ ಮಿಠಾಯಿ ಮಾರುವವನ ಕಣ್ಣುಗಳನ್ನು ನೋಡುವ ಸಲುವಾಗಿಯೇ ಪೂನಾದಿಂದ ಹುಬ್ಬಳ್ಳಿಗೆ ವರ್ಷಕ್ಕೆರಡು ಸಲವಾದರೂ ಬರುತ್ತಾಳೆ. ಇದೊಂದು ಮನೋವಿಶ್ಲೇಷಣಾತ್ಮಕ ಕತೆ.

ಬೇರೆ ಲೇಖಕಿಯರ ಕತೆಗಳಿಗೆ ಶ್ರೀಮತಿ ವೀಣಾರ ಕತೆಗಳನ್ನು ಹೋಲಿಸಿದಾಗ ಇಲ್ಲಿ ಎಲ್ಲ ಕತೆಗಳೂ ಒಳ್ಳೆಯ ಕತೆಗಳೆಂದು ಹೇಳಬಹುದು. ಶ್ರೀಮತಿ ವೀಣಾ ಅವರು ತಮ್ಮ ಮೊದಲಿನ ಕಥಾಸಂಕಲನವಾದ 'ಮುಳ್ಳುಗಳು' ಇಂದ ಇನ್ನೂ ಎತ್ತರಕ್ಕೆ ಬೆಳೆದಿದ್ದಾರೆ ಎಂದು ಹೇಳಲಾಗದಿದ್ದರೂ ಈಗ ಬರೆಯುತ್ತಿರುವ ಲೇಖಕಿಯರಿಗೆ

ಹೋಲಿಸಿದಾಗ ಇವರನ್ನು ಶ್ರೇಷ್ಠ ಮಟ್ಟದ ಕತೆಗಾರ್ತಿ ಎಂದು ಹೇಳಬಹುದು. ಬರಹವನ್ನು ಗಂಭೀರವಾಗಿ ಪರಿಗಣಿಸುವ ಶ್ರೀಮತಿ ವೀಣಾ ಅವರು ಸಾಮಾನ್ಯವಾಗಿ ಕತೆಗಾರ್ತಿಯರಲ್ಲಿ ಕಂಡು ಬರದ ನವ್ಯ ಕತೆಗಳು ಎನ್ನಬಹುದಾದ ರೀತಿಯಲ್ಲಿ ಕತೆಗಳನ್ನು ಬರೆಯುತ್ತಾರೆ. ಸಂಕೇತ, ಪ್ರತಿಮೆ, ಮನೋವಿಶ್ಲೇಷಣ ಅವರ ಕತೆಗಳಲ್ಲಿ ಬರುತ್ತವೆ. ಎಲ್ಲಕ್ಕಿಂತ ಮಿಗಿಲಾಗಿ ಆಡುಮಾತಿನ ಸೊಗಡು ಉದ್ದಕ್ಕೂ ಕಂಡುಬರುತ್ತದೆ. ಹೋದ ವರ್ಷ ಮತ್ತು ಈ ವರ್ಷ ಪ್ರಕಟವಾಗಿರುವ ಲೇಖಕಿಯರ ಕಥಾಸಂಕಲನಗಳ ಸಂಖ್ಯೆ ಐದು. ಎರಡು ವರ್ಷಗಳ ಕಥಾಸಂಕಲನಗಳನ್ನು ಗಮನದಲ್ಲಿಟ್ಟುಕೊಂಡು ಲೇಖಕಿಯರ ಬಗ್ಗೆ ಹೇಳುವುದಾದರೆ ಬರಹವನ್ನು ಗಂಭೀರವಾಗಿ (ಸೀರಿಯಸ್ಸಾಗಿ) ಪರಿಗಣಿಸಿರುವವರು ವಿರಳ-ಇಲ್ಲವೇ ಇಲ್ಲ-ಎಂದು ಹೇಳಬೇಕು. ಶ್ರೀಮತಿ ವೀಣಾ ಅವರ 'ಕೊನೆಯ ದಾರಿ' ಸ್ವಲ್ಪ ಸಮಾಧಾನವನ್ನುಂಟು ಮಾಡುತ್ತದೆ.

ಗರ್ಜನೆ

ಗರ್ಜನೆ ಡಾಕ್ಟರ್ ಬೆಸಗರಹಳ್ಳಿ ರಾಮಣ್ಣ ಅವರ ಒಂಭತ್ತು ಕತೆಗಳ ಸಂಕಲನ. ಅವರ ಮೊದಲ ಕಥಾಸಂಕಲನ 'ನೆಲದ ಒಡಲು' ಬಂದ ನಾಲ್ಕು ವರ್ಷಗಳ ನಂತರ ಹೊರಬರುತ್ತಿದೆ. 'ಜ್ವಾಲೆಯ ನಡುವೆ' ಎಂಬ ಕತೆಯೊಂದನ್ನು ಬಿಟ್ಟರೆ ಉಳಿದ ಎಲ್ಲ ಕತೆಗಳು ಹಳ್ಳಿಗರ ಬಾಳಿನ, ಗೋಳಿನ ಕತೆಗಳು. ಮೊದಲ ಕತೆಯಾದ 'ಜೀತ' ಮತ್ತು ಕೊನೆಯ ಕತೆಯಾದ 'ಗರ್ಜನೆ' ಜೀತಕ್ಕೆ ಸಂಬಂಧಿಸಿದ ಕತೆಗಳು. 'ಜೀತ' ಕತೆಯಲ್ಲಿ ಸಾಹುಕಾರ್ ದೇವೀರಯ್ಯನ ಕ್ರೌರ್ಯಕ್ಕೆ ಹೇಸಿ ತಮ್ಮ ಚಿಕ್ಕರಾಮನನ್ನು ಕರೆದುಕೊಂಡು ಊರು ಬಿಡಲು ಪುಟ್ಟಸ್ವಾಮಿ ಸಿದ್ಧನಾದರೂ ಮತ್ತೆ ಮೊದಲಿನ ಬದುಕಿಗೇ (ಜೀತಕ್ಕೆ) ಮರಳಬೇಕಾದ ಬದುಕಿನ ಅನಿವಾರ್ಯತೆ ಕರುಳನ್ನು ಮಿಡಿಯುತ್ತದೆ. 'ಗರ್ಜನೆ' ಕಥೆಯ ಮರಿನಂಜ ಎಲ್ಲರಿಂದಲೂ ಕುರಿನಂಜನೆಂದು ಅನ್ನಿಸಿಕೊಂಡು ಕುರಿಯಂತೆಯೇ ಇದ್ದವನು ಪಾರ್ವತಿಯನ್ನು ಕಂಡ ಮೇಲೆ, ಅವಳು ಮೈ ನೆರೆದದ್ದು ತಿಳಿದ ಮೇಲೆ ನೀರಿನಲ್ಲಿ ಸ್ವಸ್ವರೂಪವನ್ನು ಕಂಡುಕೊಂಡ ಸಿಂಹದ ಮರಿಯಂತೆ ಘರ್ಜಿಸುತ್ತಾನೆ. ಅವನ ಘರ್ಜನೆಗೆ ಬೆದರದವರಾರು? ಕುರಿಮುಂದೆಯಲ್ಲೇ ಇದ್ದರೂ ಸಿಂಹದ ಮರಿಗೆ ತಾನು ಸಿಂಹದ ಮರಿ ಎಂದು ತಿಳಿದ ಮೇಲೆ ಸುಮ್ಮನಿದ್ದೀತೆ? ಮರಿನಂಜ ಪಟೇಲರ ಮನೆಯಲ್ಲಿ ಜೀತಕ್ಕಿದ್ದರೂ ತಾನೂ ಪಟೇಲರ ಬೀಜಕ್ಕೆ ಬಿದ್ದವನೆ ಎಂಬುದು ತಿಳಿದ ಮೇಲೂ ಸುಮ್ಮನಿದ್ದಾನೆ? ಈ ಕತೆಯಲ್ಲಿ ಜೀತದ ವಿಷಯ ಬರುವಂತೆ ಹಳ್ಳಿಗಾಡಿನ ಜೀವನದ ಒಳಮುಖವೊಂದರ ಚಿತ್ರವೂ ಇದೆ. 'ಅವ್ವ' ಮತ್ತು 'ನೆಲದ ಉಸಿರು'. ಪುತ್ರ ವಾತ್ಸಲ್ಯವನ್ನು ತೋರುವ ಕತೆಗಳು. ಅವ್ವ ಕತೆಯಲ್ಲಿ ಚೆನ್ನಣ್ಣ ವಿಧವೆಯಾದ ತನ್ನ

ತಾಯಿ ಕೆಂಪಕ್ಕ ತನ್ನನ್ನು ಎಷ್ಟೊಂದು ಅಕ್ಕರೆಯಿಂದ ಬೆಳೆಸಿದಳು, ತಾಯಿಯ ವಾತ್ಸಲ್ಯವೆಂತಹುದು ಎಂದು ಹಸು ತಪ್ಪಿಸಿಕೊಂಡು ಹೋದ ರಾತ್ರಿ ಕರುಗಳ ಕಿರುಚಾಟವನ್ನು ನೋಡಿ ಆಲೋಚನೆಯಲ್ಲಿ ತಲ್ಲೀನನಾದಾಗ ದೊಡ್ಡಿಯಿಂದ ಕಟ್ಟಿದ್ದ ಗೂಟ ಸಮೇತ ಮುದಿ ಹಸು ಮನೆಗೆ ಬರುತ್ತದೆ ಕರುಗಳಿಗೆ (ಅವಳಿ) ಮೊಲೆಯುಣ್ಣಿಸಲು! 'ನೆಲದ ಉಸಿರು' ಕತೆಯ ರಮೇಶ ತಂದೆ ವೆಂಕಟೇಗೌಡರ ಜೊತೆಯಲ್ಲಿ ಪಾಲಾದ ಹೊರತು ಊರಿಗೆ ಬರುವುದಿಲ್ಲವೆಂದು ಮಹಾನವಮಿಯ ಹಿಂದಿನ ದಿನ ಹೇಳಿಕಳುಹಿಸಿದ್ದರೂ, ವೆಂಕಟೇಗೌಡನ ಹೆಂಡತಿ ದೊಡ್ಡತಾಯಕ್ಕನ ನಿರೀಕ್ಷೆಯಂತೆ ಹಬ್ಬದ ದಿನ ಬೆಳಗ್ಗೆ ಹೆಂಡತಿ ಮಕ್ಕಳೊಡನೆ ಊರಿಗೆ ಹಾಜರಾಗುತ್ತಾನೆ. ಹುಟ್ಟಿದೂರಿನ ನೆಲದ ಮೋಹ ಅಂಥದು. ಹೆತ್ತ ಕರುಳಿನ ಕರೆ ಅಂಥದು. 'ಕಳೆ' ಮತ್ತು ಸ್ವಾರ್ಥ ಹಳ್ಳಿಗಾಡಿನ ಸಂಕೀರ್ಣ ಬದುಕನ್ನು ವಸ್ತುವಾಗುಳ್ಳ ಕತೆಗಳು. 'ಕಳೆ' ಕಥೆಯ ಶಿವಲಿಂಗೇಗೌಡರು ಕಬ್ಬು ನೆಡುತ್ತಿರುವಾಗ ಕೆಂಪೇರಿಯನ್ನು ನೋಡಿ ತನ್ನ ಅವಳ ಗುಪ್ತ ಸಂಬಂಧವನ್ನು ನೆನೆಸಿಕೊಳ್ಳುತ್ತಾರೆ. ಹಾಗೆಯೇ ಅವರು ತಮ್ಮ ರಾಮದಾಸನ 'ನರ ಸತ್ತ' ರೀತಿಯ ಬಾಳನ್ನೂ ಮೆಲುಕು ಹಾಕುತ್ತಾರೆ. ಕತೆಯ ಕೊನೆಯಲ್ಲಿ ಪ್ರಾಯಕ್ಕೆ ಬಂದ ಮಗಳು ಲಲಿತ, ಆಳು ನಿಂಗನೊಡನಿರುವುದನ್ನು ಕಾಣುತ್ತಾರೆ. ಹೀಗೆ ಎರಡು ಮೂರು ದಿಕ್ಕಿನಲ್ಲಿ ಮೈತಳೆಯುವ ಕತೆ, ಕತೆಯಮಟ್ಟಿಗೆ ಚೆನ್ನಾಗಿದ್ದರೂ, ಉದ್ದೇಶದಲ್ಲಿ ವಿಫಲವಾಗಿದೆ. ಕತೆಯಲ್ಲಿ ಬರುವ ಹಾವಿನ ವಿವರ ಕಾಮದ ಸಂಕೇತವಾಗಿ ಬರುತ್ತದೆಯೇ ಅಥವಾ ಇಲ್ಲವೊ ಹೇಳಲಾಗದು. ಹಾಗೆಯೆ ಕತೆಯ ಶೀರ್ಷಿಕೆಯ ಔಚಿತ್ಯವೂ ಸಂದಿಗ್ಧವಾಗಿದೆ. 'ಸ್ವಾರ್ಥ' ಕತೆ 'ಕಳೆ' ಕತೆಯಲ್ಲಿ ಆದ ಸೋಲನ್ನೆಲ್ಲ ತುಂಬಿ ಕೊಡುತ್ತದೆ. 'ಆಕಾಶಕ್ಕಿಂತ ಅಗಲವಾದದ್ದು ಆಸೆ ಭೂಮಿಗಿಂತ ತೂಕವಾದದ್ದು ಸತ್ಯ' ಇದು ಹೊಲೆಯರ ನೀರಗಂಟಿ ಮೂಗಪ್ಪನ ತತ್ವ. ಈ ತತ್ವ ಗುರುಬೋಧನೆ ತೆಗೆದುಕೊಂಡು ತೋಟದಲ್ಲಿ ಮಠ ಕಟ್ಟಿಕೊಂಡಿದ್ದರೂ ಆಸ್ತಿ ಹಾಳಾದೀತೆಂದು ಅದರ ಜವಾಬ್ದಾರಿಯನ್ನು ಬಿಡದೆ ಬಿಲ್ಲಿನಂತೆ ಬಳಕುವ ವಿಧವೆ ಪುಟ್ಟಮ್ಮನ ಅಂಗಸಂಗವನ್ನು ಮಠದಲ್ಲೇ ಪಡೆಯುತ್ತಿದ್ದ ಪುಟ್ಟಸ್ವಾಮಿ ಗೌಡರಿಗೆ ಚುಚ್ಚುತ್ತದೆ. ಈ ಕತೆ ಮೊದಲು 'ಸುಧಾ'ದಲ್ಲಿ ಪ್ರಕಟವಾದಾಗ ಮಂಡ್ಯಜಿಲ್ಲೆಯ ಒಂದು ರೈತ ಕುಟುಂಬದವರೊಬ್ಬರು ಲೇಖಕರ ಮೇಲೆ ಮಾನನಷ್ಟ ಮೊಕದ್ದಮ್ಮೆಯ ಬೆದರಿಕೆಯನ್ನು ಹಾಕಿದ್ದರಂತೆ. ಅದೇ, ಕತೆಯ ಚೈತನ್ಯಪೂರ್ಣವಾದ ಜೀವಂತಿಕೆಗೆ ಸಾಕ್ಷಿ. ಹಳ್ಳಿಯ ಬಾಳಿನ ಒಂದು ಸುಂದರ ಚಿತ್ರವನ್ನು ಈ ಕತೆ ಚಿತ್ರಿಸಿದೆ. 'ಅಭಿಮಾನ' ಹಳ್ಳಿಯ ರಾಜಕೀಯವನ್ನು ಹೇಳುವ ಕತೆ. ತಾಲ್ಲೂಕು ಬೋರ್ಡ್ ಸದಸ್ಯ ಪುಟ್ಟಸ್ವಾಮಿಗೌಡನ ಕುಟಿಲತನ, ಪಂಚಾಯ್ತಿ ಸದಸ್ಯ ಯಾಲಕ್ಕಿಯ ಮುಗ್ಧತನ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ಹೊಲೆಯನಾದರೂ ಯಾಲಕ್ಕಿಯ ನಿಯತ್ತು

ಮೆಚ್ಚುವಂಥದು. ಹಳ್ಳಿಯ ಜೀವನ ರಾಜಕೀಯದಿಂದಾಗಿ ಹೇಗೆ ಕಲುಷಿತವಾಗುತ್ತದೆ ಎಂಬುದು ಈ ಕತೆಯಿಂದ ತಿಳಿದು ಬರುತ್ತದೆ. ಹಳ್ಳಿಯ ಹೆಂಗಸರ ಬಾಯಲ್ಲಿ ಬರುವ ಬಯ್ಗಳದ ಸೊಗಸನ್ನು ನೋಡಬೇಕಾದರೆ 'ಕೆಂಪುಹುಂಜ' ಕತೆಯನ್ನು ಓದಬೇಕು. 'ಜ್ವಾಲೆಯ ನಡುವೆ' ಎಲ್ಲರ ಬಾಳಿನಲ್ಲೂ ನೋವಿರುತ್ತದೆ ಎಂಬುದನ್ನು ಹೇಳುವ ಕತೆ. ಈ ಕತೆ ಉಳಿದ ಕತೆಗಳಿಂದ ಹೊರತಾಗಿ ನಿಂತರೂ ವೈಶಿಷ್ಟವನ್ನು ತೋರುವುದಿಲ್ಲ.

ಲೇಖಕರೇ 'ನನ್ನ ಮೊದಲಿನ ಬರವಣಿಗೆಗೂ ಇಲ್ಲಿಯ ಬರವಣಿಗೆಗೂ ಬದಲಾವಣೆ ತಿಳಿಯುತ್ತದೆ' ಎಂದು ಹೇಳಿಕೊಂಡಿದ್ದಾರೆ. ಅವರ ಅನ್ನಿಸಿಕೆ ಎಷ್ಟರ ಮಟ್ಟಿಗೆ ನಿಜ ಎಂಬುದನ್ನು 'ನೆಲದ ಒಡಲ'ನ್ನು ನೋಡದೆ ಹೇಳಲಾಗುವುದಿಲ್ಲ. ಕತೆಗಾರರೇ ಹೇಳಿಕೊಂಡಿರುವಂತೆ ಇಲ್ಲಿಯ ಕತೆಗಳ ವಸ್ತು ಸುಪ್ತ ಕಾಮ, ಜೀತ ಪದ್ಧತಿ, ಹಾಗೂ ಹಳ್ಳಿಗಾಡಿನ ರಾಜಕೀಯ ಹಳ್ಳಿಗನ ಬಾಳಿನ, ಗೋಳಿನ ವಿವರಗಳು ಕತೆಗಳಲ್ಲಿ ಹೃದಯಂಗಮವಾಗಿ ಕಣ್ಣಿಗೆ ಕಟ್ಟುವಂತೆ ಮೂಡಿ ಬಂದಿವೆ. ಸೊಗಸಾಗಿ ಕತೆ ಹೇಳಬಲ್ಲ ರಾಮಣ್ಣನವರು ಈ ಕತೆಗಳೆಲ್ಲವನ್ನೂ ಸೊಗಸಾಗಿ ನಿರೂಪಿಸಿದ್ದಾರೆ. ನಿರೂಪಣೆಗಿನ್ನ ಮುಖ್ಯವಾದುದು ಇಲ್ಲಿನ ಸತ್ವಯುಕ್ತವಾದ ಭಾಷೆ. ಇಲ್ಲಿಯ ಭಾಷೆಯ ಬಾಗು, ಬನಿಗಳು ಓದುಗರಿಗೆ ಮಂಡ್ಯ ಜಿಲ್ಲೆಯ ಹಳ್ಳಿಯೊಂದರಲ್ಲಿ ಕೆಲವಾರು ದಿನ ಇದ್ದು ಬಂದ ಅನುಭವವನ್ನು ಉಂಟು ಮಾಡುತ್ತವೆ. ಇಷ್ಟೆಲ್ಲಾ ಹೇಳಿದರೂ ಈ ಸಂಕಲನ ನಿರೀಕ್ಷೆಯ ಮಟ್ಟಕ್ಕೆ ಏರಿಲ್ಲ. 'ಗರ್ಜನೆ' ಗರ್ಜನೆಯಾಗಿಲ್ಲ. ಹಳ್ಳಿಗಾಡಿನ ಜನಜೀವನದ ಸುಂದರ ಚಿತ್ರಗಳನ್ನು ಕೊಡುವಷ್ಟರಿಂದಲೇ ತೃಪ್ತರಾಗದೆ, ಭಾಷೆಯ ತೆಕ್ಕೆಗೆ ವೈಚಾರಿಕತೆಯನ್ನು ಅಳವಡಿಸಿಕೊಂಡು ರಾಮಣ್ಣನವರು ಮುಂದುವರಿಯಬೇಕು. ಆ ಭರವಸೆ ಹುಸಿಯಾಗಲಾರದು ಎನ್ನುವುದಕ್ಕೆ ಇಲ್ಲಿನ ಅನೇಕ ಕತೆಗಳು ಪುಷ್ಟಿಯನ್ನು ಕೊಡುತ್ತವೆ.

ಬೆಳಗಾಯಿತು

ಬೆಳಗಾಯಿತು ರಾಮಚಂದ್ರಶರ್ಮರ ಮೂರನೆಯ ಕಥಾ ಸಂಕಲನ. ಹದಿನೈದು ವರ್ಷಗಳ ಅನಂತರ ಬರುತ್ತಿದೆ. ಈ ಸಂಕಲನದಲ್ಲಿ ಹನ್ನೆರಡು ಕತೆಗಳಿವೆ. 'ಆಲಾಪ' ಕತೆಯಲ್ಲಿ ಜೀವನದಲ್ಲಿ ವಿಶೇಷವಿಲ್ಲದೆ, ಗಂಡನ ಪ್ರೀತಿಯನ್ನು ಯಾಂತ್ರಿಕವಾಗಿ ಪಡೆವ ಹೆಣ್ಣು ಗಂಡನ ಒಂದು ಪ್ರೀತಿಯ ನೋಟಕ್ಕಾಗಿ, ಸವಿ ಮಾತಿಗಾಗಿ, ಬಿಸಿಯಪ್ಪುಗೆಗಾಗಿ ಚಡಪಡಿಸುತ್ತಾಳೆ. 'ಕಂಬಗಳ ನೆರಳಲ್ಲಿ' ವಿವಾಹಿತ ಸ್ತ್ರೀ ಪಾರ್ವತಿಯ ಪ್ರೇಮಪಾಶದಿಂದ ಹೊರಬರಲಾರದ ಶ್ರೀಧರನನ್ನು ಕಾಣುತ್ತೇವೆ. ಪಾರ್ವತಿಯಿಂದ ದೂರವಾಗಲು ಅವನು ಬೇರೊಬ್ಬಳನ್ನು ಮದುವೆಯಾಗುತ್ತಿದ್ದರೂ ಅವಳ ಪ್ರೇಮದ ಕಂಬಗಳ ನೆರಳಿನಿಂದ ಪಾರಾಗಲಾರ. ತನಗೆ ಓದು ಸಾಗದೆಂದೂ ಕಲಾಶಾಲೆಗೆ ಸೇರುತ್ತೇನೆಂದೂ

ಹೇಳಿದ ರಾಜು ತಂದೆಯನ್ನು ವಿರೋಧಿಸಿ ತನ್ನ ಬಯಕೆಯನ್ನು ಪೂರೈಸಲಾರದೆ ಬ್ಯಾಂಕೊಂದರಲ್ಲಿ ಗುಮಾಸ್ತನಾಗಿ, ಮದುವೆಯಾದರೂ ಸುಖ ಕಾಣದೆ, ತಂದೆ, ತಾಯಿ, ಹೆಂಡತಿ ಎಲ್ಲರ ಮೇಲೂ ರೊಚ್ಚು ತೀರಿಸಿಕೊಳ್ಳಲೋಸುಗ ಬಾರಿನ ಸಹವಾಸಕ್ಕೆ ಬೀಳುತ್ತಾನೆ. ಅವನ ಸ್ಥಿತಿ ಒಂದು ಮಗ್ಗುಲ ಕೊಚ್ಚೆಯನ್ನು ತಪ್ಪಿಸಿಕೊಳ್ಳಲು ಹೋಗಿ ಮತ್ತೊಂದು ಮಗ್ಗುಲ ಕೊಚ್ಚೆಗೆ ಬಿದ್ದಂತಾಗಿತ್ತು. ಅವನು ಹಿಡಿದ ದಾರಿ ಮುಳ್ಳು ಜಾಡಾಗಿತ್ತು. ಈ ಕತೆ 'ಮುಳ್ಳು ಜಾಡಿಗೆ ಸಿಕ್ಕಿತ್ತು'. 'ಮೃಗಜಲ' ಕತೆಯ ಅವನು ಅವಳನ್ನು, ಅವಳು ಅವನನ್ನು ತುಂಬಾ ಪ್ರೀತಿಸುತ್ತೇವೆಂದುಕೊಂಡಿದ್ದರು. ಅನಾರೋಗ್ಯದಿಂದ ನರಳುತ್ತಿದ್ದ ಅವನು, ಅವಳು ತನ್ನ ಸರ್ವಸ್ವವನ್ನೂ ಸೂರೆಗೈದಾದರೂ ತನಗೆ ಆರೈಕೆ ಮಾಡಲಿ ಎಂದು ಬಯಸುತ್ತಿದ್ದ. ಅವಳೂ ತನ್ನ ಸರ್ವಸ್ವವನ್ನೂ ಮಾರಿ ಅವನ ಸೇವೆ ಮಾಡಲು ಸಿದ್ಧಳಾಗುತ್ತಿದ್ದಳು. ಅವಳು ಆ ಅರ್ಥದ ಮಾತನ್ನು ಅವನಿಗೆ ತಿಳಿಸಿದಾಗ ಅವನಿಂದ ಯಾವ ವಿರೋಧವೂ ಬರುವುದಿಲ್ಲ. ಅವನು ಮತ್ತು ಅವಳು ತಿಳಿದುಕೊಂಡಿದ್ದ ಅವರ ನಡುವಿನ ಪ್ರೀತಿ ಬರಿಯ ತೋರಿಕೆಯ ಮೃಗಜಲವಾಗಿತ್ತು! 'ಯಾರು ಹಿತವರು ನಿನಗೆ' ಕತೆಯಲ್ಲಿ ಮಲ್ಲಿಗೆ, ತನ್ನ ಬರಡು ಬಾಳಿಗೆ ಮಳೆಯನ್ನು ತಂದ, ಬಾಳನ್ನು ಬಂಗಾರ ಮಾಡಿದ ವ್ಯಕ್ತಿ ಆ ಮೂವರಲ್ಲಿ ಯಾರು ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಮದುವೆಯಾಗಿದ್ದೂ ನನ್ನ ತಪ್ಪಿಲ್ಲದೆ ಒಂಟಿಬಾಳನ್ನು ಬಾಳಬೇಕಾಗಿ ಬಂದಿದ್ದ ಮಲ್ಲಿ ಗಂಡಿನ ಸಹವಾಸಕ್ಕಾಗಿ ಕಾದು ನಿಂತಿದ್ದುದಕ್ಕೆ ಮೇ ತಿಂಗಳ ಸುಟ್ಟಭೂಮಿ ಮಳೆಗಾಗಿ ಹಾತೊರೆಯುತ್ತಿರುವ ಚಿತ್ರ ಸಂಕೇತವಾಗಿ ಬಂದಿರುವುದು ತುಂಬಾ ಉಚಿತವಾಗಿದೆ. ಈ ಕತೆಯಲ್ಲಿ ಕತೆಗಾರರು ತೋರಿರುವ ಸಂಯಮ ಅಪೂರ್ವವಾದುದು. ಸಾಧಾರಣ ಕತೆಗಾರರ ಕೈಯಲ್ಲಿ ಅಶ್ಲೀಲ -ವಾಗಬಹುದಾದ ವಸ್ತು ಇಲ್ಲಿ ಹಾಗಾಗದೆ ಉಳಿದಿದೆ. ತೂಕಮಾಡಿದಂತಹ ಬರವಣಿಗೆ ಕತೆಯಲ್ಲಿದೆ. ಒಂದು ಮಾತು ಹೆಚ್ಚಿಲ್ಲ, ಒಂದು ಮಾತು ಕಡಿಮೆಯಿಲ್ಲ. ತನ್ನ ಬದುಕಿನಿಂದ ಸಾಧನೆಯಿಂದ ಬೋಧನೆಯಿಂದ ಮಹಾತ್ಮ ಪದವಿಗೇರಿದ ವ್ಯಕ್ತಿಯನ್ನು ಅವನು ಜೀವಂತವಿದ್ದಾಗಲೇ ದೇವರೆಂದು ಪೂಜಿಸಿ, ಅವನ ಬೋಧನೆಯನ್ನು ಸಮಾಧಿಗೈಯುವ ವಿಚಾರಹೀನ ಜನತೆಯ ಸುಂದರ ಚಿತ್ರ 'ನೀರಿನೊಳಗಿನ ನೆರಳು' ಕತೆ. ವ್ಯಕ್ತಿಯೊಬ್ಬನಿಗೆ ಇನ್ನು ಹತ್ತು ನಿಮಿಷಗಳಲ್ಲಿ ತನ್ನ ಸಾವು ಖಚಿತವೆನಿಸಿದಾಗ ಬರಬಹುದಾದ ಆಲೋಚನಾ ತರಂಗಗಳನ್ನು 'ಸಾವು' ಕತೆಯಲ್ಲಿ ಕತೆಗಾರರು ಸುಂದರವಾಗಿ ಸೆರೆಹಿಡಿದಿದ್ದಾರೆ. ಖಾಯಿಲೆಯ ಅಜ್ಜನೊಂದಿಗೆ ಗುಡಿಸಿಲಿನಲ್ಲಿ ರಾತ್ರಿಯೊಂದನ್ನು ಕಳೆಯಬೇಕಾಗಿ ಬಂದ ಹುಡುಗನೊಬ್ಬನ ಮನಸ್ಸಿನಲ್ಲಿ ನಡೆದಿರಬಹುದಾದ ಯೋಚನೆಗಳು, ಆ ಅಜ್ಜ ಅದೇ ರಾತ್ರಿ ಪಾರ್ಶ್ವವಾಯು ಪೀಡಿತನಾದಾಗ ಆಗಿರಬಹುದಾದ ಹೆದರಿಕೆ ಇವುಗಳಿಂದ ನಾಟಕ ನೋಡಲು

ಹೋಗಿರುವ ತನ್ನ ತಾಯಿ ಎಂದಿಗೆ ಬಂದಾಳೋ, ಎಷ್ಟು ಹೊತ್ತಿಗೆ ಬೆಳಗಾದೀತೋ ಎಂದು ಕಾತುರದಿಂದ ಹೊಯ್ದಾಡುವ ವೇಳೆಗೆ, ಹಿತ್ತಲ ಮರದಲ್ಲಿದ್ದ ಕೋಗಿಲೆಯ ದನಿ ಕೇಳಿ ಓ ಬೆಳಗಾಯಿತು, ಎಂದು ನೆಮ್ಮದಿಯ ನಿಟ್ಟುಸಿರು ಬಿಡುತ್ತಾನೆ ಆ ಹುಡುಗ 'ಬೆಳಗಾಯಿತು' ಕತೆಯಲ್ಲಿ. 'ಮಾಗಿ' ಕತೆಯ ಘಟನೆ ವಿದೇಶದಲ್ಲಿ-ಲಂಡನ್‌ನಲ್ಲಿ-ನಡೆಯುತ್ತದೆ. ಅಲ್ಲಿರುವ ವರ್ಣ ಭೇದ ನೀತಿ ಮೊದಲಾದ ವಿಷಯಗಳು ಅದರಲ್ಲಿ ಬರುತ್ತವೆ. ಈ ಕತೆಯ ನಾಯಕನಾದ ಎಡ್ವಿನ್ ಭಾರತದವನು. ಅಬರ್‌ಫಾನ್ ಹಳ್ಳಿಯ ಒಂದು ಭಾಗ ಮರ್ಥರ್‌ವೇರಿನ ಕಲ್ಲಿದ್ದಲ ಗಣಿಯ ಬೂದಿಯಿಂದ ಮುಚ್ಚಿ ಹೋದ ದುರಂತ ಕತೆಯೆ 'ಉಳಿದವರು'. ಆ ದುರಂತದ ನಂತರ ಆ ನತದೃಷ್ಟ ಹಳ್ಳಿಯ ಜನರ ಮೇಲೆ ಹೊರಗಿನವರ ಅನುಕಂಪ, ವಿಚಾರಣಾ ಸಮಿತಿಯವರು ತಪ್ಪಿತಸ್ಥರಲ್ಲವೆಂದರೂ ಊರ ಜನರ ಕಣ್ಣಿನಲ್ಲಿ ತಪ್ಪಿತಸ್ಥರಾಗಿ ಕಾಣುವ ನಿರಪರಾಧಿಗಳು, ಆ ಹಳ್ಳಿಯ ಬಾಲಕರ ಜೀವನ ಮುಂತಾದ ವಿವರಗಳು ಕತೆಯೊಳಗೆ ಹಾಸುಹೊಕ್ಕಾಗಿ ದುಂರತದ ತೀವ್ರತೆಯನ್ನು ತಗ್ಗಿಸಿವೆ. 'ಪಲಾಯನ' ಕತೆಯಲ್ಲಿ ವಿದ್ಯಾಭ್ಯಾಸಕ್ಕೆಂದು ಲಂಡನ್ನಿಗೆ ಹೋಗಿದ್ದ ಶ್ರೀಕಾಂತ ಅಲ್ಲಿಯ ಲೂಸಿಯನ್ನು ಮದುವೆಯಾಗಿ ನೆಲೆ ನಿಂತ ಮೇಲೆ ಹೆಂಡತಿಗಿಂತ ತಾನು ಕೀಳು ಎಂಬ ಭಾವನೆಯನ್ನು ಪದೇ ಪದೇ ಪಡೆಯುತ್ತಾನೆ. ಅದರಿಂದಾಗಿ ಒಂದು ರೀತಿಯ ಪಲಾಯನವಾದ ಅವನಲ್ಲಿ ಕಂಡುಬರುತ್ತದೆ. ಕೈರೋವಿಗೆ ಕೆಲಸದ ಕಾರಣ ಆರು ತಿಂಗಳು ಹೋಗಿ ಬಂದಾಗ ಲೂಸಿಗೆ ಮೂರು ತಿಂಗಳಾಗಿರುವುದನ್ನು ತಿಳಿದು 'ಶ್ರೀನಿವಾಸ, ನಿನ್ನ ದಮ್ಮಯ್ಯ ಅವಳ ಮೈ ಇಳಿಯಲಿ!' ಎಂದು ಬೇಡಿಕೊಳ್ಳುತ್ತಾನೆ ಅವಳಿಗೆ ತಿಳಿಯದ ಕನ್ನಡದಲ್ಲಿ. 'ಕೊಡತಿ ಹುಳ' ಕತೆಯಲ್ಲಿ ಬಾಲ್ಯವನ್ನು ದಾಟಿ ಯೌವನಕ್ಕೆ ಕಾಲಿಡುತ್ತಿರುವ ಜಾನಿಯ ಸಂಪ್ರದಾಯ ವಿರುದ್ಧ ಬಂಡಾಯ ಪ್ರವೃತ್ತಿ ಹಾಗೆಯೇ ಅಮೂರ್ತವಾಗಿ ಅವನಲ್ಲಿ ಮನೆ ಮಾಡಿರುವ ಹುಡುಗಿಯರ ಬಗೆಗಿನ ಆಸಕ್ತಿಯನ್ನು ಚಿತ್ರಿಸಿದ್ದಾರೆ.

ಈ ಸಂಕಲನದ ಕೊನೆಯ ನಾಲ್ಕು ಕತೆಗಳು ವಿದೇಶದಲ್ಲಿ ನಡೆಯುತ್ತವೆ. ವಿದೇಶದಲ್ಲಿ ಭಾರತೀಯರು ಎದುರಿಸಬೇಕಾದ ಸಾಂಸ್ಕೃತಿಕವಾದ ವಿರೋಧದ ಕತೆ ಅವುಗಳಲ್ಲಿ ಬರುತ್ತವೆ. 'ಉಳಿದವರು' ಮತ್ತು 'ಕೊಡತಿ ಹುಳ' ಇದಕ್ಕೆ ಹೊರತಾದವು. ಉಳಿದ ಕತೆಗಳಲ್ಲಿ 'ಯಾರು ಹಿತವರು ನಿನಗೆ' 'ನೀರಿನೊಳಗೆ ನೆರಳು,' 'ಸಾವು' ಮತ್ತು 'ಬೆಳಗಾಯಿತು'. ಗಮನಾರ್ಹವಾದ ಕಥೆಗಳು...' ಶರ್ಮರ ಕತೆಗಳು ವಿಮರ್ಶೆಯ ವಿಶ್ಲೇಷಣೆಯ ಪಟ್ಟಿಗೆ ಸುಲಭವಾಗಿ ಸಿಕ್ಕುವಂಥವಲ್ಲ. ಅವುಗಳ ಮೇಲ್ಮೈ ತುಂಬ ನುಣುಪಾದದ್ದು, ನವಿರಾದದ್ದು - ಬುದ್ಧಿಗೆ ಯಾವುದೋ ಕ್ಷಣದಲ್ಲಿ ಮಿಂಚಿನಂತೆ ಹೊಳೆದು ಭಾಷೆಯಲ್ಲಿ ಹಿಡಿಯುವಷ್ಟರಲ್ಲಿ ಮಾಯವಾಗುವ ಭಾವತರಂಗದಂಥದ್ದು.

ಬಳಕೆ ಮಾತು, ಲಘುತಪ್ಪದ ಸಣ್ಣ ಸಣ್ಣ ವಾಕ್ಯಗಳು, ಭಾವಭಾರವನ್ನು ತಡೆಯಲಾರದೆ ಕಾವ್ಯದ ಪ್ರತಿಮೆಯ ಪ್ರಪಂಚಕ್ಕೆ ಜಿಗಿಯುತ್ತಿದೆ ಅನ್ನಿಸುವ ಸೂಕ್ಷ್ಮಸಂವೇದನಾಶೀಲತೆ, ಅಚ್ಚುಕಟ್ಟಾದ ತಾಂತ್ರಿಕ ಪರಿಕರ-" ಎಂದು ಎ. ಶಂಕರ್ ಹೇಳಿದ್ದಾರೆ. (ಪ್ರಜಾವಾಣಿ ೬-೫-೧೯೭೩) ಶರ್ಮರ ಕತೆಗಳು ಭಾವಗೀತೆಯಂತೆ ಸಾಗುತ್ತವೆ. ಆದರೂ ಡಿ.ಎ. ಶಂಕರ್ ಹೇಳುವಂತೆ ಕತೆಗಳನ್ನು ಓದಿದ ಮೇಲೆ ಯಾವುದೋ ರೀತಿಯ ಅತೃಪ್ತಿ ಉಳಿಯುತ್ತದೆ. ಈ ವರ್ಷದ ಗಮನಾರ್ಹ ಕಥಾಸಂಕಲನಗಳಲ್ಲಿ 'ಬೆಳಗಾಯಿತು' ಪ್ರಮುಖವಾದುದು.

ಅಶ್ವತ್ಥರ ಕತೆಗಳು

ಅಶ್ವತ್ಥರ **ಬಾಳಹೊಳೆ** ಹಿಂದಿನ **ಬಾಳಹೊಳೆ** (೧೯೫೦) ಸಂಗ್ರಹದ ಎಂಟು ಕತೆಗಳು ಮತ್ತು '**ಜಯಂತಿ**'ಯ (೧೯೬೦) ಆರು ಕತೆಗಳನ್ನು ಒಳಗೊಂಡ ಹದಿನಾಲ್ಕು ಕತೆಗಳ ಸಂಗ್ರಹ. 'ಆ ರಾತ್ರಿಯ ನಾಟಕ, ಹಣದಾಸೆಗಾಗಿ ವೈದಿಕ ಬಡಬ್ರಾಹ್ಮಣನೊಬ್ಬ, ಗಂಡನ ಮನೆಗೆ ಕರೆದುಕೊಂಡು ಹೋಗುತ್ತಿದ್ದ ತನ್ನ ಅಣ್ಣನ ಮಗಳನ್ನೇ ಕ್ಲೋಸು ಪೇಟೆಯ ಸುಲ್ತಾನನಿಗೆ ಮಾರಿದ ಕತೆ. ಸುಲ್ತಾನ ರೈಲಿನಲ್ಲಿ ಪ್ರಯಾಣ ಮಾಡುವಾಗ ಆ ಬ್ರಾಹ್ಮಣನಿಗೆ, ಜೇಡ ಬಲೆ ನೇಯುವಂತೆ, ಹಣದ ಆಮಿಷವನ್ನು ತೋರಿ ಈ ಹೀನ ಕಾರ್ಯಕ್ಕೆ ಒಪ್ಪಿಸಿಕೊಳ್ಳುತ್ತಾನೆ. ವೈದಿಕ ಬ್ರಾಹ್ಮಣನ ಕೀಳು ನಡತೆಯನ್ನೂ ಸುಲ್ತಾನನ ಹೆಣ್ಣಿನ ಚಪಲವನ್ನೂ ಕಂಡು ಮಾನವೀಯ ಗುಣಗಳೇ ಮನುಷ್ಯರಲ್ಲಿ ಇಲ್ಲವೇನೋ ಎಂದು ಚಿಂತಿಸುವಂತಾದಾಗ, ಸುಲ್ತಾನನ ಸೇವಕನಾದ ಹುಸೇನ್ ಷರೀಫನೇ ಅನಾಥ ಹೆಣ್ಣಿನ ನೆರವಿಗೆ ಬಂದು ಅವಳನ್ನು ಸೆರೆಯಿಂದ ಮುಕ್ತಳನ್ನಾಗಿ ಮಾಡುತ್ತಾನೆ. ಅದನ್ನು ಕಂಡಾಗ ಸಮಾಧಾನದ ನಿಟ್ಟುಸಿರೊಂದು ಹೊರಬೀಳುತ್ತದೆ. 'ಹುಚ್ಚ' ಕತೆಯ ಹುಚ್ಚಪ್ಪ. ತನ್ನ ಊರಿನವನೇ ಆದ ಕೆಂಚ, ಪೇಟೆಯಲ್ಲಿದ್ದು ಸಾಕಷ್ಟು ದುಡ್ಡುಮಾಡಿ, ಎತ್ತಿನ ವ್ಯಾಪಾರಕ್ಕೆ ಊರಿಗೆ ಬಂದು ಅನಿವಾರ್ಯವಾಗಿ ತನ್ನ ಗುಡಿಸಿಲಿನಲ್ಲಿ ಉಳಿಯಬೇಕಾಗಿ ಬಂದಾಗ ಹಣದ ಆಸೆಗೆ ಬಲಿಯಾಗಿ ಕೆಂಚನನ್ನು ಕೊಲ್ಲಲು ಹೋಗಿ ತನ್ನ ಏಕಮಾತ್ರ ಪುತ್ರನಾದ ಹನುಮನನ್ನು ಕೊಲ್ಲುತ್ತಾನೆ. ಮೇಲಿನ ಎರಡು ಕತೆಗಳಲ್ಲಿಯೂ ಹಣ ಹೇಗೆ ಮನುಷ್ಯನನ್ನು ಪಶುವನ್ನಾಗಿ ಮಾಡಬಲ್ಲುದು ಎಂಬುದು ಕಂಡುಬರುತ್ತದೆ. ಈ ಕತೆಗಳಲ್ಲಿ ನಡೆಯುವಂಥ ಘಟನೆಗಳು ನಡೆದಂತೆ ಜನರು ಮಾತನಾಡುತ್ತಿರುತ್ತಾರೆ. ಇಂತಹ ಕತೆಗಳನ್ನು ಪತ್ರಿಕೆಗಳೂ ವರದಿ ಮಾಡುತ್ತಿರುತ್ತವೆ. ಅಂತಹ ಕತೆಗಳಿಗೆ ಒಳ್ಳೆಯ ಕತೆಯ ಹೊದಿಕೆಯನ್ನು ಅಶ್ವತ್ಥರು ಕೊಟ್ಟಿದ್ದಾರೆ. 'ಯುಗಾದಿ' ಮತ್ತು 'ಅವಳಿಲ್ಲದಾಗ' ಕೌಟುಂಬಿಕ ಕತೆಗಳು. ಕಾಶಿಯಲ್ಲಿರುವ ಪ್ರೊಫೆಸರರ ಮನೆಗೆ ಯುಗಾದಿಯಂದು ಆಚಾರವಂತರಾದ ಅತಿಥಿಗಳು ಬಂದು ಅಲ್ಲಿ ಹಬ್ಬವನ್ನೇ

ಮಾಡದಿರುವುದನ್ನು ಕಂಡು ಹಿಂದಿರುಗಿದ ಕತೆ 'ಯುಗಾದಿ'. ಹೆಂಡತಿ ತೌರಿಗೆ ಹೋದಾಗ ಗಂಡ ಪಡುವ ಬವಣೆಯ ಕತೆ 'ಅವಳಿಲ್ಲದಾಗ'. ಈ ಕತೆ ಕತೆಗಿಂತ ಹೆಚ್ಚಾಗಿ ಹರಟೆಯನ್ನು ಹೋಲುತ್ತದೆ. 'ಗಂಡನ ಸೇಡು' ಮತ್ತು 'ಜೂಜುಗಾರ' ಕತೆಗಳೂ ಕೌಟುಂಬಿಕ ಕತೆಗಳೇ. 'ಗಂಡನ ಸೇಡು' ಕತೆಯ ಗಂಡಹೆಂಡಿರಾದ ಬೊಮ್ಮಣ್ಣ ಮತ್ತು ಸರಸ್ವತಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಶಿಗೆ ಹೋಗಿದ್ದವರು. ತೀಕ್ಷ್ಣಬುದ್ಧಿ (ಚುರುಕು) ಯವಳಾದ ಸರಸ್ವತಿ ತನ್ನ ಗುರುಗಳೆಲ್ಲರ ಮೆಚ್ಚುಗೆಯನ್ನು ಪಡೆದು ವಿದ್ಯಾಭ್ಯಾಸವನ್ನು ಮಾಡುತ್ತಿರುವಾಗಲೇ ಗರ್ಭಿಣಿಯಾದುದರಿಂದ ವಿದ್ಯಾಭ್ಯಾಸವನ್ನು ಅಲ್ಲಿಗೇ ಕೈಬಿಡಬೇಕಾಗುತ್ತದೆ. ಬೊಮ್ಮಣ್ಣ ಸರಸ್ವತಿಯಷ್ಟು ಬುದ್ಧಿವಂತನಲ್ಲದಿದ್ದರೂ, ಆ ಕಾರಣಕ್ಕಾಗಿ ಹೆಂಡತಿಯ ಮೇಲೆ ಸೇಡುತೀರಿಸಿಕೊಂಡ ಎನ್ನುವುದಕ್ಕಾಗುವುದಿಲ್ಲ. ಶ್ರೀಮಂತಿಕೆಯಲ್ಲೆ ಹುಟ್ಟಿ ಬೆಳೆದ ರಂಗ ಶ್ರೀಮಂತಿಕೆಗೆ ಸಹಜವಾದ ಎಲ್ಲ ದುರ್ಗುಣಗಳನ್ನೂ ಬೆಳೆಸಿಕೊಂಡು ಕೈ ಬರಿದಾದಗ ಹೆಂಡತಿ ಮತ್ತು ಮಗನಿದ್ದರೂ ತನ್ನ ವಿಮೆಯ ಹಣ ಸಿಗಲಿ ಎಂದು ಲಾರಿಗೆ ಸಿಕ್ಕಿ ಸತ್ತ ಕತೆ 'ಜೂಜುಗಾರ'. ಈ ಎರಡೂ ಕತೆಗಳಲ್ಲಿಯೂ ಗಮನಿಸುವಂತಹ ವಿಶೇಷವೇನೂ ಇಲ್ಲ. 'ಶ್ರೀಧರನ ಹಸಿವು' ಹೊಸದಾಗಿ ಮದುವೆಯಾದ ಶ್ರೀಧರ ಮಾವನ ಮನೆಗೆ ದೀಪಾವಳಿಯ ಹಬ್ಬಕ್ಕೆ ಹೋಗಿ ಬೆಳಗಿನಿಂದ ಸಂಜೆಯವರೆಗೂ ರಾಜೋಪಚಾರವನ್ನು ಪಡೆದರೂ ತನ್ನ ಮನದನ್ನೆ ಸರೋಜಳ ಮೋಹಕ ಮುಖವನ್ನು ಕಾಣದೆ ಪರಿತಪಿಸುವುದನ್ನು ಕಂಡಾಗಲೂ ಏಕಾಂತಕ್ಕೆ ಭಂಗ ತರುವ ಕಿರಿಯ ಭಾವ ಮೈದುನ ಗೋಪಿಯಿಂದ ನಗೆಪಾಟಲಾಗುವ ಕತೆ. ಇದೇ ವಸ್ತುವನ್ನುಳ್ಳ ಕತೆಗಳನ್ನು ಮಾಸ್ತಿ ಅವರೂ ಗೊರೂರ್ ಅವರೂ ಬರೆದಿದ್ದಾರೆ. ಆದರೂ ಈ ಕತೆಯನ್ನು ಓದಿ ನಕ್ಕು ನಲಿಯಲು ಅಡ್ಡಿಯೇನೂ ಇಲ್ಲ. 'ಹುಚ್ಚು ಸಾತಿ' ಸಾವಿತ್ರಿಯ ಕತೆ. ಪುರಾಣದ ಸಾವಿತ್ರಿಯಂಥವಳೇ ಈ ಸಾವಿತ್ರಿ. ಲಗ್ನಪತ್ರಿಕೆ ಸಿದ್ಧವಾಗುವ ವೇಳೆಗೆ ಮದುವೆ ನಿಂತು ಹೋದರೂ, ತಾನು ಒಪ್ಪಿದ್ದು ಆತನನ್ನು, ಅವನೇ ತನ್ನ ಗಂಡ ಎಂದು ಮತ್ತೆ ಮದುವೆಯಾಗಲೊಲ್ಲದೆ, ಗೃಹಿಣಿಯಂತೆ ಕಾಲುಂಗರ, ತಾಲಿಗಳನ್ನು ಧರಿಸಿಕೊಂಡು, ಊರಿನವರಿಂದ ಹುಚ್ಚುಸಾತಿ ಎಂದು ಅನ್ನಿಸಿಕೊಂಡು, ಕೊನೆಗೆ ಊರನ್ನೇ ಬಿಟ್ಟು ಕಾಕತಾಳೀಯ ನ್ಯಾಯದಂತೆ ತಾನು ಮದುವೆಯಾಗಬೇಕಾಗಿದ್ದ ವ್ಯಕ್ತಿಯ ಮನೆಯನ್ನೇ ಸೇರಿ, ಆತನ ಸೇವೆಯನ್ನು ಪತ್ನಿಗಿಂತಲೂ ಮಿಗಿಲಾಗಿ ಮಾಡಿ ಗತಿಸಿದ ಸತೀಮಣಿಯ ಕತೆ ಇದು. ಸಾವಿತ್ರಿ ಬದುಕಿರುವವರೆಗೂ ಆಕೆ ಇಂತಹವಳೆಂದು ಆ ಮನೆಯೊಡೆಯನಿಗೆ ಗೊತ್ತಾಗಲಿಲ್ಲ. ಸಾವಿತ್ರಿಗಾದರೂ ತಾನು ಯಾರ ಮನೆಯಲ್ಲಿ ಕೆಲಸ ಮಾಡುತ್ತಿದ್ದೇನೆಂಬುದು ತಿಳಿದಿತ್ತೋ ಇಲ್ಲವೋ ತಿಳಿಯದು. ತೇಯ್ದಷ್ಟೂ ಕಂಪನ್ನೇ ಕೊಡುವ ಶ್ರೀಗಂಧದಂತೆ ಬಾಳಿನುದ್ದಕ್ಕೂ ನೋವನ್ನುಂಡರೂ ಎಲ್ಲರಿಗೂ ಒಳ್ಳೆಯವಳಾಗಿ ತಾನು ಮೆಚ್ಚಿದ ಆದರ್ಶವನ್ನೇ ಪಾಲಿಸಿ

ಗತಿಸಿದ ಸಾವಿತ್ರಿಯ ಕತೆ ಎಂಥವರ ಮನವನ್ನೂ ಕಲಕಿ ಕಣ್ಣೀರುಡುವಂತೆ ಮಾಡುವಂಥದು. ಅಚ್ಚುಕಟ್ಟಾದ ಕತೆ. 'ಉದಯಗಿರಿ' ಅದೇ ಹೆಸರಿನ ಸಲಗನ ಕತೆ. ಸ್ವಾತಂತ್ರ್ಯವನ್ನು ಕಳೆದುಕೊಂಡ ಉದಯಗಿರಿ ತನ್ನ ಬಾಲ್ಯದ ಚೇಷ್ಟೆಗಳನ್ನೂ ಯೌವನದ ಮದೋನ್ಮತ್ತ ಶೃಂಗಾರ ಜೀವನವನ್ನೂ ನೆನೆಸಿಕೊಂಡು ಮತ್ತೆ ಸ್ವತಂತ್ರವಾಗಲು ಯತ್ನಿಸಿ ಸತ್ತ ಕತೆ. ಉದಯಗಿರಿ ತನ್ನ ಗತ ಇತಿಹಾಸವನ್ನು ನೆನೆಸಿಕೊಂಡ ರೀತಿಯಲ್ಲಿ ಕತೆ ಇದೆ. 'ಅನಾಗರಿಕರು' ಮತ್ತು 'ನಕಲು' ಕತೆಗಳ ವಸ್ತು ಬೇರೆ ಬೇರೆ ಆದರೂ ಅವುಗಳಲ್ಲಿರುವ ವ್ಯಂಗ್ಯ ಒಂದೇ ಅರ್ಥದ್ದು. ಮೊದಲಿನ ಕತೆ ಅಸ್ಸಾಮಿನ ನಾಗಾ ಬುಡಕಟ್ಟಿಗೆ ಸೇರಿದ ಹೆಣ್ಣಿನ ಒಂದು ದುರಂತ ಕತೆ. ಘೂರ್ಕಾ ರೆಜಿಮೆಂಟಿನ ಥಾಪಾನ ದೃಷ್ಟಿಗೆ ಬಿದ್ದು, ಶಿವಪುರಿಯ ಖಾಸಿಯ ಸಹೋದರಿಯೂ ಭೀಮನಾಗನ ಪ್ರೇಯಸಿಯೂ ಆದ ಜಯಂತಿ ಆಹುತಿಯಾದ ಕತೆ. ನಾಗರಿಕತೆಯ ಸೋಂಕಿಲ್ಲದ ನಾಗಾ ಬುಡಕಟ್ಟಿನ ಅವರು ಅನಾಗರಿಕರೂ, ಕಾಮುಕ ದೃಷ್ಟಿಯಿಂದ ಹೆಣ್ಣನ್ನು ನೋಡಿದ ನಾಗರಿಕ ಸೇರಿದ ಜನಾಂಗಕ್ಕೆ ಥಾಪಾ ಅನಾಗರಿಕನೊ ಎಂಬ ಪ್ರಶ್ನೆ ಓದುಗನ ಮನಸ್ಸಿನಲ್ಲಿ ಏಳುತ್ತದೆ. ಅದಕ್ಕೆ ಉತ್ತರವನ್ನು ಹೇಳಬೇಕಾಗಿಲ್ಲ. 'ನಕಲು' ಕತೆಯೂ ಮೇಲಿನ ಕತೆಯಂತಹುದೇ. ಪ್ರಸಿದ್ಧ ಚಿತ್ರಕಾರ ನರೋತ್ತಮ ಬಸು ಯಾವ ಭಿಕ್ಷುಕಿಯ ಚಿತ್ರಕ್ಕಾಗಿ ಮೊದಲ ಬಹುಮಾನವನ್ನು, ಹೊಗಳಿಕೆಯನ್ನೂ ಪಡೆದನೊ ಅದೇ ಭಿಕ್ಷುಕಿ ಎದುರಿಗೆ ಸಿಕ್ಕಿದಾಗ ಅಲಕ್ಷಿಸಿ ಮುಂದೆ ಹೋಗುತ್ತಾನೆ. ಜೀವಂತ ಭಿಕ್ಷುಕಿಗೆ ಸಿಗದ ಪುರಸ್ಕಾರ ಅವಳ ಚಿತ್ರಕ್ಕೆ ಸಿಗುತ್ತದೆ. ಆ ಚಿತ್ರ ಐದು ಸಾವಿರ ರೂಪಾಯಿಗಳಿಗೂ ಮಾರಾಟವಾಗುತ್ತದೆ. 'ವಿಷವಾಹಿನಿ', 'ಆ ಕರೆ' ಮತ್ತು 'ಮಮತಾಜ್' ಸ್ವಾತಂತ್ರ್ಯ ಪೂರ್ವಕಾಲವನ್ನು ಚಿತ್ರಿಸುವ ಕತೆಗಳು. ಮೊದಲನೆಯದು ಬಂಗಾಳ ಪ್ರಾಂತ್ಯಕ್ಕೆ ಸೇರಿದ ಕತೆಯಾದರೆ ಕೊನೆಯದು ಪಂಜಾಬ್ ಪ್ರಾಂತ್ಯಕ್ಕೆ ಸೇರಿದ ಕತೆ. ಮಧ್ಯದ ಕತೆ ಭಾರತದ ಯಾವುದೇ ಭಾಗಕ್ಕಾದರೂ ಸೇರಬಹುದಾದ ಕತೆ. 'ವಿಷವಾಹಿನಿ' ಕತೆ ಹಿಂದೂ ಮುಸ್ಲಿಂ ಸಖ್ಯ ಹೇಗೆ ಹಾಳಾಯಿತೆಂಬುದನ್ನು ಚಿತ್ರಿಸುತ್ತದೆ. ಅಣ್ಣತಮ್ಮಂದಿರಂತಿದ್ದ ಹಿಂದೂ ಮುಸ್ಲಿಮರಲ್ಲಿ ಭೇದಭಾವದ ಬೀಜವನ್ನು ಬಿತ್ತಿ, ಅದು ಮೊಳಕೆಯೊಡೆದು, ಗಿಡವಾಗಿ, ಮರವಾಗಿ ವಿಷಫಲ ಬಿಡುವುದನ್ನು ಈ ಕತೆಯಲ್ಲಿ ಕಾಣುತ್ತೇವೆ. ಈ ಕತೆಯ ಭೈರವನ ಪಾತ್ರ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. 'ಮಮತಾಜ್' ಕತೆಯ ಮನೋರಮ, ಬಲಾತ್ಕಾರದಿಂದ ದಾವೂದನ ಹೆಂಡತಿಯಾಗಿ, ಮಮತಾಜಳಾಗಿ, ಎರಡು ಮಕ್ಕಳನ್ನು ಪಡೆದ ಮೇಲೆ (?) ಮತ್ತೆ ತನ್ನ ಮೊದಲಿನ ಗಂಡ ಶಾಂತಸಿಂಗನು ತನ್ನನ್ನು ಪತ್ತೆ ಮಾಡಿದ ಮೇಲೆ ಅವನಲ್ಲಿಗೆ ಹೊರಟಿದ್ದವಳು, ಅಷ್ಟು ವರ್ಷದ ಆ ಬಂಧನದಿಂದ ಬಿಡುಗಡೆ ಹೊಂದಲಾರದೆ ದಾವೂದನಲ್ಲಿಯೇ ಉಳಿಯುತ್ತಾಳೆ. 'ವಿಷವಾಹಿನಿ'ಯಷ್ಟು ಈ ಕತೆ ಪರಿಣಾಮಕಾರಿಯಾಗಿಲ್ಲ. 'ಆ ಕರೆ'ಯ ಚನ್ನಬಸಪ್ಪ

ಮಾತಿನಲ್ಲಿ ದೇಶಭಕ್ತಿಯನ್ನೂ, ತ್ಯಾಗವನ್ನೂ ತೋರುತ್ತ, ಸಮಯ ಬಂದಾಗ ಕ್ಷುಲ್ಲಕ ಕಾರಣಗಳನ್ನೊಡ್ಡಿ ನುಣುಚಿಕೊಳ್ಳುವ ಸಮಯಸಾಧಕ. ಅದೇ ಚೆನ್ನಬಸಪ್ಪನ ದೃಷ್ಟಿಯಲ್ಲಿ ನಿಷ್ಪ್ರಯೋಜಕನೂ, ಗೂಂಡಾನೂ ಆಗಿದ್ದ ಈರಪ್ಪ ನಲವತ್ತೆರಡರ ಸ್ವಾತಂತ್ರ್ಯ ಕರೆಗೆ ಓಗೊಟ್ಟು, ಗುಂಡಿಗೆ ಎದೆಯೊಡ್ಡಿ ಮಡಿಯುತ್ತಾನೆ. ಅಲ್ಲದೆ ತಾನು ಸಾಯುವಾಗ ತನ್ನ ಸ್ನೇಹಿತನಿಗೆ ತನ್ನ ಸಂಸಾರವನ್ನು ಕುರಿತು "ಹುಚ್ಚಪ್ಪ, ಯಾರಿಗೆ ಯಾರು ಹೊಣೆ? ನನ್ನ ಕೆಲಸ ನಾನು ಮಾಡಿದೆ. ಇನ್ನು ಅವರ ಕೆಲಸ ಅವರು ಮಾಡಲಿ" ಎನ್ನುವ ಮಾತುಗಳು ಬಹುಶಃ ಚೆನ್ನಬಸಪ್ಪನಂಥವರ ಕಣ್ಣು ತೆರೆಸಿಯಾವು. ಚನ್ನಬಸಪ್ಪನಂಥ ವ್ಯಕ್ತಿಗಳು ಅಂದೂ ಇದ್ದರು, ಇಂದೂ ಇರುವವರೆ. ಚನ್ನಬಸಪ್ಪನ ಸೋಗಲಾಡಿತನವನ್ನು ತೋರಲು ತಂದಿರುವ ಪ್ರಸಂಗಗಳು ಅತಿಯಾಗಿ ಕತೆಯ ಶಿಲ್ಪವೆ ಸಡಿಲಾದಂತೆ ಅನ್ನಿಸುತ್ತದೆ.

ಈ ಸಂಕಲನದ 'ಆ ರಾತ್ರಿಯ ನಾಟಕ', 'ಶ್ರೀಧರನ ಹಸಿವು', 'ವಿಷವಾಹಿನಿ' ಮತ್ತು 'ಹುಚ್ಚು ಸಾತಿ' ಕತೆಗಳು ಓದುಗರ ಮೇಲೆ ಆಳವಾದ ಪ್ರಭಾವವನ್ನು ಬೀರಿ ಬಹು ಕಾಲ ನೆನೆಪಿನಲ್ಲಿ ಉಳಿಯುತ್ತವೆ.

ಅಶ್ವತ್ಥರ ಕತೆಗಳು ಭಾಗ ೧ ಸಂಪುಟ ಅಶ್ವತ್ಥರ 'ದೂರದ ಕಾಶಿಯಲ್ಲಿ', 'ಅಭಿನಯ ಜಗತ್ತು', 'ಸೊಸೆಗೊಂದು ಉಡುಗೊರೆ' ಮತ್ತು 'ದೀಪಾವಳಿಗೆ' ಎಂಬ ನಾಲ್ಕು ಕಥಾ ಸಂಕಲನಗಳು ಸೇರಿ ಆಗಿದೆ. ಈ ಸಾಹಸ ಕಾರ್ಯವನ್ನು ಕೈಗೆತ್ತಿಗೊಂಡಿರುವವರು ಶಾರದಾ ಮಂದಿರದ ಪ್ರೊಫೆಸರ್ ಎಚ್.ಎಂ. ಶಂಕರನಾರಾಯಣ ರಾಯರು. ಕನ್ನಡ ಕವಿ ಕಾವ್ಯ ಮಾಲೆಯ ಪ್ರಕಟಣೆಯಾಗಿ 'ಅಶ್ವತ್ಥರ ಕಥೆಗಳು ಭಾಗ ೧' ಬಂದಿದೆ. ಈ ಸಂಪಟದಲ್ಲಿ ಒಟ್ಟು ಅರವತ್ತನಾಲ್ಕು ಕತೆಗಳಿವೆ ('ದೂರದ ಕಾಶಿಯಲ್ಲಿ'-೧೪. 'ಅಭಿನಯ ಜಗತ್ತಿ'ನಲ್ಲಿ-೧೭, 'ಸೊಸೆಗೊಂದು ಉಡುಗೊರೆ-೧೬' ಮತ್ತು 'ದೀಪಾವಳಿ'ಗೆ-೧೭). 'ಸೊಸೆಗೊಂದು ಉಡುಗೊರೆ' ಕಥಾಸಂಕಲನದ ಹೋದ ವರ್ಷ ಪ್ರಕಟವಾಗಿದ್ದು ಅದರ ವಿಮರ್ಶೆ 'ಸಾಹಿತ್ಯವಾರ್ಷಿಕ ೧೯೭೧'ರಲ್ಲಿ ಬಂದಿರುವುದರಿಂದ ಅದರಲ್ಲಿನ ಕತೆಗಳ ವಿಮರ್ಶೆಯನ್ನು ಇಲ್ಲಿ ಮಾಡುವುದಿಲ್ಲ. ಈ ಹದಿನಾರು ಕತೆಗಳನ್ನು ಬಿಟ್ಟರೂ ಉಳಿದ ಕತೆಗಳ ಸಂಖ್ಯೆ ನಲವತ್ತೆಂಟು. ಇಷ್ಟೊಂದು ಸಂಖ್ಯೆಯಲ್ಲಿ ಕತೆಗಳನ್ನು ಬರೆದಿರುವವರು ಶ್ರೀ ಮಾಸ್ತಿ ಅವರನ್ನು ಬಿಟ್ಟರೆ ಶ್ರೀ ಅಶ್ವತ್ಥರೊಬ್ಬರೆ. ಈ ಗಾತ್ರದಲ್ಲಿ (ಸಾವಿರದ ಐವತ್ತು ಪುಟಗಳು-೧೦೫೦) ಒಬ್ಬ ವ್ಯಕ್ತಿಯ ಕಥಾಸಂಪುಟ ಹೊರ ಬರುತ್ತಿರುವುದು ಶ್ರೀ ಮಾಸ್ತಿ ಅವರ ಕಥಾಸಂಪುಟವನ್ನು ಬಿಟ್ಟರೆ ಶ್ರೀ ಅಶ್ವತ್ಥರದೇ. 'ಅಭಿನಯ ಜಗತ್ತು'

ಮತ್ತು 'ದೀಪಾವಳಿಗೆ' ಕಥಾ ಸಂಕಲನಗಳ ಮುವ್ವತ್ತ ನಾಲ್ಕು ಕತೆಗಳು ಮೊದಲ ಬಾರಿಗೆ ಸಂಕಲನ ರೂಪದಲ್ಲಿ ಬರುತ್ತಿವೆ.

'ಡಾಕ್ಟರ ಅತಿಥಿ' (ದೂ.ಕಾ.), 'ಹೋಳಿಯ ಹುಚ್ಚು' (ದೂ.ಕಾ.), 'ಗುರುರಾಜ' (ಅ.ಜ.), 'ಡಾ|| ಬ್ರಹ್ಮಪ್ಪ' (ಅ.ಜ.), 'ಅಭಿನಯ ಜಗತ್ತು' (ಅ.ಜ.), 'ದೀಪಾವಳಿಗೆ' (ದೀ), 'ಗೋರಿ' (ದೀ.) ಮತ್ತು 'ಕಂಡಮ್ಮ (ದೀ) ಕತೆಗಳು ಹಾಸ್ಯ ಪ್ರಧಾನವಾದ ಕತೆಗಳು. 'ಡಾಕ್ಟರ ಅತಿಥಿ' ಕತೆಯಲ್ಲಿ ಪ್ರೊಫೆಸರ್ ಡಾಕ್ಟರ್ ಆಚಾರ್ಯರು ತಮ್ಮ ಮನೆಗೆ ಬಂದ ಪುಣ್ಯ ತೀರ್ಥಾಚಾರ್ಯರನ್ನು ತಮ್ಮ ವಿದ್ವತ್ತನ್ನು ಮೆಚ್ಚಿ ಬಂದವರೆಂದು ತಿಳಿದು ರಾಜೋಪಚಾರವನ್ನು ಮಾಡಿದ ಮೇಲೆ ಅವರು ಜೀವವಿಮಾ ಏಜೆಂಟರೆಂದು ತಿಳಿದು, ಅವರಿಂದ ಬಿಡುಗಡೆ ಹೊಂದಲೋಸುಗ ಒಂದು ಜೀವವಿಮೆಯನ್ನು ಕೊಟ್ಟು ಕಳುಹಿಸುತ್ತಾರೆ.' ಅತಿಥಿಯನ್ನು ಎದುರುಗೊಳ್ಳಲು ಅವರು ಮಾಡುವ ಸಿದ್ಧತೆಯನ್ನು ಕಂಡು ಅನಂತರ ಅವರು ಬೇಸ್ತು ಬಿದ್ದುದನ್ನು ಕಂಡಾಗ ಅಯ್ಯೋ ಪಾಪ ಎನಿಸುತ್ತದೆ. 'ಹೋಳಿಯ ಹುಚ್ಚು' ಉತ್ತರ ಭಾರತದಲ್ಲಿ (ಕಾಶಿಯಲ್ಲಿ) ಹೆಚ್ಚು ಪ್ರಚಾರದಲ್ಲಿರುವ ಹೋಳಿ ಹಬ್ಬವನ್ನು ಕುರಿತಂಥ ಕತೆ. ಕಂಡಕಂಡವರಿಗೆಲ್ಲ ಬಣ್ಣ ಹಚ್ಚುವುದು ಅಸಭ್ಯ ನಡತೆಯೆಂದು ಬಿಗುಮಾನದಿಂದ, ದೂರ ಉಳಿದಿದ್ದ ರಾಯರು ಕೊನೆಗೆ ಆ ಉತ್ಸಾಹದಿಂದ ಹೊರಗುಳಿದ ತಾವು ಸ್ನೇಹ ವಿಶ್ವಾಸಗಳಿಲ್ಲದ ಏಕಾಂಗಿಯಂತೆ ಭಾವಿಸಿಕೊಂಡು ತಾವೂ ಉತ್ಸಾಹದಿಂದ ಹೋಳಿಯಲ್ಲಿ ಭಾಗವಹಿಸುತ್ತಾರೆ. ಹೋಳಿಯ ಹಿಂದಿನ ಮನೋಭಾವವನ್ನು ಈ ಕತೆ ವಿವರವಾಗಿ ತಿಳಿಸುತ್ತದೆ. 'ಗುರುರಾಜ' ಕತೆಯ ಪ್ರೊಫೆಸರ್ ಗುರುರಾಜರು ಹೊಸದಾಗಿ ಮದುವೆಯಾದವರು. ರಾತ್ರಿಯ ವೇಳೆ ತಮ್ಮ ಪ್ರೀತಿಯ ಮಡದಿ ಸರೋಜ ಎದುರಿಗಿರುವಾಗ ಓದಲಾರದೆ ಓದಲು ಹೋಗಿ-ಅದೂ ಅರ್ಥಶಾಸ್ತ್ರವನ್ನು-ಸಾಧ್ಯವಾಗದೆ ನಲ್ಲೆಯ ಬಿಸಿಯಪ್ಪುಗೆಗೆ ಸೇರುತ್ತಿದ್ದರು. ದೀಪವಾರಿಸುವುದನ್ನೂ ಮರೆತು! ಇದನ್ನು ತಿಳಿಯದ ಎದುರ ಮನೆಯ, ಅನೇಕ ಸಾರಿ ದಂಡಯಾತ್ರೆ ಹೊಡೆದಿದ್ದ, ವಿದ್ಯಾರ್ಥಿ ಪ್ರೊಫೆಸರರೇ ಅಷ್ಟೊಂದು ಓದುವಾಗ ತಾನು ಇನ್ನೂ ಹೆಚ್ಚಿಗೆ ಓದಬೇಕೆಂದು ಓದಿ ಕೊನೆಗೂ ಪಾಸಾದ! ಪರೋಕ್ಷವಾಗಿ ಗುರುಗಳಾದ ಗುರುರಾಜರಿಗೆ ಸಿಹಿಯನ್ನೂ ತಂದುಕೊಟ್ಟು ಗುರುಕಾಣಿಕೆಯನ್ನೂ ಸಲ್ಲಿಸಿದ! 'ಡಾ|| ಬ್ರಹ್ಮಪ್ಪ' ಕತೆಯಲ್ಲಿ ಡಾ|| ಬ್ರಹ್ಮಪ್ಪ ಅವರು ಕೊಟ್ಟ ಔಷಧದ ಚೀಟಿಯನ್ನು ಸರಿಯಾಗಿ ಓದಲಾರದೆ (ಅದು ಔಷಧದ ಚೀಟಿಯೇ ಅಲ್ಲ! ಡಾ|| ಬ್ರಹ್ಮಪ್ಪನವರ ಹುಟ್ಟಿದ ಹಬ್ಬದ ಆಮಂತ್ರಣ ಪತ್ರಿಕೆ!) ಕಾಂಪೌಂಡರ್ ಕೊಲ್ಲೂರಯ್ಯಾ ಯಾವುದೋ ಔಷಧಿಯನ್ನು ಕೊಟ್ಟು ಸಾವಿನ ಅಂಚಿಗೆ ನೂಕಿದ್ದ ಪೆದ್ದ ರೆಡ್ಡಿಯವರನ್ನು ಬ್ರಹ್ಮಪ್ಪನವರು ಮತ್ತೆ ಉಳಿಸಿಕೊಳ್ಳುತ್ತಾರೆ. ಕಥೆಯ ಪಾತ್ರಗಳಿಗೆ

ಬ್ರಹ್ಮಪ್ಪ, ಕೊಲ್ಲೂರಯ್ಯಾ ಎಂಬ ಅನ್ವರ್ಥ ನಾಮಗಳನ್ನೇ ಇಟ್ಟಿದ್ದಾರೆ, ಕಥೆಗಾರರು. 'ಅಭಿನಯ ಜಗತ್ತು' ಸುಪ್ರಸಿದ್ಧ ಫ್ರೆಂಚ್ ನಟಿಯಾದ ಮ್ಯಾಡ ಮೊಸೆಲ್ ಕೊಲೊಟ್‌ಳಿಗೆ ಬಂದಿದ್ದ ಚರ್ಮರೋಗವನ್ನು ಗುಣಪಡಿಸಿಕೊಳ್ಳಲು ಅವಳು ನೀರಿನಂತೆ ಹಣವನ್ನು ಖರ್ಚು ಮಾಡಿ ಕೈಬಿಟ್ಟಿದ್ದಳು. ಕೊನೆಗೆ ಬಾಯಿಲೆ ಗುಣವಾಗುತ್ತದೆ. ಅವಳಿಗೆ ಚರ್ಮರೋಗ-ಮೈಕಡಿತ-ಬಂದಿದ್ದುದು ಅವಳ ಬಿಡುವಿಲ್ಲದ ಕಾರ್ಯಕ್ರಮಗಳಿಂದಾಗಿ ಸ್ನಾನಕ್ಕೆ ಸಂಚಕಾರವಾಗಿದ್ದುದರಿಂದ! ಕಥೆ ಸ್ವಾರಸ್ಯವಾಗಿದ್ದರೂ ಅತಿ ದೀರ್ಘವಾಗಿ ಬೇಸರವನ್ನು ತರಿಸುತ್ತದೆ. ಅನಾವಶ್ಯಕವಾಗಿ ನೂರಾರು ಹೆಸರುಗಳು ಬರುತ್ತವೆ. ಇದನ್ನು ತಪ್ಪಿಸಬಹುದಿತ್ತು. 'ದೀಪಾವಳಿಗೆ' ಮಧ್ಯಮ ವರ್ಗದ ಸಂಸಾರದ ಒಂದು ಸುಂದರ ಕಥೆ. ರಮೇಶನ ಪ್ರೀತಿಯ ಮಡದಿ ಅಮ್ಮು ಉಡುಗೊರೆಗಾಗಿ ಅವಳು ಕಾಡದ ದಿನವಿಲ್ಲ. ಹಾಗೆಯೆ ರಮೇಶನೂ ಅವಳನ್ನು ಸಮಾಧಾನ ಪಡಿಸಿ ದೀಪಾವಳಿಗೆ ಉಡುಗೊರೆಯನ್ನು ಕೊಡುತ್ತೇನೆಂದು ಕಾಲ ತಳ್ಳುತ್ತಾನೆ. ದೀಪಾವಳಿಗೆ ಕೊಟ್ಟ ಉಡುಗೊರೆ ಎಂಥದು ಬಲ್ಲಿರಾ? ಪುತ್ರರತ್ನ! ಈ ಉಡುಗೊರೆಯನ್ನು ಕೊಡಲು ತಾನು ಯೋಚಿಸಿದ್ದುದಾಗಿ ಅಮ್ಮು ಹೇಳುತ್ತಾಳೆ ಹಾಗಾದರೆ ಉಡುಗೊರೆಯನ್ನು ಯಾರು ಯಾರಿಗೆ ಕೊಟ್ಟರು? ಸರಸ ಸಂಭಾಷಣೆಯಿಂದ ಕೂಡಿರುವ ಈ ಕಥೆ ಸ್ವಾರಸ್ಯವಾಗಿದೆ. 'ಕಂಡಮ್ಮ' ಕುಟುಂಬ ಯೋಜನೆ ಹೇಗೆ ಅವಿದ್ಯಾವಂತರಿಂದ ತುಂಬಿರುವ ಈ ದೇಶದಲ್ಲಿ ವಿಫಲವಾಗುತ್ತಿದೆ ಎಂಬುದನ್ನು ಸರಸವಾಗಿ ನಿರೂಪಿಸುವ ಕಥೆ. ಕುಟುಂಬ ಯೋಜನೆಯ ವೈದ್ಯರು ಕಂಡಮ್ (ನಿರೋಧ್)ನ ಉಪಯೋಗವನ್ನು ವಿವರಿಸಿ ಅದನ್ನು ಹೇಗೆ ಉಪಯೋಗಿಸಬೇಕೆಂಬುದು ಒಂದು ಗಳುವಿಗೆ ತೊಡಿಸಿ ತೋರಿಸಿದ್ದರು. ತಿನ್ನಲು ಸಾಕಷ್ಟಿಲ್ಲದ ಆರು ಮಕ್ಕಳ ತಂದೆ ಲಿಂಗಪ್ಪ ಕಾಂಡಮನ್ನು ಗಳು ಒಂದಕ್ಕೆ ತೊಡಿಸಿ, ಹೆಂಡತಿ ದೊಡ್ಡತಾಯಿಯೊಂದಿಗೆ ಇನ್ನು ಮಕ್ಕಳಾಗುವುದಿಲ್ಲವೆಂದು ನಿಶ್ಚಿಂತೆಯಿಂದಿದ್ದರೆ ಮತ್ತೆ ಏಳನೆಯದರ ಸೂಚನೆ ಕಂಡುಬರೋಣವೆ? ಈ ಕಥೆಯಲ್ಲಿ ಹಳ್ಳಿಗರ ಅಜ್ಞಾನವನ್ನು ಅತಿರಂಜಿತವಾಗಿ ಚಿತ್ರಿಸಿದ್ದಾರೆ. ಈ ಹಾಸ್ಯ ಕಥೆಗಳಲ್ಲಿ ನವಿರಾದ ತಿಳಿಹಾಸ್ಯವಿದೆ. ಹೊಟ್ಟೆಹುಣ್ಣಾಗುವಂತೆ ನಗಿಸುವ ಕಥೆಗಳು ಯಾವುವೂ ಇಲ್ಲ. ಸನ್ನಿವೇಶ ಬಲದಿಂದಲೇ ನಗಿಸುವಂತಹ ಕಥೆಗಳು ಇಲ್ಲಿ ವಿರಳ. ಗೊರೂರರೇ ಮೊದಲಾದ ಬೇರೆ ಹಾಸ್ಯ ಲೇಖಕರ ಮಟ್ಟಕ್ಕೆ ಇಲ್ಲಿನ ಕಥೆಗಳು ಏರಲಾರವು. ಬಹುಶಃ ಅಶ್ವತ್ಥರು ಸಮರ್ಥವಾಗಿ ನಗಿಸಲಾರರೋ ಏನೋ. ('ಬಾಳ ಹೊಳೆ' ಕಥಾ ಸಂಕಲನದ 'ಶ್ರೀಧರನ ಹಸಿವು' ಕಥೆಗೆ ಈ ಮಾತುಗಳು ಅನ್ವಯವಾಗುವುದಿಲ್ಲ.)

'ಅವನ ಪ್ರೇಮ' (ದೂ.ಕಾ), 'ಹೆಂಡತಿಯ ಹೀನಾಯ' (ದೂ.ಕಾ), 'ಅನಂತ' (ದೂ,ಕಾ), 'ಬಾಬಾಜಾನ್' (ಅ.ಜ), 'ದೀಪಾವಳಿಗೆ' (ದೀ.) 'ದಿವ್ಯದೃಷ್ಟಿ' (ದೀ.),

ಮತ್ತು 'ಅಪೂರ್ಣ ಕಥೆ' (ದೀ.) ಕಥೆಗಳು ಕೌಟುಂಬಿಕ ಕಥೆಗಳು ಇವುಗಳಲ್ಲಿ ನಿಸ್ವಾರ್ಥ ಪ್ರೇಮ, ತ್ಯಾಗ, ಕುಟುಂಬಗಳಲ್ಲಿ ತಲೆದೋರುವ ವಿರಸಗಳು ವಸ್ತುವಾಗಿವೆ. 'ಅವನ ಪ್ರೇಮ' ಮತ್ತು 'ಅನಂತ' ಕಥೆಗಳು ಗಂಡಿನ ತ್ಯಾಗವನ್ನು ಮತ್ತು ಪ್ರೇಮವನ್ನು ಚಿತ್ರಿಸುವ ಕಥೆಗಳು. 'ಅವನ ಪ್ರೇಮ' ಕಥೆಯ ರಹಿಮಾನ್ ಬಡತನದಲ್ಲಿ ತೊಳಲುತ್ತಿದ್ದ ತನ್ನ ಸಂಸಾರವನ್ನು ಮೇಲೆತ್ತಲು ಸೈನ್ಯಕ್ಕೆ ಸೇರಿ, ಜಪಾನೀಯರ ಕೈದಿಯಾಗಿ, ಬಾಂಬ್ ದಾಳಿಗೆ ಸಿಕ್ಕಿ ವಿಕೃತ ರೂಪನಾಗಿ, ಕೊನೆಗೂ ಹೇಗೋ ತಪ್ಪಿಸಿಕೊಂಡು ಪ್ರೀತಿಯ ಮಡದಿ ಮೆಹರ್ ಉನ್ನೀಸಳನ್ನು ಕಾಣಲು ಬಂದರೆ ಅವಳು ತನ್ನ ತಮ್ಮ ಕರೀಮನೊಂದಿಗೆ ಸಂಸಾರ ಮಾಡುತ್ತಿರುವುದನ್ನು ಕಾಣುತ್ತಾನೆ. ಅವರಿಬ್ಬರನ್ನೂ ಕೊಲ್ಲಬೇಕೆಂದಿದ್ದ ರಹಿಮಾನ್ ತನ್ನ ಹೆಂಡತಿಯ ಸುಖವೆ ತನ್ನ ಸುಖವೆಂದು ಮನಸ್ಸಿಗೆ ಸಮಾಧಾನವನ್ನು ತಂದುಕೊಂಡು ಕೆರೆಗೆ ಹಾರಿ ಪ್ರಾಣಕಳೆದುಕೊಳ್ಳುತ್ತಾನೆ. ಈ ಕಥೆಯಲ್ಲಿ ರಹಿಮಾನನ ತ್ಯಾಗವನ್ನು ಕಂಡರೆ 'ಅನಂತ' ಕಥೆಯಲ್ಲಿ ಅನಂತನ ನಿಸ್ಸೀಮ ಪ್ರೇಮವನ್ನು ಕಾಣುತ್ತೇವೆ. ತನ್ನ ಮನೆಗೆ ಅತಿಥಿಯಾಗಿ ಬಂದಿದ್ದ ಆನಂದ ಮತ್ತು ತನ್ನ ಹೆಂಡತಿ ಲೀಲಾ ಅವರ ನಡುವಿನ ಸಲಿಗೆಯನ್ನು ಕಂಡಾಗ ಮನದಲ್ಲಿ ಸಂಶಯದ ಸುಳಿ ಅನಂತನ ಅಂತರಂಗದಲ್ಲಿ ಮೂಡಿ ಅಲೆಅಲೆಯಾಗಿ ಆರ್ಭಟಿಸುತ್ತ ಬೋರಿಡುತ್ತದೆ. ಅವನ ಸಂಶಯಕ್ಕೆ ಕಾರಣ ಆನಂದ ಮತ್ತು ತನ್ನ ಹೆಂಡತಿ ದೂರದ ಸಂಬಂಧಿಗಳೂ ಬಾಲ್ಯದ ಒಡನಾಡಿಗಳೂ ಆಗಿದ್ದುದು. ಅದಕ್ಕೆ ಪೂರಕವಾಗಿ ಲೀಲಳ ಮೇಲೆ ಅಪವಾದ ಹೊರಿಸಿ ಮದುವೆಗೆ ಮುನ್ನ ಕಾಗದವೊಂದು ಬಂದಿರುತ್ತದೆ. ಹೀಗೆ ತನ್ನ ಹೆಂಡತಿಯಲ್ಲಿ ಸಂಶಯಗೊಂಡರೂ, ತಾನು ಊಹಿಸಿರುವುದು ನಿಜವಾದರೆ ಎಲ್ಲಿ ಅವಳನ್ನು ದೂರಮಾಡಿ ಬದುಕಬೇಕಾದೀತೋ, ಆ ಬದುಕು ಅಸಹನೀಯವಾದೀತೋ ಎಂದು, ಅವಳ ಆರೋಗ್ಯದ ದೃಷ್ಟಿಯಿಂದಲೇ ಬ್ರಹ್ಮಚರ್ಯವನ್ನು ಕೈಗೊಂಡಿದ್ದ ಅನಂತ ಸಂಶಯ ಸುರುಟಿ ಹೋಗಲಿ ಎಂದು ಲೀಲಳನ್ನು ಕೂಡುತ್ತಾನೆ. ಇದು ಅನಂತನ ಪ್ರೇಮ ; ಒಂದು ರೀತಿಯಲ್ಲಿ ಲೀಲಳನ್ನು ಬಿಡಲಾಗದ ದುರ್ಬಲ ಮೋಹ ಅಥವಾ ಸ್ವಾರ್ಥ ಎಂದೂ ಹೇಳಬಹುದು. 'ಹೆಂಡತಿಯ ಹೀನಾಯ' ಕಥೆಯ ರಾಯರು ಎಲ್ಲ ವಿಚಾರದಲ್ಲಿಯೂ ತಾವು ಪರಿಪೂರ್ಣ ತಿಳುವಳಿಕೆಯುಳ್ಳವರೆಂದು ಮನೆಯ ಅಡುಗೆಯ ಕೆಲಸದಿಂದ ಮಗ ಗೋಪುವಿನ ಆರೈಕೆಯವರೆಗೂ ಹೆಂಡತಿ ಶಾಂತಾಬಾಯಿಗೆ ನಿರ್ದೇಶನಗಳನ್ನು ಕೊಡುತ್ತಿರುತ್ತಾರೆ. ಒಂದು ದಿನ ಶಾಂತಾಬಾಯಿ ಎರಡನೆಯ ಆಟಕ್ಕೆ ಸಿನಿಮಾಕ್ಕೆ ಹೋದಾಗ ಗೋಪುವನ್ನು ಸಂತೈಸಲಾರದೆ ತಮ್ಮ ಸೋಲನ್ನೊಪ್ಪಿಕೊಂಡು ಅಲ್ಲಿಂದ ಮುಂದೆ ಮಾತು ಮಾತಿಗೂ ಹೆಂಡತಿಯನ್ನು ನಿಂದಿಸುವುದನ್ನು ನಿಲ್ಲಿಸುತ್ತಾರೆ. ಕಥೆ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. 'ದೀಪಾವಳಿಗೆ' ಗಂಡಹೆಂಡರಾದ ರಮೇಶ ಮತ್ತು ಅಮ್ಮು ಇವರ

ಸರಸ ಸಂಭಾಷಣೆಯಿಂದ ತುಂಬಿರುವ ಉಡುಗೊರೆಯನ್ನು, ಕುರಿತಾದ ಕಥೆ. ಇವರ ಸಂಭಾಷಣೆಗಳು ಮುದ್ದಣ ಮನೋರಮೆಯರ ಸಂಭಾಷಣೆಯನ್ನು ಆನಂದರ ಕಥೆಗಳಲ್ಲಿನ ಗಂಡಹೆಂಡಿರ ಸಂಭಾಷಣೆಗಳನ್ನು ನೆನಪಿಗೆ ತರುತ್ತವೆ. ಕೌಟುಂಬಿಕ ಕಥೆಗಳ ಒಂದು ಮುಖ ಈ ಕಥೆಗಳಲ್ಲಿ ಬಂದರೆ ಮತ್ತೊಂದು ಮುಖ 'ಬಾಬಾಜಾನ್', 'ದಿವ್ಯದೃಷ್ಟಿ' ಮತ್ತು 'ಅಪೂರ್ಣ ಕಥೆ' ಕಥೆಗಳಲ್ಲಿ ಬರುತ್ತದೆ. 'ಬಾಬಾಜಾನ್' ಕಥೆಯಲ್ಲಿ ಸಂಸಾರದಲ್ಲಿ ಉಂಟಾಗಿದ್ದ ಯಾವುದೋ ವಿರಸದಿಂದ ಮನೆಯನ್ನೇ ಬಿಟ್ಟು ಬಹುಶಃ ತೌರಿಗೆ ಹೊರಟಿದ್ದ ಹೆಣ್ಣೊಬ್ಬಳು ಜಟಕಾ ಸಾಬಿಯಾದ ಬಾಬಾಜಾನನ ಮಾತುಗಳನ್ನು ಕೇಳಿ ತನ್ನನ್ನು ತಿದ್ದಿಕೊಂಡು ಮನೆಗೆ ಹಿಂತಿರುಗುತ್ತಾಳೆ. 'ದಿವ್ಯದೃಷ್ಟಿ'ಯ ಸೀತಾ ಮತ್ತು ಸುರೇಶರ ಬಾಳಿನಲ್ಲಿ ಬಿರುಗಾಳಿ ಏಳುತ್ತದೆ. ಸಂತೃಪ್ತ ದಾಂಪತ್ಯದ ಫಲವಾಗಿ ಮೂವರು ಮಕ್ಕಳನ್ನು ಪಡೆದು ನಲವತ್ತೈದನ್ನು ಸಮೀಪಿಸುತ್ತಿದ್ದ ಸುರೇಶ ತನ್ನ ಆಪ್ತ ಕಾರ್ಯದರ್ಶಿ ಹೆಲನ್ ಹಂಟ್‌ಳಲ್ಲಿ ಅನುರಕ್ತನಾಗುತ್ತಾನೆ. ಗಂಡನ ನಡತೆಯಲ್ಲಿ ಆದ ಬದಲಾವಣೆಯಿಂದ ಮತ್ತು ಅವನ ಕೋಟಿನ ಮೇಲೆ ದೊರೆತ ಹೊಂಬಣ್ಣದ ಕೂದಲಿನಿಂದ ಸೀತಾ ಅನಿಷ್ಟವನ್ನು ಆಲೋಚಿಸುತ್ತಾಳೆ. ತನ್ನ ಬಾಳಿನ ಪುಟಗಳನ್ನು ಮನದಲ್ಲೇ ತಿರುವಿ ಹಾಕುತ್ತಾ ತಾನು ಮತ್ತು ಸುರೇಶ ಡ್ರೈವಿಂಗ್‌ಗೆ ಹೋಗಿದ್ದಾಗ ಆದ ಅಪಘಾತವನ್ನು ಸ್ಮರಿಸುತ್ತಾಳೆ. ಮತ್ತು ಅಂತಹುದೇ ಅಪಘಾತ ಈಗ ಆಗಿದೆಯೆಂದು ಭ್ರಮಿಸುತ್ತಾಳೆ. ಅದು ನಿಜವೂ ಆಗಿರುತ್ತದೆ! ಅತೀಂದ್ರಿಯ ಪ್ರಜ್ಞೆಯ ವಿಚಾರವನ್ನು ಇಲ್ಲಿ ಬಳಸಿಕೊಂಡಿದ್ದರೂ ಕಥೆ ಕಟ್ಟುಕಥೆಯಂತೆ ಮೊದಲ ನೋಟಕ್ಕೆ ತೋರುತ್ತದೆ. 'ಅಪೂರ್ಣಕಥೆ' ಕಥಾರಚನೆಯಲ್ಲಿ ಹೊಸತನವನ್ನು ಹೊಂದಿರುವ ಕಥೆ. ಹಿಂದಿನ ಎರಡು ಕಥೆಗಳಲ್ಲಿನ ಕುಂಟುಂಬದ ವಿರಸವನ್ನು ಪ್ರಾರಂಭ ಮತ್ತು ಬೆಳವಣಿಗೆ ಎನ್ನುವುದಾದರೆ ಇಲ್ಲಿನದನ್ನು ಅಂತ್ಯ ಅಥವಾ ಮುಕ್ತಾಯ ಎಂದು ಹೇಳಬಹುದು. ಇಲ್ಲಿನ ಕಥಾನಾಯಕಿ ಮನೆಯಲ್ಲಿನ ನಿಂದನೆಯನ್ನು ತಾಳಿಕೊಳ್ಳಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. 'ಅಪೂರ್ಣಕಥೆ'ಯ ರಚನೆ ಹೊಸ ಹಾದಿ ಹಿಡಿದಿದ್ದರೂ ಪರಿಣಾಮಕಾರಿಯಾಗಿಲ್ಲ. ಕೌಟುಂಬಿಕ ಕಥೆಗಳನ್ನು ರಸವತ್ತಾಗಿ ನಿರೂಪಿಸಬಲ್ಲ ಕಲೆ ಅಶ್ವತ್ಥರಿಗೆ ಕರಗತವಾಗಿದೆ ಎಂಬುದಕ್ಕೆ ಮೇಲಿನ ಕಥೆಗಳೇ ಸಾಕ್ಷಿ. 'ಗಂಗು' (ದೂ.ಕಾ.) ಕಥೆಯೂ ಕೌಟುಂಬಿಕ ಕಥೆಯೆ. ಈ ಕಥೆಯ ಗಂಗು ಇದೇ ಲೇಖಕರ 'ಬಾಳಹೊಳೆ' ಕಥಾಸಂಕಲನದಲ್ಲಿನ 'ಹುಚ್ಚು ಸಾತಿ' ಕಥೆಯ ಸಾವಿತ್ರಿಯನ್ನು ನೆನಪಿಗೆ ತರುತ್ತಾಳೆ. ಆ ಕಥೆಯ ಸಾವಿತ್ರಿಯಂತಲ್ಲದೆ ಈ ಗಂಗು ತನ್ನ ಗಂಡನ ಬಳಿಯೆ ಇದ್ದು ಅವನ ಸೇವೆಯನ್ನು ಮಾಡುತ್ತಿರುತ್ತಾಳೆ. ಗಂಡನೊ ಪಾರ್ಶ್ವವಾಯು ಪೀಡಿತನಾಗಿ ಜೀವಚ್ಛವದಂತಿರುತ್ತಾನೆ. ಅವನನ್ನು ಗಂಗು ಸ್ವಲ್ಪವೂ ಬೇಸರವಿಲ್ಲದೆ ಸೇವಿಸುತ್ತಾಳೆ. ಗಂಡಸತ್ತಾಗ ತಾನೂ ನದಿಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾಳೆ. ಕೊನೆಯಲ್ಲಿ ಇವಳನ್ನು

ಪತಿವ್ರತೆಯಂತೆ ಚಿತ್ರಿಸಿದ್ದರೂ ಇವಳ ಹಿಂದಿನ ಬಾಳಿನ ರಹಸ್ಯವನ್ನು ರಹಸ್ಯವಾಗೇ ಇಟ್ಟಿರುವುದು ಒಂದು ಕುಂದು ಎಂದೇ ಹೇಳಬೇಕಾಗುತ್ತದೆ. ಆದರೂ ರಂಗನ ಮೇಲಿನ ಅವಳ ಮಮತೆ, ವಾತ್ಸಲ್ಯಗಳು ಹಾಗೂ ಗಂಡನ ಮೇಲಿನ ಪ್ರೀತಿ ಮನಮುಟ್ಟುವಂತೆ ಚಿತ್ರಿತವಾಗಿವೆ. ಸಮಾಜದ ಕಟ್ಟಳೆಗೆ ಒಳಗಾಗಿ ತನ್ನನ್ನು ಮಗನಂತೆ ಪ್ರೀತಿಸುತ್ತಿದ್ದ ಗಂಗುವನ್ನು ರಂಗ ಅವಳ ಕೊನೆಗಾಲದಲ್ಲಿ ನೋಡಲು ಹೋಗದೆ ಹೋದುದು ಅಂತಃಕರಣವನ್ನು ಮಿಡಿಯುತ್ತದೆ. 'ಹೆಣ್ಣು ನೋಡಲು ಹೋದಾಗ' (ಅ.ಜ.) ಕಥೆಯ ನಂಜುಂಡಯ್ಯ, ಗೋಪಾಲಯ್ಯನವನವರ ಮಗಳು ಶ್ರೀಮತಿಯನ್ನು ನೋಡಲು ಹೋಗಿ ಹೆಣ್ಣನ್ನು ಒಪ್ಪಿ ಬಂದು ಅನಂತರ ತಿರಸ್ಕರಿಸುತ್ತಾನೆ. ಏಕೆ ಎನ್ನುವ ಪ್ರಶ್ನೆ ಹಾಗೆಯೆ ಉಳಿಯುತ್ತದೆ. ರತಿಯಂಥ ಶ್ರೀಮತಿಗೆ ತಾನು ತಕ್ಕವನಲ್ಲವೆಂದೆ? ಕಥೆಯಲ್ಲಿ ಆ ಅರ್ಥ ಬರುವ ವಿವರಣೆಯಿದ್ದರೂ ಅದು ಇನ್ನಷ್ಟು ಸ್ಪಷ್ಟವಾಗಿರಲೇ ಬೇಕಿತ್ತು ಎನಿಸುತ್ತದೆ. ಶ್ರೀಮತಿ ಅಲ್ಲದಿದ್ದರೆ ಬೇರೊಬ್ಬಳನ್ನು ಮದುವೆಯಾಗಬಹುದಿತ್ತಲ್ಲ! ಕಥೆಯ ಶೀರ್ಷಿಕೆಯನ್ನು ನೋಡಿ ಏನೋ ಸ್ವಾರಸ್ಯವಿದೆ ಎಂದು ಓದುವ ರಸಿಕರಿಗೆ ನಿರಾಶೆ ಕಟ್ಟಿಟ್ಟ ಬುತ್ತಿ.

'ತಬ್ಬಲಿ' (ಅ.ಜ.) ಮತ್ತು 'ಬಲತಾಯಿ' (ದೀ.) ಒಂದೇ ವಸ್ತುವನ್ನುಳ್ಳ ಕಥೆಗಳು. 'ತಬ್ಬಲಿ' ಕಥೆಯ ಮುಂದುವರಿದ ಭಾಗವೆ 'ಬಲತಾಯಿ' ಎಂದು ಹೇಳಬಹುದು. ತಾಯಿಯ ಸ್ಥಾನವನ್ನು ತಂದೆ ಏನಾದರೂ ಗಳಿಸಲಾರ, 'ತಬ್ಬಲಿ' ಕಥೆಯ ರಂಗನ ತಂದೆ ರಂಗನನ್ನು ಎಷ್ಟೇ ಪ್ರೀತಿಯಿಂದ ಪೋಷಿಸಿದರೂ ಅದು ಅವನ ತೀರಿಹೋದ ಹೆಂಡತಿ ನಳಿನಿಯ ಸ್ಥಾನವನ್ನಾಕ್ರಮಿಸದು. ಕಥೆಯ ಮಧ್ಯದಲ್ಲಿಯೇ ಓದುಗರಿಗೆ ರಂಗನ ತಂದೆ ವಿಧವೆ ಸುಮತಿಯ ಕೈ ಹಿಡಿಯುವರೆಂದು ತಿಳಿದು ಬರುತ್ತದೆ. ಅದು ನಿಜವೂ ಆಗುತ್ತದೆ. ರಂಗನ ಆಟಪಾಟಗಳ, ಪೋಷಣೆಯ ಅತಿ ದೀರ್ಘವಾದ ವಿವರ ಎಷ್ಟೇ ಚೆನ್ನಾಗಿದ್ದರೂ ಬೇಸರವನ್ನುಂಟು ಮಾಡುತ್ತದೆ. 'ಬಲತಾಯಿ'ಯ ಅಪ್ಪಣ್ಣ ರತ್ನ ತೀರಿಕಂಡ ಮೇಲೆ ಮಗು ಗೋಪಣ್ಣನ ಪಾಲನೆ ಪೋಷಣೆಗೆಂದೇ ರಂಗುವನ್ನು ಮದುವೆಯಾದನು. ರಂಗುವಿಗೆ ಒಂದು ಮಗುವಾಗುವವರೆಗೂ ಅವಳಲ್ಲಿ ಏನೆಂದೂ ದೋಷವನ್ನೂ ಕಾಣದಿದ್ದವನು ಅವಳಿಗೂ ಒಂದು ಮಗುವಾದ ಮೇಲೆ ತನ್ನ ಮೊದಲ ಹೆಂಡತಿಯ ಮಗುವನ್ನು ಗೋಪುವನ್ನ ನಿರ್ಲಕ್ಷಿಸುತ್ತಾಳೆ ಎಂದು ಅಸಮಾಧಾನ ಪಟ್ಟುಕೊಂಡ ಅಪ್ಪಣ್ಣ ಸಿಟ್ಟಿನಿಂದ, ಒಂದು ದಿನ ಹೆಂಡತಿ ರಂಗುವನ್ನು ಗದರಿಸಲು ಕೊಠಡಿಗೆ ಹೋಗಿ ನೋಡಿದಾಗ ಕಂಡ ದೃಶ್ಯದಿಂದ ಮೂಕ ವಿಸ್ಮಿತನಾಗುತ್ತಾನೆ. ಒಂದೊಂದು ಮೊಲೆಯಿಂದಲೂ ಹಾಲನ್ನು ಕುಡಿಯುತ್ತಿರುವ ರಂಗುವಿನ ಮಗು ಮತ್ತು ಗೋಪಣ್ಣ ಅವನ ಆಶ್ಚರ್ಯಕ್ಕೆ ಕಾರಣ! ಈ ಆದರ್ಶಕಥೆಯ ನಿರೂಪಣೆ ಚೆನ್ನಾಗಿದೆ.

'ಸಣ್ಣ ಮುದ್ದನ ಸಾಹಸ' (ಅ.ಜ) ಕಥೆಯ ಚೆನ್ನಪ್ಪನ ಮಗ ನಾಲ್ಕು ವರ್ಷದ ಸಣ್ಣ ಮುದ್ದ ಕೈಯಲ್ಲಿ ಅವ್ವ ಕೊಟ್ಟ ಹತ್ತು ಪೈಸೆಯನ್ನು ಹಿಡಿದು ಅದರಿಂದ ತಾನೂ ಕೊಳ್ಳಬಹುದಾದುದನ್ನು ಲೆಕ್ಕ ಹಾಕುತ್ತಾನೆ. ಅವನ ಪ್ರಕಾರ ಅವನಿಗೆ ಬೇಕಾದುದೆಲ್ಲವನ್ನು ಕೊಂಡ ಮೇಲೂ ಇನ್ನೂ ಅದರಲ್ಲಿ ಹಣ ಉಳಿಯುತ್ತದೆ! ಇದು ಒಂದು ಸುಂದರವಾದ ಕಥೆ.

'ಬಿಚ್' (ದೂ.ಕಾ.), 'ಸ್ವಾತಂತ್ರ್ಯ ದಿನಾಚರಣೆ' (ಅ.ಜ.), 'ಬೊಗಳುವ ನಾಯಿ' (ಅ.ಜ.) ಮತ್ತು 'ಶಿಕ್ಷೆ' (ಅ.ಜ.) ಕಥೆಗಳಲ್ಲಿ ದಯೆ, ಅನುಕಂಪ, ಪಶ್ಚಾತ್ತಾಪ ಮೊದಲಾದ ಮಾನವೀಯ ಮೌಲ್ಯಗಳನ್ನು ಚಿತ್ರಿಸಿದ್ದಾರೆ. 'ಬಿಚ್' ಕಥೆಯಲ್ಲಿ ತನ್ನ ಮರಿಗಳ ರಕ್ಷಣೆಗಾಗಿ ಕಚ್ಚಿದ ನಾಯಿಯನ್ನು ಹುಚ್ಚು ನಾಯಿಯೆಂದು ಕೊಂದು ಅನಂತರ ನಿಜ ವಿಷಯ ತಿಳಿದು ಪಶ್ಚಾತ್ತಾಪ ಪಡುತ್ತಾರೆ. 'ಬೊಗಳುವ ನಾಯಿ' ಕಥೆಯಲ್ಲಿ ರಾತ್ರಿಯ ವೇಳೆ ಬೊಗಳುವ ನಾಯಿಯಿಂದ ನಿದ್ದೆಗೆಡುವ ರಾಯರು ಅದನ್ನು ಕೊಲ್ಲಬೇಕೆಂದು ಯೋಚಿಸಿ ವಿಷಬೆರಸಿದ ಅನ್ನವನ್ನು ನಾಯಿಗಿಟ್ಟು ಅದು ಅನ್ನವನ್ನು ತಿನ್ನುವ ವೇಳೆಗೆ ಅದನ್ನು ತಪ್ಪಿಸುತ್ತಾರೆ. ಅನಂತರ ಆ ಪಾತಕ ಯೋಚನೆಯಿಂದ ಬಿಡುಗಡೆ ಹೊಂದಿ ನಾಯಿ ಬೊಗಳುತ್ತಿದ್ದರೂ ಗಡದ್ದಾಗಿ ನಿದ್ದೆ ಹೊಡೆಯುತ್ತಾರೆ. 'ಸ್ವಾತಂತ್ರ್ಯ ದಿನಾಚರಣೆ' ಕಥೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲು ಹೊರಟಿದ್ದ ಕಥಾನಾಯಕ, ಈ ಸಂಭ್ರಮ ಕೇವಲ ಕೆಲವೇ ಮಂದಿಗೆ ಎಂದು ಅಂದುಕೊಂಡು, ಕೆಲವರ ಸಂಭ್ರಮಕ್ಕಾಗಿ ಬಹು ಸಂಖ್ಯಾತರು ನಿತ್ಯದ ದುಡಿಮೆಯಲ್ಲಿ ಮಗ್ನರಾಗಿರುವುದನ್ನು ಕಂಡು ತಮ್ಮ ಮೊದಲಿನ ಉತ್ಸಾಹ ಸಂಭ್ರಮಗಳನ್ನು ಕಳೆದುಕೊಳ್ಳುತ್ತಾರೆ. ವಿಚಾರಪ್ರಚೋದಕವಾದ ಕಥೆ ಇದು. 'ಶಿಕ್ಷೆ' ಕಥೆಯ ಬಸವ ಸಿಟ್ಟಿನ ಬರದಲ್ಲಿ, ತನ್ನ ಕಷ್ಟದಲ್ಲಿ ನೇರವಾಗಿ ಸಹೋದರನಂತೆ ನಡೆಸಿಕೊಳ್ಳುತ್ತಿದ್ದ ಡ್ರೈವರ್ ವೀರಪ್ಪನನ್ನು ಕೊಂದು ಜೈಲಿಗೆ ಹೋಗಿ ಹದಿನಾಲ್ಕು ವರ್ಷಗಳ ನಂತರ ಬಿಡುಗಡೆಯಾಗಿ ಹೊರಬರುತ್ತಾನೆ. ಕುತೂಹಲದಿಂದ ವೀರಪ್ಪನ ಸಂಸಾರ ಏನಾಗಿದೆಯೆಂದು ನೋಡಿದಾಗ ದುಡಿಯುವ ಗಂಡನಿಲ್ಲದ, ಡ್ರೈವರ್ ವೀರಪ್ಪನ ಹೆಂಡತಿ ಪುಟ್ಟನಂಜಿ, ಅವಳ ಮಗ ಶಿವು ಸತ್ತುದು ತಿಳಿದು ಬರುತ್ತದೆ. ಅದಕ್ಕಾಗಿ ಬಸವ ಪಶ್ಚಾತ್ತಾಪಪಟ್ಟು ತಿರುಕಿಯಾಗಿ ಉಳಿದಿರುವ ಡ್ರೈವರ್ ವೀರಪ್ಪನ ತಾಯಿ ಸಿದ್ದವ್ವನ ಜವಾಬ್ದಾರಿಯನ್ನು ಹೊರಲು ಮುಂದೆ ಬಂದರೂ ಆ ಕಡೆಗೆ ನಮ್ಮ ಗಮನ ಹೋಗದೆ ವಿಚಾರಪರರಾಗುವಂತೆ ಕಥೆ ಮೂಡುತ್ತದೆ. ಕೊಲೆಗೈದ ಬಸವ ಊಟವಸತಿಗಳ ಯೋಚನೆಯಿಲ್ಲದೆ ಹದಿನಾಲ್ಕು ವರ್ಷಗಳನ್ನು ಜೈಲಿನಲ್ಲಿ ಕಳೆದ.

ಆದರೆ ನಿರಪರಾಧಿಗಳಾದ ಪುಟ್ಟನಂಜಿ, ಶಿವು ಸತ್ತುದಲ್ಲದೆ ಮುದುಕಿ ಸಿದ್ದವ್ವ ತಿರುಕಿಯಾದಳು. ಅಂದಮೇಲೆ ನಿಜವಾದ ಶಿಕ್ಷೆ ಯಾರಿಗಾಯಿತು? ಕೊಲೆಗಾರನಿಗೋ ನಿರಪರಾಧಿಗಳಿಗೋ? ಕೊಲೆಗಾರರ ಯೋಗಕ್ಷೇಮವನ್ನು ನೋಡಿಕೊಳ್ಳುವ ಸರಕಾರ ನಿರಪರಾಧಿಗಳ ಯೋಗಕ್ಷೇಮವನ್ನು ನೋಡಿಕೊಳ್ಳಬಾರದೇ! ಹೀಗೆ ಆಲೋಚನೆಗೆ ನಮ್ಮನ್ನು ಒಳಗು ಮಾಡುವ ಈ ಕಥೆ ಇದೇ ಲೇಖಕರ 'ಸೊಸೆಗೊಂದು ಉಡುಗೊರೆ' ಕಥಾ ಸಂಕಲನದಲ್ಲಿ 'ಕಾನೂನಿನಂತೆ' ಕಥೆಯನ್ನು ನೆನಪಿಗೆ ತರುತ್ತದೆ.

'ಎಂಥವಸ್ತು' (ದೂ.ಕಾ.) 'ಮೀಸೆಯ ಕೂದಲು' (ದೀ.) ಮತ್ತು 'ಬಂಡವಾಳ' (ದೀ.) ಕಥೆಗಳು ಸಮಾಜದ ಶೋಷಿತ ವರ್ಗವನ್ನು ಕುರಿತಂಥ ಕಥೆಗಳು. 'ಎಂಥವಸ್ತು, ಕಥೆಯ ಬತ್ತಿದ ಮುಖ, ಆಳದ ಕಣ್ಣುಗಳ ಮೊಟ್ಟೆ ತಲೆಯ ಕುರುಚಲು ಗಡ್ಡದ ಕುರುಡುಗಣ್ಣಿನ, ಬಡಕಲು ದೇಹದ, ಹರಕಲು ಅಂಗಿಯ ತಿರುಕ ತಿಮ್ಮ ತಾರಾಸ್ಟುಡಿಯೋವಿನ ಮಾಲೀಕ 'ಚಿತ್ರ ತೆಗೆಯುತ್ತೀನಿ, ದುಡ್ಡು ಕೊಡುತ್ತೀನಿ ಬಾ' ಎಂದುದನ್ನು ಕೇಳಿ ಅದಕ್ಕಾಗಿ ಹಲವಾರು ವರ್ಷಗಳಿಂದ ಉಳಿಸಿದ್ದ ಕೆಲವಾರು ರೂಪಾಯಿಗಳನ್ನು ಖರ್ಚುಮಾಡಿ ಶಿಸ್ತುಗಾರ ಪುಟ್ಟಸ್ವಾಮಿಯಾಗಿ ಹೋದರೆ ಆ ಮಾಲೀಕ ಗುರುತೇ ಹಿಡಿಯಬೇಡವೇ? ಅವನಿಗೆ ಬೇಕಿದ್ದುದು ತಿರುಕ ವೇಷದ ತಿಮ್ಮ. ತಾನು ಚಿತ್ರಿಸಿದ್ದ ತಿರುಕಿ ಚಿತ್ರದ ಪಕ್ಕದಲ್ಲಿ ಚಿತ್ರಿಸಲು, ಬೇಕಿದ್ದ ರೂಪದರ್ಶಿಯಾಗಿ, ತಿಮ್ಮ ನಿರಾಶೆಯಿಂದಾಗಿ ಹಿಂತಿರುಗುತ್ತಾನೆ ಈ ಕಥೆ ಅವರದೇ ಕಥೆಯಾದ 'ಬಾಳಹೊಳೆ' ಕಥಾಸಂಕಲನದ 'ನಕಲು' ಕಥೆಯನ್ನು ನೆನಪಿಗೆ ತರುತ್ತದೆ. 'ಮೀಸೆಯ ಕೂದಲು' ಕಥೆಯ ಹೊರಕೊಪ್ಪಲಿನ ಹೊಲೆಯರ ಅಂಕಪ್ಪ ಮೇಲ್ಗೋಡು ಸಾಹುಕಾರ್ ಶೀನಪ್ಪನಿಂದ ಪಡೆದಿದ್ದ ನೂರು ರೂಪಾಯಿ ಸಾಲ ತೀರಿಸಲು ಪಟ್ಟಣ ಸೇರಿ ಹೊಟ್ಟೆ ಬಟ್ಟೆ ಕಟ್ಟಿ ಎಂಟು ವರ್ಷದ ಮೇಲೆ ಬಡ್ಡಿ ಸಮೇತ ನೂರ ತೊಂಬತ್ತಾರು ರೂಪಾಯಿಗಳನ್ನು ಹಿಂದಿರುಗಿಸುತ್ತಾನೆ. ತನ್ನ ಸಾಲಕ್ಕೆ ಅವನು ಆಧಾರವಾಗಿಟ್ಟಿದ್ದುದು ತನ್ನ ಮೀಸೆಯ ಕೂದಲು! ಸಂಸ್ಕೃತ ಕವಿಗಳಿಗೆ ಸಂಬಂಧಿಸಿದ, ಪದ್ಯವೊಂದನ್ನು ಆಧಾರವಾಗಿಟ್ಟು ಸಾಲಪಡೆದ ಕವಿಯ ಕಥೆಯನ್ನು, ಹಾಗೆಯೇ ತನ್ನ ಪ್ರಿಯ ರಾಗವನ್ನು ಒತ್ತೆಯಾಗಿಟ್ಟು ಸಾಲಪಡೆದ ಸಂಗೀತಗಾರರ ಕಥೆಗಳನ್ನು ನೆನಪಿಗೆ ತರುತ್ತದೆ ಈ ಕಥೆ. ಮುಖ್ಯವಾಗಿ, ಈ ಕಥೆ ನಮ್ಮ ಗಮನ ಸೆಳೆಯುವುದು ಅಂಕಪ್ಪನ ನಿಯತ್ತು. ಸಾಲಪಡೆದ ಉಳ್ಳವರು ಸಾಲವನ್ನು ಹಿಂದಿರುಗಿಸುವಾಗ ಬಡ್ಡಿಯ ಸೋಡಿಗಾಗಿ ಒದ್ದಾಡುವಾಗ, ಏನೂ ಇಲ್ಲದ ಅಂಕಪ್ಪ ಬಡ್ಡಿ ಸಮೇತ ಸಾಲವನ್ನು ಹಿಂದಿರುಗಿಸುತ್ತಾನೆ. ಸಮಾಜದ ಕೆಳವರ್ಗದ ಅಂಕಪ್ಪನ ನಿಯತ್ತು ಮೇಲು ವರ್ಗದ ಎಷ್ಟು ಜನರಲ್ಲಿದೆ? ಹಳ್ಳಿಯ ಬದುಕಿನ ಒಂದು ಸಹಜ ಸುಂದರ ಚಿತ್ರಣ ಈ ಕಥೆ. 'ಬಂಡವಾಳ' ಕಥೆ

ಹೆಸರಿಗೆ ತಕ್ಕಂತೆ ಕಮ್ಯೂನಿಸ್ಟ್ ಸಿದ್ಧಾಂತವನ್ನು ಖಂಡಿಸುವ ಕಥೆ. ಕಥೆಯಲ್ಲಿ ಎಲ್ಲಿಯೂ ಕಮ್ಯೂನಿಸ್ಟ್ ಸಿದ್ಧಾಂತವನ್ನು ಖಂಡಿಸದಿದ್ದರೂ ಮನುಷ್ಯನ ಮೂಲಭೂತ ಗುಣವಾದ ಸ್ವಾರ್ಥದ ಇದಿರಿನಲ್ಲಿ ಅದು ಉಳಿಯಲಾರದೆಂಬುದನ್ನು ಕಲಾತ್ಮಕವಾಗಿ ಕಥೆಯಲ್ಲಿ ಚಿತ್ರಿಸಿದ್ದಾರೆ. ಈ ಕಥೆಯ ಪರೀಕ್ಷಿತ್‌ದಾಸ್‌ಗುಪ್ತ ಒಬ್ಬ ಸೇವಕ. ಕಮ್ಯೂನಿಸ್ಟ್ ಸಿದ್ಧಾಂತಕ್ಕೆ ಮರುಳುಗೊಂಡು ಆ ಪಾರ್ಟಿಯ ಸದಸ್ಯನಾದವನು. ಪರೀಕ್ಷಿತ್ ದಾಸ್, ಕಷ್ಟಪಟ್ಟು ಉಳಿಸಿದ ನೂರಾರು ರೂಪಾಯಿಗಳನ್ನು ಪಾರ್ಟಿಯ ಇತರ ಸದಸ್ಯರಿಗೆ ಕೊಡಬೇಕಾಗಿ ಬಂದಾಗ ಪಾರ್ಟಿಯನ್ನೇ ಬಿಟ್ಟು ಬಿಡುತ್ತಾನೆ. ಈ ಮನೋಭಾವ ಅವನಲ್ಲಿ ಉಂಟಾದುದು ಅವನಲ್ಲಿದ್ದ ಅಲ್ಪ ಬಂಡವಾಳದಿಂದ. ಅಲ್ಪ ಬಂಡವಾಳ ಅವನಲ್ಲಿ ಉಳಿಯುವಂತೆ ಮಾಡಿದ ಅವನ ಮಾಲೀಕ ಸೇಠ್‌ನಿಂದ. ಈ ಕಥೆ ಸೊಗಸಾದ ನಿರೂಪಣೆಯಿಂದ ಕೂಡಿದೆ. ಕಥೆಯಲ್ಲಿ ಅಲ್ಲಲ್ಲಿ ಬರುವ ಬಂಗಾಳಿ ವಾಕ್ಯಗಳು -ಅವುಗಳಿಗೆ ಕನ್ನಡ ಅನುವಾದ ಕೊಟ್ಟಿದೆ-ಅನಾವಶ್ಯಕ. ಈ ಮೂರೂ ಕಥೆಗಳು ಸಮಾಜದ ಶೋಷಿತ ವರ್ಗವನ್ನು ಕುರಿತಂಥ ಕಥೆಗಳು. ಪ್ರಗತಿಶೀಲ ಕಥೆಗಾರರಂತೆ ಬಂಡವಾಳಗಾರರನ್ನು ಖಂಡಿಸುತ್ತ ಶೋಷಿತ ವರ್ಗವನ್ನು ಎತ್ತಿ ಹಿಡಿಯುವ ಪ್ರಯತ್ನ ಈ ಕಥೆಗಳಲ್ಲಿ ಇಲ್ಲ. ಅಶ್ವತ್ಥರು ಕೇವಲ ಕಥೆಗಾರರಾಗಿ ಕಲಾತ್ಮಕ ದೃಷ್ಟಿಯಿಂದ ಈ ಕಥೆಗಳನ್ನು ನಿರ್ವಹಿಸಿದ್ದಾರೆ.

'ಅವರ ತಪ್ಪೆ' (ದೂ.ಕಾ.) ಕಥೆಯಲ್ಲಿ ಕಾಶಿಯಿಂದ ರೈಲಿನಲ್ಲಿ ಹೊರಟ ರಾಯರಿಗೆ, ತುಂಬಿದ ಬೋಗಿಯಲ್ಲಿ ಕುಳಿತುಕೊಳ್ಳಲು ಜಾಗ ಮಾಡಿಕೊಡುತ್ತಾನೆ ಮಹಮ್ಮದಾಲಿ. ಅಲ್ಲದೆ ಅವನ ಸೌಜನ್ಯಪರವಾದ ನಡವಳಿಕೆಗೆ ರಾಯರು ಮಾರುಹೋಗುತ್ತಾರೆ. ಟಿಕೆಟ್ ಕಲೆಕ್ಟರ್ ಬಂದಾಗ ಟಿಕೆಟ್ ಇಲ್ಲದ ಮಹಮ್ಮದಾಲಿ ತಾನು ಹಿಂದಿನ ನಿಲ್ದಾಣದಲ್ಲಿ ಹತ್ತಿದುದಾಗಿ ಹೇಳಿ ಸಾಕ್ಷಿಗೆ ರಾಯರನ್ನೇ ತೋರುತ್ತಾನೆ. ಪಾಪ ರಾಯರು ಏನು ಹೇಳಬೇಕು? ಮಹಮ್ಮದಾಲಿಯ ಪರವಾಗಿ ಸಾಕ್ಷಿ ಹೇಳಿದ್ದರೆ ಅದು ಅವರ ತಪ್ಪೆ? 'ಕ್ಷಯ' (ದೀ.). ಕಥೆ ಒಂದು ವರದಿಯಂತಿದೆ. ಈ ಕಥೆಯ ಮೂರ್ತಿ ಸ್ಯಾನಿಟೋರಿಯಂನಲ್ಲಿರುವ ಡಾಕ್ಟರ ಒಳ್ಳೆಯತನವನ್ನು, ಅಲ್ಲಿಯ ಅಚ್ಚುಕಟ್ಟು ತನವನ್ನು ಹೊಗಳಿ ತಾನು ಹೇಗೆ ಅಲ್ಲಿ ಶಿಫಾರಸ್ಸಿನಿಂದ ಸೇರಿದೆ ಎಂದು ಹೇಳುತ್ತಾನೆ. ಶಿಫಾರಸ್ಸಿನಿಂದ ಆಗುವ ಅನ್ಯಾಯವನ್ನು ಎತ್ತಿ ತೋರುವುದು ಕಥೆಯ ಉದ್ದೇಶ. ಆದರೆ ಫಲಕಾರಿಯಾಗಿಲ್ಲ.

'ಕಾಮಾಕ್ಷಿ' (ಅ.ಜ) ಬೆಂಕಿ (ಅ.ಜ) ಮತ್ತು 'ಜಿತ ಗುಪ್ತ ವಿಜಯ' (ಅ.ಜ) ಮೂರೂ ಕಾಮವನ್ನು ವಸ್ತುವಾಗುಳ್ಳ ಕಥೆಗಳು. 'ಕಾಮಾಕ್ಷಿ' ಕಥೆಯ ಕಾಮಾಕ್ಷಿ ಕೊಯಮತ್ತೂರಿನ ಕಡೆಯವಳು. ಮೈಸೂರಿಗೆ ಬಂದು ಅವರಿವರ ಮನೆಗೆಲಸ ಮಾಡಿ

ಜೀವಿಸುತ್ತಿದ್ದಳು. ರೂಪವಂತೆ ಅಲ್ಲದಿದ್ದರೂ ತೆಗೆದು ಹಾಕುವಂಥವಳೇನಲ್ಲ. ಹತ್ತು ಹನ್ನೆರಡು ವರ್ಷದ ಮೇಲೆ ತನ್ನ ಗಂಡನೆಂದು ಹೇಳಿಕೊಂಡು ಬಂದ ವ್ಯಕ್ತಿ ತನ್ನ ಗಂಡನಲ್ಲವೆಂದು ತಿಳಿದಿದ್ದರೂ ತನ್ನ ಬಳಿ ಇರಲು ಅವಕಾಶ ಕೊಟ್ಟು ತನ್ನ ಉಳಿತಾಯವನ್ನು ಖರ್ಚು ಮಾಡಿದಳು. ಇದಕ್ಕೆ ಏನು ಕಾರಣ? ಕಾಮಾಕ್ಷಿಯಲ್ಲಿದ್ದ ಸುಪ್ತ ಕಾಮವೇ? ಅಥವಾ ಕಾಮಾಕ್ಷಿಯ ಸ್ವಭಾವವೇ ಅಂತಹುದೇ? ಕಾಮಾಕ್ಷಿಯ ಸ್ವಭಾವವೆ ಅಂತಹುದಾಗಿದ್ದರೆ ಅದುವರೆಗೂ ಬೇರೆಯ ಗಂಡಸರು ಅವಳನ್ನು ಹಾಗೆಯೇ ಇರಗೊಟ್ಟಿದ್ದರೆ? ಯಾವುದನ್ನೂ ಕಥೆಗಾರರು ಹೇಳಿಲ್ಲ. 'ಬೆಂಕಿ' ಕಥೆ ಪಟ್ಟಣಗಳಲ್ಲಿ ಕಾಣಸಿಗುವ ವೇಶ್ಯೆಯ ಕಥೆ. ತನ್ನ ಸಂಗವನ್ನೊಲ್ಲದೆ ತನಗೆ ಕೇಳಿದ್ದನ್ನು ತೆಗೆದುಕೊಡುವ ರಮೇಶನ ವರ್ತನೆ ತಿಳಿದೊಡನೆ ಅವನನ್ನು ತಿರಸ್ಕರಿಸುತ್ತಾಳೆ ಚೆಕಿ. ಆಕೆ ವೇಶ್ಯೆಯಾದರೂ ಅವಳಲ್ಲಿ ನಿಯತ್ತಿದೆ.

'ತೀರ್ಥಪ್ರಸಾದ' (ದೂ.ಕಾ.), 'ದೂರದ ಕಾಶಿಯಲ್ಲಿ' (ದೂ.ಕಾ.), 'ವ್ರತಕಥಾ' (ಅ.ಜ.) ಮತ್ತು 'ಆರಾಧನೆ' (ದೀ.), ಮೌಢ್ಯವನ್ನೂ, ಭಕ್ತಿಯನ್ನು ದೇವರ ಹೆಸರಿನಲ್ಲಿ ನಡೆಸುವ ಮೋಸ ವಂಚನೆಗಳನ್ನು ಕುರಿತು ಬರೆದ ಕಥೆಗಳು. 'ತೀರ್ಥಪ್ರಸಾದ' ಜನಗಳ ಮೌಢ್ಯವನ್ನು ಎತ್ತಿ ತೋರುವ ಕಥೆ. ಆ ಕಥೆಯಲ್ಲಿ ಇರಬೇಕಾದ ತೀಕ್ಷ್ಣವಾದ, ಮೊನಚಾದ ವಿಡಂಬನೆ, ವ್ಯಂಗ್ಯ, ಕಟಕಿಗಳು ಇಲ್ಲದೆ ಕಥೆಸಪ್ಪೆಯಾಗಿದೆ. 'ವ್ರತಕಥಾ' ಸತ್ಯನಾರಾಯಣನ ಪೂಜೆಯ ರಕ್ಷೆಯಲ್ಲಿ ಜನರನ್ನು ಸುಲಿಗೆ ಮಾಡುವ ವರ್ತಕನೊಬ್ಬನ ಕಥೆ. 'ದೂರದ ಕಾಶಿಯಲ್ಲಿ' ಕಥೆಯಲ್ಲಿ ಕಾಶೀಯಾತ್ರೆಗಾಗಿ ಹಂಬಲಿಸಿ ಜೀವನದ ಕೊನೆಗಾಲದಲ್ಲಿ ಕೂಡಿಟ್ಟಿದ್ದ ಪುಡಿಗಾಸನ್ನೇ ನೆಚ್ಚಿ ಹೊರಟ ವೃದ್ಧ ದಂಪತಿಗಳಿಗೆ ಕಾಶಿಯಲ್ಲಿ ಅವರು ಇದ್ದಷ್ಟು ದಿವಸ ಆದರಾತಿಥ್ಯವನ್ನು ಮಾಡಿದವರು ಉದಾರಿಗಳಾದ ಯಾರೋ ದಂಪತಿಗಳು. ಆ ದಂಪತಿಗಳು ತನ್ನ ಊರಿನ ಹತ್ತಿರವಿರುವ ಮಾಲಗೂರಿನ ರೈಲ್ವೇ ಸ್ಟೇಷನ್ ಮಾಸ್ಟರ ತಮ್ಮ ಶ್ರೀನಿವಾಸರಾವ್ ಮತ್ತು ಅವನ ಹೆಂಡತಿಯೆಂದೇ ವೃದ್ಧ ದಂಪತಿಗಳ ಎಣಿಕೆ. ವೃದ್ಧ ದಂಪತಿಗಳು ಮತ್ತೆ ಊರಿಗೆ ಹಿಂತಿರುಗಿದಾಗ ನಿಜ ವಿಷಯ ತಿಳಿದು ಆಶ್ಚರ್ಯ, ಸಂತೋಷ ಉಂಟಾಗುತ್ತದೆ. ಆಸ್ತಿಕರು ಆ ಉದಾರಿ ದಂಪತಿಗಳನ್ನು ದೇವರೆಂದೇ ತಿಳಿಯವುದಾದರೆ ಅಡ್ಡಿಯಿಲ್ಲ. ಆ ಅರ್ಥ ಬರುವ ಮಾತುಗಳೂ ಕಥೆಯಲ್ಲಿ ಬರುತ್ತವೆ. 'ಆರಾಧನೆ' ಕಥೆಯಲ್ಲಿ ನಿಜವಾದ ಪೂಜೆ, ಭಕ್ತಿ ಇರುವುದು ಭೂತದಯೆಯಲ್ಲಿ, ಆಡಂಬರದಲ್ಲಲ್ಲ ಎಂಬ ತತ್ತ್ವ ನಿರೂಪಿತವಾಗಿದೆ. ಇದು ಬರಿಯ ತತ್ತ್ವವಾಗಿ ಬರದೆ ಕಥೆಯಾಗಿ ಬಂದಿದೆ. ಹೊತ್ತುಗೊತ್ತಿಗೆ ಗಾದೆ ಮಾತಾಗಿದ್ದ ಮದರ್ ಮೇರಿ ಚರ್ಚಿನ ವಿಕಾರ್ ಫಾದರ್ ಮಾರ್ಟಿನ್ ವಿಶೇಷ ಆರಾಧನೆಯಿದ್ದ ಆ ದಿನ ತಡವಾಗಿ ಚರ್ಚಿಗೆ ಬಂದು ಎಲ್ಲರ ಆಶ್ಚರ್ಯಕ್ಕೆ

ಕಾರಣನಾಗುತ್ತಾನೆ. ಚರ್ಚಿನಲ್ಲಿ ಆರಾಧನೆಗಾಗಿ ನೆರೆದಿದ್ದ ಎಲ್ಲರೂ ತಾವು ಬರುವ ಹಾದಿಯಲ್ಲಿ ಇದ್ದ ವೃದ್ಧ ಮೇರಿಯ ಗುಡಿಸಲು ಮಳೆಗೆ ಸಿಕ್ಕಿ ಹಾಳಾಗಿರುವುದನ್ನೂ, ಮುದುಕಿ ಚಳಿಯಿಂದ ನಡಗುತ್ತಿರುವುದನ್ನೂ ಕಂಡೂ ಕಾಣದಂತೆ ಬಂದಿರುತ್ತಾರೆ. ವಿಕಾರ್ ಫಾದರ್ ಮಾರ್ಟಿನ್ ಆದರೊ ಅವಳಿಗೆ ನೆರವಾಗಿ ಬಂದಿರುತ್ತಾನೆ. ಅವನ ವಿಳಂಬಕ್ಕೆ ಅದೇ ಕಾರಣ. ಈ ಕಾರಣವನ್ನು ಕೊನೆಯವರೆಗೂ ತಿಳಿಸದೆ ಕಥೆಯಲ್ಲಿ ಕುತೂಹಲವನ್ನು ಉಳಿಸಿಕೊಂಡು ಬಂದಿದ್ದಾರೆ ಈ ಗುಂಪಿನ ಕಥೆಗಳಲ್ಲಿ ವಾಸ್ತವ ನೆಲಗಟ್ಟಿನ ಮೇಲಿರುವ 'ಆರಾಧನೆ' ಒಳ್ಳೆಯ ಕಥೆ.

'ಹುಲಿ ಸಿದ್ದನ ಹೆಂಡತಿ' (ಅ.ಜ.) ಮತ್ತು 'ಪುತ್ಲಿ' (ದೀ.) ದರೋಡೆಕೋರರಿಗೆ ಸಂಬಂಧಿಸಿದ ಕಥೆಗಳು. ಕಥೆಗಳ ಹೆಸರೇ ಸೂಚಿಸುವಂತೆ ಈ ಕಥೆಗಳಲ್ಲಿ ದರೋಡೆಕೋರರಿಗಿತ ಹೆಚ್ಚಾಗಿ ಅವರ ಹೆಂಡತಿಯರಿಗೇ ಹೆಚ್ಚಿನ ಪ್ರಾಶಸ್ತ್ಯ ದೊರೆತಿದೆ. ಈ ಎರಡು ಕಥೆಗಳಲ್ಲಿ ಸಾದೃಶ್ಯಕ್ಕಿಂತ ವೈದೃಶ್ಯವೇ ಹೆಚ್ಚಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಹಾವಳಿಯನ್ನುಂಟುಮಾಡುತ್ತಿದ್ದ ಹುಲಿಸಿದ್ದನನ್ನು ಸೆರೆಹಿಡಿಯಲು ನಿಯೋಜಿತರಾಗಿದ್ದ ಭೀಮರಾಯರು ತಮ್ಮ ಕಾರ್ಯದಲ್ಲಿ ವಿಫಲರಾಗಿ ಬೇರೊಂದು ಸ್ಥಳಕ್ಕೆ ವರ್ಗವಾಗಿ ಹೋಗಲು ಕೆಲವೇ ದಿನಗಳು ಉಳಿದಿದ್ದಾಗ ಹುಲಿಸಿದ್ದನ ಹೆಂಡತಿಯ ನೆರವಿನಿಂದ ಹುಲಿಸಿದ್ದನನ್ನು ಹಿಡಿಯುತ್ತಾರೆ. ಕಿಲೋಡಿನ ಜಾತ್ರೆಯಲ್ಲಿ ಭೀಮರಾಯರು ಜಾತ್ರೆಗೆ ಬಂದಿದ್ದ ಹುಲಿ ಸಿದ್ದನ ಹೆಂಡತಿಯನ್ನು ಕರೆಸಿ ವಿವೇಕ ಹೇಳುತ್ತಾರೆ. ಹುಲಿಸಿದ್ದನ ಹಾವಳಿಯಿಂದ ಆಗಿರುವ ಅನಾಹುತಗಳನ್ನು ತಿಳಿಸುತ್ತಾರೆ. ಆಗ ಗಂಡನಿಗೆ ಮೋಸಮಾಡಲು ಒಪ್ಪದ ಚೆನ್ನಮ್ಮ ಮಾರನೆಯ ಬೆಳಗ್ಗೆ ತನ್ನ ಮನಸ್ಸನ್ನು ಬದಲಾಯಿಸಿ ಗಂಡನನ್ನು ಹಿಡಿದುಕೊಡಲು ಒಪ್ಪುತ್ತಾಳೆ. ಹುಲಿಸಿದ್ದನ ಹೆಂಡತಿಗೆ ಭೀಮರಾಯರು ಹೇಳಿದ ವಿವೇಕ ಆ ಸಂದರ್ಭಕ್ಕೆ ಅಸಹಜವಾಗಿ ಕಂಡುಬರುತ್ತದೆ. ಯಾವುದೋ ಪುರಾಣ ಶ್ರವಣ ಮಾಡಿದಂತಾಗುತ್ತದೆ. ಕಥೆಯ ಪರಿಣಾಮವೇ ಅದರಿಂದ ಹಾಳಾಗಿದೆ. 'ಪುತ್ಲಿ' ಕಥೆಯ ಪುತ್ಲಿ ಚಂಬಲ್ ಕಣಿವೆಯ ವ್ಯಾಘ್ರನೆಂದೂ, ನರಭಕ್ಷಕನೆಂದೂ ಹೆಸರುವಾಸಿಯಾಗಿದ್ದ ಕಾಲಾಗಜಾರ್‌ನನ್ನು ಹಿಡಿದುಕೊಡಲು ದರೋಗ ಮದನಲಾಲರಿಗೆ ನೆರವಾಗಿ ಬಂದವಳು. ಕಾಲಾಗಜ್ಜಾರನ ಧೀರ ವ್ಯಕ್ತಿತ್ವವನ್ನು, ನಡತೆಯನ್ನು ಮೆಚ್ಚಿ ಅವನನ್ನು ವರಿಸಿದವಳು. ದರೋಗ ಮದನಲಾಲರು ಅಸಹಾಯಳಾದ ಹೆಣ್ಣಿನ ಮೇಲೆ ಅತ್ಯಾಚಾರವೆಸಗಿದರೆ ಕಾಲಾಗಜ್ಜಾರನು ತಾನು ಮಲಗಿರುವ ಗುಹೆಯಲ್ಲೇ ಮಲಗಿದ್ದ ಮೋಹಿನಿಯಂತಿರುವ ಪುತ್ಲಿಯ ಕಡೆ ಕಣ್ಣೆತ್ತಿಯೂ ನೋಡುವುದಿಲ್ಲ. ಇದೊಂದೇ ಸನ್ನಿವೇಶ ಕಾಲಗಜ್ಜಾರನ ವ್ಯಕ್ತಿತ್ವ ಚಿತ್ರಣಕ್ಕೆ ಸಾಕು. ಪುತ್ಲಿ ಡಕಾಯಿತಳಾಗುವುದಕ್ಕೆ ಯಾರು ಕಾರಣ. ಏಕೆ ಎಂಬುದರ ಜೊತೆಗೆ

ಕಾಲಾಗಜ್ಜಾರನ ಧೀರವ್ಯಕ್ತಿತ್ವ ಮನೋಜ್ಞವಾಗಿ ಈ ಕಥೆಯಲ್ಲಿ ಚಿತ್ರಿಸಲ್ಪಟ್ಟಿದೆ. ಮೇಲಿನ ಎರಡು ಕಥೆಯ ಪಾತ್ರಗಳಲ್ಲೂ ವೈದೃಶ್ಯವಿದೆ. ಚೆನ್ನಿ-ಪುತ್ಲಿ, ಭೀಮರಾಯರು-ಮದನಲಾಲರು, ಹುಲಿಸಿದ್ದ-ಕಾಲಾಗಜ್ಜಾರ್ ವಿರುದ್ಧ ಗುಣಗಳ ಪಾತ್ರಗಳು. ಪುತ್ಲಿ ಮತ್ತು ಕಾಲಗಜ್ಜಾರನ ಪಾತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವ 'ಪುತ್ಲಿ' ಕಥೆ ಅತ್ಯಂತ ಪರಿಣಾಮಕಾರಿಯಾಗಿದೆ.

'ಚಿತ್ರಗುಪ್ತ ವಿಜಯ' (ಅ.ಜ.) ಮತ್ತು 'ಮೃಗಮೋಹ' (ದೀ.) ಪೌರಾಣಿಕ ಕಥೆಗಳು. ಮೊದಲನೆಯದು ಬೌದ್ಧ ಉಪಕಥೆ. ಎರಡನೆಯದು ಭಾಗವತದಲ್ಲಿ ಬರುವ ಕಥೆ. 'ಚಿತ್ರಗುಪ್ತ ವಿಜಯ' ಕಥೆಯಲ್ಲಿ ಚಿತ್ರಗುಪ್ತ ಮಾಯೆಯನ್ನು ತಾನು ಜಯಿಸಿದ್ದೇನೆ ಎಂಬುದನ್ನು ತೋರಿಸಲು ಪಾಟಲೀಪುತ್ರದ ರಾಜವೇಶ್ಯೆ ಭೋಗವತಿಯ ಬಳಿಯಲ್ಲಿ ಒಂದು ರಾತ್ರಿಯನ್ನು ಕಳೆದುಬಂದು ಅವಳ ಧ್ಯಾನದಲ್ಲೇ ಮಗ್ನನಾಗುತ್ತಾನೆ. ಚಿತ್ರಗುಪ್ತನ ನಿರ್ವಿಕಾರ ವರ್ತನೆಯಿಂದ ಭೋಗವತಿ ಇಹದ ಬಗೆಗೆ ಜುಗುಪ್ಸೆತಾಳಿ ದೀಕ್ಷೆ ಪಡೆದು ಭಗವತಿ ಎಂಬ ಹೆಸರಿನಿಂದ ಪ್ರಸಿದ್ಧಳಾಗುತ್ತಾಳೆ. 'ಮೃಗ ಮೋಹ' ಕಥೆ ಭರತ ಮುನಿಗಳು ಮೃಗದ (ಜಿಂಕೆಯ) ಮೇಲಿನ ಅತಿಯಾದ ಮೋಹದಿಂದ ಹೇಗೆ ಅವರೂ ಮೃಗವಾಗಿಯೇ ಹೋಗಿದ್ದರು ಎಂಬುದನ್ನು ಹೇಳುತ್ತದೆ. ಭರತ ಮುನಿಗಳಿಗೆ ಮೃಗದ ಮೇಲೆ ಉಂಟಾದ ಮೋಹ, ಅದರೊಡನಾಟ ಇವುಗಳ ವಿವರಣೆ ಅತಿ ದೀರ್ಘವಾಗಿದ್ದು ಕಥೆ ಸೋತಿದೆ. 'ಸಂನ್ಯಾಸ' (ಅ.ಜ) ಸಾಮಾಜಿಕ ಕಥೆಯಾದರೂ 'ಚಿತ್ರಗುಪ್ತ' ಕಥೆಯೊಡನೆ ಹೋಲಿಸಬಹುದಾದ ಕಥೆ. ವಿಶ್ವನಾಥ ಸನ್ಯಾಸಿಯಾಗಿ ಹಲವಾರು ವರ್ಷಗಳಾದ ಮೇಲೆ ತನ್ನಿಂದಾಗಿ ಒಂದು ಸಂಸಾರವೆ ಛಿದ್ರವಾಗಿರುವುದನ್ನು ಕಂಡು ಮತ್ತೆ ಸಂಸಾರಕ್ಕೆ ಮರಳುತ್ತಾನೆ. '.....ಸಂನ್ಯಾಸವೆಂದರೆ ಸಂಸಾರವನ್ನು ತೊರೆಯುವುದಲ್ಲ ; ಸ್ವಾರ್ಥವನ್ನು ತೊರೆಯುವುದು!' ಎಂಬ ಸ್ವಾಮಿಯವರ ಮಾತುಗಳು ವಿಶ್ವನಾಥನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ.

'ಮಹಾಪಾಪ' (ದೂ.ಕಾ.) 'ಹಿಮ್ಮತ್‌ಬೀಬಿ' (ದೂ.ಕಾ.) 'ಮೊಹರಂ ಪ್ರಕರಣ' (ದೂ.ಕಾ.), 'ಅದೇ ಪ್ರಶ್ನೆ' (ಅ.ಜ.), 'ನಾಸೀಂ ಬೇಗಂ' (ದೀ.), 'ಗೋರ' (ದೀ.) ಮತ್ತು 'ಮುನ್ನಾನ ಅಮ್ಮ' (ದೀ.) ಕಥೆಗಳಲ್ಲಿ ಹಿಂದೂಮುಸ್ಲಿಮರ ಸೌಹಾರ್ದ ಬಾಳುವೆಯ ಚಿತ್ರಣವೊ, ಕಚ್ಚಾಟವೊ, ದೇಶಪ್ರೇಮವೊ ವಸ್ತುವಾಗಿದೆ. 'ಮಹಾಪಾಪ' ಕಥೆಯಲ್ಲಿ ಹಿಂದೂಮುಸ್ಲಿಂ ಗಲಾಟೆಯಾದಾಗ ಮುಸ್ಲಿಮರ ಧಾಳಿಯಿಂದ ಹಿಂದೂ ಯುವಕನೊಬ್ಬನನ್ನು ಮುಸ್ಲಿಂ ವೃದ್ಧೆಯೊಬ್ಬಳು ರಕ್ಷಿಸಿದ ವಿಚಾರ ಬರುತ್ತದೆ. ಅವಳ ಧರ್ಮಗುರುಗಳ ದೃಷ್ಟಿಯಲ್ಲಿ ಅದು ಮಹಾಪಾಪ. 'ಅದೇ ಪ್ರಶ್ನೆ' ಕಥೆಯಲ್ಲಿಯೂ ಹಿಂದೂಮುಸ್ಲಿಮರ ಕಚ್ಚಾಟವೆ ಕಥಾವಸ್ತು. ಮುಸ್ಲಿಮರು ಧಾಳಿಯಲ್ಲಿ

ತಂದೆತಾಯಿಯರನ್ನು ಕಳೆದುಕೊಂಡು ತಂಗಿಯೊಡನೆ ಬರುತ್ತಿರುವಾಗ ಮತ್ತೆ ತಂಗಿಯನ್ನೂ ಕಳೆದುಕೊಂಡ ಯುವಕನೊಬ್ಬನ ಕಥೆ ಇದು. 'ಗೋರಿ' ಕಥೆಯ ವಸ್ತುವೂ ಮೇಲಿನ ಕಥೆಗಳದೇ. ಈ ಕಥೆಯಲ್ಲಿ ಹಿಂದೂಗಳಿಗೂ, ಮುಸ್ಲಿಮರಿಗೂ ಒಂದು ಗೋರಿಯ ವಿಚಾರವಾಗಿ ದೊಡ್ಡ ವ್ಯಾಜ್ಯವಾಗಿ, ಹೊಡೆದಾಟವಾಗಿ ತಮ್ಮ ತಮ್ಮ ಕಡೆಯ ಕೆಲವರನ್ನು ಕಳೆದುಕೊಂಡ ಮೇಲೆ ವಿವೇಕ ಉದಯವಾಗುತ್ತದೆ. ಇಷ್ಟಕ್ಕೆಲ್ಲಾ ಕಾರಣವಾದ ಗೋರಿಯಲ್ಲಿ ಶರಣರ ಮೂಳೆಗಳಾಗಲಿ, ಫಕೀರರ ಮೂಳೆಗಳಾಗಲಿ ಸಿಗದೆ, ಹಿಂದೂಮುಸ್ಲಿಂ ವ್ಯಾಜ್ಯ ಅಲ್ಪಕಾರಣಕ್ಕಾಗಿ ಹುಟ್ಟಿಕೊಂಡುದೆಂದು ಲಘುವಾಗಿ, ಹಾಸ್ಯಮಯವಾಗಿ ತೋರಿಸುವ ಪ್ರಯತ್ನವಿದೆ, ಕಥೆಯಲ್ಲಿ. ಇದನ್ನು ನಂಬುವುದಾದರೆ ಕಥೆಯ ಪ್ರಾರಂಭದಲ್ಲಿ ಶರಣಪ್ಪನಿಗೆ ಬಿದ್ದ ಕನಸಿಗೆ ಏನೊಂದೂ ಅರ್ಥವಿಲ್ಲದೆ, ಕಥೆಯ ಆಸ್ತಿಭಾರವೆ ಇಲ್ಲವಾಗಿ ಕಥೆ ಕಾಲ್ಪನಿಕವಾದುದು ಎನಿಸುತ್ತದೆ. 'ಮೊಹರಂ ಪ್ರಕರಣ'ದಲ್ಲಿ ದರೋಗ ಬೀರಬಲ್ ಹಿಂದೂಮುಸ್ಲಿಮರಿಗೆ ಮೊಹರಂ ಹಬ್ಬದ ಮೆರವಣಿಗೆಯಂದು ನಡೆಯಬಹುದಾಗಿದ್ದ ಹೊಡೆದಾಟವನ್ನು ತನ್ನ ಚಾಕಚಕ್ಯತೆಯಿಂದ ತಪ್ಪಿಸುತ್ತಾನೆ. ಇನ್ನೇನು ಹೊಡೆದಾಟ ಪ್ರಾರಂಭವಾಯಿತು ಎನ್ನುವ ಎಡೆಯಲ್ಲೆಲ್ಲಾ ಬೀರಬಲನ ವಿವೇಕದಿಂದ ಅದು ತಪ್ಪುತ್ತದೆ. ಕಥೆ ಕುತೂಹಲಭರಿತನಾಗಿದ್ದು, ಕೊಂಚ ಹಾಸ್ಯದ ಲೇಪನದೊಡನೆ ಮುಂದುವರಿಯುತ್ತದೆ. 'ಹಿಮ್ಮತ್ ಬೀಬಿ' ಕಥೆಯ ಹಿಮ್ಮತ್ ಬೀಬಿ ಮುಸ್ಲಿಂಲೀಗಿನ ಪ್ರಚಾರಕ್ಕೆ ಮರುಳಾಗದೆ, ಮುಸ್ಲಿಂ ಬಂಧುಗಳ ಬೆದರಿಕೆಗೆ ಮಣಿಯದೆ, ನಡೆಯಲಾರದ ತನ್ನ ಗಂಡನನ್ನು ಹೊತ್ತುಕೊಂಡು ಬಂದು ಕಾಂಗ್ರೆಸ್ಸಿಗೆ ಓಟು ಮಾಡಿಸುತ್ತಾಳೆ. ಸ್ವಾತಂತ್ರ್ಯಪೂರ್ವದ, ರಾಜಕೀಯದಿಂದಾಗಿ ಕಲುಷಿತಗೊಂಡ ಒಂದು ಹಳ್ಳಿಯ ಚಿತ್ರ ಈ ಕಥೆಯಲ್ಲಿ ಬಂದಿದೆ. 'ನಾಸೀಂಬೇಗಂ' ಕಥೆಯ ನಾಸೀಂ. ಶ್ರೀನಗರದ ಬಳಿಯ ತನ್ನ ಚಾ ಅಂಗಡಿಗೆ ಪಾಕಿಸ್ತಾನಿ ವಿದ್ರೋಹಿಗಳು ಬಂದಾಗ, ಅದನ್ನು ಅರಿತು ಚಾಕಚಕ್ಯತೆಯಿಂದ, ಅವರಿಗೆ ಅವರೇ ಕೊಟ್ಟಿದ್ದ ವಿಷವೂಡುತ್ತಾಳೆ. ಶತ್ರುಗಳಿಗೆ ಅನುಮಾನ ಬಾರದಿರಲೆಂದು ತಾನೂ ವಿಷಮಿಶ್ರಿತ ಚಾ (ಟೀ) ಕುಡಿದು ಮೃತಳಾಗುತ್ತಾಳೆ. ಅವಳ ದೇಶಪ್ರೇಮ ಆದರ್ಶಪ್ರಾಯವಾದುದು. ಇಂತಹುದೇ ಕಥೆ 'ಮುನ್ನಾನ ಅಮ್ಮ.' ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ್ದು ಈ ಕಥೆ. ಪಾಕಿಸ್ತಾನಿ-ಸೈನಿಕರ ಪೈಶಾಚಿಕ ದಾಳಿಯಲ್ಲಿ, ಸರ್ವಸ್ವವನ್ನೂ ಕಳೆದುಕೊಂಡು, ಭಾರತದ ಗಡಿಯತ್ತ ಬರುವಾಗ ಮತ್ತೆ ಪಾಕಿಸ್ತಾನಿ ಸೈನಿಕರ ಕಣ್ಣಿಗೆ ಬೀಳಬಾರದೆಂದು ಸೆಣಬಿನ ಹೊಲದ ನಡುವೆ ಅಡಗಿದ ನನ್ನೀಬೇಗಂ ತನ್ನ ಮಗು ಮುನ್ನಾನಿಂದ ಇತರರಿಗೆ ತೊಂದರೆಯಾಗದಿರಲಿ ಎಂದು ಮುನ್ನಾನನ್ನು ಕತ್ತು ಹಿಸುಕಿ ಕೊಂದ ಕರುಣಾಜನಕ ಕಥೆ. 'ಮುನ್ನಾನ ಅಮ್ಮ' ಈ ಕಥೆಗಳಲ್ಲಿ 'ಮೊಹರಂ ಪ್ರಕರಣ', 'ನಾಸೀಂಬೇಗಂ' 'ಗೋರಿ' ಮತ್ತು 'ಮುನ್ನಾನ ಅಮ್ಮ' ಬಹುಕಾಲ ನೆನಪಿನಲ್ಲಿ ಉಳಿಯುತ್ತದೆ. ಬಹುಶಃ

ಅಶ್ವತ್ಥರಿಗೆ ಹಿಂದೂಮುಸ್ಲಿಂ ಸಖ್ಯ, ಹೊಡೆದಾಟ, ಸ್ವಾತಂತ್ರ್ಯ ಚಳುವಳಿ ಮೊದಲಾದ ವಸ್ತುಗಳು ಪ್ರಿಯವಾಗಿರಬೇಕು. ಅವುಗಳನ್ನು ವಸ್ತುವಾಗುಳ್ಳ ಕಥೆಗಳನ್ನು ಅಷ್ಟೊಂದು ನಿರಾಯಾಸದಿಂದ ನಿರ್ವಹಿಸುತ್ತಾರೆ; ಹಾಗೆಯೇ ನಿರೂಪಿಸುತ್ತಾರೆ.

'ಸಹ ಪ್ರಯಾಣಿಕರು' (ಅ.ಜ.) ಮತ್ತು 'ಮುದುಕಿಯ ಮಗ' (ದೀ.) ಗಾಂಧಿಗೆ ಸಂಬಂಧಿಸಿದ ಕಥೆಗಳು. 'ಎರಡು ಎಕರೆ' ಭೂದಾನ ಚಳುವಳಿಗೆ ಸಂಬಂಧಿಸಿದ ಕಥೆ. ಈ ಕಥೆಯ ವಿರೂಪಾಕ್ಷಪ್ಪ ತನ್ನ ಸರ್ವಸ್ವವನ್ನೂ-ನಲವತ್ತೆಂಟು ಎಕರೆ ಭೂಮಿ-ವಿನೋಬರಿಗೆ ಅರ್ಪಿಸುವುದು ಆದರ್ಶದ ಅತಿರೇಕ ಎನಿಸುತ್ತದೆ. ಕಥೆಯೇನೊ ಚೆನ್ನಾಗಿದೆ. 'ಸಹ ಪ್ರಯಾಣಿಕರು' ಮತ್ತು 'ಮುದುಕಿಯ ಮಗ' ಕಥೆಗಳಲ್ಲಿ ಗಾಂಧಿಯೂ ಒಂದು ಪಾತ್ರ. 'ಸಹ ಪ್ರಯಾಣಿಕರು' ಕಥೆಯಲ್ಲಿ ಕಿಕ್ಕಿರಿದು ತುಂಬಿದ್ದ ಮೂರನೆಯ ತರಗತಿಯ ರೈಲುಗಾಡಿಯಲ್ಲಿ, ತನ್ನ ಪರಿಚಯವಿಲ್ಲದೆ, ತನ್ನೊಡನೆ ಒರಟಾಗಿ ವರ್ತಿಸಿದ್ದ ಬಿಹಾರದ ರೈತರೊಡನೆ ಗಾಂಧಿಯ ವರ್ತನೆ, 'ಮುದುಕಿಯ ಮಗ' ಕಥೆಯಲ್ಲಿ ತನ್ನ ಏಕಮಾತ್ರ ಪುತ್ರನಾದ ಬೀರೇಶನನ್ನು ಕಳೆದುಕೊಂಡ ಮುದುಕಿಯನ್ನು ಸಂತೈಸುವಲ್ಲಿ ಗಾಂಧಿಯ ವ್ಯಕ್ತಿತ್ವ ತುಂಬ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಸಾಮಾನ್ಯವಾಗಿ ಅಶ್ವತ್ಥರ ಕಥೆಗಳು ದೀರ್ಘವಾಗಿರುತ್ತವೆ. ಮೇಲಿನ ಎರಡು ಕಥೆಗಳು ಚಿಕ್ಕವಾಗಿದ್ದರೂ ಅತ್ಯಂತ ಪರಿಣಾಮಕಾರಿಯಾಗಿವೆ. ಬಹುಕಾಲ ನೆನಪಿನಲ್ಲಿ ಉಳಿಯುತ್ತವೆ.

ಸಣ್ಣಕಥೆ ಚಿಕ್ಕದಾಗಿರುತ್ತದೆ. ಸಣ್ಣ ಕಥೆಯಲ್ಲಿ ಕುಸುರಿ ಕೆಲಸವಿರುತ್ತದೆ ಮೊದಲಾದ ಸೂತ್ರಗಳನ್ನು ಅಶ್ವತ್ಥರ ಸಣ್ಣಕಥೆಗಳಿಗೆ ಅನ್ವಯಿಸಲಾಗುವುದಿಲ್ಲ. ಸಾಮಾನ್ಯವಾಗಿ ಅಶ್ವತ್ಥರ ಕಥೆಗಳು ದೀರ್ಘವಾಗಿರುತ್ತವೆ-ಇಪ್ಪತ್ತು ಇಪ್ಪತ್ತೈದು ಪುಟಗಳಿರುತ್ತವೆ. ಕೆಲವು ಚಿಕ್ಕ ಕಥೆಗಳಿದ್ದರೂ ಅಂತಹ ಕಥೆಗಳ ಸಂಖ್ಯೆ ವಿರಳ. ಅಲ್ಲದೆ ಅಂತಹ ಕಥೆಗಳು ಸಾಮಾನ್ಯವಾಗಿ ಜೋಕು ಅಥವಾ ಹರಟೆಗಳಾಗಿರುತ್ತವೆ. ಸಾಮಾನ್ಯವಾಗಿ ಅಶ್ವತ್ಥರ ಕಥೆಗಳ ವಸ್ತು ಹಿಂದೂಮುಸ್ಲಿಂ ಸಖ್ಯ ಇಲ್ಲವೆ ಹೊಡೆದಾಟ, ಸ್ವಾತಂತ್ರ್ಯ ಪೂರ್ವದ ಘಟನೆಗಳ ಚಿತ್ರಗಳು, ಮಧ್ಯಮವರ್ಗದ ಬ್ರಾಹ್ಮಣರ ಕೌಟುಂಬಿಕ ಕಥೆಗಳು, ವಿಶ್ವವಿದ್ಯಾಲಯದ ಪ್ರೊಫೆಸರರಿಗೆ ಸಂಬಂಧಿಸಿದ ಕಥೆಗಳು. ಇದಕ್ಕೆ ಹೊರತಾದ ವಸ್ತುಗಳನ್ನುಳ್ಳ ಕಥೆಗಳಿದ್ದರೂ ಅಂಥ ಕಥೆಗಳ ಸಂಖ್ಯೆ ವಿರಳ. ಕೆಲವು ಕಥೆಗಳ ಅಂತ್ಯ ಓದುಗರಿಗೆ ಮೊದಲೇ ಹೊಳೆದು ಕಥೆಯ ಸ್ವಾರಸ್ಯ ಹಾಳಾಗಿ ಹೋಗುತ್ತದೆ. ಕೆಲವು ಕಥೆಗಳಲ್ಲಿ ಯಾವುದೋ ಘಟನೆಯನ್ನು ಅಥವಾ ಭಾವನೆಯನ್ನು ಒತ್ತಿಹೇಳಲು ಅನೇಕ ದೃಷ್ಟಾಂತಗಳನ್ನು, ಉದಾಹರಣೆಗಳನ್ನು ಒಂದಾದಮೇಲೊಂದರಂತೆ ತರುತ್ತಾರೆ. ಅದು ಕಥೆಯ ಒಟ್ಟು ಪರಿಣಾಮಕ್ಕೆ ಧಕ್ಕೆಯನ್ನು ತರುತ್ತದೆ. ಅಲ್ಲದೆ ಕಥೆಯ ದೀರ್ಘತೆಗೂ ಕಾರಣವಾಗುತ್ತದೆ. ಇವರ ಕಥೆಗಳಲ್ಲಿ ನೋವಿಗಿಂತ ನಲಿವನ್ನೇ ಹೆಚ್ಚಾಗಿ ಕಾಣಬಹುದು.

ಒಂದು ರೀತಿಯ ಸಿದ್ಧಪಡಿಸಿದ ಭಾಷೆ (ಶೈಲಿ) ಇವರ ಕಥೆಗಳಲ್ಲಿ ಕಂಡುಬಂದು, ಇವರ ಹಲವಾರು ಕಥೆಗಳನ್ನು ಓದಿದಾಗ ಏಕತಾನತೆಯ ಅನುಭವವಾಗುತ್ತದೆ. ಕಥೆಗಳಲ್ಲಿ ಎಲ್ಲಿಯೂ ಅನಾವಶ್ಯಕವಾದ ಕ್ಲಿಷ್ಟತೆ ತಲೆಹಾಕುವುದಿಲ್ಲ. ಸಂಕೇತ ಪ್ರತಿಮೆ, ಧ್ವನಿ ಇವುಗಳ ಗೊಂದಲವಿಲ್ಲದೆ ಸುಲಲಿತವಾಗಿ, ನಿರರ್ಗಳವಾಗಿ, ಅತಿರಭಸವೂ ಇಲ್ಲದೆ, ನಿಧಾನವೂ ಇಲ್ಲದೆ ಇವರ ಕಥೆಗಳು ಸಾಗುತ್ತವೆ. ಮಾಸ್ತಿ, ಆನಂದ, ಕುವೆಂಪು ಅವರ ಕಥೆಗಳನ್ನು ಬಹುವಾಗಿ ನೆನಪಿಗೆ ತರುತ್ತವೆ ಇವರ ಕಥೆಗಳು.

ಶಿಥಿಲ ಶಿಲೆ

'ಶಿಥಿಲ ಶಿಲೆ' ಜಯತೀರ್ಥ ರಾಜ ಪುರೋಹಿತರ ಮೂರನೆಯ ಹನ್ನೆರಡು ಕಥೆಗಳ ಸಂಕಲನ. 'ಶಿಥಿಲ ಶಿಲೆ' ದೇವದಾಸಿಯರನ್ನು ಕುರಿತಾದ ಕಥೆ. ಕೇತವ್ವೆ ಅಂತಹ ಒಬ್ಬ ದೇವದಾಸಿ. ತನ್ನ ವೃತ್ತಿಯ ಇತರರಂತೆ ಇರದೆ ದೇವರಿಗೆ ಮಾತ್ರ ತನ್ನ ಭಕ್ತಿ, ದೇಹ ಮೀಸಲು ಎನ್ನುವ ಅವಳ ನಡವಳಿಕೆ ಮೆಚ್ಚುಗೆಗೆ ಅರ್ಹವಾದುದು. ಅಂತಹ ಕೇತವ್ವೆಗೆ ತೊಂದರೆಯಾದಾಗ ಊರಿನ ಸಮಸ್ತರು ಅವಳ ನೆರವಿಗೆ ಬರುತ್ತಾರೆ. ಅದು ಅಂದಿನ ಸಮಾಜದ ನೈತಿಕ ಹೊಣೆಗಾರಿಕೆಯನ್ನು ತೋರಿಸುತ್ತದೆ. ದೇವದಾಸಿ ಪದ್ಧತಿ ಹೇಗೆ ಪೂಜಾರಿಗಳ ಅವನತಿಗೂ ಕಾರಣವಾಯಿತು ಎಂಬುದನ್ನು ಇಲ್ಲಿ ಕಾಣಬಹುದು. ಹಜಾರೀ ಪ್ರಸಾದ ದ್ವಿವೇದಿ ಅವರ ಬಾಣಭಟ್ಟನ ಆತ್ಮಕಥೆಯ (ಹಿಂದಿ) ಕನ್ನಡಾನುವಾದವಾದ 'ಬಾಣ ಸಂದರ್ಶನ' ತುಂಬಾ ಚೆನ್ನಾಗಿ ಬಂದಿದೆ. ಬಾಣನ ಹಾಗೂ ಹರ್ಷನ ವ್ಯಕ್ತಿತ್ವಗಳು ಸ್ಫುಟವಾಗಿವೆ. 'ಕೊರಳು ಕತ್ತರಿಸಿದ ಬಿರುದು' ರಾಜರ ಅನುಗ್ರಹ ಹೇಗೆ ಕ್ಷಣಿಕವಾದುದು ಎಂಬುದನ್ನು ಚಿತ್ರಿಸುತ್ತದೆ. ಬೀದರೆಯ ಸುಲ್ತಾನ ಮಹಮದ್‌ಷಹನ ಆಸ್ಥಾನದಲ್ಲಿ ಸ್ವಸಾಮರ್ಥ್ಯದಿಂದ ಮೇಲೇರಿದ ಜನಾಬ್ ಮಹಮದ್ ಗವಾನ್ ಇತರರ ಕುಟಿಲತೆಗೆ ಬಲಿಯಾಗಿ ಹತನಾಗುತ್ತಾನೆ. 'ಮುದಗಲ್ಲಿನ ಮೇರಿಯಾ' ಮತ್ತು 'ಶ್ವೇತ ಸನ್ಯಾಸಿ' ವಿಜಯನಗರದ ಕಾಲದಲ್ಲಿ ಮತ್ತು ವಿಜಯನಗರಾನಂತರ ಭರತಖಂಡದಲ್ಲಿ ನಡೆದ ಕ್ರೈಸ್ತ ಮಿಶನರಿಗಳ ಚಟುವಟಿಕೆಯನ್ನು ಕುರಿತ ಕಥೆಗಳು. ಮುದಗಲ್ಲಿನ ನವಾಬನಾದ ದಿಲಾವರಖಾನ ಫ್ರಾನ್ಸಿಸ್-ಡಿ-ಅಲ್ಮೇಡಾ ಮತ್ತು ಅವನ ಸಹೋದರಿ ಡೋನಾ ಮೇರಿಯಾಗೆ ಬಂದಿದ್ದ ವಿಪತ್ತಿನಿಂದ ಪಾರುಮಾಡುವಲ್ಲಿ ತೋರುವ ರಾಜಕೀಯ ನೈಪುಣ್ಯತೆ ತಲೆದೂಗುವಂಥದು. ಈ ಕಥೆಯಲ್ಲಿ ಕಥೆಗೆ ತಕ್ಕಭಾಷೆ ಕಥೆಯ ಸೊಗಸನ್ನು ಇಮ್ಮಡಿಸಿದೆ. 'ಶ್ವೇತ ಸನ್ಯಾಸಿ'ಯ ಪಾದರ್ ರಾಬರ್ಟ್ ಡಿ ನೋಬಿಲಿ ಸುಮಾರು ೫೬ ವರ್ಷಗಳ ಕಾಲ ಬ್ರಾಹ್ಮಣನಂತೆ ಬದುಕಿದರೂ ಬ್ರಾಹ್ಮಣನಾಗಲಾರದೆಹೋದ ಕಥೆ. ವಿಶ್ವಾಮಿತ್ರ ಬ್ರಾಹ್ಮಣನಾದಂತೆ ತಾನುಯಾಕೆ ಬ್ರಾಹ್ಮಣನಾಗಲಿಲ್ಲ ಎಂಬ ಅವನ ಕೊರಗಿಗೆ ಸಿಂಗಾರಾಚಾರ್ಯರು

ಅತ್ಯಂತ ಸಮರ್ಪಕವಾದ ಉತ್ತರವನ್ನು ಕೊಡುತ್ತಾರೆ: ವಿಶ್ವಾಮಿತ್ರನ ಉದ್ದೇಶ ಬ್ರಾಹ್ಮಣನಾಗುವುದು ಇದ್ದಂತೆ ಈ ಶ್ವೇತ ಸನ್ಯಾಸಿಯ ಉದ್ದೇಶ ಬ್ರಾಹ್ಮಣ -ನಾಗುವುದಾಗಿರಲಿಲ್ಲ. ತನ್ನ ಆಚರಣೆಯಿಂದ ಹಿಂದೂಗಳನ್ನು ಕ್ರೈಸ್ತ ಮತಕ್ಕೆ ಆಕರ್ಷಿಸುವುದು ಅವನ ಉದ್ದೇಶವಾದ್ದರಿಂದ ಅವನು ವಿಫಲನಾಗಬೇಕಾಯಿತು. 'ಕುಲಗೌರವ' ಕಥೆ ವಿಜಯನಗರದ ಕಾಲದಲ್ಲಿ ಕರಾವಳಿ ಪ್ರದೇಶದಲ್ಲಿ ವಿದೇಶೀಯರಿಂದ ನಡೆಯುತ್ತಿದ್ದ ಹಾವಳಿಯ ಪ್ರಸಂಗ. ಆ ಕಾಲದಲ್ಲಿ ಬ್ರಾಹ್ಮಣರಿಗೆ ಮತ್ತು ಜಂಗಮರಿಗೆ ಸಮಾಜದ ಗೌರವ ಏಕೆ ಸಿಗುತ್ತಿತ್ತು ಎಂಬುದನ್ನು ಕಥೆಗಾರರು ವಸ್ತು ನಿಷ್ಠವಾಗಿ ನೋಡಿ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. 'ತಲಕಾಯಿಗುಬ್ಬಿ' ತೀರ ಇತ್ತೀಚಿನ ಕಥೆ, ಕೊಲೆಯ ಆಪಾದನೆಯಿಂದ ಅನ್ಯಾಯವಾಗಿ ಶಿರಚ್ಛೇದನ -ಕ್ಕೊಳಗಾದ ತುಳಜಾರಾಮನ ಕಥೆ. 'ಅಪಾಯದೊಂದಿಗೆ ಆಟ' ಕಥೆ ಗಡ್ಡದ ಪುಡ್ಡನಾಯಕ ಹುಚ್ಚು ಆನೆಯನ್ನು ಬರಿಗೈಯಿಂದಲೇ ಅಂಕೆಗೆ ತಂದ ಪ್ರಸಂಗವನ್ನು ಹೇಳುತ್ತದೆ. 'ಕಾಣದ ಕಾರಣ' ಯೋಗಪುರದ ಸರಾಫ್ ಯಾದಪ್ಪನಾಯಕ ಯಾದವಾಚಾರ್ಯರಾಗುವುದಕ್ಕೆ ಒದಗಿದ ಘಟನೆಗಳೇನು, ಹಿನ್ನೆಲೆಯೇನು ಎನ್ನುವುದನ್ನು ಸ್ವಾರಸ್ಯವಾಗಿ ನಿರೂಪಿಸಿದೆ. 'ಕುಣಿತ ನಿಂತಿತು', 'ನಾರಿಯೊ ಧಾರುಣಿಯೊ' ಮತ್ತು 'ಆಳಲಾಗದವ' ಕಥೆಗಳು ನೇರವಾಗಿ ರಾಜರಿಗೆ, ರಾಜಕೀಯಕ್ಕೆ ಸಂಬಂಧಿಸಿದ ಕಥೆಗಳು. ರಾಜಕಾರಣದಲ್ಲಿರುವ ದ್ವೇಷಾಸೂಯೆಗಳು, ಮೋಸ, ಕುಟಿಲತೆ ಎಲ್ಲವೂ ಈ ಕಥೆಗಳಲ್ಲಿ ಬರುತ್ತದೆ. 'ಕುಣಿತ ನಿಂತಿತು' ಕಥೆಯಲ್ಲಿ ತನ್ನ ವಿರುದ್ಧ ತಿರುಗಿಬಿದ್ದ ವಾಣ್ಣಿಯಾರ್ ಪಂಗಡದ ಶೂರ ಕಾಂದವರಾಯನನ್ನು ನಿಗ್ರಹಿಸಲು ವೈಯ್ಯಲಾರ್ ಪಂಗಡದ ನಾಯಕನನ್ನು ಕೃಷ್ಣದೇವರಾಯ ನೇಮಿಸುತ್ತಾನೆ. ಇವನಾದರೊ ಕಾಂದವರಾಯನ ಪ್ರೇಯಸಿ ಕುಪುಚಿಯಿಂದಲೇ ಕಾಂದವರಾಯ ಅಂತ್ಯವನ್ನು ಕಾಣುವಂತೆ ಮಾಡುತ್ತಾನೆ. 'ನಾರಿಯೊ ಧಾರುಣಿಯೊ' ಇನ್ನಷ್ಟು ಸಂಕೀರ್ಣವಾದ ಕಥೆ. 'ರಾಜಾ ಬಹುವಲ್ಲಭಾಃ' ಎಂಬ ಮಾತಿನ ಔಚಿತ್ಯ, ಅನಿವಾರ್ಯತೆಯನ್ನು ಇಲ್ಲಿ ಕಾಣಬಹುದು. ಇದು ವಿಜಯನಗರದ ನಂತರದ ಪಾಳೆಯಗಾರರ ಕಥೆ. ಪರಸ್ಪರ ನೆರವಾಗಲೆಂದು ರಕ್ತಸಂಬಂಧವನ್ನು ಬೆಳೆಸಿದರೂ ಸ್ವಾರ್ಥ ಎದುರಾದಾಗ ರಕ್ತ ಸಂಬಂಧವೂ ಗೌಣವಾಗುವುದನ್ನು ಇಲ್ಲಿ ಕಾಣಬಹುದು. ಈ ಕಥೆಯಲ್ಲಿ ಬರುವ ಹರಪುರಹಳ್ಳಿಯ ದಾದಯ್ಯನಿಗೆ ಬೀಳುವ ಕನಸು ಕಥೆಗೆ ಹೊಂದಿಕೆಯಾಗುವುದಿಲ್ಲ. ಹುಚ್ಚಂಗಿ ದುರ್ಗವನ್ನು ಚಿತ್ರದುರ್ಗದ ಕಾಮಗೇಟಿ ಚಿಕ್ಕಣ್ಣನಿಂದ ಹರಪುರ ಹಳ್ಳಿಯ ದಾದಯ್ಯ ಪಡೆಯಲು ಬೇರೇನಾದರೂ ಕಾರಣವನ್ನು ಕಥೆಗಾರರು ತಂದಿದ್ದರೆ ಚೆನ್ನಾಗಿರುತ್ತಿತ್ತು. 'ಆಳಲಾಗದವ' ಮೂರನೆಯ ಬಲ್ಲಾಳನ ಕೊನೆಯ ದಿನಗಳ ಕಥೆ. ವಿಸ್ತಾರವಾದ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳಲಾರದೆ ತೊಳಲಾಡುವ,

ವಯೋವೃದ್ಧನಾಗಿದ್ದರೂ ಯುವತಿ ಚಿಕ್ಕಿಯನ್ನು ಮದುವೆಯಾಗಿ ಅವಳನ್ನು ತೃಪ್ತಿಪಡಿಸಲಾರದ ಬಲ್ಲಾಳ ಚಿಕ್ಕಿಯ ಮಾತು ಕೇಳಿ ತನ್ನ ತಂಗಿಯ ವಂಶದ ಕುಡಿಗಳಿಂತಿದ್ದ ಲಕ್ಕಣ್ಣ, ವೀರಣ್ಣರನ್ನು ಶೂಲಕ್ಕೇರಿಸುತ್ತಾನೆ. ಕಥೆಯು ಚೆನ್ನಾಗಿದ್ದರೂ ಅಪ್ರತಿಮ ಸಾಹಸಿಯೂ ಹೊಯ್ಸಳ ಸಾಮ್ರಾಜ್ಯದ ಉಳಿವಿಗಾಗಿ ಕೊನೆಯವರೆಗೂ ಹೋರಾಡಿದ ಬಲ್ಲಾಳನ ಬಗೆಗೆ ಇಂಥ ಕಥೆಯನ್ನು ಓದಿದಾಗ ಪಿಚ್ಚೆನಿಸುತ್ತದೆ.

ಒಟ್ಟಿನಲ್ಲಿ ಈ ಹನ್ನೆರಡು ಕಥೆಗಳ ವಸ್ತು ಸಾಮಾನ್ಯವಾದುದಾಗಿರಲಿ ಗಂಭೀರವಾದುದಾಗಿರಲಿ ಅವುಗಳ ಹಿಂದೆ ಕಥೆಗಾರರ ಆಳವಾದ ಚಿಂತನೆ, ಕಲ್ಪನೆ ಇದೆ, ಕಥಾವಸ್ತುವಿನೊಡನೆ ತಾದಾತ್ಮ್ಯವಿದೆ. ಕಥಾವಸ್ತು ಎಂತಹುದೇ ಇದ್ದರೂ ವಸ್ತುನಿಷ್ಠವಾಗಿ ನೋಡುವ, ನಿರ್ವಹಿಸುವ ಕಥೆಗಾರರ ದೃಷ್ಟಿ ಸಾಮರ್ಥ್ಯವನ್ನು ಮೆಚ್ಚದಿರಲಾಗದು. ಎಲ್ಲ ಕಥೆಗಳಲ್ಲಿಯೂ ಐತಿಹಾಸಿಕ ಕಥೆಗಳಿಗೆ ತಕ್ಕ ಭಾಷೆ ಕಂಡುಬರುತ್ತದೆ. ಘಟನೆಯಿಂದ ಘಟನೆಗೆ ಮುಂದುವರಿದಂತೆ ಕಥೆ ತನ್ನ ಎಲ್ಲ ಸ್ತರಗಳಲ್ಲಿಯೂ ಪೂರ್ಣವಾಗಿ ತೆರೆದುಕೊಳ್ಳುತ್ತದೆ. ಅರ್ಥವತ್ತಾದ ಸಂಭಾಷಣೆಗಳು ಕಥೆಯ ತೂಕವನ್ನು ಹೆಚ್ಚಿಸಿವೆ. ಉದಾಹರಣೆಗಾಗಿ 'ಶಿಥಿಲ ಶಿಲೆ' ಕಥೆಯಲ್ಲಿ ಕೇತವ್ವೆಯನ್ನು ಪಡೆಯುವ ಬಯಕೆಯಿಂದ ಪೂಜಾರಿ "ಕೇತವ್ವೆ ಶುದ್ಧ ಶಿಲ್ಪದ ಮೂರ್ತಿ ಇರಬಹುದು, ಆದರೆ ಶಿಥಿಲ ಶಿಲೆ ಪೂಜೆಗೆ ಬಾರದು" ಎಂದು ಹೇಳುವಲ್ಲಿ, 'ಕುಣಿತ ನಿಂತಿತು' ಕಥೆಯಲ್ಲಿ ಕಾಂದವರಾಯ ".....ಮಲೆಯಾಳದ, ಆಳದ ಆಳದ ಹೆಣ್ಣು..... ಎಲ್ಲಿಂದ ತಂದೆ ಈ ಹಸಿರು ಕಣ್ಣು? ಆಂ?" ಎಂದು ಪ್ರಶ್ನಿಸಿದಾಗ ಕುಪುಚೀ "ಮಲೆಯಾಳದಾಚೆ.... ಸಾಗರಗಳಾಚೆ.... ತೆರೆಯೇರಿ ಬಂದ ಉಸಿರು.... ದಡಕಚ್ಚಿಯಾಯ್ತು ಹಸಿರು" ಎಂದು ತನ್ನ ಹುಟ್ಟಿನ ಮೂಲವನ್ನು ಹೇಳುವಲ್ಲಿ, 'ಆಳಲಾಗದವ' ಕಥೆಯಲ್ಲಿ "ಆ ದೇವರುಗಳ ಆಳಿಕೆ ಮುಗಿದಿರಬೇಕು ಪ್ರಭು, ಆಳಲಾಗದವರು" ಎಂಬ ಮಹಾರಾಣಿಯ ಮಾತಿನಲ್ಲಿ ಅದೇ ಕಥೆಯ "ಬೇಡ ಲಕ್ಕಣ್ಣ.... ನನ್ನ ಮಾತು ಕೇಳು.... ನೀನಿಂದು ಚೆನ್ನಾಗಿ ಊಟಮಾಡಬೇಕು. ನಾನೇ ಕಯ್ಯಾರ ಬಡಿಸುವೆ. ಊಟದಲ್ಲಿ ಮಾತುಬೇಡ....." ಎಂಬ ಚಿಕ್ಕಿಯ ಮಾತುಗಳಲ್ಲಿ ಬರಿಯ ವಾಚ್ಯಾರ್ಥಕ್ಕಿಂತ ಹೆಚ್ಚಿನ ಅರ್ಥವಿದೆ, ಧ್ವನಿಯಿದೆ. ಇಂತಹ ಉದಾಹರಣೆಗಳನ್ನು ಇನ್ನೂ ಕೆಡಬಹುದು. ಕ್ರಿ.ಶ. ಆರನೆಯ ಶತಮಾನದಿಂದ ಇತ್ತೀಚಿನವರೆಗಿನ ಘಟನೆಗಳು ಇಲ್ಲಿನ ಕಥೆಗಳಿಗೆ ವಸ್ತುವಾಗಿವೆ. ರಾಜರಾಣಿಯರ ಏಳುಬೀಳಿನ ಕಥೆ ಮಾತ್ರ ಐತಿಹಾಸಿಕ ಕಥೆ ಎಂಬ ಅಭಿಪ್ರಾಯ ಇಲ್ಲಿ ತಪ್ಪಾಗಿದೆ. "....ಆ ಕಾಲದ ನಮ್ಮ ನಾಡಿನ ವಿವಿಧ ಭಾಗಗಳಲ್ಲಿ ವಿವಿಧ ಕಾಲಗಳಲ್ಲಿ ಇದ್ದ ಸಾಮಾಜಿಕ, ಧಾರ್ಮಿಕ ಹಾಗು ರಾಜಕೀಯ ಜನಜೀವನದ ಪರಿಚಯವನ್ನು ಈ

ಕಥೆಗಳಲ್ಲಿ ಕಾಣಬಹುದು." ತಮ್ಮ ಕಥೆಗಳ ಮೂಲಕ '..... ಅತೀತವನ್ನು ಆಧುನಿಕದ ಹತ್ತಿರಕ್ಕೆ ತರುವ ಒಂದು ಪ್ರಯತ್ನದಲ್ಲಿ ಶ್ರೀ ಜಯತೀರ್ಥ ರಾಜ ಪುರೋಹಿತರು ಯಶಸ್ವಿಯಾಗಿದ್ದಾರೆ'. ನಮ್ಮ ಹಿಂದಿನ ಸಾಮಾಜಿಕ, ಧಾರ್ಮಿಕ ಹಾಗು ರಾಜಕೀಯ ಜೀವನವನ್ನು ಪರಿಚಯಿಸುವ ಕಥೆಗಳು ಜಯತೀರ್ಥ ರಾಜ ಪುರೋಹಿತರಿಂದ ಇನ್ನೂ ಹೆಚ್ಚಾಗಿ ಬರಲಿ ಎಂದು ಆಶಿಸೋಣ.

ಐತಿಹಾಸಿಕ ಕಥೆಗಳನ್ನು ಬರೆಯುವುದು ಕಷ್ಟದ ಕೆಲಸ. ಅದಕ್ಕೆ ಪ್ರತಿಭೆಯ ಜೊತೆಗೆ ವ್ಯುತ್ಪತ್ತಿಯೂ ಬೇಕು. ನೇರವಾಗಿ ಚರಿತ್ರೆಯನ್ನೇ ಓದುವುದು ಬಹಳ ಜನರಿಗೆ ಬೇಸರದ ಕಾರ್ಯ. ಹಾಗಾಗಿ ಚರಿತ್ರೆ ಕಥೆಗಳ ಮೂಲಕ ಬಂದರೆ ಸಿಹಿಯ ಲೇಪನ ಹೊಂದಿದ ಔಷಧಿಯ ಮಾತ್ರೆಗಳಂತೆ ಹಿತವಾಗಿರುವುದಲ್ಲದೆ ಚರಿತ್ರೆಯ ಬಗೆಗೆ ಅವರ ಜ್ಞಾನ ಹೆಚ್ಚಾಗಲು ಸಹಾಯಕವಾಗುತ್ತವೆ. ಐತಿಹಾಸಿಕ ಕಥಾಸಂಕಲನಗಳು ಹೆಚ್ಚುಹೆಚ್ಚಾಗಿ ಬರಲಿ ಎಂದು ಆಶಿಸೋಣ.

ಅಗ್ನಿಸಾಕ್ಷಿ

'ಅಗ್ನಿಸಾಕ್ಷಿ' ಅಶ್ವತ್ಥರ ಹದಿಮೂರು ಕಥೆಗಳ ಒಂಬತ್ತನೆಯ ಕಥಾ ಸಂಕಲನ. 'ಪುಣ್ಯಕ್ಷೇತ್ರ' ಕಥೆಯಲ್ಲಿ ಕಥಾನಾಯಕ ಕಾವೇರಿ ತೀರದ ಅಗ್ರಹಾರದಲ್ಲಿದ್ದ ಲೋಕೇಶ್ವರನ ದರ್ಶನ ಮಾಡಿಕೊಂಡು ಬರಲು ವಿಶ್ವನಾಥಯ್ಯನ ಒತ್ತಾಯದ ಮೇಲೆ ಹೋಗುತ್ತಾನೆ. ಹಿಂದೆ ಅದೇ ಲೋಕೇಶ್ವರನ ದೇವಾಲಯದಿಂದ ವಿಧರ್ಮೀಯನೆಂಬ ಕಾರಣದಿಂದ ಹೊರದೂಡಲ್ಪಟ್ಟಿದ್ದ ಜರ್ಮನಿಯ ಹಿಂದೂ ಅಭಿಮಾನಿಯ ಪ್ರಸಂಗವನ್ನು ಕೇಳಿ ದೇವರ ದರ್ಶನ ಮಾಡದೆ ಹಿಂದಿರುಗುತ್ತಾನೆ. "ಊಟ ಮಾಡುವಾಗ ಬಡಿಸಿದ ಶಾಲ್ಯಾನ್ನ ಪ್ರಸಾದದಲ್ಲಿ ಬತ್ತ ಕಲ್ಲುಗಳೇ ಹೆಚ್ಚಾಗಿದ್ದುವು; ಸಿಹಿ ಇಲ್ಲ ; ಅಲ್ಲಲ್ಲಿ ಅಷ್ಟು ಬಣ್ಣ ಮಾತ್ರ, ದ್ರಾಕ್ಷಿ ಹುಡುಕಿದರೂ ಇಲ್ಲ" ಎಂಬ ವಿವರಣೆ ಬಾಹ್ಯಾಚರಣೆಗೆ ವಿಶೇಷ ಮಹತ್ವವನ್ನು ಕೊಟ್ಟು ಹುಳು ತಿಂದ ತೊಲೆಯಂತಿರುವ ಹಿಂದೂ ಧರ್ಮಕ್ಕೆ ಹಿಡಿದ ಕನ್ನಡಿಯಂತಿದೆ. 'ದರ್ಶನ' -ಕಥೆಯಲ್ಲಿ ಸಿದ್ದಾರ್ಥ ಉರುವೇಲದ ಮಹಾದೇವನ ದರ್ಶನಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿ ಅಪಾರವಾದ ಅಧ್ಯಾತ್ಮ ಸಿದ್ಧತೆಯನ್ನು ಪಡೆದುಕೊಂಡು ಉರುವೇಲಕ್ಕೆ ಬರುತ್ತಾನೆ. ಮಹಾದೇವನ ದರ್ಶನದ ಆತುರದಲ್ಲಿ ಬೇಡನೊಬ್ಬನ ಮಗುವಿನ ಕಾಲ್ತುಳಿಯುತ್ತಾನೆ. "ಇದೇನು ಇಷ್ಟೊಂದು ಆತುರ-ಅಸಹ್ಯ ಆತುರ! ದರ್ಶನವೇ ಅಂದರೂ ಇಷ್ಟು ವಿಪರೀತ ಆಸೆಯೆ?" ಎಂಬ ಬೇಡನ ಮಾತು ಸಿದ್ದಾರ್ಥನ ಕಣ್ಣು ತೆರೆಸುತ್ತದೆ. ಎಲ್ಲ ಆಸೆಗಳನ್ನೂ ತ್ಯಜಿಸಿದ ತನಗೆ ದೇವನ ದರ್ಶನದ ಆಸೆಯೇಕೆ ಎಂದುಕೊಳ್ಳುತ್ತಾನೆ. ಪೂರ್ಣ ಜ್ಞಾನೋದಯವಾಗಿ ಆ ಆನಂದದ ಭಾರದಲ್ಲಿ ದೇವರ ಅಭಿಷೇಕಕ್ಕಾಗಿ ತಂದಿದ್ದ ತೀರ್ಥ ಬೇಡನ ಕಾಲಿನಮೇಲೆ

ಚೆಲ್ಲುತ್ತದೆ. ಹೂವುಗಳು ಬೀಳುತ್ತವೆ. ಪುಣ್ಯವಂತರಿಗೆ ಉರುವೇಲದಲ್ಲಿ ಸಶರೀರನಾಗಿ ದೇವ ಕಾಣಿಸಿಕೊಳ್ಳುತ್ತಾನೆ ಎಂಬ ಚೆನ್ನನ ಮಾತು ಸತ್ಯವಾಯಿತ? ಸಿದ್ಧಾರ್ಥನ ಶ್ರಮ ಪೂರ್ಣ ಸಾಧನೆಯನ್ನು ಪರಿಣಾಮಕಾರಿಯಾಗಿ ಕಥೆ ನಿರೂಪಿಸುತ್ತದೆ. 'ರಾಜಮಾತೆ' ಕಥೆಯಲ್ಲಿ ಕುರುಕ್ಷೇತ್ರ ಯುದ್ಧಾನಂತರ ಪಾಂಡವರು ಸುಖವನ್ನೇ ಕಾಣದ ತಮ್ಮ ತಾಯಿ ಕುಂತಿಯ ಸೇವೆಯನ್ನು ಹೇಗೆ ಮಾಡಬೇಕೆಂದು ಯೋಜನೆ ಹಾಕಿಕೊಳ್ಳುತ್ತಾರೆ. ಧೃತರಾಷ್ಟ್ರ ಮತ್ತು ಗಾಂಧಾರಿ ವನವಾಸಕ್ಕೆ ಹೊರಟಾಗ ಕುಂತಿಯೂ ಹೊರಡುತ್ತಾಳೆ. ಪಾಂಡವರಿಗೆ ಇದು ಅನಿರೀಕ್ಷಿತ ಆಘಾತ. ತಾಯಿಯನ್ನು ತಡೆಯಲು ಮಾಡಿದ ಅವರ ಪ್ರಯತ್ನವೆಲ್ಲವೂ ವ್ಯರ್ಥವಾಗುತ್ತದೆ. ತನ್ನ ಮಕ್ಕಳನ್ನು ಸಂತೈಸುವ ಕುಂತಿಯ ಮಾತುಗಳಲ್ಲಿ ಧರ್ಮಸೂಕ್ಷ್ಮತೆ ಇರುವಂತೆಯೇ ರಾಜಮಾತೆಯ ಅನುಲ್ಲಂಘನೀಯ ಆಜ್ಞೆಯೂ ಇರುತ್ತದೆ. ಕುಂತಿಯೂ ತನಗಿನ್ನ ಹಿರಿಯರಾದ ಧೃತರಾಷ್ಟ್ರ ಮತ್ತು ಗಾಂಧಾರಿಯರ ಸೇವೆಗೆಂದೇ ಹೊರಟಿರುವುದು ವಿಧಿಯ ಅಣಕವಾಗುತ್ತದೆ. 'ಕೋಣ' ಕಥೆ ಕೋಣವೊಂದರ ಆತ್ಮವೃತ್ತ. 'ಭಂಗಿ' ಕಥೆಯಲ್ಲಿ ಕಪಟ ಸಾಧುಗಳ ಸುತ್ತ ಸ್ವಾರ್ಥ ಸಾಧಕರೂ, ಮೋಸಗಾರರೂ ಲಂಚಕೋರರೂ ಹೇಗೆ ನೆರೆಯುತ್ತಾರೆ ಎಂಬುದರ ಸುದೀರ್ಘವಾದ ನಿರೂಪಣೆಯಿದೆ. ಕಥೆಯ ದೀರ್ಘತೆಯೇ ಅವರ ಪರಿಣಾಮ ರಾಹಿತ್ಯಕ್ಕೆ ಎಡೆಕೊಟ್ಟಿದೆ. 'ಚನಾಚಟ್‌ಪಟೆ' ಗಾಂಧಿಯ ಹತ್ಯೆಯ ದಿನದ ಒಂದು ಕಥೆ. ಲೋಕವೆಲ್ಲವೂ ಗಾಂಧಿಯ ಮರಣದಿಂದಾದ ದುಃಖದಲ್ಲಿ ಮುಳುಗಿದ್ದರೆ 'ಚನಾ ಚಟ್‌ಪಟೆ' ಮಾರುವ ಗರೀಬನಿಗೆ ತನ್ನ ಕೂಳಿನ ಚಿಂತೆ. ಈ ಕಥೆಯ ಗಮನಿಸಬೇಕಾದ ಅಂಶವೆಂದರೆ ಅದರ ಭಾಷೆ. ದೀನ ದಲಿತೋದ್ಧಾರ, ಸಮಾಜ ಸೇವೆಗಳ ಬಗ್ಗೆ ಬಂಡಿಗಟ್ಟಲೆ ಮಾತನಾಡುವ ಸಾಮಾಜಿಕರನ್ನು ವಿಡಂಬಿಸುವ 'ರಾಜಕುಮಾರ' ಕಥೆ ತನ್ನ ದೀರ್ಘತೆಯಿಂದಾಗಿ, ವಿಡಂಬನೆಯ ಮೇಲಿನ ಅತಿಯಾದ ಒತ್ತಿನಿಂದಾಗಿ ಸೋಲುತ್ತದೆ. ತನಗೆ ಒಂದು ಪೈಸವನ್ನೂ ಕೊಡದ ಹೆಂಗಸಿನ ಕೂಸಿಗೆ ಅಂದಿನ ತನ್ನ ಗಳಿಕೆಯಾದ ಎರಡು ಪೈಸೆಯಲ್ಲಿ ಕೊಂಡಿದ್ದ ಕಡಲೆಯನ್ನು ಕೊಡಲು ಮುಂದಾದ ದೊಡ್ಡನನ್ನು ಕಂಡಾಗ ಯಾರು ರಾಜಕುಮಾರ ಎಂಬ ಪ್ರಶ್ನೆ ತನಗೆ ತಾನೆ ಮನಸ್ಸಿನ ಮೇಲೆ ಬಂದು ಹೋಗುತ್ತದೆ. 'ಅಪರಾಧ' ಕಥೆ ಅಪರಾಧವೆಸಗದ ಆದರೆ ಸಾಕ್ಷ್ಯಾಧಾರಗಳಿಂದ ಅಪರಾಧಿಯೆಂದು, ತೀರ್ಮಾನಿಸಲ್ಪಟ್ಟು ಗಲ್ಲಿಗೇರಿಸಲ್ಪಟ್ಟ ಪಾಪಣ್ಣನ ಕಥೆ. ಆರೋಪಿ ಪಾಪಣ್ಣನ ಮಾತುಗಳಲ್ಲೇ ಕಥೆಯಿದೆ. ಆದ್ದರಿಂದಲೇ ಕಥೆಯಲ್ಲಿ ಗ್ರಾಮ್ಯ ಭಾಷೆಯಿದೆ. ಆದರೆ ಆ ಭಾಷೆಯ ಸೊಗಡು ಬನಿಯಿಲ್ಲ. 'ಪರಮ ನೀಚ' ಕಥೆಯ ಭೂತನ ಕೆರೆಯ ವೀರಭದ್ರ ಇದೇ ಲೇಖಕರ 'ಹುಲಿಸಿದ್ಧ' ಕಥೆಯ ಹುಲಿಸಿದ್ಧನ ಗುಂಪಿನಲ್ಲಿದ್ದವನು. ತನ್ನನ್ನು ಪ್ರತಿಭಟಿಸಿದವರಿಗೆ ವೀರಭದ್ರನೇ! ಪ್ರೀತಿ ವಿಶ್ವಾಸ ಆತ್ಮೀಯತೆಗಳಿಗೆ ತನ್ನನ್ನೇ

ತರುವ ಗುಣವಂತ. ಆಕಾರ ಅಕರಾಳ ವಿಕರಾಳವಾದರೂ ಮನಸ್ಸು ಬೆಣ್ಣೆಯಂಥದು. 'ಡಾಕ್ಟರ ಕಥೆ' ಕರ್ತವ್ಯದಲ್ಲಿ ನಿಷ್ಠೆ ಮತ್ತು ಮಾನವೀಯತೆ ಎಂದೂ ವ್ಯರ್ಥವಲ್ಲ ಎಂದು ಸಾರುವ ಕಥೆ. "ಅಂತು ಕರ್ಮದ ಪಾಂಗು ಮರಿಗೆ ಮರಿ" ಎಂಬ ಕುವೆಂಪು ಅವರ ನುಡಿ ನೆನಪಿಗೆ ಬರುತ್ತದೆ. ಡಾ|| ಚಂದ್ರಶೇಖರಯ್ಯನವರ ಒಂದು ಒಳ್ಳೆಯ ಕಾರ್ಯ-ಮತ್ತೊಬ್ಬ ನಿಸ್ಪೃಹ ಡಾಕ್ಟರ ಸೃಷ್ಟಿಗೆ ಕಾರಣವಾಗುತ್ತದೆ. ಕಥೆ ಮತ್ತು ಸ್ವಾನುಭವ ಒಂದರೊಳಗೊಂದು ಮೇಳಗೊಂಡ ಕಥೆಯ ನಿರೂಪಣೆ ಸೊಗಸಾದುದು. 'ಪ್ರತೀಕಾರ' ಕಥೆಯಲ್ಲಿ ಅಬ್ರಹಂ ಲಿಂಕನ್ನನ ಉದಾತ್ತ ಗುಣದ ಚಿತ್ರಣವಿದೆ. ತಾನು ಯಾರಿಂದ ಅಪಮಾನಿತನಾಗಿದ್ದನೋ ಅವನು ಸಮರ್ಥ ದಕ್ಷ ಎಂದು ತಿಳಿದು ವೈಯಕ್ತಿಕ ಅಪಮಾನವನ್ನು ಬದಿಗಿಟ್ಟು ಅವನನ್ನು ತನ್ನ ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳುತ್ತಾನೆ. ಇದು ತನ್ನ ಶತ್ರುವಿನ ಮೇಲೆ ಅವನು ತೀರಿಸಿದ ಪ್ರತಿಕಾರದ ವೈಖರಿ. 'ಅಪರಾಧ', 'ಪರಮ ನೀಚ', 'ಡಾಕ್ಟರ ಕಥೆ' ಮತ್ತು 'ಪ್ರತೀಕಾರ' ಕಥೆಗಳಲ್ಲಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಅವು ವ್ಯರ್ಥವಲ್ಲ ಎಂದು ಸಾರುವ ಕಥೆಗಾರರ ಪ್ರಯತ್ನ ಯಶಸ್ವಿಯಾಗಿದೆ. ಕೀಳು ಜಾತಿಯಲ್ಲಿ ಹುಟ್ಟಿದರೂ ಗುಣ ನಡತೆಯಲ್ಲಿ ಯಾವ ಮೇಲು ಜಾತಿಯವರಿಗೂ ಕಡಿಮೆಯಿಲ್ಲದಂತೆ ಬದುಕಿದ ಕರ್ಮಯೋಗಿ ಹೊನ್ನವ್ವಳ ಕಥೆಯೇ 'ಹೊನ್ನವ್ವ.' ಅಶ್ವತ್ಥರ ಇತರ ಕಥೆಗಳಲ್ಲಿ ಕಂಡುಬರುವ ಅತಿಯಾದ ವಿವರ ಈ ಕಥೆಯಲ್ಲಿ ಇಲ್ಲ. ಕಣ್ಣು ಪಟ್ಟಿ ಕಟ್ಟಿಕೊಂಡ ಕುದುರೆಯಂತೆ ಕಥೆ ನೇರವಾಗಿ ಸಾಗುತ್ತದೆ. 'ಅಗ್ನಿಸಾಕ್ಷಿ' ಕೌಟುಂಬಿಕ ಕಥೆ. "ಕಟ್ಟಿಕೊಂಡವಳು ಕಡೆ ತನಕ ಇಟ್ಟುಕೊಂಡವಳು ಇರೋ ತನಕ" ಎಂಬ ಗಾದೆ ಮಾತು ಇಲ್ಲಿ ಸುಳ್ಳಾಗುತ್ತದೆ. ಗಂಡ ಗೋಪಾಲ ಸುಟ್ಟು ಭಸ್ಮವಾದಾಗ ಅಗ್ನಿಸಾಕ್ಷಿಯಾಗಿ ಕೈಹಿಡಿದ ಸತ್ಯಭಾಮ ಎದೆಯೊಡೆಯುವಂತೆ ರೋದಿಸುತ್ತಿದ್ದರೆ ಗೋಪಾಲನ ಅನಧಿಕೃತ ಪ್ರೇಯಸಿ ರಂಗನಾಯಕಿ ಸುಟ್ಟು ಕರಕಲಾದ ಅವನ ದೇಹವನ್ನು ನೋಡಿ ಎದೆಯೊಡೆದು ಸಾಯುತ್ತಾಳೆ. ಇಲ್ಲಿ ಯಾರ ಪ್ರೀತಿ ಹೆಚ್ಚಿನದು ಎಂಬುದನ್ನು ಓದುಗರ ನಿರ್ಣಯಕ್ಕೇ ಬಿಟ್ಟಿದ್ದಾರೆ.

ಅಶ್ವತ್ಥರ ಹಿಂದಿನ ಕಥಾಸಂಕಲನಗಳೊಡನೆ ಈ ಕಥಾಸಂಕಲನದ ಕಥೆಗಳನ್ನು ಹೋಲಿಸಿದಾಗ ಅಶ್ವತ್ಥರು ಬೆಳೆದಿದ್ದಾರೆ ಎಂದಾಗಲೀ, ಬೆಳೆಯುವ ಸೂಚನೆ ಇದೆ ಎಂದಾಗಲೀ ಅನ್ನಿಸುವುದಿಲ್ಲ. ಅವರ ಈ ವಯೋಮಾನದಲ್ಲಿ ಅದನ್ನು ನಿರೀಕ್ಷಿಸುವುದೂ ತಪ್ಪು. ಅವರ ಹಿಂದಿನ ಕಥೆಗಳಲ್ಲಿಯಂತೆಯೇ ತಮ್ಮದೇ ಆದ ಸಿದ್ಧಶೈಲಿಯಲ್ಲಿ ತಮ್ಮದೇ ಆದ ನಿರೂಪಣಾ ವಿಧಾನದಿಂದ ಕಥೆಗಳನ್ನು ಹೇಳಿಕೊಂಡು ಹೋಗುತ್ತಾರೆ. ಸಾಮಾನ್ಯವಾಗಿ ದೀರ್ಘವಾಗಿರುವ ಅವರ ಕಥೆಗಳಲ್ಲಿ ಕೆಲವು ಬೇಸರ ತರಿಸಿದರೂ

ಅಂತಹ ಕಥೆಗಳು ಕಡಿಮೆ. ಕೆಲವು ಆಸಕ್ತಿಯನ್ನು ಸೆರೆಹಿಡಿದು ಅಂತಃಕರಣವನ್ನು ಕಲಕದೆ ಇಲ್ಲ : ಹೆಂಗರುಳನ್ನು ಮಿಡಿಯದೆ ಇಲ್ಲ. ಈ ಸಂಕಲನದ ಕೋಣ, ಭಂಗಿ ಮೊದಲಾದ ಮೂರು ನಾಲ್ಕು ಕಥೆಗಳನ್ನು ಬಿಟ್ಟರೆ ಉಳಿದವೆಲ್ಲವೂ ಸಾಂಪ್ರದಾಯಿಕ ಶೈಲಿಯ ಉತ್ತಮ ಕಥೆಗಳೆ.

ತುಣುಕುಗಳು

ಜಿ.ಎಸ್. ಸದಾಶಿವ ಅವರ '**ತುಣುಕುಗಳು**' ಎಂಟು ಕಥೆಗಳ ಮತ್ತು ತುಣುಕುಗಳು ಎಂದು ಕರೆದಿರುವ ನಾಲ್ಕು ಪುಟಾಣಿ ಕಥೆಗಳ ಸಂಕಲನ. 'ಪುಟ್ಟಿ' ಎಂಬ ಒಂದು ಕಥೆಯನ್ನು ಹೊರತಾಗಿ ಉಳಿದೆಲ್ಲ ಕಥೆಗಳೂ ನಗರ ಜೀವನಕ್ಕೆ ಸಂಬಂಧಿಸಿದ ಕಥೆಗಳು. ಆದರೆ ಅದರಲ್ಲಿಯೂ ವೈವಿಧ್ಯವಿದೆ. 'ಸಹಜ ಹೊರದಾರಿ', 'ಕಾರಣ' 'ತುಣುಕುಗಳು', 'ಹೊರತು' ಮತ್ತು 'ಭೇಟಿ' ಈ ಕಥೆಗಳಲ್ಲಿ ಹೆಚ್ಚೂ ಕಡಿಮೆ ವಸ್ತುವಿನ ಸಾಮ್ಯ ಕಂಡುಬರುತ್ತದೆ. 'ಸಹಜ ಹೊರದಾರಿ'ಯಲ್ಲಿ ನಗರ ಜೀವನದ ವೈವಿಧ್ಯ ರಹಿತ ಜೀವನದ ಅಡೆತನದಿಂದ ಬೇಸರ ಹೊಂದಿ ಅದರಿಂದ ಪಾರಾಗಲು ಪ್ರಯತ್ನಿಸುವ ಯುವಕನೊಬ್ಬನ ಚಡಪಡಿಕೆಯ ಚಿತ್ರಣವಿದೆ. 'ಕಾರಣ' ಕಥೆಯಲ್ಲಿ ಮದುವೆಯಿಂದ ವ್ಯಕ್ತಿಯೊಬ್ಬನ ಜೀವನದಲ್ಲಿ ಆಗುವ ಬದಲಾವಣೆಗಳನ್ನು ಬಹು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ನಾರಾಯಣ ಮದುವೆಯಾದ ಮೇಲೂ ಹಿಂದಿನ ಗಾಢವಾದ ಸ್ನೇಹವನ್ನು ವಿಶ್ವನಾಥನ ಬಗ್ಗೆ ತೋರಿಸುವುದು ಸರೋಜಳಿಗೆ ಹಿಡಿಸುವುದಿಲ್ಲ. ಸರೋಜಳಿಗೇಕೆ ವಿಶ್ವನಾಥನೇ ಸ್ನೇಹದ ಮುಖವಾಡ ಹಾಕಿರುತ್ತಾನೆ. ನಾರಾಯಣನೊಡನೆ ಹಿಂದಿನ ಸ್ನೇಹದ ತೀವ್ರತೆಯಿಲ್ಲದಿದ್ದರೂ, ಇನ್ನೊಬ್ಬನ ಬದುಕಿನ ಅಶಾಂತಿಗೆ ಕಾರಣನಾದ ವಿಶ್ವ ತಾನಾಗಿಯೆ ಬೆಂಗಳೂರನ್ನು ಬಿಟ್ಟು ಬೊಂಬಾಯಿಗೆ ಹೋಗುತ್ತಾನೆ. ಬಹುಶಃ ಆ ಸಮಸ್ಯೆಗೆ ಇದು ಸರಳ ಪರಿಹಾರದಂತೆ ಕಾಣುತ್ತದೆ. ಈ ಕಥೆಯಲ್ಲಿ ಮಳೆ ನೆನಪಿನ ಸುರಳಿ ಬಿಚ್ಚಿಕೊಳ್ಳುವುದಕ್ಕೆ ಸಂಕೇತವಾಗಿ ಬರುತ್ತದೆ. 'ತುಣುಕುಗಳು' ಮತ್ತು 'ಭೇಟಿ'ಯ ಕಥಾವಸ್ತು ಒಂದೇ ಎಂದು ಹೇಳಬಹುದು. 'ತುಣುಕುಗಳು' ಕಥೆಯಲ್ಲಿ ಕಥಾನಾಯಕನಿಗೆ ಪ್ರೀತಿ, ಪ್ರೇಮ ಇವುಗಳ ಬಗೆಗೆ ನಂಬುಗೆ ಇಲ್ಲ. ಆದ್ದರಿಂದ ಮದುವೆ ಮುಂತಾದುವನ್ನು ಒಲ್ಲ. ಆದರೆ ಮದುವೆಯಾದ ಪಮ್ಮಿಯ ಅಂಗಸುಖವನ್ನು ತ್ಯಜಿಸಲಾರ. ಇದು ವೈಚಾರಿಕವಾದ ನಿಲುವಿಗಿಂತ ಹೆಚ್ಚಾಗಿ ಪಲಾಯನವಾದಂತೆ ಕಾಣುತ್ತದೆ. 'ಭೇಟಿ' ಕಥೆಯ ಕಥಾನಾಯಕ ಮತ್ತು ನಾಯಕಿ ಯಾವುದೋ ಕಾರಣಗಳಿಂದ ಮದುವೆಯಾಗಲಾರದೆ ಬೇರೆ ಬೇರೆಯವರನ್ನು ಮದುವೆಯಾಗಿ ಎಂಟು ಹತ್ತು ವರ್ಷಗಳು ಕಳೆದಿದ್ದರೂ ಮತ್ತೆ ಪರಸ್ಪರರಲ್ಲಿ ಆಸಕ್ತರಾಗಿ ಸುಳ್ಳು ಬದುಕನ್ನು ಬದುಕುತ್ತಾರೆ. 'ತುಣುಕುಗಳು' ಕಥೆಗಿನ್ನ 'ಭೇಟಿ' ತುಂಬಾ ಪರಿಣಾಮಕಾರಿಯಾಗಿದೆ. 'ಹೊರತು' ತಾನೊಲಿಯದ ಹೆಣ್ಣಿನ ಜೊತೆ ಬದುಕಬೇಕಾಗಿ

ಬಂದ ಗೋವಿಂದನ ಕಥೆ. 'ಬಹುಶಃ ಗೋವಿಂದನ ತಿರಸ್ಕಾರದಿಂದಾಗಿ ಯಾವುದೇ ದೈಹಿಕ ನ್ಯೂನತೆಗಳು ಇಲ್ಲದಿದ್ದರೂ ಖಾಯಿಲೆ ಮಲಗಿರುತ್ತಾಳೆ ಶಾರದೆ, ತಿಂಗಳು ತಿಂಗಳುಗಟ್ಟಲೆ, ಈ ಕತೆಯಲ್ಲಿ ಬರುವ ಜಿರಳೆ, ನೋಡಿದರೆ ಅಸಹ್ಯ ಉಂಟಾಗುವಂತಿರುವ ಶಾರದೆಯ ಪ್ರತೀಕವೋ ಎನಿಸುತ್ತದೆ. ಕಥೆಯ ಕೊನೆ ಅನಿರೀಕ್ಷಿತವಾಗಿ ಮುಕ್ತಾಯವಾಗಿ ಗೋವಿಂದನ ಗಂಡಸುತನವನ್ನೇ ಪ್ರಶ್ನಿಸುತ್ತದೆ. 'ಹ್ಯಾಂಗೋವರ್' ಕಥೆಯ ಮುಂದುವರಿದ ಭಾಗವೇ 'ಸೋಮುವಿನ ಪ್ರಣಯ ಪ್ರಸಂಗ.' 'ಹ್ಯಾಂಗೋವರ್' ಕಥೆಯಲ್ಲಿ ತಂದೆಯನ್ನು ವಿರೋಧಿಸಿ ಹಳ್ಳಿಯಿಂದ ಬಂದು ವಿದ್ಯಾವಂತನಾದ ಸೋಮು ಕೆಲಸ ಸಿಕ್ಕಿದ ಕೂಡಲೇ ತನ್ನ ಹಿಂದಿನ ಬಡತನದ ಜೀವನವನ್ನು ಮರೆತು ಖುಷಿಯಿಂದಿರಲು ಸುಖವನ್ನು ಅರಸಿಕೊಂಡು ಹೊರಡುತ್ತಾನೆ. ತಂದೆಯೊಡನೆ ಯಾವ ಸಂಬಂಧವೂ ಬೇಡ ಎಂದರೂ ಆ ಸಂಬಂಧವನ್ನು ಬಿಡಲಾಗದೆ ಕಥೆ ಸ್ವಲ್ಪ ಸಂಕೀರ್ಣವಾಗಿದೆ. ಇದೇ ಸೋಮು, 'ಸೋಮುವಿನ ಪ್ರಣಯ ಪ್ರಸಂಗ'ದಲ್ಲಿ ಮದುವೆಯೇ ಬೇಡ ಎನ್ನುತ್ತಿದ್ದವನೂ, ಅಪ್ಪನ ಬಲವಂತಕ್ಕೆ ಹೆಣ್ಣು ನೋಡಲು ಹೋಗಿ ಪ್ರಥಮ ನೋಟದಲ್ಲಿ ಅವಳಲ್ಲಿ ಅನುರಕ್ತನಾಗಿ, ಅನಂತರ ತನ್ನ ಅಪ್ಪ ಅವಳು ಬಸುರಿ ಬೇಡ ಎಂದು ಹೇಳಿದಾಗ ಅದನ್ನು ನಂಬಲೂ, ನಂಬದಿರಲೂ ಆಗದೆ ಕೊನೆಗೆ "ಬೇರೆ ಮಗು ನಂದೂ ಅಂದ್ಕೊಳ್ಳೋದು ಕಷ್ಟ ಆಗಬಹುದು. ಆದರೆ ಕಾವೇರಿ ನನ್ನವಳು" ಎಂಬ ತೀರ್ಮಾನಕ್ಕೆ ಬಂದು ಎಲ್ಲರಿಗೂ ಆಶ್ಚರ್ಯವನ್ನು ಉಂಟುಮಾಡುತ್ತಾನೆ. ಈ ಎರಡು ಕಥೆಗಳೂ ಸ್ವಾರಸ್ಯವಾಗಿ ನಿರೂಪಿಸಲ್ಪಟ್ಟಿವೆ. ಈ ಸಂಕಲನದಲ್ಲಿ ಉಳಿದ ಕಥೆಗಳಿಂದ ಹೊರತಾಗಿ ನಿಲ್ಲುವ ಕಥೆ ಎಂದರೆ 'ಪುಟ್ಟಿ'. ಪುಟ್ಟಿಯ ಬಾಳಿನ ದುರಂತವನ್ನು ಈ ಕಥೆಯ ನಾಯಕನ ಪ್ರಜ್ಞೆಯ ಮುಖಾಂತರ ಚಿತ್ರಿಸಿದೆ. ಬಸವನ ಹೆಂಡತಿ ಪುಟ್ಟಿ ತನ್ನ ಮೈದುನನ ಜೊತೆ ಸಂಬಂಧ ಹೊಂದಿರುವುದು ಮತ್ತು ಕಂಟ್ರಾಕ್ಟರ್ ತಿಮ್ಮಯ್ಯ ಮತ್ತು ಗಣೇಶರಾಯರ ಹೆಂಡತಿ ಕಾವೇರಿಯ ಸಂಬಂಧಕ್ಕೂ ಸಾದೃಶ್ಯವಿದ್ದರೂ ಜನ ಅದನ್ನು ನೋಡುವ ದೃಷ್ಟಿಯಲ್ಲಿ ವ್ಯತ್ಯಾಸವಿದೆ. ಹಣ ಸಮಾಜದಲ್ಲಿ ಜನರ ಸ್ಥಾನಮಾನವನ್ನು ನಿರ್ಧರಿಸುತ್ತದೆ. "ನಾನು ಹಲಸಿನ ಮರಕ್ಕೆ ನೇಣು ಹಾಕ್ಕೊಳ್ಳೋದೇ ಸರಿ" ಎನ್ನುತ್ತಿದ್ದ ಪುಟ್ಟಿಯ ಬದಲು ಬಸವ ನೇಣು ಹಾಕಿಕೊಂಡದ್ದು ಆಶ್ಚರ್ಯ ಅಥವಾ ಅದು ಕೊಲೆಯೂ ಆಗಿರಲು ಸಾಧ್ಯ. ನಗರ ಜೀವನದಿಂದ ಹೊರತಾದ ಈ ಕಥೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಜೀವನದ ಸಹಜ ಸುಂದರ ಚಿತ್ರವಾಗಿದೆ. 'ತುಣುಕುಗಳು' ಎಂದು ಕರೆದಿರುವ ನಾಲ್ಕು ಪುಟಾಣಿ ಕಥೆಗಳಲ್ಲಿ 'ಕಾಮಸೂತ್ರ', 'ಕುಡಿ' ಮತ್ತು 'ಖುಷಿ' ದಿನಕರ ದೇಸಾಯಿಯವರ ಚಟುಕಗಳಂತಿವೆ. ನವ್ಯ ಕಥೆಗಾರರಾದ ಇವರ ಕಥೆಗಳಲ್ಲಿ ಕಾಮಕ್ಕೆ ಅತಿಯಾದ ಪ್ರಾಮುಖ್ಯತೆ ಇಲ್ಲದಿರುವುದು ಗಮನಾರ್ಹ. ಅನಾಥಪ್ರಜ್ಞೆ, ಏಕಾಕಿತನ ಮುಂತಾದುವು

ಕಥೆಯಲ್ಲಿ ಬಂದರೂ ಅವು ಕಥೆಯಿಂದ ಹೊರತಾದುವು ಎನಿಸದೆ ಕಥೆಯು ವೈಚಾರಿಕತೆಯ ಮುಸುಕಿನಲ್ಲಿಯೇ ಬರುತ್ತವೆ. ಪುಟ್ಟ ಪುಟ್ಟ ವಾಕ್ಯಗಳು ಮತ್ತು ಚುರುಕಾದ ಸಂಭಾಷಣೆಗಳು ಸದಾಶಿವ ಅವರ ಕಥೆಗಳ ವೈಶಿಷ್ಟ್ಯ.

ಹತ್ತು ಕಥೆಗಳು

'ಹತ್ತು ಕಥೆಗಳು' ಸುಧಾಕರರ ಹತ್ತು ಕಥೆಗಳ ಮೂರನೆ ಕಥಾಸಂಕಲನವಾದರೂ, ಇಲ್ಲಿನ ಕಥೆಗಳೆಲ್ಲವೂ ಹೊಸ ಕಥೆಗಳೇನಲ್ಲ. ಸುಧಾಕರರ ಮೊದಲನೆಯ ಕಥಾಸಂಕಲನದ 'ಕಣ್ಣೆ ಕಿತ್ತ ಹಸು', 'ಸಾಕಿದ ನಾಯಿ', 'ಹೊರಲಾರದ ಹೊರೆ' ಮತ್ತು ಎರಡನೆಯ ಕಥಾಸಂಕಲನದ 'ನಕ್ಷತ್ರ ನಕ್ಕವು'. 'ಕೋಡಿ ಬಿತ್ತು ಕೋಡಿ', 'ಮೆರವಣಿಗೆ'ಗಳು ಗ್ರಾಮ ಜೀವನದ ಕಥೆಗಳು. ಗ್ರಾಮ ಜೀವನಕ್ಕೆ ಸಂಬಂಧಿಸಿದ ಕಥೆಗಳನ್ನು ಒಂದೆಡೆ ತರಬೇಕೆಂಬ ಉದ್ದೇಶದಿಂದ ಆ ಕಥೆಗಳು ಈ ಸಂಕಲನದಲ್ಲಿ ಸೇರಿವೆ. ಈ ಕಥೆಗಳಲ್ಲದೆ ಗ್ರಾಮ ನಗರಜೀವನ ಸಂಘರ್ಷ, ಸಮಾಜ ಸ್ಥಿತ್ಯಾಂತರವನ್ನು ವಸ್ತುವಾಗುಳ್ಳ ಎರಡನೆಯ ಕಥಾಸಂಕಲನದ 'ಉನ್ಮಾದ' ಮತ್ತು 'ಸಮಾನಾಂತರ ರೇಖೆಗಳು' ಮತ್ತು ಯಾವ ಸಂಕಲನದಲ್ಲಿಯೂ ಸೇರದ 'ಕಣ್ಣು' ಮತ್ತು 'ಸೆಳೆತ'ಗಳೂ ಇಲ್ಲಿವೆ. 'ಕಣ್ಣೆ ಕಿತ್ತ ಹಸು'ವಿನ ಕಥೆಯಲ್ಲಿ ಪಟೇಲ ಲಿಂಗಪ್ಪ ಮೊದಲಾದವರ ಮಾತು ಕೇಳಿ ಅತ್ತೆಯ ಮನೆಯಿಂದ ಹೆಂಡತಿಯನ್ನು ಹೊರಡಿಸಿಕೊಂಡು ಬಂದು ಇರಲು ನೆಲೆಯಿಲ್ಲದೆ ಮತ್ತೆ ಅತ್ತೆಯ ಮನೆಗೇ ಹಿಂತಿರುಗಿದಾಗ ಗಂಡೆದೆಯ ಮುತ್ತಮ್ಮನ ಮನಸ್ಸು ಹಂತ ಹಂತವಾಗಿ ಆರ್ದ್ರವಾಗಿ ಕರುವಿನ ಕರೆ ಕೇಳಿದ ಹಸುವಿನಂತೆ ಕರಗಿ ನೀರಾಗುವುದರ ಸುಂದರ ಚಿತ್ರಣವಿದೆ. 'ಹೊರಲಾಗದ ಹೊರೆ' ಕಥೆಯ ಪುಟ್ಟಮ್ಮ ಹೊತ್ತ ಜೋಳದ ಹೊರೆ ಅವಳ ಅಂತರಂಗದ ಹೊರೆಗೆ ಸಂಕೇತವಾಗಿ ಕಥೆಯ ಉದ್ದಕ್ಕೂ ಬರುತ್ತದೆ. ಆ ಹೊರೆಯನ್ನು ಗಂಡ ಹೊತ್ತುಕೊಂಡ ಸೂಚನೆ ಕಥೆಯಲ್ಲಿದ್ದರೂ ಇದು ಸಂಭಾವ್ಯವೇ? ಎನಿಸುತ್ತದೆ. ಆದರೂ ಈ ಪ್ರಶ್ನೆ ಗೌಣವಾಗಿ ಕಥೆಯ ಒಟ್ಟಂದದ ಶಿಲ್ಪಕ್ಕೆ ಒಂದಿನಿತೂ ಕುಂದುಂಟಾಗುವುದಿಲ್ಲ. 'ಸೆಳೆತ' ಕಥೆಯ ನಾಯಕ, ಕಥೆಯ ಪ್ರಾರಂಭದಲ್ಲಿ ವಿಚಾರವಂತನಂತೆ ಕಂಡರೂ, ಲಕ್ಷ್ಮಿಯ ದರ್ಶನವಾದ ಮೇಲೆ ವೈಚಾರಿಕವಾಗಿ ತಾನೊಪ್ಪದ ಕೆಲಸಗಳನ್ನು ಮಾಡುತ್ತಾನೆ. ಇದು ವೈಯಕ್ತಿಕವಾಗಿ ಅವನ ಸೋಲಾದರೂ ಜೀವನದಿಯ ಅದಮ್ಯವೂ, ಅನಿರ್ಬಂಧಿತವೂ ಆದ ಪ್ರವಾಹದ, ಸೆಳೆತದ ವಿಜಯವಾಗುತ್ತದೆ. ಇದನ್ನೇ ಸತ್ತ ನಾಯಿಯ ಮೊಲೆಯುಣ್ಣುವ ಮರಿಗಳ ಚಿತ್ರ ಪ್ರತಿಮಿಸುತ್ತದೆ. 'ಕೋಡಿ ಬಿತ್ತು ಕೋಡಿ', 'ಮೆರವಣಿಗೆ' ಮತ್ತು 'ಸಾಕಿದ ನಾಯಿ' ಗ್ರಾಮ ಜೀವನದ ಮತ್ತೊಂದು ಮುಖವನ್ನು ಚಿತ್ರಿಸುತ್ತವೆ. 'ಕೋಡಿ ಬಿತ್ತು ಕೋಡಿ' ಕಥೆಯ ವಜ್ರಮ್ಮನ ಮಕ್ಕಳಾದ ಚಿಕ್ಕಣ್ಣ ಮತ್ತು ಹುಚ್ಚಣ್ಣ

ಒಂದಾಗಿ ಬಾಳಲಾರದೆ ಬೇರೆ ಬೇರೆಯಾಗುವುದೇ ಈ ಕಥೆಯ ವಸ್ತು. ವಜ್ರಮ್ಮನ ಯಾವ ಪ್ರಯತ್ನವೂ ಫಲಿಸದೆ ಅಣ್ಣ ತಮ್ಮಂದಿರು ಬೇರೆ ಬೇರೆಯಾಗುತ್ತಾರೆ. 'ಮೆರವಣಿಗೆ' ಕಥೆಯ ಹುಚ್ಚೇಗೌಡ ತನ್ನ ತಮ್ಮನ ಮಗಳ ಮದುವೆಯಲ್ಲಿ ತನಗೆ ಸಲ್ಲದ ದೊಡ್ಡಸ್ತಿಕೆಯನ್ನು ಬಯಸಿ ಅದು ಸಿಗದಾಗ ಆ ಶುಭಕಾರ್ಯಕ್ಕೆ ಅಸಹ್ಯಕರವಾದ ರೀತಿಯಲ್ಲಿ ಅಡ್ಡಿಯುಂಟುಮಾಡಿ ತನ್ನ ಬೇಳೆಯನ್ನು ಬೇಯಿಸಿಕೊಳ್ಳುತ್ತಾನೆ. ಹಳ್ಳಿ ಪಟ್ಟಣಗಳಿಗಿಂತ ಎಷ್ಟು ಭಿನ್ನವಾದುದು, ಎಂಬುದು ಹಳ್ಳಿಗರ ರೀತಿ ನೀತಿಗಳನ್ನು, ನಂಬಿಕೆಗಳನ್ನು ಬದಲಿಸಲು ಅನಿವಾರ್ಯವಾದುದು ಎಂಬುದನ್ನು ಈ ಕಥೆಯಲ್ಲಿ ಕಾಣುತ್ತೇವೆ. 'ಸಾಕಿದ ನಾಯಿ' ಕಥೆಯ ನಂಜಪ್ಪ ತನ್ನನ್ನು ಸಾಕಿ ಸಲಹಿ ತನ್ನನ್ನೂ ಒಂದು ಕುಳವನ್ನಾಗಿ ಮಾಡಿದ ಭಾವ ಹೊನ್ನಪ್ಪನಿಗೇ ದ್ರೋಹ ಬಗೆಯುವುದು ಹೊನ್ನಪ್ಪನ ಸಾಕಿದ ನಾಯಿ ಹಾವನ್ನು ಕಚ್ಚಿ ತುಂಡರಿಸಿ ತನ್ನ ಒಡೆಯನ ಮಗನ ಪ್ರಾಣ ರಕ್ಷಣೆ ಮಾಡುವುದೂ ಪರಸ್ಪರ ವಿಭಿನ್ನ ರೀತಿಯ ಚಿತ್ರಗಳಾಗಿ ಒಂದು ಚಿತ್ರಕ್ಕೆ ಮತ್ತೊಂದು ಭಿತ್ತಿಯಾಗುತ್ತದೆ. ನಾಯಿ ಕೃತಜ್ಞತೆಯ ಸಂಕೇತವಾಗುತ್ತದೆ. ಕಥೆಯ ಅಂತ್ಯದಲ್ಲಿ ಬರುವ ಸಿಡಿಲು ನಂಜಪ್ಪನ ವಿಶ್ವಾಸಘಾತುಕತನದಿಂದ ಹೊನ್ನಪ್ಪನ ಮನಸ್ಸಿನ ಮೇಲಾದ ಆಘಾತಕ್ಕೆ ಸಂಕೇತವಾಗುತ್ತದೆ. ಈ ಮೂರು ಕಥೆಗಳಲ್ಲಿ ಗ್ರಾಮಜೀವನದಲ್ಲಿರುವ ಕುಟಿಲತೆ ದ್ವೇಷ ಅಸೂಯೆಗಳ ಚಿತ್ರಣವಿದೆ. 'ನಕ್ಷತ್ರ ನಕ್ಕವು' ಮತ್ತು 'ಕಣ್ಣು' ಕಥೆಗಳು ಗ್ರಾಮಜೀವನದ ಕಥೆಗಳೇ ಆದರೂ ಉಳಿದ ಕಥೆಗಳಷ್ಟು ಸತ್ವಯುತವಾದ ಕಥೆಗಳಲ್ಲ. 'ನಕ್ಷತ್ರ ನಕ್ಕವು' 'ಸುಳ್ಳು ದರಿದ್ರ; ಮೋಸ ನಾಶನ', 'ಕೇಡು ಸಾಧಿಸೋರ ಕೈಲಿ ಕೊನೆಗೆ ಉಳಿಯೋದು ಓಡು ಮಾತ್ರ', 'ಬಲಗಾರ ಬಡವನ್ನ ಕೆಡಿಸಿದೆ ಭಗವಂತ ಬಲಗಾರನ್ನ ಕೆಡಿಸ್ತಾನೆ' ಎಂಬ ಗಾದೆ ಮಾತುಗಳ ಸಮರ್ಥನೆಗಾಗಿಯೇ ಸೃಷ್ಟಿಯಾದಂತಿದೆ. ಕಥೆಯ ಪ್ರಾರಂಭದಲ್ಲಿ ಮಾರ್ದವ ಹೃದಯಿಯಂತೆ ಕಂಡುಬರುವ ಹೊನ್ನಪ್ಪನ ದೊಡ್ಡ ಮಾವ ಕಾಳೇಗೌಡ ರಂಗಪ್ಪನ ಮಾತನ್ನು ಕೇಳಿ ಹಸುವನ್ನು ಹೊಡೆದುಕೊಂಡು ಹೋಗುವುದು ತೀರ ಅಸಹಜವಾಗಿ ಕಥೆಗೊಂದು ಆತುರದ ಮುಕ್ತಾಯವನ್ನು ಕೊಡುತ್ತದೆ. 'ಕಣ್ಣು' ಕಥೆ ಕಥೆಯಾಗಿ ಯಶಸ್ವಿಯಾಗಿದ್ದರೂ ಉಳಿದ ಕಥೆಗಳಲ್ಲಿ ಕಂಡುಬರುವ ವೈಚಾರಿಕಥೆಯ ಅಭಾವದಿಂದಾಗಿ ಉಳಿದ ಕಥೆಗಳಿಂದ ಪ್ರತ್ಯೇಕವಾಗುತ್ತದೆ. ಕಣ್ಣು ಅರಿವಿಗೆ ಜ್ಞಾನಕ್ಕೆ ಸಂಕೇತವಾಗಬೇಕಾಗಿತ್ತು. ಆದರೆ ಈ ಕಥೆಯಲ್ಲಿ ಹಾಗಾಗಿಲ್ಲ. ಒಂದು ರೀತಿಯಲ್ಲಿ ಅಂಧಶ್ರದ್ಧೆ ಮೂಢನಂಬಿಕೆಗಳನ್ನೇ ಎತ್ತಿ ಹಿಡಿಯುತ್ತಿರುವಂತೆ ಕಾಣುತ್ತದೆ. ಈ ಸಂಕಲನಕ್ಕೆ ಆಗಂತುಕವಾಗಿ-ದಾರಿತಪ್ಪಿ ಬಂದಂತಹ ಕಥೆಗಳು 'ಉನ್ಮಾದ' ಮತ್ತು 'ಸಮಾನಾಂತರ ರೇಖೆಗಳು'. 'ಉನ್ಮಾದ' ಕಥೆಯ ರುದ್ರಮ್ಮ ಹಳ್ಳಿಯ ಕೂಡುಕುಟುಂಬದಿಂದ ಬಂದವಳು. ಪಟ್ಟಣದ ಜೀವನಕ್ಕೆ ಹೊಂದಿಕೊಳ್ಳಲಾರದೆ ತೊಳಲಾಡುತ್ತಾಳೆ. ಅವಳ

ಏಕಾಕಿತನ ಅಸಹನೀಯವಾದಾಗ ಉನ್ಮಾದದಿಂದ ಹುಚ್ಚಿಯಂತೆ ವರ್ತಿಸುತ್ತಾಳೆ. ರುದ್ರಮ್ಮನ ವರ್ತನೆಗೆ ಏನೇ ವಿವರಣೆ ಕೊಟ್ಟರೂ ಅವಳ ಉನ್ಮಾದದ ಚಿತ್ರ ಸ್ವಲ್ಪ ಅತಿಯಾಯಿತು ಎನಿಸದೆ ಇಲ್ಲ. ಅವಳ ಗಂಡ ನಾರಾಯಣನೂ ಹಳ್ಳಿಯಿಂದ ಬಂದವನೇ, ರುದ್ರಮ್ಮನ ಅಂತರಂಗದ ಒಳತೋಟಿ ಚಿತ್ರಿತವಾದಂತೆ ನಾರಾಯಣನ ಅಂತರಂಗದ ಚಿತ್ರಣ ಇರಬೇಕಾಗಿತ್ತು ಎನಿಸುತ್ತದೆ. 'ಸಮಾನಾಂತರ ರೇಖೆಗಳು' ಪ್ರೇಮಿಸಿ ತಾನಾಗಿಯೇ ದೂರಮಾಡಿದವನನ್ನು ಮತ್ತೆ ಪಡೆಯುವ ಆಸೆ ಹೊತ್ತ ಯುವತಿಯೊಬ್ಬಳು ಎಂದೆಂದೂ ತಾವು ಒಂದಾಗುವುದು ಸಾಧ್ಯವಿಲ್ಲ ಎಂಬುದನ್ನು ಕಂಡುಕೊಂಡ ಕಥೆ. ಬಸ್ಸು ಹಳ್ಳದಲ್ಲಿ ಇಳಿದು ದಿಣ್ಣೆಯನ್ನು ಏರಿದಂತೆ ಅವಳ ಆಸೆ ಆಕಾಂಕ್ಷೆಗಳೂ ಒಮ್ಮೆ ಕುಗ್ಗಿ ಮತ್ತೊಮ್ಮೆ ಹಿಗ್ಗುತ್ತವೆ. ಬಸ್ಸಿನ ಚಲನೆ ಅವಿಚ್ಛಿನ್ನವಾದ ಬದುಕಿನ ಓಟಕ್ಕೆ ಸಂಕೇತವಾಗುತ್ತದೆ.

ಸುಧಾಕರರ ಈ ಸಂಕಲನದ ಒಂದೆರಡು ಕಥೆಗಳನ್ನು ಬಿಟ್ಟರೆ ಉಳಿದ ಎಲ್ಲ ಕಥೆಗಳಲ್ಲಿಯೂ ಗ್ರಾಮ ಜೀವನದ ದಟ್ಟವಾದ ಅನುಭವದ ಕಲಾತ್ಮಕವಾದ ಅಭಿವ್ಯಕ್ತಿ ಇದೆ. ಅನುಭವದ ಸಾಂದ್ರತೆ ಇದ್ದರೂ ವಸ್ತುವಿನಿಂದ ಹೊರನಿಂತು ನಿರ್ಲಿಪ್ತವಾಗಿ ಕಥೆಯನ್ನು ಅವರು ನಿರ್ವಹಿಸುವ ರೀತಿ ಅಚ್ಚರಿ. ಭಾಷೆಯನ್ನು ಅದರ ಸಕಲ ಸಾಧ್ಯತೆಗಳೊಡನೆ ದುಡಿಸಿಕೊಳ್ಳುತ್ತಾರೆ. ಕಥೆಗಳಲ್ಲಿ ಬರುವ ಸಂಕೇತ ಪ್ರತಿಮೆಗಳೂ ಕಥೆಯ ಒಂದು ಸಹಜ ಅಂಗವಾಗಿಯೇ ಬರುತ್ತವೆ. ಸಂಭಾಷಣೆಯಾಗಲೀ ವರ್ಣನೆಯಾಗಲೀ ಅರ್ಥಪೂರ್ಣವಾಗಿರುತ್ತವೆ. ಉದಾಹರಣೆಗೆ 'ಹೊರಲಾರದ ಹೊರೆ'ಯಲ್ಲಿ ಬರುವ ಈ ಮಾತುಗಳನ್ನು ನೋಡಬಹುದು. "ಬಾಯಾರಿದ ಕಡಸು ನೀರು ಕಂಡ ಕಡೆ ಎಳೆಯೋದು ಧರ್ಮ." "ಹಸಿ ಹುಲ್ಲನ್ನು ಕಂಡ್ರೆ ಯಾವ ದನ ತಾನೆ ಬಿಡ್ತವೆ", "ಮಳೆ ಬಂದದ್ದು ಬಿತ್ತನೆಗೆ ಎಷ್ಟು ಅನುಕೂಲವಾಯ್ತು!" ಹೀಗೆ ಉದಾಹರಿಸುತ್ತಾ ಹೋದರೆ ಕಥೆಯಲ್ಲಿನ ವಾಕ್ಯಗಳನ್ನೆಲ್ಲಾ ಉದಾಹರಿಸಬೇಕಾಗುತ್ತದೆ. ಹೀಗೆಯೇ ಇತರ ಕಥೆಗಳಲ್ಲಿಯೂ, ಈ ಸಂಭಾಷಣೆ ವರ್ಣನೆಗಳು ಕಥೆಗೆ ಆಯಾ ಸಂದರ್ಭ ಸನ್ನಿವೇಶಗಳಿಗೆ ಸಹಜವೆಂಬಂತೆ ಬಂದರೂ ಹೊರನೋಟಕ್ಕೆ ಕಾಣುವ ಅರ್ಥಕ್ಕಿಂತ ಹೆಚ್ಚಿನ ಅರ್ಥವನ್ನು ಹೊಂದಿವೆ. ಈ ರೀತಿಯ ಬರವಣಿಗೆ ಸುಧಾಕರ ಅವರಿಗೆ ಸಹಜವೆಂಬಂತೆ ಎಲ್ಲ ಕಥೆಗಳಲ್ಲಿಯೂ ಪುಂಖಾನು ಪುಂಖವಾಗಿ ಬರುತ್ತವೆ. ನವೋದಯ ಕಾಲದ ಸಾಂಪ್ರದಾಯಿಕ ವಿವರಣಾತ್ಮಕ ರೀತಿ ಮತ್ತು ನವ್ಯ ಕಥೆಗಳ ಸಂಕೇತ ಪ್ರತಿಮೆಗಳ ಮೂಲಕ ತಾವು ಹೇಳಬೇಕೆಂದಿರುವುದನ್ನು ವ್ಯಂಜಿಸುವ ರೀತಿ ಎರಡೂ ಸಮಸಮನಾಗಿ ಬೆರೆತ ರೀತಿ ಸುಧಾಕರರ ಶೈಲಿ ಎನ್ನಬಹುದು. ಸುಧಾಕರರು ತಮ್ಮ ಇದುವರೆಗಿನ ಕಥೆಗಳಿಂದಲೇ ಸಣ್ಣ ಕಥೆಗಳ ಪ್ರಕಾರದಲ್ಲಿ ವಿಶಿಷ್ಟವಾದ ಸ್ಥಾನವನ್ನು

ಗಳಿಸಿದ್ದಾರೆ ಎನ್ನಬಹುದು. 'ಕಣ್ಣೆ ಕಿತ್ತ ಹಸು' ಕಥೆಯಿಂದ 'ಸೆಳೆತ' ಕಥೆಯವರೆಗೆ ಸುಧಾಕರರು ಸಾಕಷ್ಟು ಬೆಳೆದಿದ್ದಾರೆ. ಮತ್ತೆ ಬೆಳೆಯುವ ಲಕ್ಷಣಗಳೂ ಇವೆ. ಎನ್. ಬೋರಲಿಂಗಯ್ಯ ಅವರ ಸ್ನೇಹ ವಿಶ್ವಾಸಗಳಿಗೆ ಕಟ್ಟು ಬೀಳದ ಮುಲಾಜಿಲ್ಲದ ನಿರ್ಭೀತವೂ ನಿಷ್ಪಕ್ಷಪಾತವೂ ಆದ ತೂಕವಾದ ವಿಮರ್ಶೆ ಈ ಕಥಾಸಂಕಲನದ ತೂಕವನ್ನು ನಿಸ್ಸಂಶಯವಾಗಿಯೂ ಹೆಚ್ಚಿಸಿದೆ.

ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ

'ಜೊತೆಗಾರ', 'ಮಾರಲಾಗದ ನೆಲ', 'ಗುತ್ತಿ ಗೀತಾ ಆದದ್ದು' ಮತ್ತು 'ಉಮಾಪತಿಯ ಸ್ಕಾಲರ್‌ಷಿಪ್‌ಯಾತ್ರೆ' ಎಂಬ ನಾಲ್ಕು ಕಥೆಗಳ ಸಂಕಲನವೇ ಪಿ. ಲಂಕೇಶರ '**ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ**.' ತಮ್ಮ ಕಥೆಗಳನ್ನು ಲಂಕೇಶರು ನೀಳ್ಗತೆಗಳೆಂದು ಕರೆದಿದ್ದಾರೆ. 'ಜೊತೆಗಾರ' ಮತ್ತು 'ಮಾರಲಾಗದ ನೆಲ' ನೀಳ್ಗತೆಗಳೇ ಹೌದು. ಉಳಿದ ಎರಡನ್ನು ಸಣ್ಣ ಕಥೆಗಳೆಂದರೆ ಸಾಕು. ಈ ಕಥೆಗಳ ಆವರಣ ಅಥವಾ ಪರಿಸರ ಎಂದರೆ ಕಥೆ ನಡೆಯುವ ಸ್ಥಳ ಗ್ರಾಮ. 'ಗುತ್ತಿ ಗೀತಾ ಆದದ್ದು' ಮೇಲಿನ ಹೇಳಿಕೆಗೆ ಹೊರತಾಗುತ್ತದೆ. ಹಾಗೆಯೇ 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ' ಕೂಡ. 'ಜೊತೆಗಾರ' ಕಥೆ ಶೂದ್ರರಾದರೂ ಸಾರಸ್ವತ ಲೋಕದಲ್ಲಿ ಅಪಾರವಾದ ಯಶಸ್ಸನ್ನು ಗಳಿಸಿದ್ದ, ತಮ್ಮ ಜೀವಿತದ ಕೊನೆಯ ಅಂಕದಲ್ಲಿದ್ದ ಅರುವತ್ತರ ಆದರ್ಶ ಮೂರ್ತಿ ನಾಯ್ಕರು ಹದಿನಾಲ್ಕು ಹದಿನೈದರ ಕಿರಿಸ್ತಾನರ ಚೆಲುವೆ ಜೋಸಫೈನಳಿಗೆ ಮರುಳಾಗಿ ಅವನತಿಯತ್ತ ಸಾಗಿದ ಕಥೆ. ನಾಯ್ಕರ ಜೊತೆಗಾರ ಸೀತಾರಾಮು ತನ್ನ ಮೂವತ್ತು ವರ್ಷದ ಅವರ ಪರಿಚಯದಲ್ಲಿ ಎಂದೂ ಲೋಪದೋಷಗಳನ್ನು ಕಾಣದಿದ್ದವನು ತನ್ನ ಆರಾಧ್ಯಮೂರ್ತಿ ಆದರ್ಶದ ಗೌರೀಶಂಕರದಿಂದ ಕಮರಿಗೆ ಉರುಳಿದ ಹಿನ್ನೆಲೆಯ ಪತ್ತೆಗಾಗಿ ಪ್ರಯತ್ನಿಸುತ್ತಾನೆ. ಆದರೆ ಇದರಿಂದ ಸೀತಾರಾಮುವಿನ, ರಂಗಣ್ಣನ ಅಥವಾ ಇತರರ ಪ್ರಜ್ಞೆಯ ಮೂಲಕ ನಾಯಕರನ್ನು ನೋಡಿದಂತಾಗುತ್ತದೆಯೇ ಹೊರತು ಬೇರೆಯಲ್ಲ. ಆದ್ದರಿಂದ ನಾಯಕರ ವ್ಯಕ್ತಿಚಿತ್ರಣ ಅಕ್ಷರಮಟ್ಟಿಗೆ ಅಪೂರ್ಣವಾಗಿಯೇ ಉಳಿಯುತ್ತದೆ. ನಾಯ್ಕರ ಹಟ್ಟಿಯ ಆಕಳನ್ನು ವರ್ಣಿಸುವಾಗ "......ಎಂಥ ಸುಖ, ಯಾಕೆ ಎಂದು ಕೂಡ ಗೊತ್ತಿಲ್ಲ. ಗಬ್ಬವಾಗಿದೆ. ಅದನ್ನು ಹಾರಿದ್ದು ಕೇವಲ ಆರು ವರ್ಷಗಳ ಕೆಳಗೆ ಅದೇ ಹೆತ್ತ ಹೋರಿ ಕರು...." ಎನ್ನುವಲ್ಲಿ ನಾಯಕರ ನಡತೆಗೆ ಬಹುಶಃ ಕಾರಣ ಸಿಕ್ಕೀತು. ಹಾಗೆಯೇ ಮುತ್ತಿನಕೊಪ್ಪದ ಬೆನಕ ದೊಡ್ಡವಳಾಗಿ ಹತ್ತು ವರ್ಷವಾದ ತನ್ನ ಮಗಳು ಈರಿಯನ್ನೇ ಸಂಭೋಗಿಸಿದ ಪ್ರಸಂಗವೂ ನಾಯಕರ ಮತ್ತು ಜೋಸಿಯ ಸಂಬಂಧಕ್ಕೆ ಪೂರಕವಾಗುತ್ತದೆ. "..... ಕಾಡಿನ ನಡುವೆ ಹರಿಯುತ್ತಿರುವ ವಿದ್ಯುತ್ ತಂತಿಗಳ

ಬಗ್ಗೆ ಮಾತನಾಡುವರು; ಅವರಿಗೆ ಪ್ರಕೃತಿ ಹಾಳಾಗುತ್ತಿರುವುದನ್ನು ಕಂಡು ದುಃಖ?" ಎಂದು ಸೀತಾರಾಮು ಅಂದುಕೊಳ್ಳುವಲ್ಲಿಯೂ ಮೇಲಿನ ಪ್ರಶ್ನೆಗೆ ಉತ್ತರ ಸಿಕ್ಕೀತು. ಈ ಎಲ್ಲವೂ ಊಹೆಗೆ ಪುಷ್ಟಿಯನ್ನೆರೆದರೂ ನಾಯಕರಿಗೆ ಸಿಕ್ಕಿದುದೇನು? ಅವರು ಬಯಸಿದ್ದೆ? "ಚರ್ಚಿಗೆ ಹತ್ತು ಸಾವಿರ ಕೊಟ್ಟಿದ್ದೇನೆ. ನಿನ್ನ ಮ್ಯಾಲೆ ಹಣ ಚೆಲ್ಲಿದ್ದೇನೆ....." ಎನ್ನುವ ನಾಯಕರ ಮಾತುಗಳಲ್ಲಿ ಅವರ ಬಯಕೆ ಸ್ಪಷ್ಟವಾಗಿದೆ. ನಾಯಕರ ದಿನಚರಿಯ ಕೊನೆಯ ಪುಟಗಳಲ್ಲಿ ನಾಯಕರ ನಿಲುವಿನಿಂದ ಈ ಪ್ರಸಂಗವನ್ನು ನೋಡಲು ಪ್ರಯತ್ನಿಸಿದ್ದರೂ ಅದು ಸಾಲದೆ ನಾಯಕರ ವ್ಯಕ್ತಿತ್ವ ಅಪೂರ್ಣವಾಗಿಯೇ ಉಳಿಯುತ್ತದೆ. 'ಗುತ್ತಿ ಗೀತಾ ಆದದ್ದು' ಕಥೆಯಲ್ಲಿ ಹಳ್ಳಿಯ ಮುಗ್ಧ ಗುತ್ತಿ ಜೇಬುಗಳ್ಳ ಸಣ್ಣ ಮುನಿಯನ ದೆಸೆಯಿಂದಾಗಿ ಪೋಲಿಸ್ ಸ್ಟೇಷನ್ ಕಾಣಬೇಕಾಗುತ್ತದೆ. ಬಾಣಲೆಯಿಂದ ಬೆಂಕಿಗೆ ಬಿದ್ದಂತೆ ಸಣ್ಣಮುನಿಯನಿಂದ ಸಬ್ ಇನ್‌ಸ್ಪೆಕ್ಟರ್ ಬಾಪಟ್, ಅಲ್ಲಿಂದ ಅವನ ಮೇಲಾಧಿಕಾರಿ ಭದ್ರಯ್ಯ, ಮತ್ತೂ ಅಲ್ಲಿಂದ ಡೆಪ್ಯುಟಿ ಮಿನಿಸ್ಟರ್ ಪುಟ್ಟಯ್ಯರ ಭೋಗದ ವಸ್ತುವಾಗಬೇಕಾಗುತ್ತದೆ, ಗುತ್ತಿ. ಈ ಹಂತಗಳಲ್ಲಿಯೇ ಗುತ್ತಿ ಗೀತಾ ಆಗುವುದು. ಸಣ್ಣ ಮುನಿಯನಿಂದಾಗಿ ಪೋಲಿಸ್ ಸ್ಟೇಷನ್‌ಗೆ ಬಂದಾಗ "...... ನೀನು ಈ ಕೆಲ್ಸ ಮಾಡಿದ್ದೀಯಾ?" ಎಂದು ಹಾದರವನ್ನುದ್ದೇಶಿಸಿ ಬಾಪಟ್ ಕೇಳಿದಾಗ "ಯಾ ಕೆಲ್ಸ ಬುದ್ಧಿ" ಎನ್ನುವ ಮುಗ್ಧ ಗುತ್ತಿ ಕೆಲವೇ ದಿನಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ಭದ್ರಯ್ಯನ ಮೇಲೇ ರೋಪು ಹಾಕುವಂತಾಗುತ್ತಾಳೆ. ತನಗೇ ಆಶ್ಚರ್ಯವಾಗುವಂತೆ ಗುತ್ತಿ ಆ ಎಲ್ಲಕ್ಕೆ ಹೊಂದಿಕೊಳ್ಳುತ್ತಾಳೆ. "ಗದ್ದೆ ಕೆಲಸ ಶುರುಮಾಡಿ ಎಷ್ಟು ದಿನ ಆತಪ್ಪ" ಎಂಬ ಚಿಕ್ಕಣ್ಣನ ಮಾತಿನಲ್ಲಿ "......... ಹುಡುಗಿಗೆ ಎರಡು ಪಾಠ ಕಲಿಸು....." ಎನ್ನುವ ಬಾಪಟ್‌ನ ಮಾತಿನಲ್ಲಿ ಪೋಲಿಸ್ ಇಲಾಖೆಗೇ ವಿಶಿಷ್ಟವಾದ ಭಾಷೆಯ ಪ್ರಯೋಗವಿದೆ. ಬೇಲಿಯೇ ಎದ್ದು ಹೊಲ ಮೇದಂತೆ ಸಮಾಜದ ರಕ್ಷಕರಾದ ಪೋಲೀಸರು, ಪತ್ರಿಕಾ ಸಂಪಾದಕರು, ರಾಜಕಾರಣಿಗಳು ಹೆಣ್ಣೊಬ್ಬಳ ಅವನತಿಗೆ ಕಾರಣವಾಗುವುದು ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ. 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ' ತಟಕ್ಕನೆ ಕೆ. ಸದಾಶಿವರ 'ರಾಮುವಿನ ಸವಾರಿ ಸಂತೆಗೆ ಹೋದದ್ದು' ಕಥೆಯನ್ನೂ ನೆನಪಿಗೆ ತರುತ್ತದೆ. ಅಲ್ಲಿಯಂತೆಯೇ ಇಲ್ಲಿ ಅದೇ ತಾನೇ ಪ್ರಪಂಚವನ್ನು ಅರಿತುಕೊಳ್ಳತೊಡಗಿದ್ದ ಹದಿನಾಲ್ಕರ ಉಮಾಪತಿಯ ಮೂಲಕ ಅವನ ಸಂಸಾರದ-ಮನೆಯ ಕಥೆ ತೆರೆದುಕೊಳ್ಳುತ್ತದೆ. ಕಥೆಯಲ್ಲಿ ಬರುವ ಮಾತುಕತೆಗಳಿಂದ ನಿಂಗೇಗೌಡ ಮತ್ತು ಈರವ್ವರ ಅಕ್ರಮ ಸಂಬಂಧ ತಿಳಿದು ಬರುವಂತೆ ಉಮಾಪತಿಯ ಅಕ್ಕ ಲಿಂಗಿಯ ಬಸಿರಿಗೆ ಯಾರು ಕಾರಣ ಎನ್ನುವುದು ಸ್ಪಷ್ಟವಾಗುವುದಿಲ್ಲ. ನಿಂಗೇಗೌಡರೆ ಅಥವಾ ಶೇಖರಪ್ಪನೆ? ಕಥೆಯ ಒಂದು ಹಂತದಲ್ಲಿ ಬರುವ ಈರವ್ವನ ಮಾತಿನಿಂದ ಉಮಾಪತಿಯ ತಂದೆ ಯಾರು ಎಂಬ ಶಂಕೆಯೂ ಹುಟ್ಟುತ್ತದೆ. ಹೀಗೆ ತನ್ನ ಸಂಸಾರದ

ಮನೆಯ ಸ್ವರೂಪ ದರ್ಶನದಿಂದ ಉಮಾಪತಿಯಲ್ಲಿ ಆಗುವ ಸಂಕೋಚ ಹಿಂಜರಿಕೆ ಮನಸ್ಸಿನ ಮೇಲೆ ಆಗುವ ಆಘಾತ ಇವುಗಳು ಪರಿಣಾಮಕಾರಿಯಾಗಿ ಕಥೆಯಲ್ಲಿ ಬಂದಿವೆ. 'ಮಾರಲಾಗದ ನೆಲ' ಈ ಸಂಕಲನದ ಅತ್ಯುತ್ತಮ ಕಥೆ ಎನ್ನಬಹುದು. ಈ ಕಥೆಯಲ್ಲಿ ಹಳ್ಳಿಯ ಬಾಳು ಮೇಲುನೋಟಕ್ಕೆ ಕಾಣುವಷ್ಟು ಸರಳವಾಗಿಲ್ಲದೆ ಸಂಕೀರ್ಣವಾಗಿ ತೊಡಕಾಗಿರುವುದನ್ನು ಕಾಣಬಹುದು. ಮೂಢನಂಬಿಕೆಗಳು, ಕಪಟ, ಮೋಸ, ದ್ವೇಷ, ಅಸೂಯೆ, ಈರ್ಷ್ಯೆ, ರಾಜಕೀಯ ಇವೆಲ್ಲವೂ ತುಂಬಿತುಳುಕುವ ಹಳ್ಳಿಯ ಬದುಕು ಒಂದು ಕಳ್ಳ ಉಸುಬಿದ್ದಂತೆ. ಅದರಲ್ಲಿ ಕಾಲಿಟ್ಟರೆ ಮತ್ತೆ ಹೊರಬರಲಾಗದು. ಇಂಥ ಒಂದು ಹಳ್ಳಿಗೆ ತನ್ನ ಜಮೀನನ್ನು ಮಾರಲು ಬಂದ ವಿಶ್ವನಾಥ ಅಲ್ಲಿನ ಚಕ್ರವ್ಯೂಹದಿಂದ ಹೊರಬಂದರೆ ಸಾಕೆಂದು ಕೊನೆಗೂ ತನ್ನ ಜಮೀನನ್ನು ಮಾರಲಾಗದೆ ಮತ್ತೆ ಪಟ್ಟಣಕ್ಕೆ ತೆರಳುತ್ತಾನೆ. ವಿಶ್ವನಾಥ ಎಡಪಾಲಕ್ಕೆ ಬಂದು ಮತ್ತೆ ಪಟ್ಟಣಕ್ಕೆ ತೆರಳುವ ಎರಡು ಮೂರು ದಿನದ ಅವಧಿಯಲ್ಲಿ ಜರುಗುವ ಘಟನೆಗಳು ಉಸಿರಾಡಲೂ ಆಗದಂತೆ ದಿಗ್ಭ್ರಮೆಗೊಳಿಸುತ್ತವೆ. ಘಟನೆಯಿಂದ ಘಟನೆಗೆ ಕಥೆ ಮುಂದುವರಿದಂತೆ ಕಥೆ ಆಳವಾಗುತ್ತಾ, ಸಂಕೀರ್ಣವಾಗುತ್ತಾ, ಕುತೂಹಲವನ್ನು ಕೆರಳಿಸುತ್ತಾ ಹೋಗುತ್ತದೆ.

ಇದು ಲಂಕೇಶರ ಮೂರನೆಯ ಕಥಾ ಸಂಕಲನ. ಹಿಂದಿನ ಸಂಕಲನಗಳಿಗಿಂತ ಇದು ಭಿನ್ನ. ಹಿಂದಿನ ಕಥೆಗಳಂತೆ ಸಂಕೇತ ಪ್ರತಿಮೆಗಳು ಇಲ್ಲಿ ಬರುವುದಿಲ್ಲ. ಅಂದರೆ ಕಥೆಯನ್ನು ಪ್ರಜ್ಞಾಪೂರ್ವಕವಾಗಿ ಬೇಲೂರಿನ ಶಿಲಾಬಾಲಿಕೆಯರಂತೆ ಸೃಷ್ಟಿಸಹೋಗಿಲ್ಲ. ಕಥೆಗಳು ನಿಸರ್ಗ ಸಹಜವಾದ ಕಾಡಿನಂತೆ ಒರಟೊರಟಾಗಿ ಕಂಡರೂ ನೇರವಾಗಿ ಸರಳವಾಗಿವೆ. ಅನುಭವದ ಶ್ರೀಮಂತಿಕೆ ಕಥೆಗಳ ತೂಕವನ್ನು ಹೆಚ್ಚಿಸಿವೆ. ಇದಕ್ಕೆ ಪೂರಕವಾಗಿ ಕಥೆಗಳಲ್ಲಿ ಬಂದಿರುವ ಪ್ರಜ್ಞಾಪೂರ್ವಕವಲ್ಲದ ಆಡುನುಡಿ ಕಥೆಯ ಸೊಗಸನ್ನು ಮತ್ತಷ್ಟು ಹೆಚ್ಚಿಸಿದೆ. "ಇಲ್ಲಿನ ಪುಟಗಳಲ್ಲಿ ನಿಮ್ಮ ಕೈಗೆ ದಕ್ಕುವುದು ಎಷ್ಟೋ ನಾನರಿಯೆ" ಎಂಬ ಲಂಕೇಶರ ಸಂದೇಹಕ್ಕೆ ಕಾರಣವಿಲ್ಲ ಎನಿಸುತ್ತದೆ.

ದ್ಯಾವನೂರು

'ದ್ಯಾವನೂರು' ದೇವನೂರ ಮಹಾದೇವ ಅವರ ಏಳು ಕಥೆಗಳ ಸಂಕಲನ. ಮಹಾದೇವ ಅವರು ತಮ್ಮ ಕಥೆಗಳನ್ನು ಪ್ರಸಂಗಗಳೆಂದು ಕರೆದುಕೊಂಡಿದ್ದಾರೆ. ಬಹುಶಃ ಸಂಕೇತ ಪ್ರತಿಮೆಗಳ ಗೊಂದಲವಿಲ್ಲದೆ ನೇರವಾಗಿ ಕಥೆಗಳು ಇವೆ ಎಂಬ ಅರ್ಥದಲ್ಲಿ ಪ್ರಸಂಗಗಳು ಎಂದು ಕರೆದಿರಬಹುದು. ಸಂಕೇತ ಪ್ರತಿಮೆಗಳ ಗೊಂದಲವಿಲ್ಲ ಎಂದಾಕ್ಷಣಕ್ಕೆ ಕಥೆಗಳು ಸರಳವಾಗಿವೆ ಎಂದರ್ಥವಲ್ಲ. "ಎರಡು ಸಲ ದಾರಂದ ಕುಟ್ಟಿದ ಮೇಲೆ ತೆರೆದುಕೊಂಡು ನಾಗವ್ವ ಕಾಣಿಸಿ ಎಂದು ಬಂದುದು ಕೇಳಿ

ಒಳಹೋದರು" ಎಂಬ ಈ ವಾಕ್ಯವನ್ನು ಅರ್ಥಮಾಡಿಕೊಳ್ಳಬೇಕಾದರೆ ಮತ್ತೆ ಮತ್ತೆ ಓದಬೇಕಾಗುತ್ತದೆ. ಹಾಗೆಯೇ ಮಹಾದೇವರ ಕಥೆಗಳ ಅರ್ಥವನ್ನು ಗ್ರಹಿಸಬೇಕಾದರೂ ಮತ್ತೆ ಮತ್ತೆ ಓದಬೇಕಾಗುತ್ತದೆ. ಶ್ರಮಪಟ್ಟು ನಾರೀ ಕೇಳ ಫಲದ ಹೊರಸಿಪ್ಪೆಯನ್ನು ತೆಗೆದು ಕರಟವನ್ನು ಒಡೆದರೆ ಒಳಗೆ ಸಿಹಿಯಾದ ನೀರು ರುಚಿಯಾದ ಕಾಯಿ ಸಿಗುವ ಹಾಗೆ ಇವರ ಕಥೆಗಳನ್ನು ಓದಿದಮೇಲೆ ಆ ಕಥೆಗಳ ಮಹತ್ತು ಗೋಚರವಾಗುತ್ತದೆ. ಶ್ರಮ, ಸಾರ್ಥಕ ಎನಿಸುತ್ತದೆ. 'ಮಾರಿಕೊಂಡವರು' ಕಥೆಯ ಬೀರ ತನ್ನ ಒಡೆಯ ಗೌಡರ ಮಗ ಕಿಟ್ಟಪ್ಪನಿಗೂ ತನ್ನ ಹೆಂಡತಿ ಚೆಂದುಳ್ಳಿ ಚೆಲುವಿ ಲಚುಮಿ (ಲಕ್ಷ್ಮಿ)ಗೂ ಅಕ್ರಮ ಸಂಬಂಧವಿದೆ ಎಂದು ತಿಳಿದರೂ ಏನೂ ಮಾಡಲಾಗದೆ ಪರಿಸ್ಥಿತಿಗೆ ಒಗ್ಗಿಕೊಳ್ಳುತ್ತಾನೆ. "ಹೆಚ್ಚಿಗೆ ಮಾತಾಡೋಕೆ ಅನ್ನಹಾಕಿದ ದಣಿ...." ಎಂಬ ಕೃತಜ್ಞತಾ ಭಾವ ಅಡ್ಡಬರುತ್ತದೆ. ಕೈಲಿ ಕಾಸಿಲ್ಲದೆ ನಿರ್ಗತಿಕನಾಗಿದ್ದಾಗ ಆಸರೆಕೊಟ್ಟು ಕಾಪಾಡಿದ ಗೌಡರು ದೇವರಂತೆ ಕಾಣುತ್ತಾರೆ. "ಕಿಟ್ಟಪ್ಪ ಕೊಟ್ಟಿರುವ ರಗ್ಗು ಲಚಮಿಾನ ಕವಚಿಕೊಂಡಿದೆ. ಕಿಟ್ಟಪ್ಪ ಕಟ್ಟಿಸಿರುವ ಮನೆ ಇಬ್ಬರನ್ನೂ ಕವಿಚಿಕೊಂಡಿದೆ....." ಎನ್ನುವ ಬೀರ ತನ್ನ ತನವನ್ನೇ ಕಳೆದುಕೊಂಡು ಅಸಹಾಯನಾಗಿ ಹಂತ ಹಂತನಾಗಿ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುವ ಚಿತ್ರ ಮನಮುಟ್ಟುವಂತೆ ಚಿತ್ರಿತವಾಗಿದೆ. 'ಗ್ರಸ್ತರು' ಕಥೆಯ ಗೌಡರು ತಾವು ಮಾಡಿದ ಉಪಕಾರವನ್ನೇ ಹಿರಿದಾಗಿ ಭಾವಿಸಿ ಉಪಕೃತನಾದವನು ತನ್ನ ವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡು ದೀನನಾಗಿ ಅದನ್ನೇ ಸ್ಮರಿಸುತ್ತಿರಲಿ ಎಂದುಕೊಂಡಾಗ ಉಪಕೃತ ವ್ಯಕ್ತಿ ಅವರನ್ನು ಧಿಕ್ಕರಿಸಿ ನಡೆಯುತ್ತಾನೆ. ಕಾರಣ ಇಷ್ಟೆ; 'ಮಾರಿಕೊಂಡವರು' ಕಥೆಯ ಬೀರ ಸಮಾಜದ ಶೋಷಣೆಗೆ ಒಳಪಟ್ಟ ದಲಿತ ವರ್ಗಕ್ಕೆ ಸೇರಿದ ವ್ಯಕ್ತಿಯಾದರೆ, 'ಗ್ರಸ್ತರು', ಕಥೆಯ ವ್ಯಕ್ತಿ ಸಾಮಾಜಿಕವಾಗಿ ಮೇಲುವರ್ಗಕ್ಕೆ ಸೇರಿದವನು. 'ಒಂದು ದಹನದ ಕಥೆ'ಯಲ್ಲಿ ಹಳ್ಳಿಯ ಸಾಮಾಜಿಕ ಕಟ್ಟುಪಾಡಿನ ಕಪಿಮುಷ್ಠಿಯ ನೈಜ ಚಿತ್ರಣವಿದೆ. ತನ್ನ ಹಿರಿಯರ, ಊರಿನ ಕುಲಸ್ತರ ಇಚ್ಛೆಗೆ ವಿರುದ್ಧವಾಗಿ ಬೇರೆ ಜಾತಿಯ ಕಮ್ಲಿಯನ್ನು ಮದುವೆಯಾಗಿದ್ದ ಚಿಕ್ಕಣ್ಣ ಊರುಬಿಟ್ಟು ಹನ್ನೆರಡು ವರ್ಷವಾದಮೇಲೂ ಅವನ ಅಜ್ಜಿಯ ದಹನಕ್ರಿಯೆಗೆ ಊರಿನವರು ತಡೆಯೊಡ್ಡುತ್ತಾರೆ. ಕುಲಗಳ ಕಟ್ಟುಪಾಡು ಎಷ್ಟು ಬಿಗಿಯಾದುದು ಎನ್ನುವುದು ಈ ಕಥೆಯಿಂದ ತಿಳಿದು ಬರುತ್ತದೆ. ಚಿಕ್ಕಣ್ಣ ಅಜ್ಜಿಯ ಚಿತೆಗೆ ಮನೆಯ ಗಳುಗಳನ್ನೇ ಹಿರಿದು ಹಿರಿದು ಎಸೆಯುವಲ್ಲಿ ಈ ಸಮಾಜದ ಕಟ್ಟುಪಾಡಿನ ವಿರುದ್ಧ ಅವನಿಗಿರುವ ರೋಷ ಕಾಣಿಸಿಕೊಳ್ಳುತ್ತದೆ. 'ದತ್ತ' ಕಥೆಯಲ್ಲಿ ಮಗ ಆನಂದನನ್ನು ದತ್ತುಕೊಟ್ಟ ಹದಿನಾರು ವರ್ಷವಾದರೂ ಮುಖ ನೋಡದ ತಂದೆ ತಾಯಿ ಸ್ವಾರ್ಥದಿಂದ ಅವನನ್ನು ಕರೆಸಿಕೊಳ್ಳುತ್ತಾರೆ. ಬಂದ ಆನಂದನಿಗೆ ಅವರನ್ನು ತಂದೆ ತಾಯಿ ಎಂದು ಒಪ್ಪಿಕೊಳ್ಳಲಾಗುವುದಿಲ್ಲ. ತಮ್ಮ ತಂಗಿಯರನ್ನು ಹಾಗೆಂದು

ಕೊಳ್ಳಲಾಗುವುದಿಲ್ಲ. “ನಾನಿಂಗ ಅಣ್ಣ ಅನಿಸ್ತಾದ” ಎಂದು ಅವನು ತಂಗಿಗೆ ಕೇಳುವ ಪ್ರಶ್ನೆಯಲ್ಲಿ ಇದೇ ಭಾವವಿದೆ. ತಂದೆ ತಾಯಿಯರ ಸ್ವಾರ್ಥಕ್ಕೆ ಅವರ ಕೈಗೊಂಬೆಯಾಗಲಾರದೆ, ಆ ಊರಿನ ಮಣ್ಣಿನವನು ಎಂದು ಕೊಳ್ಳಲು ಸಾಧ್ಯವಾಗದೆ ಆನಂದ ಓಡಿಹೋದಾಗ ಅವನ ಅವ್ವ ಪೆಟ್ಟಿಗೆಯನ್ನು ತೆರೆದುನೋಡಿ “ಹಣ ಮುಟ್ಟಿಲ್ಲ” ಎಂದಾಗ ಅವರ ಪ್ರೀತಿಯ ಮೌಲ್ಯ ಎಂಥದು ಎಂದು ತಿಳಿದುಬರುತ್ತದೆ. “ತಂಗಿಗೆ ಇನ್ನೂ ನಿದ್ದೆ ತಿಳಿದಿರಲಿಲ್ಲ” ಎಂದು ಮುಕ್ತಾಯವಾಗುವ ಕಥೆಯಲ್ಲಿ ಇನ್ನೂ ಹೆಚ್ಚಿನ ಅರ್ಥ ಇದ್ದೀತೆ? ‘ಡಾಂಬರು ಬಂದುದು’ ಕಥೆ ಹಳ್ಳಿಗಳಿಗೆ ನಾಗರೀಕತೆ ಕಾಲಿಟ್ಟಾಗ ಆಗುವ ಗಲಿಬಿಲಿಯನ್ನು ಯಥಾವತ್ತಾಗಿ ಚಿತ್ರಿಸುವ ಕಥೆ. ಈ ಕಥೆಯನ್ನೋದಿದಾಗ ತೇಜಸ್ವಿಯವರ ‘ಅಬಚೂರಿನ ಪೋಸ್ಟಾಫೀಸು’ ಮತ್ತು ‘ತುಕ್ಕೋಜಿ’ ನೆನಪಿಗೆ ಬರುತ್ತವೆ. ಸ್ತಾಮಾಜಿಕವಾಗಿ ಹಿಂದುಳಿದವರನ್ನು ಹಾಗೇ ಇಡಬೇಕೆಂಬ ಸಾಮಾಜಿಕವಾಗಿ ಮುಂದುವರಿದವರ ಇಚ್ಛೆ ಕಥೆಯ ಪ್ರಾರಂಭದಲ್ಲಿ ಕಂಡೂ ಕಾಣದಂತೆ ಬಂದಿದೆ. ‘ಮೂಡಲು ಸೀಮೇಲಿ ಕೊಲೆಗಿಲೆ ಮುಂತಾಗಿ’ ಕಥೆಯಲ್ಲಿ ಮೇಲುನೋಟಕ್ಕೆ ಯಾವ ಕೊಲೆಯೂ ಆದಂತೆ ಕಾಣುವುದಿಲ್ಲ. ಆ ಊರ ಗೌಡರ ಹಟ್ಟಿಯನ್ನು ಕಂಡು “.....ನಿಂತ ನಿಲುವಿಗೆ ಸಿಡಿಲು ಅಂಜುವವು. ಆಗಲಿಂದಲು ಈಗಲವರೆಗೆ ಊರನ್ನೆ ಹಿಡಿದುಕೊಂಡಿದೆ. ಅಥವಾ ಊರೆ ಆ ಹಟ್ಟಿಯನ್ನು ಹಿಡಿದುಕೊಂಡಿದೆ. ಎಂದಾದರೂ ಹೇಳಬಹುದು....” ಎಂಬ ವರ್ಣನೆಯಲ್ಲಿ ಹತ್ತು ಜನರ ದುಡಿಮೆಯಿಂದ ಒಬ್ಬ ಶ್ರೀಮಂತನಾಗುವ ಬಗೆಯ ವಿವರಣೆಯಿದೆ. ಅಂಥ ಹಟ್ಟಿಯ ಗೌಡರ ಆಳು ರಂಗಪ್ಪ. “ಅವನು ಹುಟ್ಟಿದಾರಭ್ಯ ದಿನಂಪ್ರತಿ ಆ ಊರ ಗೌಡರ ಹೊಲದಲ್ಲಿ ಹಗಲು ಮಾಡುತ್ತಾ ಬಂದಿರುವನು. ಅವನು ಮಾಡೋ ಉಳುಮೆಗೆ ಗೌಡರ ಹಟ್ಟಿ ಕಂಬ ನಿಂತಿದೆ ನೋಡಿ ಅಂತ ಊರವರು ಅಂತಾರೆ. ಅಂತೆ ಅವನ ಜೋಪಡಿ ಅವನ ಹೆಂಡತಿ ಅವನ ಮಗ ಅವನ ರಟ್ಟೆಯ ಬಲದ ಮೇಲೆ ನಿಂತಿವೆ...” ಇಂಥ ರಂಗಪ್ಪ ಅನ್ನಾನ್ನಗತಿಕವಾಗಿ ಗೌಡರ ಹಟ್ಟಿಗೆ ಜೋಳ ಕೇಳಲು ಹೋದರೆ ಸಿಗುವುದು ತಿರಸ್ಕಾರ. ಅದೇ ಮೇಲುವರ್ಗಕ್ಕೆ ಸೇರಿದ ಶಾಸ್ತ್ರಿ ಮೇಷ್ಟ್ರು ತನ್ನ ಜಾತಿಯ ಬಲದಮೇಲೆ ನೆಮ್ಮದಿಯಿಂದ ಬದುಕುತ್ತಾನೆ. ಹಾಗೆಯೇ ನರ್ಸಮ್ಮ ತನ್ನ ವಿದ್ಯೆಯಿಂದ ಬದುಕುತ್ತಾಳೆ. ಈ ಹಿನ್ನೆಲೆಯಲ್ಲಿ ಕಥೆಯನ್ನು ನೋಡಿದಾಗ ಆರ್ಥಿಕವಾಗಿ, ಸಾಮಾಜಿಕವಾಗಿ ರಂಗಪ್ಪನ ತಣ್ಣನೆಯ ಕೊಲೆಯಾಗುತ್ತಿರುವುದನ್ನು ಕಾಣುತ್ತೇವೆ. ಕಥೆಯು ಆರು ಸಣ್ಣ ಸಣ್ಣ ಭಾಗಗಳಾಗಿದೆ. ಒಂದೊಂದು ಭಾಗವೂ ಕಥೆಗೆ ಪೂರಕವಾಗಿ ರಂಗಪ್ಪನ ದೀನತೆ ಶೋಷಣೆಗಳ ಚಿತ್ರಣವನ್ನು ಕೊಡುತ್ತವೆ. ಏಳನೆಯ ಭಾಗದಲ್ಲಿ ಬರವಣಿಗೆಯಿಲ್ಲ. ಪ್ರಶ್ನೆಯಿದೆ. ಆ ಪ್ರಶ್ನೆ ರಂಗಪ್ಪನ ತಣ್ಣನೆಯ ಕೊಲೆಯನ್ನು ಸೂಚಿಸದೆ ಮತ್ತೇನು? ಈ ಸಂಕಲನದ

ಕೊನೆಯ ಕಥೆಯೇ 'ಅಮಾಸ'. ಈ ಕಥೆಯಲ್ಲಿ ತಂದೆ ತಾಯಿಗಳನ್ನು ತಿಂದುಕೊಂಡ ತಬ್ಬಲಿ ಅಮಾಸನ ಬೆಳವಣಿಗೆಯ ಚಿತ್ರಣವಿರುವಂತೆಯೇ ಹಳ್ಳಿಯಲ್ಲಿ ನಡೆಯುವ ಮಾರಿಹಬ್ಬದ ಚಿತ್ರಣವೂ ಇದೆ. ರೈಲ್ವೆ ಗ್ಯಾಂಗು ಮನ್ನು ಸಿದ್ದಪ್ಪ ವೋವರಾಗಿ ಕುಡಿದಾಗ ಆಡುವ ಮಾತುಗಳಲ್ಲಿ ದಲಿತರ ಆಕ್ರೋಶ ರೊಚ್ಚು ಅಸಹಾಯಕತೆಗಳಿವೆ. ಈ ಏಳೂ ಕಥೆಗಳಲ್ಲಿ ಯಾವುದಕ್ಕೂ 'ದ್ಯಾವನೂರು' ಎಂಬ ಶೀರ್ಷಿಕೆಯಿಲ್ಲ. ಆದರೂ ಸಂಕಲನದ ಹೆಸರು 'ದ್ಯಾವನೂರು' ಎಂದಿದೆ. ಬಹುಶಃ ದ್ಯಾವನೂರಿನ ಸುತ್ತಮುತ್ತಲಿನ ಮಣ್ಣಿನ ಕಥೆಗಳು ಇವು ಆಗಿರುವುದರಿಂದ 'ದ್ಯಾವನೂರು' ಎಂಬ ಹೆಸರನ್ನು ಈ ಸಂಕಲನಕ್ಕೆ ಇಟ್ಟಿರಬಹುದು. ಅಥವಾ ದೇವನೂರ ಅವರು ಹೇಳಿದ ಕಥೆಗಳು ಇವು ಎಂಬ ಅರ್ಥದಲ್ಲಿಯೂ ಇರಬಹುದು. ಈ ಸಂಕಲನ ಪ್ರಥಮವಾಗಿ ನಮ್ಮ ಗಮನ ಸೆಳೆಯುವುದು ತನ್ನ ಭಾಷೆಯಿಂದಾಗಿ. ಆಡುಮಾತನ್ನು ರವಷ್ಟೂ ಸಂಸ್ಕರಿಸದೆ ಹಸಿಹಸಿಯಾಗಿ ಅದರ ತಾಜಾತನದಲ್ಲಿಯೇ ಬಳಸಿದೆ; ಪಾತ್ರಗಳ ಬಾಯಲ್ಲಿ, ವಿವರಣೆಯಲ್ಲಿ. ಅಂತೆಯೇ ಬರವಣಿಗೆಯಲ್ಲಿನ ಸಂಯಮವೂ ಗಮನಿಸುವಂಥದು. "ಕೈಗಳ ಟಾರು ಬಾಯಿಗೆ ಬಂದು ಅಳು ನಿಂತಿತು" ಎನ್ನುವಲ್ಲಿ, "ಅವ ಓಡುವ ಓಟಕ್ಕೆ ಕತ್ತಲು ಕಲಕುತ್ತಿರುವಂತೆ ಹೊಳೆಯುತ್ತದೆ" ಎನ್ನುವಲ್ಲಿ ನಾಲ್ಕಾರು ವಾಕ್ಯಗಳಲ್ಲಿ ಹೇಳಬಹುದಾದುದನ್ನು ಒಂದೊಂದೇ ವಾಕ್ಯದಲ್ಲಿ ಹೇಳಿದ್ದಾರೆ. ಇದು ದೇವನೂರ ಮಹಾದೇವ ಅವರ ಪ್ರಥಮ ಸಂಕಲನವಾಗಿದ್ದರೂ ಅವರ ಬಹುತೇಕ ಕಥೆಗಳು ನವ್ಯ ಕಥೆ, ಕಥೆಗಾರರಿಗೆ ಸಹಜವಾದ ಕಾಮದಿಂದ ಹೊರತಾಗಿರುವುದು ಅವರ ಆರೋಗ್ಯಕರವಾದ ನಿಲುವನ್ನು ತೋರಿಸುತ್ತದೆ. 'ಗ್ರಸ್ತರು', 'ಒಂದು ದಹನದ ಕಥೆ' ಮತ್ತು 'ದತ್ತ' ಕಥೆಗಳಲ್ಲಿ ವೈಚಾರಿಕತೆ, ಸಮಾಜದ ಕಟ್ಟುಪಾಡುಗಳ ಕಪಿಮುಷ್ಠಿ ಇವುಗಳು ಕಂಡುಬಂದರೆ, 'ಮಾರಿಕೊಂಡವರು', 'ಮೂಡಲು ಸೀಮೇಲಿ ಕೊಲೆಗಿಲೆ ಮುಂತಾಗಿ' ಮತ್ತು 'ಅಮಾಸ' ಕಥೆಗಳಲ್ಲಿ ದೀನದಲಿತರ, ಸಮಾಜದ ಶೋಷಣೆಗೆ ಒಳಗಾದವರ ಚಿತ್ರಣವಿದೆ. ಯಾವುದೇ ಆಕ್ರೋಶಕ್ಕೆ ಒಳಗಾಗದೆ ಆ ವರ್ಗದ ಚಿತ್ರಣವನ್ನು ಕೊಟ್ಟಿದ್ದಾರೆ. ಆದರೂ 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಮತ್ತು ಇತರ ಕಥೆಗಳನ್ನು ಓದಿದಾಗ ಅವು ದೇಹದ ರಕ್ತವನ್ನು ಥಣ್ಣಗೆ ಕೊರೆದಂತೆ ಅನ್ನಿಸುತ್ತದೆ. ತಮ್ಮದೆ ಆದ ಶೈಲಿ, ನಿರೂಪಣಾ ವಿಧಾನ, ಆಡುಮಾತಿನ ವೈಶಿಷ್ಟ್ಯಗಳಿಂದ ಗಮನ ಸೆಳೆದಿರುವ ದೇವನೂರ ಮಹಾದೇವ ಅವರಿಂದ ಇನ್ನೂ ಹೆಚ್ಚಿನದನ್ನು ನಿರೀಕ್ಷಿಸಬಹುದು.

ಅಬಚೂರಿನ ಪೋಸ್ಟಾಫೀಸು

ಅಬಚೂರಿನ ಪೋಸ್ಟಾಫೀಸು ಪೂರ್ಣಚಂದ್ರ ತೇಜಸ್ವಿ ಅವರ ಏಳು ಕಥೆಗಳ ಸಂಕಲನ. 'ಹುಲಿಯೂರಿನ ಸರಹದ್ದು' ಬಂದ ಹತ್ತು ವರ್ಷಗಳನಂತರ ಬರುತ್ತಿದೆ.

'ಹುಲಿಯೂರಿನ ಸರಹದ್ದು' ಕಥಾ ಸಂಕಲನ ಬಂದ ಮೇಲೆ ತೇಜಸ್ವಿ ಅವರು ಸಣ್ಣಕಥೆಗಳನ್ನು ಬರೆಯುವುದನ್ನು ನಿಲ್ಲಿಸಿಯೇ ಬಿಟ್ಟರೇನೋ ಎನಿಸಿತ್ತು. ಮತ್ತೆ ಇತ್ತೀಚೆಗೆ ಸಣ್ಣ ಕಥೆಗಳ ಕಡೆ ತೇಜಸ್ವಿ ಅವರ ಗಮನ ಹರಿದಿರುವುದು ಸಂತೋಷದ ವಿಷಯ. ಇಲ್ಲಿನ ಕಥೆಗಳಲ್ಲಿ 'ತ್ಯಕ್ತ' ೧೯೬೪ರಲ್ಲೂ, 'ಅಬಚೂರಿನ ಪೋಸ್ಟಾಫೀಸು' ೧೯೭೧ರಲ್ಲೂ, 'ಅವನತಿ' ೧೯೭೨ರಲ್ಲೂ ರಚಿತವಾದ ಕಥೆಗಳು. ಉಳಿದವು ೧೯೭೩ರಲ್ಲಿ ರಚನೆಯಾದ ಕಥೆಗಳು.

'ಅಬಚೂರಿನ ಪೋಸ್ಟಾಫೀಸು' ಕಥೆಯಲ್ಲಿ ಅಬಚೂರಿಗೆ ಪೋಸ್ಟಾಫೀಸು ಬಂದುದರಿಂದ, ನೆಮ್ಮದಿಯಿಂದಿದ್ದ ಬೋಬಣ್ಣನ ಸಂಸಾರದಲ್ಲಿ ಅಶಾಂತಿಯ ತೆರೆಗಳೆದ್ದು ಕೊನೆಗೆ ಬೋಬಣ್ಣ ಅಬಚೂರನ್ನು ಬಿಟ್ಟು ಹೋಗುವುದರಲ್ಲಿ ಅದು ಪರ್ಯವಸಾನವಾಗುತ್ತದೆ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ ಅಬಚೂರಿಗೆ ನಾಗರಿಕತೆ ಕಾಲಿಟ್ಟುದುದರಿಂದ ಬೋಬಣ್ಣನ ಸಂಸಾರ ಹಾಳಾಯಿತೆಂದು ಹೇಳಬಹುದು. ಇದಕ್ಕೆ ಪೋಷಕವಾಗಿ ಬೋಬಣ್ಣನ ಅತ್ತೆ ಮಾಚಮ್ಮ ಮಗಳು ಮತ್ತು ಅಳಿಯನನ್ನು ಸದಾ ತನ್ನ ಹಿಡಿತದಲ್ಲಿಟ್ಟುಕೊಂಡಿರಬೇಕೆಂಬ ಸ್ವಾರ್ಥ ದೃಷ್ಟಿಯೂ, ಹೆಂಡತಿ ಕಾವೇರಿಯ ಅಸಹಕಾರ ವರ್ತನೆಯೂ ಬರುತ್ತವೆ. ಬೋಬಣ್ಣನ ಸಂಸಾರದಲ್ಲಿ ತಲೆದೋರಿದ ಅಶಾಂತಿ ಇಡಿಯ ಅಬಚೂರಿನ ಜನತೆಯನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡು ಬೋಬಣ್ಣ ಅಬಚೂರಿನಿಂದ ಓಡಿಹೋಗುವ ಘಟನೆಯೊಂದಿಗೆ ಮುಕ್ತಾಯವಾಗುತ್ತದೆ. ಈ ಕಥೆ ಚಲನಚಿತ್ರವಾಗಿ ೧೯೭೩ರ ಪ್ರಾದೇಶಿಕ ಪ್ರಶಸ್ತಿಯನ್ನು ಪಡೆದಿದೆ. ಇಂತಹುದೇ ಕಥೆ 'ತುಕ್ಕೋಜಿ', ತುಕ್ಕೋಜಿಯ ವೈಯಕ್ತಿಕ ಜೀವನದಲ್ಲಿ ಉಂಟಾದ ಅಶಾಂತಿಯಿಂದ "ತುಕ್ಕೋಜಿಯ ಚಿತ್ತ ಸ್ವಾಸ್ಥ್ಯ ಕೆಡಲುಹೋಗಿ ಅವನು ಇಡೀ ಗುರುಗಳ್ಳಿ ಪೇಟೆಯ ಠೀವಿಯನ್ನೇ ಅಗೋಚರವಾಗಿ ಕೆಡಿಸತೊಡಗಿದನು." ಈ ಎರಡೂ ಕಥೆಗಳಲ್ಲಿ ವಯ್ಯಕ್ತಿಕ ಜೀವನದ ಆಗು ಹೋಗುಗಳು ಇಡೀ ಊರಿನ ಮೇಲೆ ಪರಿಣಾಮ ಮಾಡುವುದನ್ನು ನೋಡುತ್ತೇವೆ. 'ನಾಗರಿಕತೆಯ ಆಗಮನದಿಂದ ಊರಿನ ಮೇಲೆ ಆಗುವ ಅಗೋಚರ ಪರಿಣಾಮಗಳ ಚಿತ್ರಣವೂ ಇದೆ, ಈ ಕಥೆಗಳಲ್ಲಿ. ಕಥೆಗಳಲ್ಲಿನ ತಿಳಿಯಾದ ಮುಕ್ತ ಹಾಸ್ಯ, ವಿಡಂಬನೆಗಳು ಕಥೆಗಳಿಗೆ ವಿಶೇಷ ಮೆರುಗನ್ನು ಕೊಟ್ಟಿವೆ. ಕಥೆಗಳಲ್ಲಿ ಹಾಸ್ಯ ವಿಡಂಬನೆಗಳು ಹೇಗಿರಬೇಕೆಂಬುದಕ್ಕೆ ಮೇಲಿನ ಕಥೆಗಳಲ್ಲಿನ ಹಾಸ್ಯ ವಿಡಂಬನೆಗಳು ಮಾದರಿಯಾಗಿವೆ. 'ಅವನತಿ' ಕಥೆಯ ಇಸ್ಲಾಪುರದ ಸೂರಾಚಾರಿಯನ್ನು ಕುರಿತು "..... ಅವನು ಕೊಂಚವೂ ತನ್ನ ಅಸಮಾನ್ಯ ಕಲೆಗಾರಿಕೆಯ ಬಗ್ಗೆ ಪ್ರಜ್ಞಾವಂತನಾಗಿಲ್ಲದಿದ್ದರೂ ಶ್ರೇಷ್ಠ ಕಲಾವಂತಿಕೆ ಸೂರಾಚಾರಿಯ ಕೈಗಳಿಗೆ ಸಿದ್ಧಿಸಿತ್ತು.... ಆದರೆ ಅದನ್ನೊಂದು ಕಲೆ ಎಂದು ತಿಳಿಯುವುದೇ ಆಗಲಿ ಅಥವಾ

ಒಂದು ಅಭಿವ್ಯಕ್ತಿ ಮಾಧ್ಯಮ ಎಂದು ತಿಳಿಯುವುದೇ ಆಗಲಿ ಅವನಿಂದ ಕನಸಿನಲ್ಲೂ ಸಾಧ್ಯವಿರಲಿಲ್ಲ. ಆದರೂ ಅವನೊಬ್ಬ ಮಹಾನ್ ಕಲಾವಿದನೇ ಆಗಿದ್ದ....." ಇಂತಹ ಸೂರಾಚಾರಿ ತುಳಸಿಕಟ್ಟೆ ಮಾಡುವುದು, ಒಳಕಲ್ಲುಗಳಿಗೆ ಮುಳ್ಳು ಹುಯ್ದು ಕೊಡುವುದು ಮಾರಿಮಸಣೆಗಳನ್ನು ಮಾಡಿಕೊಡುವುದು ಇಂತಹ ಇನ್ನೂ ನೂರಾರು ಅರ್ಥಹೀನವಾದ ಅಸಂಬದ್ಧವಾದ ಯಾವು ಯಾವುದೋ ಕಸುಬುಗಳನ್ನು ಮಾಡುತ್ತಿದ್ದನು. ಹೀಗೆ ಸೂರಾಚಾರಿಗೆ ಅರಿವಿಲ್ಲದಂತೆಯೇ ಅವನತಿ ಹೊಂದಿರುವ ಚಿತ್ರಕಥೆಯಲ್ಲಿ ಬರುತ್ತದೆ. ಹಾಗೆಯೆ ಇತ್ತಾವರದ ಗೌರಿ; "ಅಲ್ಲಿ ಗೌರಿ ಒಂದು ಆಶ್ಚರ್ಯಾದ್ಭುತವಾಗಿದ್ದಳು. ಸೌಂದರ್ಯದಲ್ಲಿ ಸಕಲ ಶಿಲ್ಪ ಶಾಸ್ತ್ರ ಲಕ್ಷಣಗಳ ಅವತಾರದಂತೆ ಕಾಣುತ್ತಿದ್ದಳು..... ಆಕೆಯ ನಡೆ ಚರ್ಯೆ ನಿಲ್ಲುವ ನಡೆಯುವ ಭಂಗಿ ಇವುಗಳ ವಿನ್ಯಾಸವಂತೂ ಸೌಂದರ್ಯವೇ ಛಂದೋಬದ್ಧವಾದಂತೆ ಕಾಣುತ್ತಿತ್ತು. ಕುಳಿತರೆ, ನಿಂತರೆ, ನಕ್ಕರೆ ಒಂದೊಂದು ಸಾರಿಯೂ ಒಂದೊಂದು ಸಾಕ್ಷಾತ್ಕಾರವಾದಂತಾಗುತ್ತಿತ್ತು. ಆದರೆ ಯಾರಿಗೆ ಆಗುತ್ತಿತ್ತು ಎನ್ನುವುದು ಮಾತ್ರ ಸಂಶಯಾಸ್ಪದ ಪ್ರಶ್ನೆ. ಏಕೆಂದರೆ ಯಾರಿಗೂ ಆದರತ್ತ ಗಮನವೇ ಇಲ್ಲ" ಎನ್ನುವಲ್ಲಿ ಆಕೆಯ ಅವನತಿಯಿದೆ. ಆದರೆ ಗೌರಿಗೆ ಸೂರಾಚಾರಿಯಂತಲ್ಲದೆ ತನ್ನ ಸೌಂದರ್ಯದ ಬಗೆಗೆ ಕಿಂಚಿತ್ತಾದರೂ ಅರಿವಿದೆ. ಹಾಗೆಯೆ ಅವಳ ಮೈದುನ ವಿಶ್ವನಾಥನಿಗೂ ಅವಳ ಸೌಂದರ್ಯದ ಅರಿವಿದೆ. ಹೀಗೆ ಈ ಕಥೆಯಲ್ಲಿ ಮಹಾನ್ ಶಿಲ್ಪಿಯಾಗಬೇಕಾದವನು ಸಾಮಾನ್ಯರಲ್ಲಿ ಸಾಮಾನ್ಯವಾಗಿ ತನ್ನ ತನದ ಅರಿವೇ ಇಲ್ಲದಿರುವುದು, ಮಹಾರಾಣಿಯಾಗಿರಬೇಕಾದವಳು ಹಳ್ಳಿಯ ಅರಸಿಕ ರೈತನೊಬ್ಬನ ಮಡದಿಯಾಗಿ ಕಾಲ ನೂಕಬೇಕಾಗಿರುವುದು ಅವರವರ ಅವನತಿಯನ್ನು ತೋರಿಸುತ್ತದೆ. ಕಥೆಯಲ್ಲಿ ಪ್ರಧಾನವಾಗಿ ಇವರಿಬ್ಬರ ಅವನತಿಯೇ ಗೋಚರಿಸಿದರೂ ಇಡಿಯ ಸಮಾಜವೇ ಹೇಗೆ ಅವನತಿಯನ್ನು ಹೊಂದಿದೆ ಎಂಬುದನ್ನು ಚಿತ್ರಿಸುವುದು ಕಥೆಗಾರರ ಗುರಿ. ಆದರೆ ಸೂರಾಚಾರಿ ಮತ್ತು ಗೌರಿಯರ ಅವನತಿಯೆ ಪ್ರಧಾನವಾಗಿ ಸಮಾಜದ ಅವನತಿಯ ಚಿತ್ರ ಮುಸುಕು ಮಸುಕಾಗಿದೆ ಅಥವಾ ಅತ್ತ ಓದುಗರ ಗಮನ ಹೋಗುವುದಿಲ್ಲ. 'ಕುಬಿ ಮತ್ತು ಇಯಾಲ' ಕಥೆಯೂ ಸಾಮಾಜಿಕ ಅವನತಿಯನ್ನು ತೋರುವ ಕಥೆಯೆ. ಈ ಕಥೆಯ ಕುಬೇರನಾಥ ರೋಗದ ವಿರುದ್ಧ ಹೋರಾಡುವುದೆಂದರೆ ಅಜ್ಞಾನದ ವಿರುದ್ಧ ಹೋರಾಡುವುದೆಂದು ಭಾವಿಸಿ ಹಾಗೆಯೇ ಮಾಡುತ್ತಾನೆ. ಆದರೆ ಅವನ ಪ್ರಯತ್ನ ವ್ಯರ್ಥ ಸಾಹಸವಾಗುತ್ತದೆ. "ಜ್ಞಾನ ತನ್ನೊಡನೆ ಅಜ್ಞಾನವನ್ನು ಒಯ್ಯುವುದು ಅದರ ಆನುವಂಶಿಕ ಗುಣವೊ ಅಥವಾ ಇದೊಂದು ಚಾರಿತ್ರಿಕವಾದ ದುರಂತವೊ ಯಾರು ಬಲ್ಲರು!" "ಕುಬಿ ತಾನು ಯಾವುದನ್ನು ನಂಬದೆ

ವಿರೋಧಿಸಿ ತಿರಸ್ಕರಿಸಿದನೋ ಅದನ್ನೇ ಗೂಢವಾಗಿ ಇನ್ನೊಂದು ಕಡೆಯಿಂದ ಪ್ರತಿಪಾದಿಸುತ್ತಲೂ ಬಂದುದು ಕಾಲಪುರುಷನ ಅಪಹಾಸ್ಯ. ಇತಿಹಾಸದ ವ್ಯಂಗ್ಯ." ಹೀಗೆ ಕುಬೇರನಾಥನ ಅಜ್ಞಾನ ನಿವಾರಣೆಯ ಪ್ರಯತ್ನ ಹೆಚ್ಚಾದಂತೆಲ್ಲಾ ಭೈರಾಪುರದ ಜನತೆ ತಮ್ಮ ಅಜ್ಞಾನ, ಮೂಢನಂಬಿಕೆಗಳಲ್ಲಿ ಹೆಚ್ಚು ಹೆಚ್ಚಾಗಿ ನಂಬುಗೆಯಿಡುತ್ತಾ ಅದಕ್ಕೊಂದು ಕಾರಣವನ್ನೂ ಕಲ್ಪಿಸಿಕೊಳ್ಳುತ್ತಾರೆ. ಕಥೆ ಅಜ್ಞಾನ ನಿವಾರಣೆಯ ಪ್ರವಚನವಾಗದೆ ಈ ಸಂಕಲನದ ಉತ್ತಮ ಕಥೆಗಳಲ್ಲೊಂದಾಗಿದೆ. ಇಯಾಲಳ ಸಾವಿನ ಸುತ್ತ ಕಥೆ ಬೆಳೆಯತೊಡಗಿ ಗೂಢವಾಗುತ್ತ ಸ್ವರೂಪದಲ್ಲಿ ಪತ್ತೇದಾರಿ ಕಥೆಯನ್ನು ಹೋಲುತ್ತದೆ. ಪ್ರಾಸಂಗಿಕವಾಗಿ ಬರುವ ಆದರೆ ಕಥೆಯ ಅನಿವಾರ್ಯ ಅಂಗವಾದ ವಿವರಣೆಗಳಲ್ಲಿ ಅಧಿಕಾರಿಗಳ ಕರ್ತವ್ಯಭ್ರಷ್ಟತೆ, ಪುಢಾರಿಗಳ ಸ್ವಾರ್ಥ ದೀನದಲಿತರ ಅಸಹನೀಯವಾದ ಬಾಳಿನ ಚಿತ್ರಗಳಿವೆ. 'ಅವನತಿ' ಕಥೆಯ ಆವರಣಕ್ಕಿಂತ ಇಲ್ಲಿಯ ಆವರಣ ಹೆಚ್ಚು ನಾಗರಿಕವಾದುದು. ಆದರೆ ಎರಡೂ ಕಥೆಗಳ ಜನರ ಗುಣ ಸ್ವಭಾವಗಳು ಒಂದೇ. ಈ ಕಥೆಗಳ ಸಾಲಿಗೆ ಸೇರಿಸಬಹುದಾದ ಮತ್ತೊಂದು ಕಥೆ ಎಂದರೆ 'ತಬರನ ಕಥೆ'. ಉಳಿದೆರಡು ಕಥೆಗಳ ಆವರಣಕ್ಕಿಂತ ಇಲ್ಲಿನ ಆವರಣ ಭಿನ್ನವಾದುದು. ಸರಕಾರಿ ಕಛೇರಿಗಳ ಚಕ್ರವ್ಯೂಹದೊಳಗೆ ಸಿಲುಕಿ ದಿಕ್ಕೆಟ್ಟು ಮತಿಭ್ರಷ್ಟನಾದ ತಬರಸೆಟ್ಟಿಯ ಕಥೆಯಿದು. ಸುಮಾರು ಮುವ್ವತ್ತು ವರ್ಷಗಳ ಕಾಲ ಸರಕಾರದ ವಿವಿಧ ಇಲಾಖೆಗಳಲ್ಲಿ ನಾಲ್ಕನೆ ದರ್ಜೆಯ ನೌಕರನಾಗಿ ಸೇವೆ ಸಲ್ಲಿಸಿಯೂ ತನಗೆ ನ್ಯಾಯವಾಗಿ ಬರಬೇಕಾದ ಪೆನ್‌ಷನ್ ಮೊದಲಾದ ಯಾವ ಸವಲತ್ತನ್ನೂ ಪಡೆಯಲಾರದೆ, ಹೆಂಡತಿ ಅಪ್ಪಮ್ಮನ ಕೊನೆಗಾಲದಲ್ಲಿ ಆಕೆಗೆ ಯಾವ ಆರೈಕೆಯನ್ನೂ ಮಾಡಲಾರದೆ ಮತಿಭ್ರಷ್ಟನಾದ ತಬರಸೆಟ್ಟಿ ಪಡುಗೆರೆಯ ಯಾರಿಗೂ ಆಶ್ಚರ್ಯವನ್ನುಂಟು ಮಾಡದಿದ್ದರೂ ಕೆಲವರಿಗಾದರೂ ತಬರಸೆಟ್ಟಿಯ ಸ್ಥಿತಿಯನ್ನು ಕಂಡು "ಮಾನವನನ್ನೂ ಮಾನವೀಯತೆಯನ್ನೂ ಕರಕರ ಜಗಿದು ಅಗಿದು ಉಗಿಯುತ್ತಾ ಇರುವ ಒಂದು ಸೈತಾನ ವ್ಯೂಹ ಕಂಡಿತು." ಎನ್ನುವಲ್ಲಿ ನಮ್ಮ ಸರಕಾರೀ ವ್ಯವಸ್ಥೆಯ ಭೀಕರ ವಿರಾಡ್ರೂಪದ ನಗ್ನ ಚಿತ್ರ ಆ ಕೆಲವರಿಗಾದರೂ ಕಂಡಿದೆ ಎಂದೆನಿಸುತ್ತದೆ. ಕಥೆಯಲ್ಲಿ ಅದು ಪರಿಣಾಮಕಾರಿಯಾಗಿ ಮೂಡಿಬಂದಿದೆ. ಈ ಮೂರು ಕಥೆಗಳಲ್ಲಿ ಸಮಾಜದ ಅವನತಿಯ ವಿವಿಧ ಮುಖಗಳನ್ನು ಕಾಣುತ್ತೇವೆ. 'ಡೇರ್ ಡೆವಿಲ್ ಮುಸ್ತಾಫ' 'ಹುಲಿಯೂರಿನ ಸರಹದ್ದು' ಸಂಕಲನದ 'ಪಂಜ್ರೊಳ್ಳಿ ಪಿಶಾಚಿಯ ಸವಾಲು' ಕಥೆಯನ್ನು ನೆನಪಿಗೆ ತರುತ್ತದೆ. ವಿದ್ಯಾರ್ಥಿ ಜೀವನದ ರಸನಿಮಿಷಗಳ ರಸದೌತಣವೇ ಇಲ್ಲಿದೆ. ಎಷ್ಟು ಬಾರಿ ಓದಿದರೂ ಮತ್ತೆ ಮತ್ತೆ ಓದಬೇಕೆನಿಸುವ ಓದಿದಂತೆಲ್ಲಾ ಕಚಗುಳಿಯಿಟ್ಟು ನಗಿಸುವ ಈ ಕಥೆಯಲ್ಲಿ ಕನ್ನಡದ ಅತ್ಯಂತ ಶ್ರೇಷ್ಠ ಹಾಸ್ಯ

ಬರಹಗಾರರನ್ನಾಗಿ ತೇಜಸ್ವಿ ಅವರನ್ನು ಕಾಣಬಹುದು. 'ತ್ಯಕ್ತ' ಈ ಸಂಕಲನದ ಕೊನೆಯ ಕಥೆ. ಈ ಸಂಕಲನದ ಉಳಿದ ಕಥೆಗಳೊಂದಿಗೆ ಹೊಂದಿಕೊಳ್ಳದೆ, ಈ ಕಥೆ, ಹೊರತಾಗಿಯೆ ನಿಲ್ಲುತ್ತದೆ. ಕಾಲದ ದೃಷ್ಟಿಯಿಂದಲೂ ತಂತ್ರ ಮತ್ತು ನಿರೂಪಣಾ ದೃಷ್ಟಿಯಿಂದಲೂ 'ಹುಲಿಯೂರಿನ ಸರಹದ್ದು' ಸಂಕಲನದ 'ಊರ್ವಶಿ' ಮತ್ತು 'ಹುಲಿಯೂರಿನ ಸರಹದ್ದು' ಕಥೆಗಳಿಗೆ, ಈ ಕಥೆ. ಅತಿ ಸಮೀಪವಾಗಿದೆ. ಆ ಕಥೆಗಳ ನಾಯಕನೇ ಈ ಕಥೆಯ ನಾಯಕ. ಕಥೆಗಾರನೆ ಕಥಾನಾಯಕನಾಗಿರುವ ಆತ್ಮನಿಷ್ಠ ಬರವಣಿಗೆಯ ಈ ಕಥೆಯಲ್ಲಿ ಭಾಷೆಗೆ ಅತೀತವಾದುದನ್ನು ಭಾಷೆಯಲ್ಲಿ ಹೇಳಬೇಕೆಂಬ ಕಥಾನಾಯಕನ ವ್ಯರ್ಥಪ್ರಯತ್ನವನ್ನು ಕಾಣುತ್ತೇವೆ. 'ತ್ಯಕ್ತ' ಕಥೆಯೊಂದನ್ನುಳಿದಂತೆ ಉಳಿದ ಕಥೆಗಳು ಕನ್ನಡದ ಅತ್ಯುತ್ತಮ ಕಥೆಗಳ ಗುಂಪಿಗೆ ಸೇರುತ್ತವೆಂಬುದರಲ್ಲಿ ಸಂಶಯವೇ ಇಲ್ಲ. 'ಹುಲಿಯೂರಿನ ಸರಹದ್ದು' ಕಥಾ ಸಂಕಲನದಿಂದ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನಕ್ಕೆ ಬರುವ ವೇಳೆಗೆ ಗುರುತು ಹಿಡಿಯಲಾಗದಷ್ಟು ಎತ್ತರಕ್ಕೆ ಕಥೆಗಾರರು ಬೆಳೆದಿರುವುದಲ್ಲದೆ ಇನ್ನೂ ಬೆಳೆಯುವ ಸೂಚನೆಯನ್ನೂ ತೋರುತ್ತಿದ್ದಾರೆ. ತಮ್ಮ ಹಿಂದಿನ ಕಥೆಗಳಲ್ಲಿನ ಸಾಂಕೇತಿಕ ಮಾರ್ಗದ ನಿರೂಪಣೆಯನ್ನು ಬೇಕೆಂದೇ ಕೈಬಿಟ್ಟಿದ್ದಾರೆ. ಆ ಮಾರ್ಗ ಅವ್ಯಕ್ತ ಭಾರತದ (ಜನ ಸಾಮಾನ್ಯರ) ಎದುರು ಅಸಂಬದ್ಧ ಎಂಬ ಸತ್ಯದ ಆವಿಷ್ಕಾರ ಕಥೆಗಾರರಿಗೆ ಆಗಿರುವುದೇ ಅದಕ್ಕೆ ಕಾರಣ. ಸಾಂಕೇತಿಕ ಮಾರ್ಗದ ಬದಲು ಕಥೆಯನ್ನು ನೇರವಾಗಿ ಅದರ ಸೂಕ್ಷ್ಮಾಸೂಕ್ಷ್ಮ ವಿವರಗಳೊಂದಿಗೆ ಹೇಳುವ, ಮಹತ್ತಾದುದನ್ನು ಹೇಳುವಾಗಲೂ ಸ್ಪಷ್ಟವಾಗಿ ಹೇಳುವ ತಮ್ಮದೇ ಆದ ವಿಶಿಷ್ಟ ಮುದ್ರೆಯಿಂದ ಕೂಡಿದ ರೀತಿ ತೇಜಸ್ವಿ ಅವರ ಕಥೆಗಳ ರೀತಿ. (ರಷ್ಯನ್ ಕಥೆಗಳು ಹೀಗೆ ದಟ್ಟವಾದ ಅತಿ ಸೂಕ್ಷ್ಮವಾದ ವಿವರಗಳಿಂದ ಕೂಡಿರುತ್ತವೆ ಎಂದು ಹೇಳುತ್ತಾರೆ.) ಕಥಾ ಸಂಕಲನದ ಪ್ರಸ್ತಾವನಾ ರೂಪದಲ್ಲಿರುವ 'ಹೊಸ ದಿಗಂತದೆಡೆಗೆ' ಅಲ್ಲಿ ನವ್ಯ ಸಾಹಿತ್ಯದ ಪೊಳ್ಳುತನವನ್ನು ಹೊರಗೆಡಹಿ ಅದನ್ನು ತರಾಟೆಗೆ ತೆಗೆದುಕೊಂಡಿರುವ ತೇಜಸ್ವಿ ಅವರು "ಲೋಹಿಯಾರವರ ತತ್ವ ಚಿಂತನೆ, ಕುವೆಂಪುರವರ ಕಲಾ ಸೃಷ್ಟಿ, ಕಾರಂತರ ಜೀವನ ದೃಷ್ಟಿ ಮತ್ತು ಬದುಕಿನಲ್ಲಿ ಪ್ರಯೋಗ ಶೀಲತೆ ಈ ಮೂರೇ ನನ್ನ ಈಚಿನ ಸಾಹಿತ್ಯ ರಚನೆಯ ಮೇಲೆ ಗಾಢ ಪರಿಣಾಮ-ವನ್ನುಂಟುಮಾಡಿರುವಂಥವು." ಎಂದು ಸ್ವವಿಮರ್ಶೆಯನ್ನೂ ಮಾಡಿಕೊಂಡಿದ್ದಾರೆ. ವೈವಿಧ್ಯಮಯ ಬದುಕಿನ ವಿವಿಧ ಮುಖಗಳ ಪರಿಚಯ ಹೊಂದುವಲ್ಲಿ ಎರಡನೆಯ ಕಾರಂತ ಎಂದು ಕರೆಸಿಕೊಳ್ಳಬಹುದಾದ ತೇಜಸ್ವಿ ಅವರು ಹೊಸ ಪಂಥವೊಂದರ ಪ್ರವರ್ತಕರಾಗಲಿ ಆಗದಿರಲಿ, ಅವರ ಇನ್ನು ಮುಂದಿನ ಸಾಹಿತ್ಯ ಸೃಷ್ಟಿ ನವ್ಯ ಪಂಥದಿಂದ ಭಿನ್ನವೂ ವಿಶಿಷ್ಟವೂ ಆಗಿರುತ್ತದೆಂಬುದರಲ್ಲಿ ಸಂಶಯವಿಲ್ಲ.

ಮೌನಿ

ಯು.ಆರ್. ಅನಂತಮೂರ್ತಿಯವರ **ಮೌನಿ** ಮೂರು ಕಥೆಗಳ ಸಂಗ್ರಹ. ಕ್ಲಿಪ್‌ಜಾಯಿಂಟ್ ಮೌನಿ, ನವಿಲುಗಳು ಇಲ್ಲಿನ ಕಥೆಗಳು. ೧೯೬೪ರಿಂದ ೧೯೭೨ರ ಎಂಟು ವರ್ಷಗಳ ಅವಧಿಯಲ್ಲಿ ಅವರು ಬರೆದದ್ದು ಈ ಮೂರೇ ಕಥೆಗಳು.

'ಕ್ಲಿಪ್‌ಜಾಯಿಂಟ್' ಕಥೆಯಲ್ಲಿ ತನ್ನ ಭೂತದಿಂದ ತಪ್ಪಿಸಿಕೊಂಡು ಇಂಗ್ಲೆಂಡಿಗೆ ಬಂದ ಕೇಶವ ಹೊಸ ಅನುಭವದ ಅನ್ವೇಷಣೆಗೆ ಹೊರಟು ಕಡೆಗೆ ಶೂನ್ಯದ ಅನುಭವದಲ್ಲಿ ನಿಲ್ಲುತ್ತಾನೆ. ಇಂಗ್ಲೆಂಡಿನಲ್ಲಿ ಬದುಕುವ ಕೇಶವನ ವರ್ತಮಾನದಲ್ಲೂ ಕಾಡುವ ಭೂತ ಕಾಲದ, ತಾನು ಬಿಡಿಸಿಕೊಳ್ಳಲಾಗದ ಭೂತಕಾಲದ ನೆನಪುಗಳು. ಎರಡು ಸಂಸ್ಕೃತಿಗಳ ಸಂಘರ್ಷದ ನಡುವೆ, ಕೇಶವ ಮೂರನೆಯದಾದ ಬೇರೊಂದು ಅನುಭವದ ಸಾಕ್ಷಾತ್ಕಾರಕ್ಕೆ, ತನ್ನ ಗೆಳೆಯ ಸ್ಟೂಅರ್ಟ್‌ನೊಂದಿಗೆ ಅಲೆದಾಡುತ್ತಾ, ಸ್ಟ್ರಿಪ್‌ಟೀಸ್ ನೋಡುತ್ತ, ರೋಸಿಯ ನಗ್ನತೆಯಲ್ಲಿ ಶೂನ್ಯದ ಅನುಭವವನ್ನು ಪಡೆದು, ಬದುಕಿನ ಚರಮಾವಸ್ಥೆ ಇದೇ ಇರಬಹುದೇ ಎಂಬ ಶಂಕೆಯಲ್ಲಿ ಉರಿಯುತ್ತಾ ನಿಲ್ಲುತ್ತಾನೆ. ಕಥೆ ಹೇಳುವ ರೀತಿ, ಹಿಂದಿನ ನೆನಪುಗಳು ವರ್ತಮಾನದಲ್ಲಿ ಸುರುಳಿ ಬಿಚ್ಚಿಕೊಂಡು ವರ್ತಮಾನದೊಂದಿಗೆ ಹೆಣೆದುಕೊಳ್ಳುವ ಮೋಡಿ, ಕಡೆಗೆ ಕೇಶವನ ಅನ್ವೇಷಣೆ ಕ್ಲಿಪ್‌ಜಾಯಿಂಟ್‌ನಲ್ಲಿ ಸಿಕ್ಕಿಕೊಳ್ಳುವ ಏರುವೆ- ತುಂಬ ಪರಿಣಾಮಕಾರಿ -ಯಾಗಿದೆ. ಕೇಶವನಲ್ಲಿ ನಡೆಯುವ ಎರಡು ಸಂಸ್ಕೃತಿಗಳ ಸಂಘರ್ಷಣೆಯಿಂದ ನಡೆಯುವ ತುಲನೆ ಮತ್ತು ವೈಚಾರಿಕತೆ ಹೊಸ ರೀತಿಯದಾಗಿದೆ.

'ನವಿಲುಗಳು' ಕಥೆಯಲ್ಲಿ ಎಳೆಯಂದಿನ ಅನುಭವಗಳು ತಂದುಕೊಟ್ಟ ತನ್ಮಯತೆಯನ್ನು, ತಾನು ಬೆಳೆದನಂತರ ಅದೇ ಪರಿಸರದಲ್ಲಿ ಹುಡುಕಲು ಹೋಗಿ ವಿಫಲನಾದ ವ್ಯಕ್ತಿತ್ವದ ನಿರಾಸೆ ಚಿತ್ರಿತವಾಗಿದೆ. 'ಮೌನಿ ಎಂಬ ಕಥೆ, ಈ ಎರಡೂ ಕಥೆಗಳಿಂದ ಭಿನ್ನವಾದದ್ದು. ಬದ್ಧವೈರಿಗಳಂತೆ ಬೆಳೆದ ಅಪ್ಪಣ್ಣ ಭಟ್ಟ, ಕುಪ್ಪಣ್ಣ ಭಟ್ಟರ ನಡುವೆ, ಎಲ್ಲವನ್ನೂ ಕಳೆದುಕೊಂಡು ಶೂನ್ಯದಲ್ಲಿ ಮೌನಿಯಾಗಿ ನಿಂತ ಕುಪ್ಪಣ್ಣ ಭಟ್ಟರ ಪರಕೀಯತೆ, ಅಪ್ಪಣ್ಣ ಭಟ್ಟರ ಪರಿವರ್ತನೆಗೆ ಕಾರಣವಾಗುವ ಸಂದರ್ಭವೆ ಈ ಕಥೆಯ ಶಿಖರವಾಗಿದೆ. ಕುಪ್ಪಣ್ಣ ಭಟ್ಟರೊಂದಿಗೆ ಸಮಸ್ತ ಮಾನವೀಯ ಸಂಬಂಧಗಳನ್ನೂ ನಿರಾಕರಿಸಿದ ಅಪ್ಪಣ್ಣ ಭಟ್ಟನಿಗೆ, ಕಡೆಗೆ ಮೌನಿಯಾಗಿ ಕೂತ ಕುಪ್ಪಣ್ಣ ಭಟ್ಟನ ಏಕಾಕಿತನ, ತನ್ನ ಬದುಕಿನ ಬೇರನ್ನು ಅಲುಗಿಸಿ, ಪರಿವರ್ತನೆಗೆ ಕಾರಣವಾದ ರೀತಿ ತುಂಬ ತೀವ್ರವಾಗಿ ಚಿತ್ರಿತವಾಗಿದೆ. ಈ ಮೂರೂ ಕಥೆಗಳ ವೈಚಾರಿಕತೆ, ಪರಿಸರ ನಿರ್ಮಾಣ ಸಾಮರ್ಥ್ಯ, ಅಭಿವ್ಯಕ್ತಿಯಲ್ಲಿನ ಬಿಗಿ, ಇವುಗಳಿಂದಾಗಿ, ಈ ಕಥೆಗಳು ಈ ವರ್ಷದ ಶ್ರೇಷ್ಠ ಕಥೆಗಳನ್ನಾಗಿಸಿವೆ.

ಕರಿಮಣ್ಣಿನ ಬೊಂಬೆಗಳು

'ಕರಿಮಣ್ಣಿನ ಬೊಂಬೆಗಳು' ಕರೀಗೌಡ ಬೀಚನಹಳ್ಳಿ ಅವರ ಒಂಬತ್ತು ಕಥೆಗಳ ಸಂಕಲನ. "....ಇವರ ಕಥೆಗಳಲ್ಲಿ ಪ್ರಧಾನವಾಗಿ ಪ್ರತಿಭಟನೆಯ ಪ್ರವೃತ್ತಿ ಕಂಡುಬಂದರೂ ಅದು ಎಲ್ಲೂ ತನ್ನ ಕಲಾತ್ಮಕತೆಯನ್ನು ಬಿಟ್ಟುಕೊಟ್ಟಿಲ್ಲದಿರುವುದೊಂದು ಮೌಲಿಕ ಅಂಶ. ಇಲ್ಲಿಯ ಕಥೆಗಳು ವಸ್ತು, ಭಾಷೆ, ಪಾತ್ರ, ಪರಿಸರದಲ್ಲಿ ರಕ್ತ ಮಾಂಸ ತುಂಬಿಕೊಂಡು ಹೊಸ ದಿಗಂತವನ್ನು, ಧೋರಣೆಯನ್ನು ಪ್ರತಿನಿಧಿಸುತ್ತವೆ." "ವೈಚಾರಿಕವಾಗಿ ಇವರು ಸಮಾಜವಾದಿ ಚಿಂತನೆಯಲ್ಲಿ ಆಸಕ್ತಿಯುಳ್ಳವರು." ಎಂಬ ಪ್ರಕಾಶಕರ ಹೇಳಿಕೆ ಸ್ವಲ್ಪಮಟ್ಟಿನ ಉತ್ಪ್ರೇಕ್ಷೆಯಿಂದ ಕೂಡಿದ ಹೇಳಿಕೆ. "ಈ ನನ್ನ ಕಥೆಗಳ ಸೃಷ್ಟಿಗೆ ನನ್ನ ಪ್ರಜ್ಞೆ ಮತ್ತು ಪರಿಸರ ಮೂಲಕಾರಣ"ಎಂದು ಕಥೆಗಾರರೇ ಹೇಳಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಕಥೆಗಳನ್ನು ನೋಡಿದಾಗ ಹಳ್ಳಿಯಬದುಕಿನಲ್ಲಿ ಹಿಂದೆ ರೂಢಿಯಲ್ಲಿದ್ದ ಕೂಡಿಕೆ ಕಥೆಗಾರರನ್ನು ಬಹುವಾಗಿ ಕಾಡಿರುವುದನ್ನು ನೋಡಬಹುದು. ಕೂಡಿಕೆ ಅಪರಾಧವಲ್ಲ. ಸಮಾಜದ ವ್ಯವಸ್ಥೆಗೆ ಹೊರತಾದುದೂ ಅಲ್ಲ, ಅಂತಹ ಸಂಸಾರಗಳಲ್ಲಿನ ಮಕ್ಕಳು ಅನ್ಯೋನ್ಯವಾಗಿಯೂ ಬದುಕಬಹುದೆಂಬುದು ಕಥೆಗಾರರ ನಿಲುವು. ಇದೇ ವಸ್ತುವನ್ನುಳ್ಳ 'ಆಸಕ್ತಿ', 'ಕರಿಮಣ್ಣಿನ ಬೊಂಬೆಗಳು' ಮತ್ತು 'ಸಂಗಾತಿ'ಗಳಲ್ಲಿ 'ಆಸಕ್ತಿ'ಯ ನಾಯಕನ ದಿವ್ಯ ನಿರ್ಲಕ್ಷತೆಗೆ, ನಿಷ್ಠುರ ಋಜು ನಡೆಗೆ ಸಾಕಷ್ಟು ಹಿನ್ನೆಲೆಯಿಲ್ಲ. ಬೇರೆಯ ಕಥೆಗಳಲ್ಲಿ ಅನವಶ್ಯಕ ಪಾತ್ರಗಳ ಹೆಸರನ್ನು ಹೇಳುವ ಕಥೆಗಾರರು ಇಲ್ಲಿ ಕಥಾನಾಯಕನ ಹೆಸರನ್ನೂ ಹೇಳಲು ಹೋಗಿಲ್ಲ. 'ಆಸಕ್ತಿ' ಕಥೆಯ ಉತ್ತರಾರ್ಧದಂತಿರುವ 'ಕರಿಮಣ್ಣಿನ ಬೊಂಬೆಗಳು' ಕಥೆಯಲ್ಲಿ ಅವಿದ್ಯಾವಂತ ಮೂಡ್ಲಿಯೆ ವಿದ್ಯಾವಂತ ಸೋದರರನಿಗಿಂತಲೂ ಹೆಚ್ಚಾಗಿ ಶೋಷಣೆಯ ವಿರುದ್ಧ ಪ್ರತಿಭಟಿಸುತ್ತಾನೆ. ಹಳ್ಳಿಗರ ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡು ಶಾಸ್ತ್ರ ಹೇಳುವುದು, ಮಾಟ ಕೀಳುವುದು ಇವೇ ಮೊದಲಾದ ಪೂಜಾರಯ್ಯನ ಶೋಷಣೆಯ ವಿರುದ್ಧ ಮೂಡ್ಲಿ ಬಂಡೇಳುತ್ತಾನೆ. ಇಂತಹುದೇ ಬಂಡಾಯದ ಒಂದು ಕ್ಷೀಣ ಧ್ವನಿ 'ಒಂದು ಅಪೂರ್ವ ಸಂಸಾರ' ಕಥೆಯಲ್ಲಿದೆ. ಈ ಕಥೆಯ ಹನ್ನೆರಡು ವರ್ಷದ ಅತ್ತರ್ ತನ್ನ ಮಾಲೀಕನ ಶೋಷಣೆಯ ವಿರುದ್ಧ ಸಿಡಿದು "ಹಂದೀ ನನ್ಮಗ! ಬಿಟ್ಟಿ ಗೇಯಕ್ಕೆ ನಾವೇನು ಬಿಟ್ಟಿ ಬಿದ್ದಿದ್ದೀವಾ?" ಎಂದು ಒರಸುತ್ತಿದ್ದ ಸೈಕಲ್ಲನ್ನು ಅಲ್ಲೇ ಬಿಟ್ಟು ಕೈ ಒರಸುತ್ತಾ ಎದ್ದು ನಿಂತು ತನ್ನ ತಮ್ಮನನ್ನು "...... ಲೇ ಬಾರೋ! ಎದ್ದು ಬಾರೊ. ಇವನಂಗಡಿ ಇಲ್ದೆ ಇದ್ರೆ ಇನ್ನೊಂದಾಯ್ತು" ಎಂದು ಕರೆಯುವಲ್ಲಿ ನಿಜಕ್ಕೂ ಬಂಡಾಯವಿದೆ. ಉಳಿದ ಕಥೆಗಳಲ್ಲಿ ಸಮಾಜದ ಪ್ರಕೃತ ವ್ಯವಸ್ಥೆಯನ್ನು ಒಪ್ಪಿಕೊಂಡು

ಇದ್ದುದನ್ನು ಇದ್ದಂತೆ ಚಿತ್ರಿಸಿದ್ದಾರೆ, ಕಥೆಗಾರರು. 'ಅರಣ್ಯ' ಮತ್ತು 'ಒಡಲ ತವಕಕೆ ಕಾಡು ಹೊಕ್ಕೆನು' ಅಂಥ ಕಥೆಗಳು. ಮೊದಲ ಕಥೆಯಲ್ಲಿ ಸಮಾಜಬಾಹಿರ ನೈತಿಕ ಸಂಬಂಧದಿಂದ ಗರ್ಭಿಣಿಯಾಗಿ ಹದಿವಯಸ್ಸಿನ ಚೆನ್ನಿಯು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಎರಡನೆಯ ಕಥೆಯಲ್ಲಿ ಅದೇ ವಯಸ್ಸಿನ ಭಾಗ್ಯ ರೂಪ, ವಿದ್ಯಾ, ಗುಣ, ಶೀಲಗಳಿಂದ ಕೂಡಿದ್ದೂ ಪರಿಸ್ಥಿತಿಯ ಒತ್ತಡದಿಂದ ಅವಿದ್ಯಾವಂತ, ಅನಾಗರಿಕ ರಾಜನನ್ನು ಕೈ ಹಿಡಿದು ಬಾಳಮೊದಲ ದಿನಗಳಲ್ಲೇ ಗಂಡನಿಂದಲೇ ಸಾವನ್ನಪ್ಪುತ್ತಾಳೆ. ಈ ಎರಡೂ ಕಥೆಗಳ ಶೀರ್ಷಿಕೆಗಳೂ ಅಸಂಗತ. ಈ ಎರಡೇ ಕಥೆಗಳೇಕೆ ಬಹುತೇಕ ಕಥೆಗಳ ಶೀರ್ಷಿಕೆಗಳು ಅಸಂಗತ, 'ಸಂಗಾತಿಗಳು' ಕಥೆಯ ಶೀರ್ಷಿಕೆ 'ಒಂದು ಅಪೂರ್ವ ಸಂಸಾರ' ಎಂದಿದ್ದರೆ ಉಚಿತವಾಗಿರುತ್ತಿತ್ತು. ಈಗಿರುವಂತೆ 'ಒಂದು ಅಪೂರ್ವ ಸಂಸಾರ' ಅಪೂರ್ವ ಸಂಸಾರವಾಗದೆ ನಮ್ಮ ಸಮಾಜದಲ್ಲಿ ಅನ್ಯಾನ್ನಗತಿಕವಾದ ಸಂಸಾರವಾಗಿದೆ. 'ಸಂಗಾತಿಗಳು' ಸಮಾಜದಲ್ಲಿ ಅಪರೂಪವಾದ ಹಿಂದೂ ಮುಸ್ಲಿಂ ಮೈತ್ರಿಯನ್ನು ಚಿತ್ರಿಸುವ ಅಪೂರ್ವ ಸಂಸಾರವಾಗಿದೆ. 'ಆಸಕ್ತಿ' ಮತ್ತು 'ಸಂಬಂಧ' ಕಥೆಗಳ ಶೀರ್ಷಿಕೆಗಳೂ ಅಷ್ಟೆ. ತನ್ನದೇನೂ ತಪ್ಪಿಲ್ಲದೆ 'ಸಂಬಂಧ' ಕಥೆಯ ಐದನೆ ಕ್ಲಾಸಿನ ವಿದ್ಯಾರ್ಥಿ ಗೋವಿಂದ ತನ್ನ ಹೆಡ್ಮಾಸ್ಟರಿಂದ ಸಾಯಬೀಳ ಏಟು ತಿಂದುದರಲ್ಲಿ ಶೀರ್ಷಿಕೆ ಏನು ಸಮರ್ಥನೆಯನ್ನು ಕೊಡುತ್ತದೆ? ಹೀಗೆ ಏಟು ತಿಂದ ಗೋವಿಂದ ಸಂಜೆ ಶಾಲೆಯಿಂದ ಹಿಂದಿರುಗುವಾಗ ಕೆಂಪಟ್ಟೆ ಕೆಂಪಗೆ ಉರಿಯುತ್ತಿದ್ದ ಕೆಂಪು ಸೂರ್ಯನನ್ನು ನೋಡಿ ಎಲ್ಲಿಲ್ಲದ ಸಿಟ್ಟನ್ನು-ಹೊಂದುವುದು ಅರ್ಥಹೀನ. ಏಕೆಂದರೆ ಕಥೆಯ ಕೊನೆಗೆ ಬರುವ ಇಂತಹ ಒಂದೆರಡು ವಾಕ್ಯಗಳಿಂದ ಅದು ಬಂಡಾಯ ಕಥೆಯಾಗುವುದಿಲ್ಲ. ಬಂಡಾಯ ಅಥವಾ ಪ್ರತಿಭಟನೆ ಕಥೆಯೊಳಗೆ ಸಹಜವಾಗಿ ಬಂದಿರಬೇಕು. ಇಂತಹುದೇ ಅಂತ್ಯ 'ಕರಿಮಣ್ಣಿನ ಬೊಂಬೆಗಳು' ಮತ್ತು 'ದನಿ' ಕಥೆಗಳಲ್ಲಿ ಬಂದಿದೆ. 'ಕಳಕಳಿ' ಮತ್ತು 'ದನಿ' ಎರಡು ಔಚಿತ್ಯಪೂರ್ಣವಾದ ಕಥೆಗಳು. ರಾಮಣ್ಣನ ಓದಿನ ಬಗ್ಗೆಯ ಕಳಕಳಿ, ಅವನಿಗೆ ಪೆನ್ನಿಲ್ಲದಿರುವುದನ್ನು ಗಮನಿಸಿ ಅವನ ಪೆನ್ನಿಗೆ ದೇವರಿಗೆ ಬಿಟ್ಟ ಹುಂಜವನ್ನೇ ಮಾರಿ ಹಣ ಕೊಡುವ ತಾಯಿಯ ಕಳಕಳಿ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. 'ದನಿ' ಕಥೆಯ ನಾಗಿಯ ಓದಿನ ಬಗೆಗಿನ ಆಸಕ್ತಿ ಓದಬೇಡವೆಂಬ ಅವಳ ತಾಯಿ ಕೆಂಚವ್ವನ ವಿರುದ್ಧದ ಧ್ವನಿಯಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಹಳ್ಳಿಗಾಡಿನ ಬವಣೆಯ ಚಿತ್ರವನ್ನು ಎಲ್ಲ ಕಥೆಗಳಲ್ಲಿಯೂ ಕೊಟ್ಟಿರುವ ಕಥೆಗಾರರು ಇನ್ನಷ್ಟು ವೈಚಾರಿಕತೆ, ಶೋಷಣೆಯ ನಿಜವಾದ ಕಳಕಳಿ ಮತ್ತು ಪ್ರತಿಭಟನೆ, ಕಾಮದ ಬಗೆಗೆ ಶೋಧನೆ, ನಿರೂಪಣೆಯಲ್ಲಿ ಕಲಾತ್ಮಕತೆಯನ್ನು ರೂಢಿಸಿಕೊಂಡರೆ ಇನ್ನೂ ಒಳ್ಳೆಯ ಕಥೆಗಳನ್ನು ಇವರು ಕೊಡಬಲ್ಲರು.

ಈಡು

'ಈಡು' ಮಳಲಿ ವಸಂತಕುಮಾರ್ ಅವರ ಹತ್ತು ಕಥೆಗಳ ಸಂಕಲನ. 'ಈಡು' ಮತ್ತು 'ಸ್ಥಿತ್ಯಂತರ' ಹೊರತು ಉಳಿದವು ಗ್ರಾಮೀಣ ಬದುಕಿನ ಕಥೆಗಳು. 'ಈಡು' ಕಥೆಗೆ ಮುಂಚೆಯಿದ್ದ 'ಬಣ್ಣ' ಎಂಬ ಹೆಸರನ್ನು ಬದಲಿಸಿ 'ಈಡು' ಎಂದು ಹೆಸರಿಟ್ಟಿರುವುದು ಔಚಿತ್ಯಪೂರ್ಣವಾಗಿದೆ. ಈಡು ಗುರಿತಪ್ಪಿ ಪ್ರಾಣಿ ಉಳಿದುಕೊಳ್ಳುವ ಹಾಗೆ ಇಲ್ಲಿ ಮಂಜುಳೆ ಶ್ರೀ ಶ್ರೀ ಶ್ರೀ ಜಗದ್ಗುರುಗಳ ಮತ್ತು ಪ್ರಿನ್ಸಿಪಾಲರ ಸಂಚಿನಿಂದ ಉಳಿದುಕೊಳ್ಳುತ್ತಾಳೆ. ಆದರೆ ಪ್ರಾಣಿ ಘಾಸಿಗೊಳ್ಳುವ ಹಾಗೆ ಮಂಜುಳೆಯೂ ಮಾನಸಿಕವಾಗಿ ಕುಗ್ಗಿ ಹೋಗುತ್ತಾಳೆ. ಕಥೆಯ ಅಂತ್ಯದಲ್ಲಿ ಮಂಜುಳೆ ಕೋಳಿಮರಿಯೊಂದನ್ನು ಹದ್ದಿನಿಂದ ಪಾರುಮಾಡುವ ಚಿತ್ರ ಸಾಂಕೇತಿಕವಾಗಿದೆ. ಕಥೆ ಬಹು ದೀರ್ಘವಾಗಿ ತನ್ನ ಪರಿಣಾಮದ ಗಾಢತೆಯನ್ನು ಕಳೆದುಕೊಳ್ಳುತ್ತದೆ. 'ಸ್ಥಿತ್ಯಂತರ' ಕಥೆಯಲ್ಲಿ ಜಲಜಳು ವೇಶ್ಯೆಯಾಗಲು ಕಾರಣನಾಗಿದ್ದ ಧರಣೇಶನೇ 'ಜಾಗೃತಿ ಸಂಘದ' ಸಂಚಾಲಕನಾಗಿ ವೇಶ್ಯೆಯರ ಉದ್ಧಾರಕ್ಕಾಗಿ ಪ್ರಯತ್ನಿಸುವುದು ವ್ಯಂಗ್ಯದ ಪರಮಾವಧಿ. ನಾಯಿಯೊಂದು ತನ್ನ ಬಾಲವನ್ನು ಕಚ್ಚಲು ಯತ್ನಿಸುತ್ತ ಚಕ್ರಾಕಾರವಾಗಿ ತಿರುಗುವ ಚಿತ್ರ ಸಾಂಕೇತಿಕವಾಗಿದೆ. ಕಥೆಯ ಪ್ರಾರಂಭದಲ್ಲಿನ ದೀರ್ಘ. ವಿವರಣೆ ಮತ್ತು ಫ್ಯಾಂಟಸಿ ತರಹದ ಮುಕ್ತಾಯ ಕಥೆಯನ್ನು ಸ್ವಲ್ಪ ಜಾಳುಜಾಳಾಗಿಸುತ್ತದೆ. 'ಇಲ್ಲಿನ ಯಾವ ಕಥೆಯೂ ಕಲ್ಪನೆಯಿಂದ ಊಹೆಯಿಂದ ರಚನೆಗೊಂಡಿಲ್ಲ. ಸಮಾಜದಲ್ಲಿ ಕಣ್ಣಾರೆ ಕಂಡ ಘಟನೆಗಳು ಸಂಗತಿಗಳು ಕತೆಯಾಗಿ ರೂಪುಗೊಂಡಿವೆ, ಎಂಬ ಕಥೆಗಾರರ ಮಾತಿನ ಹಿನ್ನೆಲೆಯಲ್ಲಿ 'ರಿಕ್ತ' ಮತ್ತು, 'ಅನಿವಾರ್ಯ' ಕಥೆಗಳನ್ನು ನೋಡಿದಾಗ ಕಥೆಗಾರರ ಹೇಳಿಕೆ ಪ್ರಶ್ನಾರ್ಹವಾಗುತ್ತದೆ. 'ರಿಕ್ತ' ಕಥೆಯಲ್ಲಿ ತಮ್ಮಪ್ಪ 'ಆಲೋಗ್ಯಂಡೆ'ಯನ್ನು ಬೆಳೆದು ಊರಿನಲ್ಲಿ ತಾನೂ ಒಂದು ಕುಳವಾಗಬೇಕೆಂದು ರಾಮಪ್ಪ ಗೌಡನಿಗೆ ತನ್ನ ಜಮೀನನ್ನು ನಂಬಿಕೆ ಕ್ರಯಮಾಡಿ ವಂಚಿತನಾಗುತ್ತಾನೆ. ರಾಮಪ್ಪನ ಬೆಣ್ಣೆಯಲ್ಲಿ ಕೂದಲು ತೆಮಗೆಯುವಂಥ ಮಾತುಗಳಿಗೆ ತಮ್ಮಪ್ಪ ಮರುಳಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ರಾಮಪ್ಪ ಇದೇ ತಮ್ಮಪ್ಪನ ಹಸುಮಾರಿದ ಹಣವನ್ನೂ ಗುಳುಂ ಮಾಡುವುದು ಅತಿಯಾಗುತ್ತದೆ. ಹೀಗಾಗೆ ಒಂದು ಶುದ್ಧ ಸಾಧು ಪಾತ್ರವೂ ಮತ್ತೊಂದು ಧೂರ್ತತೆಯೆ ಮೈವೆತ್ತ ರಾಕ್ಷಸ ಪಾತ್ರವೂ ಆಗಿ ಇದು ಸಾಧಾರಣ ಕಥೆಯಾಗಿಬಿಡುತ್ತದೆ. 'ಅನಿವಾರ್ಯ' ಕಥೆ ಭಾಗ್ಯಳ ಆಲೋಚನೆಯಲ್ಲಿ ತೆರೆದುಕೊಂಡು ಸರಾಗವಾಗಿ ಓದಿಸಿಕೊಂಡು ಹೋದರೂ ಆವಾಸ್ತವ ನೆಲೆಗಟ್ಟಿನಮೇಲೆ ನಿಂತಿದೆ. ಊರಿನ ದೊಡ್ಡ ಕುಳವಾದ ರಾವಣಪ್ಪ ದೊಡ್ಡ ಹಬ್ಬ, ತೋಟದ ಹಬ್ಬಗಳನ್ನು ಮಾಡುತ್ತಾ, ಆದಾಯಕ್ಕಿಂತ ಖರ್ಚೇ ಹೆಚ್ಚಾಗಿ ಅಂಗಡಿ

ಮಂಜಣ್ಣನಿಗೆ ಆಸ್ತಿಯನ್ನೊಪ್ಪಿಸುವುದನ್ನು ಒಪ್ಪಬಹುದಾದರೂ, ದಿನ ನಿತ್ಯದ ಕೂಳಿಗೇ ಕೈಯೊಡ್ಡುವ ಪರಿಸ್ಥಿತಿ ಬಂದಾಗಲೂ ಹಿಂದಿನ ಡೌಲನ್ನೇ ಮೆರೆಯಬೇಕೆಂದು ತನ್ನ ಮಕ್ಕಳನ್ನೇ ಮಂಜಣ್ಣನಿಗೆ ಒಪ್ಪಿಸುವುದನ್ನು ಯಾರೂ ಒಪ್ಪಲಾರರು. ಗ್ರಾಮೀಣ ಜನತೆಗೆ ಎಲ್ಲಕ್ಕಿಂತಲೂ ಮಾನ ಹೆಚ್ಚಿನದು. ಒಂದು ವೇಳೆ ಗಂಡುಸಾದ ತಂದೆ ಇಂತಹ ಕಾರ್ಯವನ್ನು ಮಾಡಿಯಾನು ಎಂದುಕೊಂಡರೂ ತಾಯಿಯಾದವಳು ಖಂಡಿತಾ ಇಂಥ ತಲೆಹಿಡುಕತನವನ್ನು ಮಾಡುವುದಿಲ್ಲ. ಹೀಗಾಗಿ ಇಂಥ ಕಥೆಯನ್ನು ಬರೆಯುವುದು ಕಥೆಗಾರರಿಗೆ ಅನಿವಾರ್ಯವಾಗಿರಲಿಲ್ಲ. ಆಸ್ತಿಯನ್ನು ಕಳೆದುಕೊಳ್ಳುವುದು ರಾವಣಪ್ಪನಿಗೆ ಅನಿವಾರ್ಯವಾಗಿರಲಿಲ್ಲ. ಮಂಜಣ್ಣನಿಗೆ ಸೆರಗನ್ನು ಹಾಸುವುದು ಭಾಗ್ಯಳಿಗೆ ಅನಿವಾರ್ಯವಾಗಿರಲಿಲ್ಲ. ಇಂಥ ಕಥೆಯನ್ನು ಬರೆದು ತಮ್ಮ ಶಕ್ತಿಯನ್ನು ಅಪವ್ಯಯಗೊಳಿಸಿಕೊಂಡಿದ್ದಾರೆ ಕಥೆಗಾರರು. ಅಷ್ಟೆ. 'ಸಾಸ್ತ್ರ' ಮತ್ತು 'ಅಭಿಸಾರ' ಎರಡು ಒಳ್ಳೆಯ ಕಥೆಗಳೇ. 'ಅಭಿಸಾರ' ಕಥೆಗೆ ಹಿಂದೆಯಿದ್ದ 'ಕಲ್ಯಾಣಿ' ಎಂಬ ಹೆಸರೇ ಔಚಿತ್ಯಪೂರ್ಣವಾದುದು. ಏಕೆಂದರೆ ಕಥೆಯಲ್ಲಿ ಕಲ್ಯಾಣಿ ಊರಿನ ಹಿಂದಿನ ಮತ್ತು ಇಂದಿನ ಸ್ಥಿತಿಗೆ ಪ್ರತಿಮೆಯಾಗಿ ನಿಲ್ಲುತ್ತದೆ. 'ಸಾಸ್ತ್ರ' ಕಥೆಯ ಬೆಳ್ಳಿ ಹಕ್ಕಿ ಬಿಕ್ಕಿಯ ಕಟುಮರ ರಾಮಯ್ಯನಿಗೆ ಮಕ್ಕಳ ಆಸೆಗಾಗಿ ಸೋಲುವುದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ ಅವಳ ವಿವಾಹಪೂರ್ವದ ಬಾಳಿನಲ್ಲೂ ವಿವಾಹನಂತರದ ಹತ್ತುವರ್ಷಗಳ ಸಾಂಸಾರಿಕ ಬದುಕಿನಲ್ಲೂ ಪ್ರಶ್ನಾರ್ಹವಾಗುವಂತಹ ನಡವಳಿಕೆ ಏನೂ ಇಲ್ಲ. 'ಅಭಿಸಾರ'ದ ಜಯಳು ಜಾರಿದ್ದಕ್ಕೆ ಅರ್ಥವೂ ಇಲ್ಲ ಸಮರ್ಥನೆಯೂ ಇಲ್ಲ. ಜಾರಿದ್ದು ಕಥೆಗಾರರಷ್ಟೆ. ಏಕೆಂದರೆ 'ರಸಿಕತೆಯಲ್ಲಿ ನನಗಿಂತ ಅವಳೇ ಒಂದು ಕೈಮುಂದೆ ಕಲ್ಯಾಣಿ ತೋಟದಲ್ಲಿ ಬಾಳೆಯಬುಡದಲ್ಲೊಮ್ಮೆ ಅವಳು ತನಗೆ ಬಲವಾಗಿ ಜೋತು ಬಿದ್ದುದು.... ಜೇನಿನ ಬಣ್ಣದ ಹಳಸಿನತೊಳೆಯ ಪಕಳೆಯಂತಹ ಅವಳ ತುಟಿಗೆ ಮುತ್ತಿಟ್ಟು....' 'ತೋಟದ ಒಂದೊಂದು ಗಿಡದ ಉಸಿರಾಟದಲ್ಲೂ ನಮ್ಮ ಪ್ರಯಣದ ಕಥೆ ತುಂಬಿದೆ.' ಎಂಬ ಮಾತುಗಳಿಗೆ ಅರ್ಥವೇ ಇರುವುದಿಲ್ಲ. ಅದೂ ಕಲ್ಕತ್ತೆಗೆ ಹೋದ ಮೂರು ತಿಂಗಳಿನಲ್ಲಿಯೆ ಈಕೆ ಜಾರಿದಳು ಎಂಬುದನ್ನಾಗಲಿ ಇದರ ಪರಿಣಾಮವಾಗಿ ಅವಳು ಮತ್ತು ಅವಳ ಪ್ರಿಯಕರ ಜುಂಜ ಕೊಲೆಯಾದರು ಎಂಬುದು ಒಂದೂವರೆ ವರ್ಷಗಳವರೆಗೂ ಕಥಾನಾಯಕನಿಗೆ ತಿಳಿಯಲೇ ಇಲ್ಲ ಎಂಬುದನ್ನಾಗಲಿ ಓದುಗರು ನಂಬುವುದು ಕಷ್ಟ. ಈ ಒಂದು ನ್ಯೂನತೆಯನ್ನು ಬಿಟ್ಟರೆ ಕಥೆ ಒಳ್ಳೆಯ ಕಥೆಯೆ. 'ಸಮರ್ಥ ಕಥೆಗಾರ ತಂತ್ರಗಳನ್ನು ಅನುಸರಿಸಿ ಕಥೆ ಬರೆಯುವುದಿಲ್ಲ.' ಎಂಬ ಕಥೆಗಾರರ ಹೇಳಿಕೆಗೆ ಸವಾಲೆಸೆಯವಂಥಹ ಕಥೆಯೆ! ಕಥೆಯ ಅಂತ್ಯ ಮಾತ್ರ ತೀರ ಕೃತಕವಾದದ್ದು. ಬೆದೆಯಾಡುತ್ತಾ ಉಡಿದುಕೊಂಡಿದ್ದ ಹಾವುಗಳನ್ನು ಗರುಡ ಎತ್ತಿಕೊಂಡು ಹೋಗುವ ಚಿತ್ರ ವ್ಯ

ಜುಮ್ಮೆನಿಸುವಂತೆಯೆ ಕಥೆಯ ಅತ್ಯಂತ ಸಮರ್ಥವೂ ಸಾರ್ಥಕವೂ ಆದ ಸಂಕೇತವೂ ಆಗಿದೆ. ಬಿ. ರಾಜಣ್ಣ ಹೇಳಿರುವಂತೆ 'ಹರ್ಷ' ಕಥೆ, ಕಥ ಮತ್ತು ಪ್ರಬಂಧಗಳೆರಡರ ಗುಣಗಳನ್ನೂ ಮೇಳವಿಸಿಕೊಂಡು ಅಚ್ಚುಕಟ್ಟಾಗಿ ಹೇಳಿರುವ ಕಥೆ. 'ಹರ್ಷ' ನಾಯಿಮರಿಯನ್ನು ಒಮ್ಮೆ ಪಾದ್ರಿಯೊಬ್ಬರು ಕೊಟ್ಟರೆಂದು ಒಂದುಕಡೆ, ಹೆಡ್ಮಾಸ್ಟರು ಕೊಟ್ಟರೆಂದು ಇನ್ನೊಂದು ಕಡೆ ಹೇಳುವ ಮಾತು ಮೊಸರನ್ನದಲ್ಲಿ ಕಲ್ಲು ಸಿಕ್ಕಿದಂತಾಗುತ್ತದೆ. ಈ ಕಥೆಯೂ ಸೇರಿದಂತೆ 'ಅಪಥ್ಯ' ಮತ್ತು 'ಸಿಕ್ಕು'ಗಳ ಅನಿರೀಕ್ಷಿತ ಅಂತ್ಯ ಸತ್ವಶಾಲಿ ಕಥೆಗಾರನಿಗೆ ಮಾತ್ರ ಸಾಧ್ಯ. 'ಅಪಥ್ಯ' ಕಥೆಯ ಹೆಸರು ಸೂಕ್ತವಲ್ಲದಿದ್ದರೂ ಈ ಕಥೆಯಲ್ಲಿ ಮತ್ತು 'ಹರ್ಷ' ಕಥೆಯಲ್ಲಿ ಹಂದಿ ಮತ್ತು ನಾಯಿಗಳ ಗುಣ ಸ್ವಭಾವಗಳನ್ನು ಚಿತ್ರಿಸುವಲ್ಲಿ ಕಥೆಗಾರರ ನಿರೀಕ್ಷಣಾ ಸಾಮರ್ಥ್ಯ ಎದ್ದು ಕಾಣುತ್ತದೆ. 'ಸಿಕ್ಕು' ಕಥೆಯ ಭಾವ, ಭಾಷೆ, ಪರಿಸರ, ಕ್ರಿಯೆ ಎಲ್ಲವೂ ಏಕಮುಖವಾಗಿ ಗಮಿಸಿ ಕಥೆಯನ್ನು ಪರಿಣಾಮಕಾರಿಯನ್ನಾಗಿಸಿವೆ. ಈ ಕಥೆಯ ಭಾಷಾ (ಗ್ರಾಮ್ಯ) ಪ್ರಯೋಗ, ಗಾದೆ ಮಾತುಗಳ ಬಳಕೆ ಗಮನಿಸುವಂಥದು. ಗ್ರಾಮೀಣ ಬದುಕಿನ ದಟ್ಟ ಅನುಭವದ ಹಿನ್ನೆಲೆಯೂ, ಗ್ರಾಂಥಿಕ, ಗ್ರಾಮ್ಯ ಭಾಷೆಗಳ ಮೇಲಿನ ಹದವರಿತ ಹಿಡಿತವೂ, ಸೌಂದರ್ಯ ಪ್ರಜ್ಞೆಯೂ ಇರುವ ಮಳಲಿ ವಸಂತ ಕುಮಾರರಿಂದ ನಾವು ಇನ್ನೂ ಉತ್ತಮ ಕಥೆಗಳನ್ನು ನಿರೀಕ್ಷಿಸಬಹುದು.

ದೇವರುಗಳ ರಾಜ್ಯದಲ್ಲಿ

'ಅತ್ತ ಇತ್ತಗಳ ಸುತ್ತ ಮುತ್ತ' ಕಥಾಸಂಕಲನದಲ್ಲಿ ಪ್ರಸಿದ್ಧರಾಗಿರುವ ಬೊಳುವಾರು ಮಹಮದ ಕುಂಞ ಅವರ **'ದೇವರುಗಳ ರಾಜ್ಯದಲ್ಲಿ'** ಒಂಬತ್ತು ಕಥೆಗಳ ಕಥಾಸಂಕಲನ. ಮುಸ್ಲಿಂ ಜನಾಂಗದ ದುಸ್ಥಿತಿ, ಅಜ್ಞಾನ ಇವುಗಳ ಚಿತ್ರಣಗಳೊಂದಿಗೇ ವೈಚಾರಿಕತೆ ಹಾಸುಹೊಕ್ಕಾಗಿರುವುದರಿಂದ ಇವರ ಕಥೆಗಳು ಪ್ರಾಮುಖ್ಯತೆಯನ್ನು ಪಡೆದು-ಕೊಳ್ಳುತ್ತವೆ. ಧಪನದ ಕಥೆ ಹೇಳುತ್ತಾ 'ಅಮ್ಮ ಮಸೀದಿಯ ಒಳಗಿದ್ದಳು. ನಾನು ಹೊರಗಿದ್ದೆ.'ಎಂದು ಬಂಡಾಯದ ಧ್ವನಿ ಎತ್ತುವ ಕಥೆಗಾರರು 'ಒಬ್ಬ ಜಾತಿಗೆಟ್ಟ ಹುಡುಗನ ತಾಯಿ ತೀರಿಕೊಂಡಳು ಜಾತಿ ಬಾಂಧವರು ಅವಳನ್ನು ಮಣ್ಣು ಮಾಡಿದರು.' ಎಂದು ಕಥೆಯನ್ನು ಮುಕ್ತಾಯಗೊಳಿಸುತ್ತಾರೆ. ಸುಧಾರಣಾವಾಗಬಹುದಾಗಿದ್ದ ಈ ಕಥೆ ಕಥೆಯೊಡಲಲ್ಲಿ ಏಳುವ ಮುಸ್ಲಿಮನೊಬ್ಬ ವಿಚಾರವಾದಿಯಾಗುವುದು ಎಂದರೆ ಹಿಂದುವಾಗುವುದೇ ಎಂಬ ಪ್ರಶ್ನೆಯಿಂದ ಹೊಸ ಆಯಾಮವನ್ನು ಪಡೆದುಕೊಳ್ಳುತ್ತದೆ. ಈ ಪ್ರಶ್ನೆ ಇನ್ನಷ್ಟು ಸಂಕೀರ್ಣವಾಗಿ 'ದಯವಿಟ್ಟು ಹೇಳುವಿರಾ' ಕಥೆಯಲ್ಲಿ ವ್ಯಕ್ತವಾಗುತ್ತದೆ. 'ಮಾರಾಟ' ಕಥೆಯಲ್ಲಿ ಸೀತಮ್ಮ ತನ್ನ ವೃತ್ತಿಯಲ್ಲಿ ತನ್ನ ಮಗಳು ಮುಂದುವರೆಯಬಾರದೆಂದು ಜಲಜಳನ್ನು ರಹೀಮನಿಗೆ ಕೊಟ್ಟಂತೆ

‘ದಯವಿಟ್ಟು ಹೇಳುವಿರಾ’ ಕಥೆಯಲ್ಲಿ ಇಸ್ಮಾಲಿಯರನ್ನು ಹಿಂದು ಧರ್ಮಕ್ಕೂ ಅಥವಾ ಶಾಲಿನಿಯನ್ನು ಮುಸ್ಲಿಂ ಧರ್ಮಕ್ಕೂ ಮಂತಾಂತರಗೊಳಿಸಿ ಸಮಸ್ಯೆಯನ್ನು ಪರಿಹಾರಮಾಡಬಹುದಿತ್ತು. ಆದರೆ ಕಥೆಗಾರರ ಉದ್ದೇಶ ಅದಲ್ಲ. ಇಸ್ಮಾಲಿ ಇಸ್ಮಾಲಿಯಾಗಿಯೇ, ಶಾಲಿನಿ ಶಾಲಿನಿಯಾಗಿಯೇ ಒಟ್ಟಿಗೆ ಬಾಳುವಂಥ ಆರೋಗ್ಯಕರವಾದ ಸಮಾಜ ನಮ್ಮಲ್ಲಿದೆಯೆ? ‘ಹಿಂದೂ ಹುಡುಗಿಯೊಬ್ಬಳನ್ನು ಹಾರಿಸಿಕೊಂಡು ಓಡಿದ ಇಸ್ಮಾಲಿಯನ್ನು ನಿಮ್ಮ ನಡುವೆ ಸಹಜವಾಗಿ ಬದುಕ ಬಿಡುವಿರಾ?’ ಎಂಬ ಕಥೆಗಾರರ ಪ್ರಶ್ನೆ ಹಿಂದುಗಳನ್ನು ವಿಚಾರ ಮಾಡುವಂತೆ ಮಾಡಿದರೆ ಆಶ್ಚರ್ಯವಿಲ್ಲ. ‘ಜನ ಗಣ ಮನ’ ಕಥೆಯಲ್ಲಿ ವಿಧವೆ ಅಮಿನಾಭಿಯ ಮೇಲೆ ಮಗುವಿನ ಅಪಹರಣದ ಸುಳ್ಳು ಕೇಸನ್ನು ಹಾಕಿದಾಗ ಸಂವಿಧಾನದ ಪ್ರಕಾರ ಎಲ್ಲವೂ ಸಮಾಧಾನರಾಗಿದ್ದರೂ ‘ಈ ಮಕ್ಕಿಗೆ ನಮ್ಮ ಲಾ ಎಪ್ಲೈ ಆಗುವುದಿಲ್ಲ. ಫ್ಯಾಮಿಲಿ ಪ್ಲಾನಿಂಗ್ ಕಂಪಲ್ಸರಿ ಅಲ್ಲ. ಅವ್ರ ಫೆಸ್ಟಿವಲ್ಸ್‌ಗೆ ನಮ್ಗೆ ಲೀವ್ ಯಾವ ಖರ್ಮಕ್ಕೆ’ ಎಂದು ಜನ ಪ್ರತಿಕ್ರಿಯಿಸುವಲ್ಲಿ ಮುಸ್ಲಿಮರು ಎರಡನೇ ದರ್ಜೆಯ ಪ್ರಜೆಗಳಾಗಿರುವುದನ್ನು ಕಾಣಬಹುದು. ಇಂತಹುದೇ ಸಂಶಯ ಮುಸ್ಲಿಮರ ಬಗ್ಗೆ ‘ಪ್ರವಾದಿಯ ಮುಖಚಿತ್ರ’ ಕಥೆಯಲ್ಲಿದ್ದರೂ ಅದರ ಉದ್ದೇಶ ಮತೀಯ ಶ್ರದ್ಧೆಯನ್ನು ದುರುಪಯೋಗಪಡಿಸಿಕೊಳ್ಳುವ ಡಾಂಭಿಕತೆಯನ್ನು ಚಿತ್ರಿಸುವುದೇ ಆಗಿದೆ. ಮತೀಯ ಶ್ರದ್ಧೆಯನ್ನು ದುರುಪಯೋಗ ಪಡಿಸಿಕೊಳ್ಳುವಂತೆಯೆ ಧರ್ಮದ ರಕ್ಷಣೆಯೊಳಗಿದ್ದೇ ಲಫಂಗತನ ಮಾಡುವ ಧಾರ್ಮಿಕ ಗುರುಗಳ ಕಥೆಯನ್ನು ‘ಗುಟ್ಟೊಂದು ಹೇಳಿದರೆ’ ಕಥೆ ಹೇಳುತ್ತದೆ. ಈ ಗುಟ್ಟು ಈ ಕಥೆಯಲ್ಲಿ ಬಯಲಾಗುವುದು ಸ್ವಾರಸ್ಯಕರ ಸನ್ನಿವೇಶದಲ್ಲಿ. ಯಾವುದೇ ಧರ್ಮವಾದರೂ ಆ ಧರ್ಮದ ಶ್ರೀಮಂತರು ಆ ಧರ್ಮದ ಬಡವರನ್ನು ತಮ್ಮ ಏಳ್ಗೆಯ ಮೆಟ್ಟಿಲಾಗಿ ಬಳಸಿಕೊಳ್ಳುತ್ತಾರೆ. ಬಡವರು ಶ್ರೀಮಂತರ ಕೈಯಿನ ದಾಳಗಳು ಮಾತ್ರ ಎಂಬ ನಿಷ್ಠುರ ಸತ್ಯವನ್ನು ನಿಷ್ಠುರ ವ್ಯಂಗ್ಯದಲ್ಲಿ ‘ದೇವರುಗಳ ರಾಜ್ಯದಲ್ಲಿ’ ಕಥೆಯಲ್ಲಿ ಕಥೆಗಾರರು ನಿರೂಪಿಸಿದ್ದಾರೆ. ‘ಸೈತಾನ’ ಮತ್ತು ‘ಮುತ್ತುಚ್ಚೇರ’ ಮುಸ್ಲಿಂ ಜನಾಂಗದ ಮತ್ತೆರಡು ಮುಖಗಳನ್ನು ತೆರೆದು ತೋರುವ ಕಥೆಗಳು. ಅಹಮದ ತನಗೆ ಮದುವೆಯಾಗಿ ಆರು ವರ್ಷಗಳಾದರೂ ಮಕ್ಕಳಾಗಿಲ್ಲವೆಂಬ ಅರಿವನ್ನು ದಲ್ಲಾಳಿ ಹಸನ್ ಮಂಕ್ರಿಯಿಂದ ಪಡೆದು ಎರಡನೆ ಮದುವೆಗೆಂದು ಹೆಣ್ಣು ನೋಡಲು ಹೋಗಿ ದುರಂತವನ್ನು ತಂದುಕೊಂಡ ಕಥೆ ‘ಸೈತಾನ’. ಹೆಣ್ಣಿನ ಮನೆಯಲ್ಲಿ ಬಾಗಿಲ ವಾರಂದ ಅಹಮದನ ಹಣೆಗೆ ಬಡಿದು ಮುಂದಾಗುವ ದುರಂತದ ಸೂಚನೆಯನ್ನು ನೀಡುತ್ತದೆ. ಅಹಮದನ ಹೆಂಡತಿ ಅಮಿನ ಗಂಡನನ್ನು ವಿರೋಧಿಸಲು ಧೈರ್ಯ ಸಾಲದೆ ಒಳಗೊಳಗೇ ನೊಂದು ಅಹಮದ ಹೆಣ್ಣು ನೋಡಲು ಮಂಜೇಶ್ವರಕ್ಕೆ ಹೋದಂದೆ ಮಾನಸಿಕ ಅಸ್ವಾಸ್ಥಗೀಡಾಗುತ್ತಾಳೆ. ಇದರ ಕಾರಣವನ್ನು ಪತ್ತೆಮಾಡಿ ಇವರ

ಸಂಸಾರವನ್ನು ನೇರಗೊಳಿಸುವುದರಷ್ಟರೊಳಗೇ ಘಟನೆಗಳು ಮಿಂಚಿನವೇಗದಲ್ಲಿ ಜರುಗಿ ಅಮಿನ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. 'ಜೀವವಿಲ್ಲದ ಸೈತಾನನನ್ನು ಓಡಿಸುವ ದಾರಿಗೊತ್ತಿದ್ದ ಮಾಸ್ಟರಿಗೆ ಈಗ ಜೀವಂತ ಸೈತಾನ ದೊಡ್ಡ ಸವಾಲಿನಂತೆ ಎದುರು ಬಂದಿತ್ತು' ಎಂಬ ಕಥೆಗಾರರ ಮಾತಿನಲ್ಲಿ ವಿಚಾರವಾದಿ ವಾರಿಯರ್ ಮಾಸ್ಟ್ರಿಗೆ, ತಮ್ಮ ಧರ್ಮದಲ್ಲಿ ನಾಲ್ಕು ಮದುವೆಗೆ ಅವಕಾಶವಿದೆಯೆಂಬ ಒಂದೇ ಕಾರಣದಿಂದ ಮತ್ತೊಂದು ಮದುವೆಗೆ ಹೊರಟಿದ್ದ ಅಹಮದನಿಗೆ ತಿಳಿಯ ಹೇಳುವುದು ಸಾಧ್ಯವಿತ್ತು. ಆದರೆ ಅದನ್ನೊಂದು ಮತೀಯ ಪ್ರಶ್ನೆಯನ್ನಾಗಿ ತೆಗೆದುಕೊಂಡ ಜಮಾತ್ ಪ್ರೆಸಿಡೆಂಟ್ ರಹೀಂ ಮತ್ತು ದಲ್ಲಾಳಿ ಹಸನ್ ಮುಕ್ರಿಯನ್ನು ತಿದ್ದುವುದು ಅಸಾಧ್ಯವಾಗಿತ್ತು. ಈ ಕಥೆಯಲ್ಲಿ ಮುಸ್ಲಿಂ ಜನಾಂಗದ ಅಜ್ಞಾನವನ್ನೂ ಧಾರ್ಮಿಕ ಕಟ್ಟುಪಾಡುಗಳ ಮೂಲಕ ಅವರನ್ನು ಶೋಷಿಸುತ್ತಿರುವ ಧರ್ಮಾಧಿಕಾರಿಗಳ ಕ್ರೂರ ಹಿಡಿತವನ್ನೂ ವಿವರವಾಗಿ, ಪರಿಣಾಮಕಾರಿಯಾಗಿ ಕಥೆಗಾರರು ಕೊಟ್ಟಿದ್ದಾರೆ. 'ಮುತ್ತುಚ್ಚೇರ' ಕಥೆಯ ರುಖಿಯಾಬಿ ಮತ್ತು ಬಿರಾನ್ ಕೋಯ ಇಬ್ಬರೂ ಧಾರ್ಮಿಕ ಛದ್ಮವೇಶದ ಬಂಡವಾಳಶಾಹಿಯ ಶೋಷಣೆಗೆ ತುತ್ತಾದವರು. ರುಖಿಯಾಬಿಯ ಮಗಳು ಉನ್ನೀಸಳ 'ಅರಬಿ' ಮದುವೆಯನ್ನು ತಪ್ಪಿಸಲು ಯತ್ನಿಸುವ ಯೂತ್‌ಲೀಗಿನ ಸದಸ್ಯರ ಪೊಳ್ಳುತನ ಬಯಲಾಗುವುದರೊಂದಿಗೆ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ಇನ್ನೇನು ಇನ್ನೇನು 'ನಿಖಾ' ಆಗಿಹೋಯಿತು ಎನ್ನುವಾಗ ನೀಲಾಕಾಶದಿಂದ ಬರಸಿಡಿಲೆರಗಿದಂತೆ ರುಖಿಯಾಬಿಯ ಪ್ರತಿಭಟನೆ ಬರುತ್ತದೆ. 'ಧರ್ಮಸಮ್ಮತವಾದ ಮಂಗಳ ಕಾರ್ಯವನ್ನು ಧಿಕ್ಕರಿಸಿ ಬೊಬ್ಬಿರಿಯುತ್ತಾ ಮೆಟ್ಟಲಿಳಿದು ಹೋಗುತ್ತಿರುವ ಕೂಲಿ ಕೆಲಸದ ಹೆಂಗಸೊಬ್ಬಳನ್ನು ತಡೆದು ನಿಲ್ಲಿಸುವ ಎದೆಗಾರಿಕೆ ಚಾವಡಿಯೊಳಗಿದ್ದ ಯಾವ ಗಂಡಸಿನಲ್ಲೂ ಇರಲಿಲ್ಲ.' ಮುತ್ತುಚೇರದ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ಒಬ್ಬಳು ಹೆಣ್ಣು ಪ್ರತಿಭಟಿಸಿದಳು! ಪ್ರತಿಭಟಿಸ ಬಯಸುವ ನೂರಾರು ಹೆಣ್ಣುಗಳ ಮೊದಲ ಧ್ವನಿಯಂತೆ....' ಎಂದು ಮುಕ್ತಾಯವಾಗಿರುವ ಕಥೆಗೆ ಬೇರೆ ವ್ಯಾಖ್ಯಾನ ಬೇಕಿಲ್ಲ. 'ಮುತ್ತುಚ್ಚೇರ' ಯಾವುದೇ ದೃಷ್ಟಿಯಿಂದ ನೋಡಿದರೂ ಈ ಸಂಕಲನದ ಅತ್ಯುತ್ತಮ ಕಥೆ. ಇದುವರೆಗೂ ಅಷ್ಟಾಗಿ ಪರಿಚಿತವಲ್ಲದ ಮುಸ್ಲಿಂ ಜನಾಂಗದ ಬಡತನ, ಅಜ್ಞಾನ, ಧಾರ್ಮಿಕ ಕುರುಡು ನಂಬಿಕೆ ಇತ್ಯಾದಿಗಳನ್ನು ವೈಚಾರಿಕ ಹಿನ್ನೆಲೆಯಲ್ಲಿ ನೋಡುತ್ತಾ ಬಂಡಾಯದ ಧ್ವನಿ ಎತ್ತುತ್ತಿರುವ ಬೊಳುವಾರು ಮಹಮದ ಕುಂಞ ಅವರಿಂದ ಇನ್ನೂ ಹೆಚ್ಚಿನದನ್ನು ಓದುಗರು ನಿರೀಕ್ಷಿಸುತ್ತಾರೆ.

ಬೇನ್ಯಾ

'ಬೇನ್ಯಾ' ಯಶವಂತ ಚಿತ್ತಾಲರ ಆರು ಕಥೆಗಳ ಸಂಕಲನ. ಈ ಸಂಕಲನ ಮತ್ತು ಮುಂದೆ ವಿಮರ್ಶಿಸುವ 'ಚಿತ್ತಾಲರ ಕಥೆಗಳು' ಸಂಗ್ರಹದ ವಿಮರ್ಶೆಯಲ್ಲಿ

'ಬೇಸ್ತ್ಯಾ'ದ ಮುನ್ನುಡಿ ಮತ್ತು ಚಿತ್ತಾಲರ ಕತೆಗಳಲ್ಲಿನ 'ಹೃದಯವುಳ್ಳ ಹಾದಿಯಲ್ಲಿ' (ನಾನು ಲೇಖಕನಾಗಿ ಬೆಳೆದು ಬಂದ ರೀತಿ)ನ ಚಿತ್ತಾಲರ ಮಾತುಗಳನ್ನೇ ಶೇಕಡ ಎಪ್ಪತ್ತೈದಕ್ಕೂ ಹೆಚ್ಚಾಗಿ ಆವರಣ ಚಿಹ್ನೆಗಳನ್ನು ಉಪಯೋಗಿಸದೆ ಬಳಸಿಕೊಂಡಿದ್ದೇನೆ. 'ಬೇಸ್ತ್ಯಾ'ದಲ್ಲಿನ 'ಸಾವಿತ್ರಿ' ಹಾಗೂ 'ನನ್ನ ತಮ್ಮನ ಕಥೆ' ಚಿತ್ತಾಲರ ಕಥೆಗಳಲ್ಲಿನ ಹೊಸ ತಿರುವೊಂದನ್ನು ಸೂಚಿಸುವಂಥವು. 'ನೀವೇ ಬರೆಯಬೇಕಾಗಿದ್ದ ಕತೆ' ಇಂಥ ತಿರುವನ್ನು ಕಥೆಗಾರರೇ ತಂದುಕೊಳ್ಳುವುದಕ್ಕಾಗಿಯೆ ಬರೆದಂತಿದೆ. ಕಥೆಯೊಂದನ್ನು ಹೇಳುತ್ತಾ ಕಥಾಪ್ರಕಾರದ ಬಗೆಗೂ ಹೇಳತೊಡಗುವ ಈ ಕಥೆ ಮೇಲೆ ಉಲ್ಲೇಖಿಸಿದ ಕಥೆಗಳಿಗೆ ಬರೆದ ಮುನ್ನುಡಿಯಂತಿದೆ. ಈ ಸಂಗ್ರಹದ 'ಬೇಸ್ತ್ಯಾ' ಹೊರತು ಉಳಿದೆಲ್ಲ ಕಥೆಗಳೂ ಒಂದಲ್ಲ ಒಂದು ರೀತಿಯಿಂದ ಸಾವಿನ ಬಗ್ಗೆ ಸಾವು-ಬದುಕಿನ ಬಗ್ಗೆ, ಸಾವಿನಾಚೆಯ ಬದುಕಿನ ಬಗ್ಗೆ ಚಿಂತಿಸುತ್ತವೆ. 'ನೀವೇ ಬರೆಯಬೇಕಾಗಿದ್ದ ಕತೆ'ಯಲ್ಲಿ ಹೆಂಡತಿ ನೀನಾಳ ಕೊಲೆಯ ಆರೋಪದಿಂದ ಬಿಡುಗಡೆಯಾದ ಜಿತೂ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಏಕೆಂದರೆ 'ಅವಳ ಪ್ರೀತಿ ಬೆಳಗಿಸಿದ ಅವನ ಕಣ್ಣ ಒಳಗಿನ ಬೆಳಕೇ ನಂದಿಹೋಗಿತ್ತು!' ಆದರೆ 'ನೀನಾಳ ಸಾವೇ ಈ ಆತ್ಮಹತ್ಯೆಗೆ ಕಾರಣವಾಗಿದ್ದರೆ ತನಿಖೆಯನಂತರವೇ ಏಕೆ ಸಾಯಬೇಕಿತ್ತು? ಅದೂ ಕೂಡ ನಿರಪರಾಧಿಯೆಂದು ನಿರ್ಣಯವಾದ ದಿನವೆ? ಎಂಬ ಕಥೆಗಾರರ ಪ್ರಶ್ನೆ ನಮ್ಮನ್ನು ಇನ್ನಷ್ಟು ಗಾಢ ಆಲೋಚನೆಗೆ ಒಳಗುಮಾಡುವಂತೆಯೆ 'ಪ್ರಬಂಧ', 'ಸಂಪಾದಕೀಯ' ಮೊದಲಾದ ಇತರ ಪ್ರಕಾರಗಳಿಂದ ಭಿನ್ನವಾಗುವ, ಮುಂದಿನ ಚಿತ್ತಾಲರ ಕಥೆಗಳಲ್ಲಿ ಕಥೆಗಾರ ಮತ್ತು ಪಾತ್ರಗಳು ಮುಖಾಮುಖಿಯಾಗುವ ಮತ್ತು ಓದುಗನನ್ನೂ ಸೆಳೆದುಕೊಳ್ಳುವ ಸೂಚನೆಗಳು ಇಲ್ಲಿಯೆ ಕಂಡು ಬರುತ್ತದೆ. 'ಪುರುಷೋತ್ತಮನ ಮಗ ದತ್ತಾತ್ರೇಯ ಅವನ ಮಗಳು ಸಾವಿತ್ರಿ' ಕಥೆಯಲ್ಲಿ ಪುರುಷೋತ್ತಮನ ತಾರೀಖು ಇಲ್ಲದ ಮೂರು ವರ್ಷಗಳಷ್ಟು ಹಿಂದಿನ ಪತ್ರದಿಂದ ಕಥಾನಾಯಕನ ನೆನಪಿನ ಸುರುಳಿಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಹನೇಹಳ್ಳಿಯ ಅನೇಕರಿಗೆ ಕಂಡು ಕೂಡ ಗೊತ್ತಿರದ ಒಂದು ನೆಲದ ತುಂಡು ದಾಯಾದಿಗಳ ನಡುವಿನ ತಲೆಮಾರುಗಳ ಹಗೆತನಕ್ಕೆ ಕಾರಣವಾಗುವುದನ್ನು ವಿವರಿಸುತ್ತಲೆ ತನ್ನ ದಾಯಾದಿ ಪುರುಷೋತ್ತಮನೊಡನೆ ತಾನು ಕಳೆದ ಬಾಲ್ಯದ ಸವಿ ನೆನಪಿನಿಂದ ಅವನ 'ಸಾವನ್ನು ನಂಬುವುದಾಗಲಿ ಗ್ರಹಿಸುವುದಾಗಲಿ ತನಗೆ ಸಾಧ್ಯವಾಗಲಿಲ್ಲ' ಎಂಬ ಅರಿವಿನಿಂದ ಖುಷಿಯಾಗಿ, ಗಿಡಗಳು: ಇದ್ದ ಸಣ್ಣ ಜಾಗದಲ್ಲೂ ಜೀವತುಂಬಿ ಸೂಸುವ ಪ್ರಸನ್ನತೆಯ ಸಂಕೇತಗಳೆಂದು ಗ್ರಹಿಸಿ, ತಲೆಮಾರುಗಳ ಹಗೆತನದ ಕಾರಣದಿಂದ ಸರಣಿಯಂತೆ ನಡೆಯುವ ಆತ್ಮಹತ್ಯೆಗಳನ್ನು ತಪ್ಪಿಸಲು, ಪುರುಷೋತ್ತಮನ ಮಗ ಆತ್ಮಹತ್ಯೆ ಮಾಡಿಕೊಂಡ ದತ್ತಾತ್ರೇಯನ ಹೆಂಡತಿ ಮತ್ತು ದತ್ತಾತ್ರೇಯನ ಮರಣಾನಂತರ ಹುಟ್ಟಿದ್ದ ಸಾವಿತ್ರಿಯನ್ನು ಕರೆತಂದು ಅವರಿಗೆ

ಅಗತ್ಯವಾದ ರಕ್ಷಣೆ ಕೊಡಲು ಕಥಾನಾಯಕ ಮುಂದಾಗುತ್ತಾನೆ. 'ಸಾವಿತ್ರಿ' ಹೆಸರು ಅರ್ಥಪೂರ್ಣವಾದುದು. ಯಮನೊಡನೆ ಹೋರಾಡಿ ಪತಿಯನ್ನುಳಿಸಿಕೊಂಡಂತೆ ಬಹುಶಃ ಮುಂದೆ ಇವಳಿಂದಾಗಿ ಎರಡು ಮನೆತನಗಳ ನಡುವಣ ಹಗೆತನ ಮತ್ತು ಆತ್ಮಹತ್ಯೆ ನಿಲ್ಲಲಿ ಎಂಬ ಆಶಯವಿದೆ. 'ನನ್ನ ತಮ್ಮನ ಕತೆಗೆ ಹೊಸ ಜೀವ ಬಂದಾಗ' ಕಥೆಯಲ್ಲಿ ಕಥಾನಾಯಕನ ತಮ್ಮ ಸದಾ ಸಾವಿನಂಚಿನಲ್ಲಿದ್ದೂ ಬದುಕಿನ ಬಗ್ಗೆ ಮಾತನಾಡುವ '.....ಸಾವು ಎಂದರೆ ನಾವು ತಿಳಿದುಕೊಂಡಂತೆ ಬಾಳಿನ ಕೊನೆಯಲ್ಲ -ಅದರಾಚೆಯ ಗಡಿಯಾಗಿದೆ....' ಎಂಬ ಮಾತನ್ನು ಸಮರ್ಥಿಸಲೆಂಬಂತೆ ಕಥಾನಾಯಕನ ನೆರೆಯವನಾದ 'ಶಾಪೂರಜೀ ಪಾಲ್ಲಂಜೀ ಕೊನೆಗೂ, ಹೆಂಡತಿಯ ಪ್ರೀತಿಗಾಗಿ, ಸಂಪೂರ್ಣವಾಗಿ ಗುಣಹೊಂದಿ ಆರೋಗ್ಯವನ್ನು ತಿರುಗಿ ಪಡೆದ. ಆಮೇಲೆ ಸತ್ತ', 'ಒಂದು ಹೆಸರಿನ ಕತೆ' ಸಾವಿನ ಬಗೆಗಿನ ಒಂದು ವ್ಯಾಖ್ಯಾನವಿದೆ. ಒಬ್ಬ ವ್ಯಕ್ತಿಯ ಭೌತಿಕವಾದ ಸಾವು ಸಾವೇ ಅಥವಾ ಅವನ ನೆನಪನ್ನು ನಮ್ಮ ನೆನಪಿನ ಕೋಶದಿಂದ ಕಿತ್ತೆಸೆಯುವುದು ಆ ವ್ಯಕ್ತಿಯ ಸಾವೇ ಎಂಬ ವಿಚಾರವನ್ನು ಕಥೆಗಾರರು ಓದುಗರ ಮುಂದಿಡುತ್ತಾರೆ. ತನಗೆ ಹುಟ್ಟುವ ಮಗು ಗಂಡಾದರೆ ಅದಕ್ಕೆ ಪುರುಷೋತ್ತಮನೆಂದು ಹೆಸರಿಡಬೇಕೆಂದಿದ್ದವನು, ಹುಟ್ಟುವ ಮಗು ಗಂಡಾದರೆ 'ಆನಂದ' ಎಂಬ ಹೆಸರಿಡೋಣವೆಂಬ ಹೆಂಡತಿಯ ಮಾತಿಗೆ ಹೂಂಗುಟ್ಟಿ 'ಆಗ ಮೊದಲಬಾರಿಗೆ ಪುರುಷೋತ್ತಮ ಸುತ್ತ ಎಂದೆನಿಸಿ' ಕಥಾನಾಯಕ ಅಸ್ವಸ್ಥನಾಗುತ್ತಾನೆ. 'ಕತೆಯಾದಳು ಹುಡುಗಿ' ಕಥೆಯ ಮುನ್ಸೂಚನೆ ಈ ಕಥೆಯಲ್ಲಿಯೆ ಇರುವುದನ್ನು ಗಮನಿಸಬಹುದು. ಸಾವಿನ ಬಗೆಗಿನ ಮತ್ತೊಂದು ವಿಚಾರ ಅಥವಾ ಮುಖವನ್ನು 'ಅಪಘಾತ'ದಲ್ಲಿ ಕಾಣಬಹುದು. ಪರಸ್ಪರರ ಸಂಬಂಧಗಳೂ ಸಾವಿನ ಅನುಭವದ ತೀವ್ರತೆಯಲ್ಲಿ ಗಣನೀಯ ಪಾತ್ರವಹಿಸುತ್ತವೆಂಬ ಮಾತನ್ನು ಸೊಗಸಾಗಿ ಈ ಕಥೆಯಲ್ಲಿ ಕಥೆಗಾರರು ಚಿತ್ರಿಸಿದ್ದಾರೆ. ಒಟ್ಟಿನಲ್ಲಿ ಈ ಕಥೆಗಳಲ್ಲಿ ಕಥೆಗಾರರು ಸಾವಿನ ಬಗೆಗೆ ಜಿಜ್ಞಾಸೆಯನ್ನು ನಡೆಸಿದ್ದಾರೆ. ಈ ಸಂಗ್ರಹದ 'ಬೇನ್ಯಾ' ಉಳಿದ ಕಥೆಗಳಿಂದ ಭಿನ್ನವಾದುದು. ಈ ಕಥೆಗೆ 'ಸಂಜಯ ಗಾಂಧಿ ಸ್ವಚ್ಛ ದಿಲ್ಲಿ'ಯ ಬಗ್ಗೆ ಕಂಡ ಕನಸಿನಲ್ಲಿ ಸಿಕ್ಕಿಬಿದ್ದ ಬಡಪಾಯಿ ಮನೆಗಳು, ಝೋಪಡ ಪಟ್ಟಿಗಳು, ಬುಲ್ಡೋಝರುಗಳ ನಿರ್ದಯ ಬಲದ ಕೆಳಗೆ ಉಧ್ವಸ್ತಗೊಂಡ ಭೀಕರ ರೀತಿ..... ಪ್ರಚೋದನೆಯಾಗಿದೆ'. ಸ್ವಚ್ಛ ದಿಲ್ಲಿಯಂಥ ಕಾರ್ಯಕ್ರಮದಿಂದಾಗಿ ಭಿಕ್ಷುಕ ಹನ್ನೆರಡು ವರ್ಷದ ಬಾಲಕ ಟ್ರಕ್ಕಿನಲ್ಲಿ ಸಾಗಿಸಲ್ಪಡುವಾಗ 'ಇಷ್ಟು ದಿನ ಹೆದರಿಕೊಂಡು ದೂರವೆ ಉಳಿದ ಇನ್ನು ಯಾರದೋ ಕನಸಿನಲ್ಲಿ ನನಗೇ ಗೊತ್ತಾಗದ ಹಾಗೆ ಬಂದು ಸೇರಿಬಿಟ್ಟಿದ್ದೇನೆಯೆ?' ಎನಿಸುತ್ತದೆ. ದೊಡ್ಡವರ ದೊಡ್ಡ ಕನಸುಗಳಿಗೆ ಉದ್ವಸ್ತವಾಗುವ ಇಂತಹ ಬಲಹೀನ ನಿರ್ಗತಿಕರ ಕಥೆಯನ್ನು ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಒಟ್ಟಾರೆ ಈ ಸಂಗ್ರಹದಲ್ಲಿನ

ಕಥೆಗಳು ತಮ್ಮ ಜಿಜ್ಞಾಸೆಯಿಂದ ನಿರೂಪಣಾ ವಿಧಾನದಿಂದ ಓದುಗರನ್ನೂ ವಿಚಾರಕ್ಕೆ ಹಚ್ಚುತ್ತವೆ.

ಚಿತ್ತಾಲರ ಕತೆಗಳು

'ಸಂದರ್ಶನ', 'ಅಬೋಲೀನ', 'ಆಟ', 'ಕತೆಯಾದಳು ಹುಡುಗಿ' ಮತ್ತು 'ಬೇನ್ಯಾ' ಕಥಾಸಂಗ್ರಹಗಳಿಂದ ಒಟ್ಟು ಮೂವತ್ತುಮೂರು ಕಥೆಗಳಿಂದ ಕೂಡಿದೆ ಯಶವಂತ **'ಚಿತ್ತಾಲರ ಕತೆಗಳು'**. 'ಬೇನ್ಯಾ' ಸಂಗ್ರಹದ 'ಪುರುಷೋತ್ತಮನ ಮಗ ದತ್ತಾತ್ರೇಯ ಅವನ ಮಗಳು ಸಾವಿತ್ರಿ' ಮತ್ತು 'ನನ್ನ ತಮ್ಮನ ಕತೆಗೆ ಹೊಸ ಜೀವ ಬಂದಾಗ' ಈ ಎರಡು ಕಥೆಗಳನ್ನು 'ಬೇನ್ಯಾ' ಕಥಾಸಂಗ್ರಹದ ವಿಮರ್ಶೆಯಲ್ಲೇ ನೋಡಿರುವುದರಿಂದ ಅವುಗಳನ್ನು ಬಿಟ್ಟು ಉಳಿದವುಗಳನ್ನು ಇಲ್ಲಿ ನೋಡಲಾಗುತ್ತದೆ.

ಚಿತ್ತಾಲರು ಕಥೆಗಾರರಾದ 'ಬೊಮ್ಮಿಯ ಹಲ್ಲು ಹೊರೆ'ಯಿಂದ ಇತ್ತೀಚಿನ ಅವರ ಕಥೆಗಳ ಹರಹಿನಲ್ಲಿ ಅವರ ಬೆಳವಣಿಗೆಯ ಹಂತಗಳನ್ನು ಗುರುತಿಸುತ್ತಾ ಹೋಗಬಹುದಾದರೂ ಅವುಗಳನ್ನು ಕುರಿತ ಗಾಢ ಚಿಂತನೆ, ತೀವ್ರ ವಿಮರ್ಶೆ ಅವಶ್ಯಕವಾದರೂ 'ಸಾಹಿತ್ಯ ವಾರ್ಷಿಕ'ದಂಥ ಕೃತಿಯಲ್ಲಿ ಸ್ಥಳಾಭಾವದಿಂದ ಅದು ಸಾಧ್ಯವಾಗಲಾರದು.

೧೯೪೪ರಲ್ಲಿ 'ಬೊಮ್ಮಿಯ ಹುಲ್ಲು ಹೊರೆ' ಕಥೆಯನ್ನು ಬರೆದು ಕಥೆಗಾರರಾದ ಚಿತ್ತಾಲರು ಮಾಸ್ತಿಯವರ ಸಂಪ್ರದಾಯದಲ್ಲೇ ಕಥೆಗಳನ್ನು ಬರೆಯತೊಡಗಿದರು. ಸಾಮಾಜಿಕವಾಗಿ ನಿಕೃಷ್ಟರು ಅಥವಾ ಕೆಳಹಂತದವರು ಎಂಬುವರಲ್ಲಿಯೂ ಇವರು ಮಾನವೀಯ ಗುಣಗಳನ್ನು ಒಳ್ಳೆಯ ಅಂಶಗಳನ್ನು ಎತ್ತಿ ತೋರುವುದೇ ಆ ಕಥೆಗಳ ಪ್ರಧಾನ ಗುರಿಯಾಗಿದೆ. ಬಡ ವೇಶ್ಯೆಯಲ್ಲೂ ಒಬ್ಬ ತಾಯಿ ಹೃದಯವನ್ನು ಕಾಣುವ 'ಉತ್ತುಮಿ', ಅಂತಃಕರಣಪೂರ್ವಕವಾಗಿ ಮೃದುವಾಗಿ ಹೇಳಿದ ಹಿತವಚನದಿಂದ ತನ್ನ ತಪ್ಪನ್ನು ತಿದ್ದಿಕೊಳ್ಳುವ ಕಳ್ಳ ಗಿರಿಯಣ್ಣ ಅಂಥ ಕಥೆಗಳು.

'ಒಂದು ತತ್ವದ ಸಲುವಾಗಿ' ಕಥೆ ತತ್ವದ ಮಾತನ್ನು ಮಾತಿಗಷ್ಟೇ ಉದಹರಿಸುತ್ತ ವ್ಯಾವಹಾರಿಕವಾಗಿ ಅದನ್ನು ಅವಜ್ಞೆಗೈಯುವ ಮೇಲುವರ್ಗದ ಮತ್ತು ಕೆಳವರ್ಗದ ವ್ಯಕ್ತಿಗಳಿಬ್ಬರ ಸ್ವಭಾವವನ್ನು ಚಿತ್ರಿಸುವ ಕಥೆ. ಇವೇ ಗುಂಪಿಗೆ ಸೇರಿಸಬಹುದಾದ ಕಥೆಗಳು 'ಮಲ್ಲಿನಾಥ' ಮತ್ತು 'ಗಾನಪ್ರಿಯ ಶಂಭುಶಾಸ್ತ್ರಿ' 'ಮಲ್ಲಿನಾಥ'ದ ಉಗ್ಗಾಭಟ್ಟ ಸಾಹಿತ್ಯದ ಬಗ್ಗೆ ಏನೂ ತಿಳಿಯದಿದ್ದರೂ, ತಾನು ಪ್ರಸ್ತಾಪಿಸುತ್ತಿರುವ ಕೃತಿಯ ಬಗ್ಗೆ ಮಾಡುವ ವಿಮರ್ಶೆ, 'ಗಾನಪ್ರಿಯ ಶಂಭುಶಾಸ್ತ್ರಿ' ತಾನು ಕಾಣದ ಸುಗುಣಾಬಾಯಿಯ ಗಾನಕಲೆಯ ಬಗ್ಗೆ ಮಾಡುವ ಭಾಷಣ ಇವು ಕಥಾಂತ್ಯದಲ್ಲಿ ವ್ಯಕ್ತವಾಗಿ ಅವರ ಪೊಳ್ಳುತನ

ಹೊರಬೀಳುತ್ತದೆ. ಅವರ ಆಷಾಢ ಭೂತಿತನದ ಬಗೆಗೆ ನವುರಾದ ವ್ಯಂಗ್ಯ ಈ ಕಥೆಗಳಲ್ಲಿದೆ. ಈ ಗುಂಪಿಗೇ ಸೇರಿಸಬಹುದಾದ ಮತ್ತೆರಡು ಕಥೆಗಳೆಂದರೆ 'ಗುಂಡಾಭಟ್ಟರ ಮಡಿ' ಮತ್ತು 'ಮುಕುಂದನ ದಾಕ್ಷಿಣ್ಯ'. ಅತಿಯಾಗಿ ಮಡಿಯ ಆಚರಣೆಯಿಂದಾಗಿ ನಮ್ಮ ಕನಿಕರಕ್ಕೂ ಪಾತ್ರರಾಗುವ ಗುಂಡಾಭಟ್ಟ ಅವರ ಆರು ವರ್ಷದ ಮಗನಿಂದಾಗಿ ಊರೆಲ್ಲರ ಹಾಸ್ಯದ ವ್ಯಕ್ತಿಯಾಗುತ್ತಾರೆ. 'ಮುಕುಂದನ ದಾಕ್ಷಿಣ್ಯ' ಮಾಸ್ತಿಯವರ ರಂಗಪ್ಪನ ಕಥೆಗಳನ್ನು ನೆನಪಿಗೆ ತರುತ್ತದೆ. ತನ್ನ ಅತಿಯಾದ ನಾಚಿಕೆಯ ಸ್ವಭಾವದಿಂದಾಗಿ ಆತ ಒಳಗಾಗುವ ತೊಂದರೆಗಳು ಓದುಗರನ್ನು ಹೃದಯತುಂಬಿ ನಗುವಂತೆ ಮಾಡುತ್ತವೆ.

'ಬೊಮ್ಮಿಯ ಹುಲ್ಲು ಹೊರೆ' ಶೋಷಣೆಯನ್ನು ವಸ್ತುವಾಗುಳ್ಳ ಕಥೆ. ಬೊಮ್ಮಿಯ ಜೊತೆಯಲ್ಲಿ ಆತ್ಮೀಯವಾಗಿ ಮಾತನಾಡುತ್ತಲೇ ಹಲ್ಲುಹೊರೆಯನ್ನು ಕಡಿಮೆ ಕ್ರಯಕ್ಕೆ ಕೊಳ್ಳುವುದಲ್ಲದೆ, ಬೇರೆ ಕೆಲಸವನ್ನೂ ಮಾಡಿಸಿಕೊಂಡು, ನಾಯಿ ಬಾಯಿ ಹಾಕಿದ ಅನ್ನವನ್ನು ಔದಾರ್ಯದಿಂದ ಕೊಡುವಂತೆ ಕೊಡುವ ಶಂಕರರಾಯರ ಪತ್ನಿಯ ಬಗ್ಗೆ ಅಸಹ್ಯ ಉಂಟಾಗುತ್ತದೆ. ಬೊಮ್ಮಿಗೆ ತಾನು ಶೋಷಣೆಗೊಳಗಾಗುತ್ತಿರುವುದರ ಅರಿವಿಲ್ಲದಿರುವುದು ಈ ಕಥೆಯ ವೈಶಿಷ್ಟ್ಯ.

'ತಪ್ಪಿದಗುರಿ' ಮತ್ತು 'ರಾಧಕ್ಕನ ಮನೋರಥ' ಕಥೆಗಳಲ್ಲಿ ತಮ್ಮ ಹೆಣ್ಣು ಮಕ್ಕಳಿಗೆ ಹೇಗಾದರೂ ಮಾಡಿ ಮದುವೆ ಮಾಡಬೇಕೆಂಬ ತಾಯಂದಿರ ಕಳಕಳಿಯನ್ನು ನೋಡುತ್ತೇವೆ. ಆ ಕಳಕಳಿಯಿಂದಾಗಿ 'ಹೆರವರಿಂದ ನಮ್ಮ ಕೆಲಸ ಆಗಬೇಕಾದರೆ ಅವರನ್ನೂ ಸ್ವಲ್ಪ ಹೊಗಳಬೇಕು. ಇದ್ದುದರೊಡನೆ ಇಲ್ಲದ್ದನ್ನೂ ತುಸು ಹೇಳಬೇಕಾಗುತ್ತದೆ' ಎಂದು 'ತಪ್ಪಿದ ಗುರಿಯ' ಮುಕ್ತಳ ತಾಯಿ ವಿವಾಹಿತ ದೇವೇಂದ್ರನನ್ನೇ ಅವನ ತಮ್ಮ ಅವಿವಾಹಿತ ಮೋಹನನೆಂದು ಅವನೆದುರು ತನ್ನ ಮಗಳ ಗುಣಗಾನ ಮಾಡುವುದು, 'ರಾಧಕ್ಕನ, ಮನೋರಥ'ದಲ್ಲಿ ತನ್ನ ದೂರದ ಬಂಧು ವಿವಾಹ ಯೋಗ್ಯ ಗೋಪಾಲ ಹನೇಹಳ್ಳಿಗೆ ಬಂದಾಗ ಏನಾದರೂ ಮಾಡಿ ಅವನನ್ನು ಭೇಟಿಮಾಡಬೇಕೆಂದು ರಾಧಕ್ಕ ಪಡುವ ಪ್ರಯತ್ನ ಯಾರಿಗಾದರೂ ಅಯ್ಯೋ ಎನಿಸದಿರದು.

ಸುಮಾರು ಈ ಕಥೆಗಳನ್ನು ಮಾಸ್ತಿ ಸಂಪ್ರದಾಯದಲ್ಲಿ ಬರೆದ ಚಿತ್ತಾಲರು 'ಪೀಜಿ' ಮತ್ತು 'ಸಂದರ್ಶನ' ಕಥೆಗಳಿಂದ ನವ್ಯದ ಕಡೆಗೆ ಹೊರಳಿದಂತೆ, ಅವರ ಕಥೆಗಳು ಹೆಚ್ಚು ಪ್ರೌಢವಾಗುತ್ತ ಹೋಗುವುದನ್ನು ಕಾಣಬಹುದು. ನಿರೂಪಕ ಹಿಂದಾಗಿ ಕಥೆಗಳಲ್ಲಿನ ಪಾತ್ರಗಳ ಮನಸ್ಸಿನ ಒಳತೋಟಿಯ ಚಿತ್ರಣಕ್ಕೆ ಹೆಚ್ಚು ಒತ್ತು ಬಿದ್ದುದನ್ನು

ಕಾಣಬಹುದು. 'ಪೀಜೀ' (Paying Guest) ಯಲ್ಲಿ ಅಂಜುಬುರುಕ, ಅಳುಬುರುಕ, ದುಃಖಪ್ರಿಯ ಜೀವಿ ಅನಂತ ಕುಲಕರ್ಣಿಯ ಅನಾಥ ಪ್ರಜ್ಞೆಯ ಚಿತ್ರಣದಿದ್ದರೆ, 'ಸಂದರ್ಶನ'ದಲ್ಲಿ ತಾನೊಪ್ಪದ ಸೇಲ್ಸ್‌ಮನ್ ಕೆಲಸಕ್ಕೆ ಸಂದರ್ಶನಕ್ಕೆ ಹಾಜರಾಗುವ ವೇಳೆಯಲ್ಲಿ ಸಂದರ್ಶನಕ್ಕೆಂದೇ ಹಾಕಿಕೊಂಡು ಬಂದಿದ್ದ ಕೋಟು, ಟೈಗಳನ್ನು ತೆಗೆದಿಟ್ಟು ಹೋಗುವ ಮಾಧವನಲ್ಲಿ ಬಂಡಾಯ ಕಂಡುಬರುತ್ತದೆ. 'ನಾವು ಯಾವ ಒಂದು ಮನಸ್ಥಿತಿಯಲ್ಲಿರುತ್ತೇವೋ ಆ ಮನಸ್ಥಿತಿಯನ್ನು ಸಮರ್ಥಿಸುವಂತಹ ಸಂಗತಿಗಳನ್ನೇ ನೆನೆಯುತ್ತೇವೆ, ಅನುಭವಿಸುತ್ತೇವೆ.' ಸಂದರ್ಶನಕ್ಕೆಂದೇ ಮನೆಯಿಂದ ಹೊರಟ ಮಾಧವ ದಾರಿಯುದ್ದಕ್ಕೂ ಅವನ ಮನಸ್ಥಿತಿಯನ್ನು ಪ್ರತಿಬಿಂಬಿಸತಕ್ಕಂತಹ ಮಾತುಗಳನ್ನು ಕೇಳುತ್ತಾ, ನೋಟಗಳನ್ನೇ ಕಾಣುತ್ತಾ ಕೊನೆಗೆ ಕೋಟು, ಟೈ ತೆಗೆದು ಸಂದರ್ಶನಕ್ಕೆ ಹೋದರೂ 'ಮಾರುವ ವಸ್ತು ಚಂದವಿದ್ದಷ್ಟೂ ಒಳ್ಳೆಯದಲ್ಲವೇ? ಎಂಬ ಮಾತಿನಿಂದ ತನ್ನ ಒಳ್ಳೆಯ ಪರ್ಸನಾಲಿಟಿಯಿಂದಾಗಿ ಆಯ್ಕೆಯಾಗುತ್ತಾನೆ.

'ಖಾಲಿಕೋಣೆ' ಷೋಡಶಿಯೊಬ್ಬಳ ವಯೋ ಸಹಜವಾದ ಹಗಲುಗನಸಿನ ಸುಂದರಚಿತ್ರಣ. ಬಚ್ಚಲ ಮನೆಯ ಕೊಳೆಯಲ್ಲಿಯೂ ಮಲ್ಲಿಗೆ ಬಳ್ಳಿ ಬೇರು ಬಿಟ್ಟು ತನ್ನ ಸಂಧಿ ಸಂಧಿಗಳಲ್ಲಿ ಗಮಗಮಿಸುವ ಹೂವು ತಳೆಯುವಂತೆ ಅಕ್ಕನ ಬಾಣಂತನಕ್ಕೆಂದು ಬಂದ ನಿರ್ಮಲೆ ತನ್ನ ಮನೆಯ ಪಕ್ಕದ ಖಾಲಿಕೋಣೆಗೆ ಬಾಡಿಗೆಗೆ ಬರಲಿರುವ ಯುವಕನ ಬಗ್ಗೆ ಹಗಲುಗನಸುಗಳನ್ನು ಕಾಣುತ್ತಾ ಹೋಗುತ್ತಾಳೆ. ಅವನು ಕೋಣೆಗೆ ಬರುವ ಮುಂಚೆಯೆ ತೀರಿಕೊಂಡಾಗ ತನ್ನ ಪ್ರಿಯಕರನನ್ನೇ ಕಳೆದುಕೊಂಡವಳಂತೆ ಬಿಕ್ಕಿಬಿಕ್ಕಿ ಅಳುತ್ತಾಳೆ. ಭೌತಿಕವಾಗಿ ಅನಂತನು ಸತ್ತಿದ್ದರೂ 'ತನ್ನ ಮನಸ್ಸಿನ ಗರ್ಭದಲ್ಲೇ ಹುಟ್ಟಿ, ತನ್ನ ಅಂಗಾಂಗಗಳನ್ನೂ ವ್ಯಾಪಿಸಿ ಈಗ ತನ್ನನ್ನೇ ಮೀರಿನಿಂತ ಈ ಅನಂಗ ಅನಂತ ಸಾಯುವುದು ಶಕ್ಯವೇ?' ಎಂಬ ಪ್ರಶ್ನೆ ಅವಳೆದುರು ನಿಲ್ಲುತ್ತದೆ. ಪ್ರಿಯಕರನಿಗಾಗಿ ಹಾತೊರೆಯುವ ಅವಳ ಹೃದಯದ ಕೋಣೆ ಖಾಲಿಯಾಗಿಯೇ ಉಳಿಯುತ್ತದೆ.

'ಅಡ್ಡಬಿದ್ದಮರ' ಕಥೆಯಲ್ಲಿ ರಸ್ತೆಗೆ ಅಡ್ಡಲಾಗಿ ಬಿದ್ದ ಮರ ಸುರೇಶನ ಮತ್ತು ನಿರ್ಮಲೆಯರ ಅಂತರ್ಜಾತೀಯ ಪ್ರೇಮ ವಿವಾಹದ ದಾರಿಗೆ ಅಡ್ಡಲಾಗಿದ್ದ ನಿರ್ಮಲೆಯ ಅಜ್ಜಿಗೆ ಸಂಕೇತವಾಗುತ್ತದೆ. ರಸ್ತೆಗೆ ಅಡ್ಡಲಾಗಿದ್ದ ಮರವನ್ನು ಕುರಿತು '...ಮರ ಹೊತ್ತುಕೊಂಡು ಹೋದರು ರಸ್ತೆ, ಸಾಫ್ ಆಯಿತು' ಎಂಬ ಪಕ್ಕದ ಮನೆಯ ಮೂರು ವರ್ಷದ ಮುಕ್ತಳ ಮಾತುಗಳು ನಿರ್ಮಲೆಯ ಅಜ್ಜಿ ತೀರಿಹೋಗಿ ಸುರೇಶ ಮತ್ತು ನಿರ್ಮಲೆಯರ ವಿವಾಹಕ್ಕಿದ್ದ ಅಡಚಣೆ ನಿವಾರಣೆಯಾದುದನ್ನು ಹೇಳುತ್ತದೆ. ಈ ಕಥೆಯಲ್ಲಿ ಪ್ರಕಟವಾಗಿ ಸಂಕೇತವೊಂದನ್ನು ಬಳಸಿದ್ದಾರೆ. ಆದರೆ

ವಾಸ್ತವವಾಗಿ 'ಉತ್ತುಮಿ' ಕಥೆಯಲ್ಲಿ ಉತ್ತುಮಿಯ ಮಗಳು ಕಲ್ಯಾಣಿಯನ್ನು ನೋಡಲು ಹೋಗಲು 'ಕೆಂಪು ಮಶಿಯ ದೌತಿ ಎತ್ತಲೇ' ಎಂಬ ಮಾತುಗಳಲ್ಲಿ ಅಡಗಿರುವ ಕಾಮದ ವಾಸನೆಯ ಸಂಕೇತದ ಕಂಪು ಕಂಡೂ ಕಾಣದಂತೆ ಇದೆ.

'ಅಪರಿಚಿತರು' ಕಥೆಯ ರಾಮಕೃಷ್ಣ ಮತ್ತು ಜಾನಕಿ ಮನೆಗೆ ಬಂದ ಅತಿಥಿಗಳಿಗೆ, ಮಂತ್ರ ಮುಗ್ಧ ವ್ಯಕ್ತಿಗಳಂತೆ ವಶರಾಗಿ ಆಜ್ಞಾನುವರ್ತಿಗಳಾಗಿ, ಅವರು ಹೋದ ಮೇಲೆ 'ಆ ನಮ್ಮ ಸ್ವಾತಂತ್ರ್ಯವನ್ನು ನಾವಾಗಿಯೇ ಬಿಟ್ಟುಕೊಟ್ಟೆವಲ್ಲ- ಮುಖ್ಯವಾಗಿ ನಾವು ನೀರಿಲ್ಲದವರು -ಸತ್ವಹೀನರು!' ಎಂದುಕೊಳ್ಳುತ್ತಾರೆ. ಕಥೆಯ ಪ್ರಾರಂಭದಲ್ಲಿ ಹೇಳದೇ ಕೇಳದೇ ತಮ್ಮ ಬಾಗಿಲಿನಲ್ಲಿ ಹಾಜರಾದ ಈ ಅಪರಿಚಿತರು ಈ ಲೋಕದ ವ್ಯಕ್ತಿಗಳಲ್ಲ ಎಂಬ ಭಾವನೆ ರಾಮಕೃಷ್ಣನ ಮನಸ್ಸಿನಲ್ಲಿ ಮೂಡಿ ಮೈ ನವಿರಿಗೊಳಗಾಗುತ್ತದೆ. ಅರ್ಧಭ್ರಮೆ (ಫ್ಯಾಂಟಸಿ) ಅರ್ಧ ವಾಸ್ತವದಲ್ಲೆಂಬಂತೆ ನಡೆಯುವ ಈ ಕಥೆಯ ಅಪರಿಚಿತನ ಚಿತ್ರವೇ ಮುಂದಿನ 'ಪಯಣ', 'ಆಟ' ಕಥೆಗಳಲ್ಲಿ ಸ್ಪಷ್ಟವಾಗಿ ಸಾವಿನ ಸಂಕೇತವಾಗಿ ಬರುತ್ತದೆ. 'ಅದೃಷ್ಟವೂ' ಸಾವನ್ನು ಕುರಿತ ಕಥೆಯೆ, ಮೈಲಿ ಬೇನೆಗೆ ತುತ್ತಾಗಿ ಸಾವಿನ ಹತ್ತಿರ ಹೋಗಿದ್ದ ಹನ್ನೆರಡು ವರ್ಷದ ಬಾಲಕ ನೀಲಕಂಠ ಉಳಿದುಕೊಳ್ಳುವುದೂ, ಜೀವಾವಧಿ ಶಿಕ್ಷೆ ಅನುಭವಿಸಿ ಗೋವೆಯಿಂದ ತಂದೆ ತಾಯಿಯರನ್ನು ಕಾಣಲು ಬಂದ ಪೊಕ್ಕನ ಅಣ್ಣ ಮೈಲಿಬೇನೆಗೇ ತುತ್ತಾಗಿ ಸಾಯುವುದೂ ಸಾವಿನ ವಿಸ್ಮಯ ನಿಗೂಢತೆಯ ಕಡೆಗೆ ಬೆರಳುಮಾಡಿ ತೋರುತ್ತವೆ. ಅವ್ಯಕ್ತವೂ ನಿಗೂಢವೂ ಆದ ಸಾವಿನ ಕರೆ, ಸಾವನ್ನು ಕುರಿತ ವಿಚಾರ ಇವು 'ಪಯಣ' ಮತ್ತು 'ಆಟ' ಕಥೆಗಳಲ್ಲಿ ಮುಂದುವರೆದಿದೆ. ಪ್ರತಿಭಟನೆಗೆ ಅರ್ಥವೇ ಇಲ್ಲವೆಂದು ಬಾಲ್ಯದಿಂದಲೂ ತಂದೆಗೆ ವಿಧೇಯನಾಗಿ, ಮಿತ್ರರಿಗೆ ಹೊಂದಿಕೊಂಡು ಹೋಗುವ 'ಪಯಣ' ಕಥೆಯ ಸೇಲ್ಸ್‌ಮನ್ '.....ಕೆದರಿದ ಕೂದಲು; ಹದವಾದ ಭುಜಗಳು; ಹದವಾದ ಎದೆ; ಮಾಂಸಲ ಕೈ ರಟ್ಟೆಗಳು; ಕಪ್ಪು ಮೈಬಣ್ಣ; ಮೋರೆಗೆ ಇಷ್ಟುದ್ದ ಕಪ್ಪು ಪೊತ್ತೆ-ಮೀಸೆಗಳು; ಕಪ್ಪು ಎದೆಯ ಮೇಲೆ ಕಪ್ಪು ರೋಣೆ; ಎಡಗೈ ರಟ್ಟೆಗೆ ಕಪ್ಪು ಬಣ್ಣದ ಇಷ್ಟು ದಪ್ಪದ ದಾರ...'ದ ವ್ಯಕ್ತಿ 'ನಾಳೆ ನುಸುಕಿನಲ್ಲಿ ಕೋಳಿ ಕೂಗುವ ಮೊದಲೇ ಹೊರಡಬೇಕು ಸಿದ್ಧನಾಗಿರು' ಎಂದು ಹೇಳಿದಾಗ ಎಂದೂ ಪ್ರಯಾಣಕ್ಕೆ ಗೊಂದಲಿಸದ ಅವನು ಗೊಂದಲಿಸುತ್ತಾನೆ. 'ಸರಿಯಾಗಿ ಐದು ಗಂಟೆಗೆ ತಾನು ಹೊರಡಬೇಕು. ನಾಲ್ಕು ಗಂಟೆಗೆ ಎಬ್ಬಿಸು' ಎಂದು ರೂಮ್‌ಬಾಯ್‌ಗೆ ಹೇಳಿ ಸರ್ವಸಿದ್ಧನಾಗಿ ಸೂಟುಬೂಟುಗಳನ್ನು ಧರಿಸಿಯೇ ಹಾಸಿಗೆಯ ಮೇಲೆ ಅಂಗಾತ ಮಲಗಿ 'ಪಯಣ'ಕ್ಕೆ ಸಿದ್ಧನಾಗುತ್ತಾನೆ. 'ಆಟ' ಕಥೆಗೆ ಪ್ರೇರಣೆ ಭೌತ ವಿಜ್ಞಾನದ ಕ್ವಾಂಟಮ್ ಹಾಗೂ ರಿಲೇಟಿವಿಟಿ. ಕಥೆಯಾಗಿ ಪೂರ್ಣಗೊಂಡದ್ದು ಸಾವಿನ

ನಿಗೂಢತೆಯ ಸುತ್ತ ಹುಟ್ಟಿಕೊಂಡ ಪುರಾಣ! 'ಆಟ' ಕಥೆ ಲೇಖಕರೇ ಮೆಚ್ಚಿಕೊಂಡ ಪ್ರಿಯವಾದ ಕಥೆ. 'ಪಯಣ'ದ ಕಥೆಯಲ್ಲಿಯಂತೆಯೆ ಇಲ್ಲಿಯೂ ಇಸ್ಪೀಟು ಆಡಲು ನರಸಿಂಹನ ಮನೆಗೆ ಬಂದ ನಾಲ್ವರು ಗೆಳೆಯರೂ ಕಪ್ಪಗಿನ ಮನುಷ್ಯ..... ತಲೆಯ ಮೇಲೆ ಕಂಬಳಿ ಕೊಪ್ಪೆ..... ಇಷ್ಟು ಮಿೂಸೆ ಬಿಟ್ಟಿದ್ದಾ..... ಕೈಯಲ್ಲಿ ಸುರುಳಿ ಸುತ್ತಿದ ಹಗ್ಗಾ' ಹಿಡಿದಿದ್ದ ವ್ಯಕ್ತಿಯನ್ನು ನೋಡುತ್ತಾರೆ. ನರಸಿಂಹನ ತಾಯಿಗೆ 'ಕೊಟ್ಟಿಗೆಯ ಹತ್ತಿರ ಬಂದವನು ಇಲ್ಲಿಯೂ ಬರಲಾರನಷ್ಟೆ' ಎಂಬ ಸಂದೇಹ ಮೂಡುತ್ತದೆ. ಕನಸು ಕಂಡು ಎದ್ದು ಬರುತ್ತಿದ್ದ ಬುಡಣ ಸಾಬರಿಗೆ ನರಸಿಂಹನ ಸಾವನ್ನು ಕಂಡು 'ಸಾವಿನ ಮುಂಗಾಳಿ ಹತ್ತಿದ ಜೀವ ಆಳದಲ್ಲೆಲ್ಲೋ ಹೆದರಿಯೇ ಗೆಳೆಯರನ್ನು ಆಟಕ್ಕೆ ಕರೆಸಿರಬೇಕು' ಎಂದು ಅನ್ನಿಸುತ್ತದೆ. ಈ ಸಾವನ್ನು ಕುರಿತ ಕಥೆಗಳಲ್ಲಿ ಗುಡುಗು, ಮಿಂಚು, ಮಳೆ, ಸಿಡಿಲುಗಳು ಹಿನ್ನೆಲೆಯಾಗಿ ಬರುತ್ತವೆ. ಇದೇ ಗುಡುಗು, ಮಿಂಚು, ಮಳೆ, ಸಿಡಿಲುಗಳು ಹಿನ್ನೆಲೆಯಲ್ಲಿದ್ದರೂ 'ಉದ್ಧಾರ' ಕಥೆಯಲ್ಲಿ ಪೊತ್ತೆ ಮಿೂಸೆಯ ಕಪ್ಪಗಿನ ವ್ಯಕ್ತಿಯ ಬದಲು ಕಪ್ಪು ನಾಯಿಯೊಂದು ಕಣ್ಣುಗಳಲ್ಲೇ ಸಿಟ್ಟಿನಿಂದ ನೋಡುತ್ತಾ ಗುರುಗುಟ್ಟುವ ಚಿತ್ರ ಬರುತ್ತದೆ. ಅಂಥ ಕಪ್ಪು ನಾಯಿ ಎರಡು ಬಾರಿ ಕನಸಿನಲ್ಲಿ ಕಂಡಾಗಲೂ ಅಶುಭವಾದದ್ದನ್ನೇ ನೆನೆದು ಮೂರನೆಯ, ಬಾರಿ ಅಹಲ್ಯೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇಲ್ಲಿ ಕಪ್ಪು ನಾಯಿ ಅಶುಭದ ಸಂಕೇತವಾಗಿ ಬರುತ್ತದೆ.

ಪುರಾಣದ ಅಶ್ವತ್ಥಾಮ ಭ್ರೂಣ ಹತ್ಯೆಯ ಶಾಪವನ್ನು ತಲೆಯಮೇಲೆ ಹೊತ್ತು ತಿರುಗುತ್ತಿರುವಂತೆ 'ಅಶ್ವತ್ಥಾಮ' ಕಥೆಯ ರಾಮಚಂದ್ರ ತನ್ನ ಶೂದ್ರ ಪ್ರೇಯಸಿಯನ್ನು ತಂದೆ ತಾಯಿಗಳ ಭಯದಿಂದ ಮದುವೆಯಾಗಲಾರದೆ ಅವಳ ಆತ್ಮಹತ್ಯೆಗೆ ಕಾರಣನಾಗಿ 'ಬೆನ್ನ ಹುರಿಯಲ್ಲೇ ಬೇರುಬಿಟ್ಟ ಪಾಪ ಪ್ರಜ್ಞೆಯಿಂದಾಗಿ ನವೆಯುತ್ತಾ ಸದಾ ಆ ಪಾಪ ಪ್ರಜ್ಞೆಯ ಕೆಂಡವನ್ನು ತಲೆಯ ಮೇಲೆ ಹೊತ್ತು' ಒದ್ದಾಡುತ್ತಾನೆ. ಕಾಮವನ್ನು ವಸ್ತುವಾಗುಳ್ಳ 'ಚಕ್ರವ್ಯೂಹ', 'ಬೀಗ ಮತ್ತು ಬೀಗದ ಕೈ', 'ಸೆರೆ', 'ಹಾವು'ಗಳು ಇನ್ನಷ್ಟು ಸುಂದರವಾಗಿ ಸಂಕೇತ, ಪ್ರತಿಮೆಗಳೊಂದಿಗೆ ಮೂಡಿಬಂದಿವೆ. 'ಚಕ್ರವ್ಯೂಹ' ಹೆಸರೇ ಅರ್ಥಗರ್ಭಿತವಾದುದು, ಎರಡು ರೀತಿಯಲ್ಲಿ. ಚಕ್ರವ್ಯೂಹವನ್ನು ಭೇದಿಸಿದ ಅಭಿಮನ್ಯು ಅರ್ಥಗರ್ಭಿತವಾದುದು, ಎರಡು ರೀತಿಯಲ್ಲಿ. ಚಕ್ರವ್ಯೂಹವನ್ನು ಭೇದಿಸಿದ ಅಭಿಮನ್ಯು ಮರಳಿಬಾರದೇ ಹೋದಂತೆ 'ಯಾವ ಜನ್ಮದ ಋಣಾನುಬಂಧವೋ; ನಾನವಳಿಗೆ ಎರಡು ಬಗೆಯದಂತೆ ನನ್ನನ್ನು ಕಾಪಾಡಿದ್ದಳು' ಎಂದು ಹೆಂಡತಿಯನ್ನು ಹೊಗಳುವ ನಲವತ್ತೈದು ವರ್ಷಗಳ ನಡುಹರೆಯದ ಕಥಾನಾಯಕ ವಿದೇಶದಲ್ಲಿ ಇಪ್ಪತ್ನಾಲ್ಕರ ವಿವಾಹಿತ ತರುಣಿ ಲೂಯಿಸಾಳಿಗೆ ಒಲಿದು, ಅವಳಿಂದ ದೂರವಾಗಲು ಪ್ರಯತ್ನಿಸಿ ಸಾಧ್ಯವಾಗದೆ 'ಹೊಟ್ಟೆನೋವಿನಿಂದ ನರಳುತ್ತಿದ್ದ ನಾಯಿ ಹಿತ್ತಲಲ್ಲಿ

ಹುಡುಕಾಡುತ್ತ ಸಿಕ್ಕ ಹುಲ್ಲಿಗೆಲ್ಲ ಬಾಯಿಹಾಕುವಂತೆ' ಲೂಯಿಸಳಿಗೆ 'ನೀನೆ ಕದ ತೆರೆ.... ಇದೋ ಕೀಲಿ ಕೈ.... ಮೆಲ್ಲಗೆ ಸದ್ದಾಗದಿರಲೀ....' ಎಂದು ಶರಣಾಗುವ ಕಥೆ ಕಲಾತ್ಮಕವಾಗಿ ಮೂಡಿಬಂದಿದೆ. ಆದರೆ ಇದೇ ಮಾತನ್ನು 'ಬೀಗ ಮತ್ತು ಬೀಗದ ಕೈ' ಕಥೆಯ ಬಗ್ಗೆ ಹೇಳಲಾಗುವುದಿಲ್ಲ. ಇಲ್ಲಿ ಬರುವ ಬೀಗ ಮತ್ತು ಬೀಗದ ಕೈಗಳ ಸಂಕೇತ ತೀರ ವಾಚ್ಯವಾಗುವಷ್ಟು ಬಾರಿ ಪುನರಾವರ್ತನೆಯಾಗಿದೆ. "ಓಪನ್ ಸಿಸೇಮ್" ಎನ್ನುವುದೇ ತಡ ಗುಹೆಯ ಬಾಗಿಲು ಝುಗ್ಗನೆ ತೆರೆದು ಒಗಳಗಿನ ರತ್ನ ಭಂಡಾರ ಕಣ್ಣು ಕುಕ್ಕಿಸಲಿತ್ತು. ಆದರೆ ಗುಹೆಯ ಹೊರಗೆ ನಿಂತವನಿಗೂ ಪಾಪ "ತೆರೆ" ಎನ್ನುವ ಮಂತ್ರವೇ ಮರೆತು ಹೋದಂತಿತ್ತು!' ಎನ್ನುವ ಸಾಂದರ್ಭಿಕ ವರ್ಣನೆಯಲ್ಲಿ ವರ್ಣನೆ ಔಚಿತ್ಯಪೂರ್ಣವಾಗಿದ್ದರೂ ತೀರ ವಾಚ್ಯವಾಯಿತೇನೋ ಎನ್ನಿಸುತ್ತದೆ. '......ಬೀಗದ ಕೈ ಕಳೆದು ಹೋಗಿ ಮನೆಗೆ ಹಾಕಿದ ಬೀಗ ತೆರೆಯಲಾಗದ್ದಕ್ಕೆ ಮುಚ್ಚಿದ ಕದದ ಇದಿರಿಗೇ ಜೀವ ಕಳಕೊಂಡನಂತೆ!, ಎನ್ನುವ ಅಂತ್ಯ ಮಾತ್ರ ಕೇಶವನಿಗೆ ಪುರುಷತ್ವವಿಲ್ಲದುದನ್ನೂ ಅವನ ಮಾನ ಹೋದ ಮೇಲೆ ಅವನು ಬದುಕಿಯೂ ಸತ್ತ ಸ್ಥಿತಿಯನ್ನು ಧ್ವನಿಪೂರ್ಣವಾಗಿ ತಿಳಿಸುತ್ತದೆ. 'ಹೋದವಾರ ನಮ್ಮ ಹಳೇ ಮನೆಯ ಹಿತ್ತಲ ಮೂಲೆಯಲ್ಲಿರುವ ಬಿದಿರ ಹಿಂಡಿನಲ್ಲಿ ಹಾವು ಹೊಕ್ಕಿದ್ದು ಕಂಡಿತಂತೇ ಭಟ್ಟರೇ' ಎಂಬ ಬರ್ಮಚಾರಿ (ಬ್ರಹ್ಮಚಾರಿ)ಯ ಅಮ್ಮನ ಮಾತುಗಳಲ್ಲಿ 'ಸೆರೆ' ಕಥೆಯಲ್ಲಿ ಹಾವು ಕಾಮಕ್ಕೆ ಸಂಕೇತವಾಗಿರುವುದನ್ನು ನೋಡಬಹುದು. ಅಮ್ಮನ ಮದುವೆಯ ಪ್ರಸ್ತಾಪದ ಮಾತುಗಳಿಂದ ಅಲ್ಲಿಂದ ದೂರ ಹೋಗಬೇಕೆಂದು ಹಳೆಮನೆಗೆ ಹೊರಟ ಬರ್ಮಚಾರಿ ಹಳೆಮನೆಯ ಬಾಗಿಲನ್ನು ರಿಪೇರಿ ಮಾಡಲು ಹೊರಟು ಹೊನ್ನಪ್ಪಾಚಾರಿಯ ಮನೆಯಿಂದ ಗರಗಸವನ್ನು ತರಲು ಹೋಗಿ, ಅವನ ಹೆಂಡತಿಯ ಆಂಗಿಕ ಚೇಷ್ಟೆಗಳಿಂದ ಮುಜುಗರ ಪಟ್ಟು, ಮನೆಯ ಬಾಗಿಲನ್ನು ರಿಪೇರಿ ಮಾಡುತ್ತಾ, ತಾನೇ ಮನೆಯೊಳಗೆ ಬಂದಿಯಾಗಿ,, ಮನೆಯೊಳಗೆ ಕಂಡ ಮಂಗನಿಂದ ಗಾಬರಿಗೊಂಡು ರಿಪೇರಿ ಮಾಡಿದ ಬಾಗಿಲನ್ನೇ ಮತ್ತೆ ಕಿತ್ತು ಹೊರಬರಬೇಕೆನ್ನುವಷ್ಟರಲ್ಲಿಯೇ, ಅಷ್ಟರವರೆಗೂ ಇವನ ಕಾರ್ಯಗಳನ್ನೇ ಮನೆಯ ಹೊರಗಿನಿಂದ ನೋಡುತ್ತಿದ್ದ ದೇವಿ ತೆರೆದ ಬಾಗಿಲಿನಿಂದ ಒಳಬಂದು 'ಆಗ ನೀವು ಕಿಡಕಿಯೊಳಗಿನಿಂದ ಕರೆದಾಗಲೇ ನನಗೆ ತಿಳಿದಿತ್ತು ಒಡೆಯಾ' ಎಂದು ತಬ್ಬಿಕೊಂಡಾಗ, ಯಾವುದರಿಂದ ದೂರವಿರಬೇಕೆಂದು ಅವನು ಬಯಸುತ್ತಿದ್ದನೊ ಆ ಕಾಮಕ್ಕೇ ಸಿಕ್ಕು ಸೆರೆಯಾಗುತ್ತಾನೆ ಒಂದೊಂದು ಕ್ರಿಯೆಯೂ ಮತ್ತೊಂದಕ್ಕೆ ಪೋಷಕವಾಗುತ್ತ ಕೊನಯ ಹಂತಕ್ಕೆ, ಕ್ರಮ ಕ್ರಮವಾಗಿ ತಂದು ಮುಟ್ಟಿಸುತ್ತವೆ. 'ಹಾವು' ಕಥೆಯಲ್ಲಿ ಚಿಕ್ಕಪ್ಪ, ಚಿಕ್ಕಮ್ಮ ದೇವಿ ಮತ್ತು ನಿರೂಪಕರ ಮೂಲಕ ಕಥೆ ತೆರೆದುಕೊಳ್ಳುತ್ತದೆ. ಮನೆಯಲ್ಲೆಲ್ಲಾ ಹರಿದಾಡುತ್ತಾ ಆಗಿಂದಾಗ್ಗೆ ಒಬ್ಬರಲ್ಲ ಒಬ್ಬರಿಗೆ ಕಾಣಿಸಿಕೊಳ್ಳುವ ಹಾವು ಕಥೆಯ ಉದ್ದಕ್ಕೂ ಹರಡಿರುವ ಕಾಮದ

ವಾಸನೆಯನ್ನು ಅಥವಾ ಚಿಂತನೆಯನ್ನು ಸಂಕೇತಿಸುತ್ತದೆ. ಮನೆಯಲ್ಲಿಯೇ ಸುತ್ತಾಡುವ '..... ಹಾವನ್ನು ಕೊಲ್ಲುವುದು ಬ್ರಹ್ಮಹತ್ಯೆಯಷ್ಟು ಪಾಪ' ಎಂಬ ಚಿಕ್ಕಪ್ಪನ ಮಾತುಗಳು ಧ್ವನಿಪೂರ್ಣ.

'ಛಲ' ಕಥೆಯ ಪದ್ದಕ್ಕನ ಛಲ ಬೆರಗು ಹುಟ್ಟಿಸುವಂಥದ್ದು. ಚಿತ್ತಾಲರ ಕಥೆಗಳಲ್ಲಿ ಹಾಸುಹೊಕ್ಕಾಗಿರುವ ತುಂಡು ನೆಲದ ಕಾರಣಕ್ಕಾಗಿ ತಲೆಮಾರುಗಳಿಂದ ನಡೆಯುವ ದ್ವೇಷ ಈ ಕಥೆಯಲ್ಲಿಯೂ ಇದೆ. 'ಮದಿಹುಚ್ಚು' ಕಥೆಯ ಮಂಜಯ್ಯ ಶೆಟ್ಟಿ ತಾನೇ ಪ್ರೀತಿಯಿಂದ ಸುಶೀಲಳ ಮಗನಿಗೆ ಬಂಗಾರದ ನೇವಾಳವನ್ನು ಕೊಟ್ಟೂ ಕಳ್ಳನೆಂಬ ಅಪವಾದವನ್ನು ಹೊತ್ತು ಸಾಯಬೇಕಾಯಿತು. ಮಂಜಯ್ಯಶೆಟ್ಟಿ ಬಂಗಾರದ ನೇವಾಳವನ್ನು ಕೊಟ್ಟಿರುವುದು ಹಗಲಿನ ಸೂರ್ಯನಷ್ಟೇ ಸ್ಪಷ್ಟವಿದ್ದರೂ ಅದನ್ನು ಮುಚ್ಚಿಹಾಕಿ ಕಳ್ಳತನದ ಆರೋಪವನ್ನು ಹೊರಿಸಿದ ಸುಶೀಲಳ ಡಾಂಭಿಕತನ 'ಛಲ' ಕಥೆಯ ಪದ್ದಕ್ಕನ ಸರಿಸಾಟಿಯಾದುದು. ಮಂಜಯ್ಯ ಶೆಟ್ಟಿ ನಿರಪರಾಧಿ ಎಂದು ಸಾಭೀತಾದುದು ಅವರು ಸತ್ತ ಮೇಲೆ. ಮಂಜಯ್ಯ ಶೆಟ್ಟಿಯ ನಿರಪರಾಧಿತ್ವದ ಮೇಲೆ ಬೆಳಕು ಚೆಲ್ಲಬಹುದಾಗಿದ್ದ ನಿರೂಪಕ ಬಾಲಕ ಹೆದರಿಕೆಯಿಂದಲೋ ಮತ್ತಾವುದೊ ಕಾರಣದಿಂದಲೋ ಮೌನವಾಗಿರುತ್ತಾನೆ. ಇದೊಂದು ಸೊಗಸಾದ ಕಥೆ. 'ಮುಖಾಮುಖಿ' ಕಥೆಯಲ್ಲಿ ಕಥೆಗಾರನ ಮತ್ತು ತನ್ನ ಕಥೆಯೊಂದರಲ್ಲಿ ಪಾತ್ರವಾಗಿದ್ದ ಇಂದಿರಕ್ಕನ ಮುಖಾಮುಖಿ ಎರಡು ವ್ಯಕ್ತಿಗಳ ಮುಖಾಮುಖಿಯಾಗಿರದೆ ಎರಡು ಇತಿಹಾಸಗಳ, ಎರಡು ಪಾಪ ಪ್ರಜ್ಞೆಗಳ ಮುಖಾಮುಖಿಯಾಗಿತ್ತೇನೊ. ತಾನು ಪೊತ್ತೆ ಮಿಾಸೆಯವನ ಪತ್ರವನ್ನು ಇಂದಿರಕ್ಕನಿಗೆ ಕೊಡದೆ ಅವಳನ್ನು ಘೋರ ಪಾಪದಿಂದ ಉಳಿಸಿದೆ ಎಂದು ತನಗೆ ತಾನೆ ಸಾವಿರ ಸಲ ಸಮಾಧಾನ ಮಾಡಿಕೊಂಡ ಕಥೆಗಾರನಿಗೆ ಇಂದಿರಕ್ಕ ಕಾಶಿಗೆ ಹೊಗುವ ಮೊದಲು ಮತ್ತು ಕಾಶಿಯಿಂದ ಬಂದಮೇಲೆ ಸಾಯುವ ಮೊದಲು ಎರಡು ವಿಭಿನ್ನ ನಿಲವುಗಳನ್ನು ಹೊಂದಿ ಆಶ್ಚರ್ಯಗೊಳಿಸುತ್ತಾಳೆ. ಈ ಕಥೆಯಲ್ಲಿನ ತಂತ್ರ ವಿಶಿಷ್ಟವಾದುದು. ಅದೇ ಇನ್ನೂ ಹೆಚ್ಚು ಪಕ್ವವಾಗಿ 'ಕತೆಯಲ್ಲಿ ಬಂದಾತ ಮನೆಗೂ ಬಂದು ಕದ ತಟ್ಟಿದ' 'ಕತೆಯಾದಳು ಹುಡುಗಿ' ಕಥೆಗಳಲ್ಲಿ ಪ್ರಯೋಗವಾಗಿರುವುದನ್ನು ಕಾಣಬಹುದು.

'ಅಬ್ಬಲಿಗೆ ವಾಸನೆಯಿಲ್ಲದ ಹೂ-ಅಲ್ಲ ವಾಸನೆ ಚೆಲ್ಲದ ಹೂ', 'ಅಬೋಲಿನ' ಕಥೆಯ ಅಬೋಲಿನಳೂ ಅಂತೆಯೆ ಒಳಮನಸ್ಸಿನ ಹುಡುಗಿ. ತಾಯಿಯಿಲ್ಲದ ಹುಡುಗಿಯಾದರೂ ತಂದೆಗೆ ಮತ್ತು ತಮ್ಮನಿಗೆ ತಾಯಿಯಾಗಿಯೂ ಹೆಣ್ತನದ ಅನೇಕ ರಹಸ್ಯಗಳನ್ನರಿಯದ ಮುಗ್ಧೆ. 'ಮನವೇಲ ಸಿದ್ಧಗೊಳಿಸಿಟ್ಟ ಯಮಪಾಶಕ್ಕೆ ತಾನಾಗಿ

ಕೊರಳು ಸೇರಿಸುತ್ತಿದ್ದೇನೆ' ಎಂದರಿಯದೆ ಬಲಿಪಶುವಾದವಳು. ನಿಷ್ಪಾಪಿಯಾದರೂ ದುರಂತಕ್ಕೀಡಾದ ಅಬೋಲೀನಳ ಕಥೆ ಮನಮಿಡಿಯುವಂಥದು. 'ಕಥೆಯಾದಳು ಹುಡುಗಿ' ಒಂದೇ ಕಾಲಕ್ಕೆ ಮಗಳನ್ನು ಕಳಕೊಂಡ ತಂದೆಯೊಬ್ಬನ ವ್ಯಥೆಯನ್ನು ಕುರಿತು ಹೇಗೋ ಹಾಗೆಯೇ ಈ ವ್ಯಥೆಯನ್ನು ಮಾನವ ಸಹಜ ವ್ಯಾಕುಲತೆಯಿಂದ ಇನ್ನೊಬ್ಬನಿಗೆ ಮುಟ್ಟಿಸಲು ಹೋದಾಗ ನೇರವಾಗಿ ಮುಟ್ಟಿಸವುದೇ ಅಸಾಧ್ಯವಾಗಿ ಹಲವು ರೀತಿಯಲ್ಲಿ ರೂಪಾಂತರಗೊಳ್ಳಲು ಕಾರಣವಾಗುವ ನಮ್ಮ ಸಮಾಜ ವ್ಯವಸ್ಥೆಯ ಬಗೆಗೂ ಇದೆ." 'ನನ್ನ ಕಥೆಯ ಬಗ್ಗೆ ನನಗೇ ಹೇಸಿಕೆ ಅನ್ನಿಸಿತು.... ಮಗು ಇವರೆಲ್ಲರಿಗೂ ಬೇಕಾದವಳಾಗಿದ್ದಳು..... ಯಾರೂ ಅವಳ ಬಗ್ಗೆ ವಿಚಾರಿಸಲೇ ಇಲ್ಲ. ಅವಳು ಸತ್ತದ್ದು ಯಾರಿಗೂ ಗೊತ್ತಾಗಲೇ ಇಲ್ಲ..... ಏಕೋ ನನ್ನ ಮಗು ಈಗ ಮೊದಲಬಾರಿಗೆ ಸಾಯುತ್ತಿದ್ದಾಳೆ ಅನ್ನಿಸಿತು......' 'ನಿಮ್ಮ ಗೆಳೆಯರಲ್ಲಿ ಒಬ್ಬನಿಗೂ ಮಗೂನ ನೆನಪೇ ಆಗಬಾರದ ಹಾಗೆ ಅದೆಂಥ ಕತೆ ಬರೆದಿರೋ,..... ಬೆಂಕಿ ಬಿತ್ತು ನಿಮ್ಮ ಸಾಹಿತ್ಯಕ್ಕೆ.....' ಎಂಬ ಜಾನಕಿಯ ತಂದೆ ತಾಯಿಯರ ಮಾತುಗಳೇ ಈ ಕಥೆಯ ವಿಮರ್ಶೆಯ ಮಾತುಗಳು ಆಗುತ್ತವೆ. ಈ ಕಥೆ ತನ್ನ ಕಥಾತಂತ್ರದ ಕೌಶಲದಿಂದ ಮತ್ತು ತೋರುವ ಜೀವನಾಸಕ್ತಿಯಿಂದ ಮುಖ್ಯವಾದದ್ದಾಗುತ್ತದೆ.

'ಕತೆಯಲ್ಲಿ ಬಂದಾತ ಮನೆಗೂ ಬಂದು ಕದ ತಟ್ಟಿದ' ಕಥೆಯಲ್ಲಿ 'ನಾನು ನಿಮ್ಮ ಪ್ರೇಮು ಸರ್ ನಿಮ್ಮ ಇತ್ತೀಚಿನ ಕತೆಯಲ್ಲಿ ಬಂದ ಹರಿಜನ ಹುಡುಗ' ಎಂದು ಕಥೆಯಲ್ಲಿನ ಪಾತ್ರವೊಂದು ಕಥೆಗಾರನಿಗೇ ಹೇಳಿದಾಗ ಓದುಗ ಕಥಾತಂತ್ರಕ್ಕೆ ಬೆರಗಾಗದೆ ಇರಲಾರ.

'ತ್ರಯೋದಶ ಪುರಾಣ'ದಲ್ಲಿ ಹದಿಮೂರನೆ ಸಂಖ್ಯೆ ಅಶುಭಕ್ಕೆ ಸಂಕೇತವಾಗಿ ಬರುತ್ತದೆ. ಹದಿಮೂರನೆ ಸಂಖ್ಯೆ ಈ ಕಥೆಯಲ್ಲಿ ಮಾತ್ರವಲ್ಲ ಇನ್ನೂ ನಾಲ್ಕಾರು ಕಥೆಗಳಲ್ಲಿ ಅಶುಭದ ಸಂಕೇತವಾಗಿ ಬರುತ್ತದೆ. ಉದಾಹರಣೆಗೆ 'ಕತೆಯಾದಳು ಹುಡುಗಿ, 'ಮುಖಾಮುಖಿ' 'ಉದ್ಧಾರ' 'ಚಕ್ರವ್ಯೂಹ' ಮೊದಲಾದ ಕಥೆಗಳನ್ನು ಹೆಸರಿಸಬಹುದು. 'ತ್ರಯೋದಶ ಪುರಾಣದಲ್ಲಿ ಈ ಸಂಖ್ಯೆ ಕಣ್ಣಿಗೆ ಹೊಡೆಯುವಷ್ಟು ನಿಚ್ಚಳವಾಗಿ ಬರುತ್ತದೆ. ಈ ವಿಚಾರವನ್ನು ಬದಿಗಿಟ್ಟರೂ ಪ್ರಸ್ತುತ ಸಮಾಜದ ನಿರಪರಾಧಿಯ ಯಾತನೆ ಯೋಚಿಸುವಂತೆ ಮಾಡುತ್ತದೆ. 'ಪಾರ್ಸೆಲ್ ಬಿಚ್ಚುವುದು ಬೇಡ. ಅದರಲ್ಲಿ ಏನಿದೆ ಎನ್ನುವುದನ್ನು ಬಲ್ಲೆ. ಆದರೆ ಅದಕ್ಕೂ ನನಗೂ ಸಂಬಂಧವಿಲ್ಲ. ಕೊಂದವನು ಯಾರೆಂಬುದು ಗೊತ್ತಿಲ್ಲ....' ಎಂಬ ಹದಿಮೂರು ವರ್ಷ ವಯಸ್ಸಿನ ಗಣೇಶನ ಉದ್ಗಾರಗಳು ಇತಿಹಾಸದ ಬಗೆಗಿನ ಧ್ವನಿಯಾಗಿದೆ. 'ಅವನೀಗ ಅವನಲ್ಲವೇ ಅಲ್ಲ..... ಬರಿಯ ಎರಡು ಕಾಲುಗಳಿದ್ದ ತಪ್ಪಿಗಾಗಿಯೇ ಇತಿಹಾಸದ ಉದ್ದಕ್ಕೂ

ಒಟಕಿತ್ತವನು. ಅಟ್ಟಲ್ಪಟ್ಟವನು-ಭಯದಿಂದ ಭಯಕ್ಕೆ ಎಂಬ ಕಥೆಗಾರರ ಮಾತು ಎಲ್ಲ ನಿರಪರಾಧಿಗಳ ಯಾತನೆಯ ಧ್ವನಿಯಾಗಿದೆ.

'ದಶಕಗಳ ಹಿಂದೆ ಮಾಸ್ತಿಯವರ ಸಾಂಪ್ರದಾಯದಲ್ಲೇ ಕತೆ ಬರೆಯತೊಡಗಿದ ..... ಚಿತ್ತಾಲರ ಪ್ರತಿಭೆ ಬೆರಗುಗೊಳಿಸುವಷ್ಟು ವೈವಿಧ್ಯಮಯವಾಗಿ ಕುಡಿಯೊಡದಿದೆ '..... ಚಿತ್ತಾಲರ ಓದು, ಅನುಭವ ಕೇವಲ ವಿಶ್ವವಿದ್ಯಾನಿಲಯದ ಚೌಕಟ್ಟಿಗಷ್ಟೇ ಸೀಮಿತಗೊಂಡಿರದೆ ಬದುಕಿನ ವಿಚಾರಗಳ ಹಲವು ಹತ್ತು ಕ್ಷೇತ್ರಗಳನ್ನು ಅಪ್ಪಿಕೊಂಡಿರುವುದರಿಂದ, ಅವರ ಬರವಣಿಗೆಯ ಹಿಂದೆ ಸಮಗ್ರ ಜೀವನ ದೃಷ್ಟಿಯಿದೆ, ಅಂತಃಕರಣವನ್ನು ತಟ್ಟಿ ಎಬ್ಬಿಸುವ ಮಾನವೀಯತೆ ಇದೆ..... 'ನಮ್ಮೊಳಗಿನ ಮನುಷ್ಯನನ್ನು ಹುಡುಕುವ ಆಶಯವೇ ಅವರ ಮೂಲಭೂತವಾದ, ಅಚಲ ಕಾಳಜಿಯಾಗಿರುವುದನ್ನು ಕಾಣಬಹುದಾಗಿದೆ.'

'ನಮ್ಮೊಳಗಿನ ಮನುಷ್ಯನನ್ನು ಹುಡುಕುವ ಆಶಯ'ದಂತೆಯೆ 'ಹನೇಹಳ್ಳಿ' 'ನನ್ನ-ಅಪ್ಪನ ಸಂಬಂಧ' ಹಾಗೂ 'ಮೃತ್ಯುಪ್ರಜ್ಞೆ'ಗಳು ಚಿತ್ತಾಲರ ಬಹುತೇಕ ಕಥೆಗಳಲ್ಲಿ ಪ್ರಧಾನವಾಗಿ ಕಂಡು ಬರುತ್ತದೆ. ಚಿತ್ತಾಲರ ಬಹುತೇಕ ಕಥೆಗಳಲ್ಲಿ ಹನೇಹಳ್ಳಿಯ ದಟ್ಟವಾದ ವರ್ಣನೆ, ಎಲ್ಲ ಕಥೆಗಳಲ್ಲೂ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಪಾತ್ರಗಳು, ಸರಪಣಿಯ ಕೊಂಡಿಯಂತೆ ಒಂದಕ್ಕೊಂದು ಸೇರಿಸಬಹುದಾದ ಘಟನಾವಳಿಗಳು-ಇವುಗಳನ್ನೆಲ್ಲಾ ನೋಡಿದಾಗ, ಹನೇಹಳ್ಳಿಗೆ ಸಂಬಂಧಿಸಿದಂತೆ 'ಕಾನೂರು ಸುಬ್ಬಮ್ಮ ಹೆಗ್ಗಡತಿ'ಯಂಥದೊ, 'ಗ್ರಾಮಾಯಣ'ದಂಥದೋ ಮಹಾನ್ ಪ್ರಾದೇಶಿಕ ಕಾದಂಬರಿಯಾಗಬಹುದಾಗಿದ್ದುದು ಕಾದಂಬರಿಕಾರರ ಅಖಂಡ ದರ್ಶನಕ್ಕೆ ಒಳಗಾಗದೆ ಸಣ್ಣ ಸಣ್ಣ ಕಥೆಗಳಾದುವೊ ಎನಿಸುತ್ತದೆ.

ಸಂಪ್ರದಾಯದಿಂದ ನವ್ಯ, ನವ್ಯದಿಂದ ಇನ್ನೂ ಮುಂದೆ ಹೋಗಿ ಪ್ರಬುದ್ಧ ಕಥೆಗಳನ್ನು ಕೊಟ್ಟಿರುವ, ತಮ್ಮ ಬರವಣಿಗೆಯ ಬಗ್ಗೆ ಪ್ರಚಂಡ ವಿಶ್ವಾಸವನ್ನು ಹೊಂದಿರುವ, 'ಶಿಕಾರಿ'ಯಂಥ ಕಾದಂಬರಿಯನ್ನು ಕೊಟ್ಟಿರುವ ಚಿತ್ತಾಲರ ಮುಂದಿನ ಕೊಡುಗೆ ಕಥೆಯೊ ಕಾದಂಬರಿಯೊ ಯಾವುದೇ ಆಗಲಿ ಕುತೂಹಲಕಾರಿ.

❑

ಕನ್ನಡದಲ್ಲಿ ಲೇಖಕ-ಪ್ರಕಾಶಕ-ಮಾರಾಟಗಾರ-ಓದುಗರ ನಡುವೆ ಗಾಢ ಸಂಬಂಧವನ್ನು ಏರ್ಪಡಿಸಿ, ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಬೆಳೆಸಿ, ಓದುಗರಿಗೆ ಒಳ್ಳೆಯ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು, ಕನ್ನಡ ಪುಸ್ತಕೋದ್ಯಮವನ್ನು ಜನಪರವಾಗಿ ಬೆಳೆಸುವುದು - ಇದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಮುಖ ಧ್ಯೇಯೋದ್ದೇಶಗಳಲ್ಲಿ ಒಂದು. ಈಗಾಗಲೇ ಪ್ರಕಟವಾಗಿ ಮನ್ನಣೆಗಳಿಸಿ, ಈಗ ಲಭ್ಯವಿಲ್ಲದಿರುವ ಪುಸ್ತಕಗಳನ್ನು 'ಜನಪ್ರಿಯ ಪುಸ್ತಕ ಮಾಲೆ'ಯಲ್ಲಿ ಪ್ರಕಟಿಸಿ ಸುಲಭ ಬೆಲೆಗೆ ಪ್ರಾಧಿಕಾರವು ಓದುಗರ ಕೈಯಲ್ಲಿಡುತ್ತಿದೆ. ನಿನ್ನೆ-ಇಂದುಗಳ ನಡುವಣ ಒಂದು ಸೇತುವೆ 'ಜನಪ್ರಿಯ ಪುಸ್ತಕ ಮಾಲೆ'

ಈ ಮಾಲೆಯಲ್ಲಿ ಇದೀಗ ಪ್ರೊ.ಹು.ಕಾ. ಜಯದೇವ್ ಅವರ 'ಅರುಣೋದಯ ನವೋದಯ ನಂತರ' ಎಂಬ ಕೃತಿ ಪ್ರಕಟವಾಗುತ್ತಿದೆ. ಪ್ರೊ. ಜಯದೇವ್ ಅವರು ಕನ್ನಡ ಸಾಹಿತ್ಯದ ಅಧ್ಯಯನ ಮತ್ತು ಸಂಶೋಧನೆಯನ್ನು ಗಂಭೀರವಾಗಿ ಸ್ವೀಕರಿಸಿರುವ ಪ್ರಾಧ್ಯಾಪಕರು. ಇವರ ಬರವಣಿಗೆ ಬಾಹುಳ್ಯದಲ್ಲಿ ಕಡಿಮೆಯಾದರೂ, ಅವರು ಬರೆದಿರುವ ಕೆಲವು ಲೇಖನಗಳು ಮತ್ತು ಕೃತಿಗಳು ಅವರ ವಿದ್ವತ್ ಮತ್ತು ವಿಚಾರಶಕ್ತಿಗೆ ತೋರ್ಬೆರಳಾಗಿವೆ.

ಇಲ್ಲಿನ ಲೇಖನಗಳು ವಸ್ತುವೈವಿಧ್ಯದಿಂದ ಕೂಡಿರುವುದು ಮಾತ್ರವಲ್ಲದೆ, ಲೇಖಕರು ವಿವಿಧ ಸಾಹಿತ್ಯ ಪ್ರಕಾರಗಳ ಬಗ್ಗೆ ಇರಿಸಿಕೊಂಡಿರುವ ಸಮಾನವಾದ ಒಲವನ್ನು ಇವು ದ್ಯೋತಿಸುತ್ತವೆ. ವಿಷಯ ಪ್ರವೇಶ, ಸೂಕ್ಷ್ಮವಾದ ಒಳನೋಟಗಳು, ವಿಶಿಷ್ಟ ವಿಶ್ಲೇಷಣಾ ಶಕ್ತಿಯನ್ನು ಮುಕ್ಕುಳಿಸುವ ನಿರೂಪಣೆ, ಸರಳವೂ ಪಾರದರ್ಶಕವೂ ಆದ ಭಾಷೆ - ಇವುಗಳಿಂದ ಈ ಲೇಖನಗಳು ಓದುಗರ ಗಮನ ಸೆಳೆಯುತ್ತವೆ.